Digitized by Arya Samaj Foundation Chennai and eGangotri

ಓಂ

ಕೇನೋಪನಿಷತ್

(ಕನ್ನಡ ಅನತರಣಿಕೆ)

DONATION

ಲೇಖಕರು

ಸಂಸ್ಕೃತ ಸಂಶೋಧನ ಸಂಸತ್ತಿನ ಸಂಶೋಧಕರು

ಸಂಸ್ಕೃತ ಸಂಶೋಧನ ಸಂಸತ್, ಮೇಲುಕೋಟೆ

CC-0. In Public Domain. Gurukul Kangri Collection, Haridwar

undation Che

urukul Kangri C

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

7882

DONATION

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಓಂ

7882

पुस्तकालय
पुस्तकालय
गुरुकुल कांगड़ी विश्वविद्यालय

ಕೇನೋಪನಿಷತ್

(ಕನ್ನಡ ಅವತರಣಿಕೆ)

DONATION

"Forwarded free of cost, and with the Compliments of the Department of Education, Government of India, New Delhi."

ಲೇಖಕರು

ಸಂಸ್ಕೃತ ಸಂಶೋಧನ ಸಂಸತ್ತಿನ ಸಂಶೋಧಕರು

ಸಂಸ್ಕೃತ ಸಂಶೋಧನ ಸಂಸತ್, ಮೇಲುಕೋಟೆ—571 431

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Kenopanishat (Kannada Avataranike)

A project of the Academy of Sanskrit Research, Melkote.

Chief Editor

Prof. M. A. Lakshmithathachar, M.A., C.A.E.

Registrar, The Academy of Sanskrit Research, Melkote

Publisher

The Academy of Sanskrit Research, Melkote-571 431

FIRST EDITION : 1984

© Publisher

Price : Ordinary Copy Rs. 50/-
Special Copy Rs. 60/-

Printed at

Vivek Printers,

891/2, Chamundeswari Road, Mysore-570 004

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾರ್ಯನಿರ್ವಾಹಕ ಮಂಡಲಿ

ಪ್ರಧಾನ ಸಂಪಾದಕರು

ಶ್ರೀ ಎಮ್. ಎ. ಲಕ್ಷ್ಮೀತಾತಾಚಾರ್, M.A.,C.A.E.

ನ್ಯಾಯವಿದ್ವಾನ್, ರಾಷ್ಟ್ರಭಾಷಾಪ್ರವೀಣ

ಕುಲಸಚಿವರು, ಸಂಸ್ಕೃತ-ಸಂಶೋಧನ-ಸಂಸತ್

ವಿಭಾಗದ ಮುಖ್ಯಸ್ಥರು

ಶ್ರೀ ಎಮ್. ಬಿ. ಪಾರ್ಥಸಾರಥಿ ಅಯ್ಯಂಗಾರ್

ನ್ಯಾಯವಿದ್ವಾನ್, ಕನ್ನಡಪಂಡಿತ, ರಾಷ್ಟ್ರಭಾಷಾವಿಶಾರದ

ಸಹಾಯಕರು

ಶ್ರೀ ಎಸ್. ಎಮ್. ವೀರರಾಘವಾಚಾರ್

ನ್ಯಾಯ-ವೇದಾನ್ತವಿದ್ವಾನ್, ಕನ್ನಡಪಂಡಿತ

ಶ್ರೀ ಎನ್. ವೆಂಕಟಾಚಾರ್

ವೇದ-ವೇದಾನ್ತ, ಸ್ಮಾರ್ತಪ್ರಯೋಗವಿದ್ವಾನ್

ಕುಮಾರಿ ಎಮ್. ವಿ. ಸಾವಿತ್ರಿ

ರಾಷ್ಟ್ರಭಾಷಾಪ್ರವೀಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರೀಃ

ಮೊದಲ ಮಾತು

ಸಂಸ್ಕೃತ ಸಂಶೋಧನ ಸಂಸತ್ತು ಕೈಗೊಂಡಿರುವ ಕಾರ್ಯಗಳು ಹಲವಾರು. ಅವುಗಳಲ್ಲಿ ಉಪನಿಷತ್‌ನಿಗಮಕಾರ್ಯವು ಈಗಾಗಲೇ ಪ್ರಾರಂಭವಾಗಿ ಬೇಗನೆ ಮುಂದುವರಿಯುತ್ತಿದೆ. ಈಶಾವಾಸ್ಯ ಉಪನಿಷತ್ತಿನ ಕನ್ನಡ ಅವತರಣಿಕೆಯು ಪ್ರಕಾಶಗೊಂಡಿದೆ. ಕೇನೋಪನಿಷತ್ತಲ್ಲದೆ ಇನ್ನೆರಡು ಉಪನಿಷತ್ತುಗಳು ಪ್ರಕಾಶನಕ್ಕೆ ತಯಾರಾಗಿವೆ.

ಉಪನಿಷತ್ತುಗಳು ಭಾರತೀಯಸಾಹಿತ್ಯದಲ್ಲೇಕೆ ವಿಶ್ವಸಾಹಿತ್ಯದಲ್ಲೇ ಪ್ರಾಚೀನವಾದ ಆಧ್ಯಾತ್ಮಿಕ ಜ್ಞಾನಭಂಡಾರಗಳೆನಿಸಿವೆ. ಅವುಗಳಲ್ಲಿ ಅಡಗಿರುವ ತತ್ತ್ವಗಳು ನಿಗೂಢವೂ ಅರ್ಥಗರ್ಭಿತವೂ ಆಗಿವೆ. ಅವುಗಳ ರಹಸ್ಯಗಳನ್ನು ತಿಳಿದುಕೊಳ್ಳುವುದು ಸುಲಭವೇನಲ್ಲ. ಈಜಿಪ್ಟಿನ ಪಿರಮಿಡ್ಡುಗಳಂತೆ ಮೇಲ್ನೋಟಕ್ಕೆ ಒಂದು ಅಚ್ಚುಕಟ್ಟಾದ ಶಿಖರದಂತೆ ಕಾಣುವ ಉಪನಿಷತ್ತುಗಳನ್ನು ಒಳಹೊಕ್ಕು ನೋಡಿ ವಿಮರ್ಶೆಮಾಡಬೇಕಾದರೆ ಆಳವಾದ ಜ್ಞಾನಬೇಕು. ಅಂತಹ ಜ್ಞಾನಸಾಮರ್ಥ್ಯಗಳನ್ನು ಹೊಂದಿದ್ದ ನಮ್ಮ ಆಚಾರ್ಯರುಗಳು ಈ ಉಪನಿಷತ್ತುಗಳಿಗೆ ಭಾಷ್ಯಗಳನ್ನು ಬರೆದು ವಿವರಿಸಿದ್ದಾರೆ. ಅವರ ಭಾಷ್ಯ ಹಾಗೂ ವ್ಯಾಖ್ಯಾನಗಳು ಹೆಚ್ಚಾಗಿ ಸಂಸ್ಕೃತದಲ್ಲಿದ್ದು ಜನಸಾಮಾನ್ಯರಿಗೆ ಎಟುಕಿಲ್ಲ. ಈ ಆಧ್ಯಾತ್ಮಿಕ ವಿಚಾರಧಾರೆಯನ್ನು ಉಪನಿಷತ್‌ನಿಗಮವು ಪ್ರಾದೇಶಿಕಭಾಷೆಯಲ್ಲಿ ತಿಳಿಯಾದ ಹಾಗೂ ಆಧಾರಬದ್ಧರೀತಿಯಲ್ಲಿ ವಿವರಿಸಿದೆ. ಈ ಕಾರ್ಯ ನಿಜವಾಗಿಯೂ ಒಂದು ಸಾಹಸ ಮಾತ್ರವಲ್ಲ ; ಅಷ್ಟೇ ಶ್ಲಾಘನೀಯವೂ ಅಹುದು. ಪರಮಾತ್ಮನ ದಯೆಯೂ ಅವನ ಶಕ್ತಿಯೆನಿಸಿರುವ ಮಹಾಲಕ್ಷ್ಮಿಯ ಮಧ್ಯಸ್ಥಗಾರಿಕೆಯೂ ಇಲ್ಲದಿದ್ದರೆ ಉಪನಿಷತ್ತಿನ ನಿಗೂಢತತ್ತ್ವವನ್ನು ನಾವು ಅರಿಯಲಾರೆವು. ನಾವೇಕೆ ! ದೇವಾದಿದೇವತೆಗಳೂ ಅರಿಯಲಾರರು. ಇಂತಹ ಆಳವಾದ ತಿಳುವಳಿಕೆಯನ್ನು ಕೇನೋಪನಿಷತ್ತು ಒಂದು ಉಪಕಥೆಯ ಮೂಲಕ ನಮಗೆ ಮುಟ್ಟಿಸಿದೆ. ಆಧ್ಯಾತ್ಮಿಕ ತತ್ತ್ವಗಳನ್ನು ನಾವೇ ನಮ್ಮ ಇಚ್ಛೆ-ಪ್ರಯತ್ನಗಳಿಂದ ಅರಿತುಕೊಳ್ಳಲು ಸಾಧ್ಯ ಎನ್ನುವುದು ಮಮಕಾರದ ಚಿಹ್ನೆ. ಅವುಗಳು ನಮ್ಮ ಬುದ್ಧಿಶಕ್ತಿಯ ಗಡಿಯಿಂದ ಆಚೆ ಇರುವ ಅರಿವು ಎಂದು ತಿಳಿದವನೇ ಜ್ಞಾನಿ. ಇವೇ ಮುಂತಾದ ಉತ್ತಮ ಪಾಠಗಳು ಈ ಉಪನಿಷತ್ತಿನಲ್ಲಿ ಅಡಗಿವೆ. ಆಧ್ಯಾತ್ಮಿಕ ಮುಖ್ಯ ತತ್ತ್ವವಾದ ಪರಮಾತ್ಮವು ತನ್ನದೇ ಆದ ಸಂತೋಷದಿಂದ ತನ್ನನ್ನು ತಾನೇ ಸಮಾಜಕ್ಕೆ ತೋರಿಸಿಕೊಳ್ಳುವುದು. ಅದು ತೋರಿಸಿಕೊಂಡಾಗ ನಾವು ವಿಮುಖರಾಗದೆ ಅದನ್ನು ಅರಿತು ಅನುಭವಿಸಿ ಸಮಾಜಕ್ಕೆ ಅದರ ವಿಷಯವನ್ನು ಬಿತ್ತರಿಸಬೇಕು ಎಂಬ ಆದೇಶ ಈ ಉಪನಿಷತ್ತಿನಿಂದ ಲಭಿಸುವುದು.

ಒಟ್ಟಿನಲ್ಲಿ ಕೇನೋಪನಿಷತ್ತು ಸಮಾಜದ ಶಾಂತಿ-ಸಮಾಧಾನ, ಜನರ ಅಹಂಕಾರ ಮಮಕಾರಗಳ ನಿರಾಕರಣ ಇವುಗಳಿಗೆ ಅನುಕೂಲವಾಗುವ ರಹಸ್ಯ ತತ್ತ್ವಗಳನ್ನು ಪ್ರತಿಪಾದಿಸಿದೆ ಉಪನಿಷತ್ ಸಾಹಿತ್ಯದಲ್ಲಿ ಸಮಾಜದ ಬಗ್ಗೆ ಇರುವ ಕಳಕಳಿಗೆ ಇದೊಂದು ಉದಾಹರಣೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಂತಹ ಉತ್ತಮ ಪ್ರಕಾಶನ ಕಾರ್ಯಗಳಿಗೆ ನಮ್ಮ ಕರ್ನಾಟಕ ಘನಸರ್ಕಾರವು ಉದಾರ ಸಹಾಯಮಾಡಿರುವುದು ಕನ್ನಡಿಗರಿಗೆ ಒಂದು ಹೆಮ್ಮೆಯ ವಿಷಯ. ಆಧ್ಯಾತ್ಮಿಕ ಸಾಹಿತ್ಯವು ಕನ್ನಡದಲ್ಲಿ ಹೀಗೇ ಮುಂದೆಯೂ ಹೊಮ್ಮಿ ಬಂದು ಸಂಸತ್ತಿನ ಉತ್ತಮಧ್ಯೇಯಗಳು ಸಫಲವಾಗಲಿ ಎಂದು ಆಶಿಸುತ್ತೇನೆ.

ಎಂ. ಎ. ಎಸ್. ರಾಜನ್
ಅಧ್ಯಕ್ಷರು
ಸಂಸ್ಕೃತ ಸಂಶೋಧನ ಸಂಸತ್

ಬೆಂಗಳೂರು
ತಾ. 7 ಸೆಪ್ಟೆಂಬರ್ 1984

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುನ್ನುಡಿ

ವೈದಿಕಸಾಹಿತ್ಯವು ಅತ್ಯಂತ ವಿಶಾಲವಾದುದು. ಅದರಲ್ಲಿ ಋಕ್, ಯಜುಸ್, ಸಾಮ, ಅಥರ್ವಗಳೆಂಬ ನಾಲ್ಕು ವೇದಗಳು ಇವೆ. ಇವು ಸಂಹಿತೆ, ಬ್ರಾಹ್ಮಣ, ಆರಣ್ಯಕ ಮತ್ತು ಉಪನಿಷತ್ತುಗಳೆಂದು ಸ್ಥೂಲವಾಗಿ ನಾಲ್ಕು ವಿಭಾಗಗಳನ್ನೊಳಗೊಂಡಿವೆ. ಇವಲ್ಲದೆ, ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪ ಎಂಬ ಆರು ವೇದಾಂಗಗಳು; ಪುರಾಣ, ನ್ಯಾಯ, ಮೀಮಾಂಸಾ, ಧರ್ಮಶಾಸ್ತ್ರ ಎಂಬ ನಾಲ್ಕು ಉಪಾಂಗಗಳು ವೈದಿಕಸಾಹಿತ್ಯದಲ್ಲಿಯೇ ಸೇರುತ್ತವೆ.

ಇಂತಹ ವೈದಿಕಸಾಹಿತ್ಯದಲ್ಲಿ ಉಪನಿಷತ್ತುಗಳು ಶ್ರುತಿ–ಶಿರಸ್ಸುಗಳೆನಿಸಿವೆ. ಇವು ಬ್ರಹ್ಮವನ್ನು ಸ್ಪಷ್ಟವಾಗಿ ಪ್ರತಿಪಾದಿಸುವುದರಿಂದ ಉಪನಿಷತ್ ಎನಿಸಿವೆ. ಇಂತಹ ಗ್ರಂಥಗಳನ್ನು ಅಧ್ಯಯನ ಮಾಡುವಾಗ ಶಿಷ್ಯನು ಆಚಾರ್ಯನ ಅತ್ಯಂತ ಸಮೀಪದಲ್ಲಿ ಭಯ-ಭಕ್ತಿಗಳಿಂದ ಕುಳಿತು ರಹಸ್ಯವಾಗಿ ಅಭ್ಯಾಸ ಮಾಡಬೇಕು. ಆದ್ದರಿಂದಲೇ ಇವುಗಳಿಗೆ 'ಉಪನಿಷತ್' ಎಂದು ಹೆಸರು.

ತತ್ತ್ವಜ್ಞಾನವು ನಿಘಂಟು-ವ್ಯಾಕರಣಗಳ ಅಧ್ಯಯನದಿಂದಾಗಲೀ, ತರ್ಕ–ಚಮತ್ಕಾರದಿಂದಾಗಲೀ ಉಂಟಾಗತಕ್ಕದ್ದಲ್ಲ. ಪರಮಾತ್ಮನ ಜಾಯಮಾನಕಾಲಕಟಾಕ್ಷದಿಂದ ಸದಾಚಾರ್ಯಪ್ರಾಪ್ತಿ ಉಂಟಾಗಿ, ಅವನು ಶಿಷ್ಯನಲ್ಲಿ ದಯೆಯಿಟ್ಟು ಉಪನಿಷತ್ತಿನ ಸೂಕ್ಷ್ಮವಾದ ತತ್ತ್ವಗಳನ್ನು ಉಪದೇಶಿಸಿದಾಗ ಮಾತ್ರ ಇದು ಸಾಧ್ಯ. ತತ್ತ್ವಜ್ಞಾನವಿಲ್ಲದೆ, ಈ ಸಂಸಾರಬಂಧನದಿಂದ ಮೋಕ್ಷ ಎಂದಿಗೂ ದೊರಕಲಾರದು ಎಂಬುದು ಸರ್ವವಿದಿತ.

ಆದ್ದರಿಂದ ಉಪನಿಷತ್ತಿಗೆ ಪ್ರಪಂಚದ ಸಾಮಾನ್ಯ ಮಾನವನೇ ಲಕ್ಷ್ಯ. ಪ್ರತಿಯೊಬ್ಬನೂ ತನ್ನ ಹೊಣೆಯನ್ನು ಅರಿತು ಸಮಾಜದಲ್ಲಿ ಸರಿಯಾಗಿ ನಡೆದಾಗ ಮಾತ್ರ ಸಾಮಾಜಿಕಜೀವನ ಹಸನಾಗುವುದು. ಇದು ಪರಲೋಕಕ್ಕೂ ಸಾಧಕವಾಗುವುದು. ಇದಕ್ಕೆ ತತ್ತ್ವ-ಹಿತ-ಪುರುಷಾರ್ಥಜ್ಞಾನವೇ ಸಾಧಕ. ತತ್ತ್ವ-ಹಿತ-ಪುರುಷಾರ್ಥಜ್ಞಾನವನ್ನು ಈ ಉಪನಿಷತ್ತುಗಳಿಂದಲೇ ಪಡೆಯಲು ಸಾಧ್ಯ. ವೇದದ ಪೂರ್ವಭಾಗವು ಕರ್ಮದಿಂದ ಬ್ರಹ್ಮವನ್ನು ಹೇಗೆ ಆರಾಧಿಸಬೇಕೆಂಬುದನ್ನು ತಿಳಿಸಿದರೆ, ಉತ್ತರಭಾಗ ಎನಿಸಿದ ಉಪನಿಷತ್ತುಗಳು ಉಪಾಸನಾರೂಪವಾದ ಜ್ಞಾನದಿಂದ ಬ್ರಹ್ಮವನ್ನು ಪಡೆಯುವ ರೀತಿಯನ್ನು ವಿವರಿಸುತ್ತವೆ. ಪ್ರತಿಯೊಂದು ಚೇತನಾಚೇತನಪದಾರ್ಥಗಳಲ್ಲೂ ಬ್ರಹ್ಮವು ವ್ಯಾಪಿಸಿರುವುದೆಂದೂ, ಬ್ರಹ್ಮ-ಚೇತನಾಚೇತನಗಳಿಗೆ ಅವಿಭಜ್ಯವಾದ ಸಂಬಂಧ ಇರುವುದೆಂದೂ, ಆದ್ದರಿಂದಲೇ ಸರ್ವಾಂತರ್ಯಾಮಿಯಾಗಿರುವ ಪರಮಾತ್ಮನಿಗೆ ಚೇತನಾಚೇತನಪದಾರ್ಥಗಳು ಶರೀರರೂಪವಾಗಿವೆಯೆಂದೂ ಉಪನಿಷತ್ತುಗಳು ಸಾರುತ್ತವೆ.

ಇಂತಹ ಉಪನಿಷತ್ತುಗಳ ಪ್ರಭಾವವನ್ನು ಭಾರತದೇಶದಲ್ಲಿ ಅಲ್ಲದೆ, ಇತರ ದೇಶಗಳಲ್ಲೂ ಕಾಣಬಹುದು. ಶೋಪೆನ್‌ಹವರ್ ಮೊದಲಾದ ಪಾಶ್ಚಾತ್ಯವಿದ್ವಾಂಸರ ಜೀವನದಲ್ಲಿ ಉಪನಿಷತ್ತುಗಳ ಪ್ರಭಾವ ಸ್ಪಷ್ಟವಾಗಿ ಕಂಡುಬರುತ್ತದೆ. ಆದ್ದರಿಂದಲೇ ಅವನು 'ಜನರನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದ್ಧರಿಸುವ, ಪ್ರತಿಫಲಕೊಡುವ ಗ್ರಂಥಗಳಲ್ಲಿ ಉಪನಿಷತ್ತುಗಳಿಗಿಂತ ಮಿಗಿಲಾದ ಯಾವ ಗ್ರಂಥವೂ ಇಲ್ಲ. ನಾನು ಜೀವಿಸಿದ್ದಾಗ ಉಪನಿಷತ್ತಿನಿಂದ ಮನಸ್ಸಮಾಧಾನವನ್ನು ಪಡೆದಿದ್ದೆ. ಮರಣಾನಂತರ ಅದರಿಂದಲೇ ಶಾಂತಿಯನ್ನು ಪಡೆಯುತ್ತೇನೆ' ಎಂದು ಹೇಳಿದ್ದಾನೆ. ಡಾಯ್ಸನ್ ಎಂಬ ಮತ್ತೊಬ್ಬ ಪಾಶ್ಚಾತ್ಯ ವಿದ್ವಾಂಸನು ಪರ್ಮೆನೈಡೀಸ್, ಪ್ಲೇಟೋ ಕಾಂಟ್ ಮೊದಲಾದ ದಾರ್ಶನಿಕರ ಗ್ರಂಥಗಳಲ್ಲಿ ಉಪನಿಷತ್ತುಗಳಲ್ಲಿ ಅಡಗಿರುವ ತತ್ವಗಳನ್ನು ನಿರೂಪಿಸಲಾಗಿದೆ ಎಂದಿರುವನು. ಬೊಂಬಾಯಿಯ ರಾಯಲ್ ಏಷ್ಯಾಟಿಕ್ ಸೊಸೈಟಿಯಲ್ಲಿ ಮಾತನಾಡುತ್ತಾ, 'ಸಾಂಪ್ರದಾಯಿಕ ವೇದಾಂತವು ನೈತಿಕ ಜೀವನದ ಪ್ರಬಲವಾದ ಆಧಾರ, ಜೀವನ–ಮರಣಗಳ ಸರಳಾಟದಲ್ಲಿ ಇದು ಸಮಾಧಾನವನ್ನು ಉಂಟುಮಾಡುವುದು; ಭಾರತೀಯರೇ ಇದನ್ನು ಬಿಡಬೇಡಿ' ಎಂದು ಎಚ್ಚರಿಸಿದ್ದಾನೆ.

ಉಪನಿಷತ್ತುಗಳಿಗೆ ಹಲವಾರು ವ್ಯಾಖ್ಯಾನಗಳು ಬಂದಿವೆ. ಸಂಸ್ಕೃತ ವ್ಯಾಖ್ಯಾನಗಳಲ್ಲದೆ ಇಂಗ್ಲೀಷ್, ಕನ್ನಡ, ಹಿಂದಿ ಮತ್ತು ಇತರ ಕೆಲವು ಪಾಶ್ಚಾತ್ಯ ಭಾಷೆಗಳಲ್ಲೂ ಕೂಡ ಉಪನಿಷತ್ತುಗಳ ಅನುವಾದವಾಗಿದೆ. ಪ್ರಾಯಶಃ ಈವರೆಗೆ ಬರೆಯಲ್ಪಟ್ಟಿರುವ ಭಾಷ್ಯಗಳಾಗಲೀ, ಭಾಷಾಂತರಗಳಾಗಲೀ ಶಂಕರಾಚಾರ್ಯರ ಅದ್ವೈತ ದೃಷ್ಟಿಕೋನವನ್ನೇ ವಿಶೇಷವಾಗಿ ಪ್ರತಿಬಿಂಬಿಸುತ್ತವೆ. ಈ ದೃಷ್ಟಿಕೋನವಲ್ಲದೆ ರಾಮಾನುಜಾಚಾರ್ಯ, ಮಧ್ವಾಚಾರ್ಯ, ಚೈತನ್ಯ ಮೊದಲಾದ ಅನೇಕ ಆಚಾರ್ಯರ ದೃಷ್ಟಿಕೋನಗಳನ್ನು ಪ್ರತಿಬಿಂಬಿಸುವ ಉಪನಿಷತ್ ವ್ಯಾಖ್ಯಾನಗಳು ಬಹಳ ವಿರಳ. ಇದ್ದರೂ ಈ ಗ್ರಂಥಗಳು ಹೆಚ್ಚಾಗಿ ಸಂಸ್ಕೃತ ಭಾಷೆಯಲ್ಲಿಯೇ ಇವೆ.

ವಿಶಿಷ್ಟಾದ್ವೈತಪರವಾದ ದೃಷ್ಟಿಕೋನವನ್ನು ಪ್ರತಿಬಿಂಬಿಸುವ ವ್ಯಾಖ್ಯಾನಗಳನ್ನು ಕನ್ನಡ–ಇಂಗ್ಲೀಷ್ ಮೊದಲಾದ ಭಾಷೆಗಳಿಗೆ ಭಾಷಾಂತರಿಸಿ, ತತ್ವಜಿಜ್ಞಾಸುಗಳಿಗೆ ಒದಗಿಸುವ ಪ್ರಯತ್ನವನ್ನು ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್ ಕೈಗೆತ್ತಿಕೊಂಡಿದೆ. ಈವರೆಗೆ ಕನ್ನಡದಲ್ಲಿ ಈಶಾವಾಸ್ಯ, ಕೇನೋಪನಿಷತ್ತುಗಳ ವಿಶಿಷ್ಟಾದ್ವೈತಪರವಾದ ವ್ಯಾಖ್ಯಾನಗಳು ಅಚ್ಚಾಗಿದ್ದರೂ ಕೂಡ ಅವು ಈಗ ರಚಿಸಲ್ಪಟ್ಟಿರುವ ಗ್ರಂಥದಂತೆ ವಿಸ್ತಾರವಾಗಿಲ್ಲ; ಅತ್ಯಂತ ಸಂಗ್ರಹರೂಪವಾಗಿದೆ. ವಿಶಿಷ್ಟಾದ್ವೈತಪರವಾದ ಎಲ್ಲ ಸಂಸ್ಕೃತ ಭಾಷ್ಯಗಳನ್ನೂ ವಿಮರ್ಶಾತ್ಮಕವಾಗಿ ಅಧ್ಯಯನಮಾಡಿ ಅವುಗಳ ಸಾರವನ್ನು ಕನ್ನಡ ಅವತರಣಿಕೆಯಲ್ಲಿ ಕೊಡುವ ವಿಶೇಷ ಪ್ರಯತ್ನ ಇಲ್ಲಿದೆ. ಇಂತಹ ಗ್ರಂಥರಚನೆ ಈವರೆಗೂ ಆಗಿಲ್ಲವೆಂದು ಹೇಳಿದರೆ ತಪ್ಪಾಗಲಾರದು.

ಈ ದಿಶೆಯಲ್ಲಿ ಮೊಟ್ಟಮೊದಲನೆಯ ಪ್ರಯತ್ನದ ಫಲವಾಗಿ 'ಈಶಾವಾಸ್ಯೋಪನಿಷತ್' ಈ ಸಂಸ್ಥೆಯಿಂದ ಹೊರಬಿದ್ದು ಓದುಗರ ಕೈ ಸೇರಿದೆ.

ಈಶಾವಾಸ್ಯೋಪನಿಷತ್ತಿನಲ್ಲಿ 'ಚೇತನಾಚೇತನಾತ್ಮಕವಾದ ವಿಶ್ವವೆಲ್ಲವೂ ಪರಮಾತ್ಮನಿಂದ ವ್ಯಾಪ್ತವಾಗಿದೆ. ಆದ್ದರಿಂದ ಈ ವಿಶ್ವವೇ ಅವನ ಸ್ವತ್ತು; ಇಂತಹ ವಿಶ್ವಕ್ಕೆ ಸ್ವಾಮಿಯಾದ ಪರಮಾತ್ಮನನ್ನು ಯಾವ ರೀತಿ ಉಪಾಸಿಸಬೇಕು' ಎಂಬ ವಿಷಯವನ್ನು ಬಹಳ ಸುಂದರವಾಗಿಯೂ, ಸ್ಪಷ್ಟವಾಗಿಯೂ ನಿರೂಪಿಸಲಾಗಿದೆ.

ಕೇನೋಪನಿಷತ್ತಿನಲ್ಲಿ ವಿಶ್ವವ್ಯಾಪಿಯಾದ ಆ ಪರಮಾತ್ಮನು ಪ್ರತಿಯೊಬ್ಬರ ಹೃದಯದಲ್ಲೂ ಅಂತರ್ಯಾಮಿಯಾಗಿ ನಿಂತು ಪ್ರೇರೇಪಿಸುತ್ತಾನೆ. ಅವನ ಪ್ರೇರಣೆ ಇಲ್ಲದೆ; ಕಾಲುಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚಲಿಸಲಾರವು; ಕೈ ಕೆಲಸವಾಡಲಾರದು; ಕಣ್ಣು ನೋಡಲಾರದು; ಕಿವಿ ಕೇಳಲಾರದು ಎಂದು ಬಹಳ ಸುಂದರವಾಗಿ ಪ್ರತಿಪಾದಿಸಲಾಗಿದೆ. ಮನಸ್ಸು ಕೂಡ ತನ್ನ ಕೆಲಸವನ್ನು ಮಾಡಲು ಸಮರ್ಥವಾಗಬೇಕಾದರೆ, ಪರಮಾತ್ಮನ ಪ್ರೇರಕಶಕ್ತಿಯಿಂದಲೇ ಸಾಧ್ಯ ಎಂದು ನಿರೂಪಿಸ ಲಾಗಿದೆ. ಇಂತಹ ಹಿರಿದಾದ ವಿಷಯವನ್ನು ತಿಳಿಸುವುದಕ್ಕೋಸ್ಕರ ವಿಜ್ಞಾನಿಗಳು ಇಂದು ಕೇಳುತ್ತಿರುವ, 'ಇಂದ್ರಿಯಗಳಿಗೆ ಪ್ರೇರಕನಾರು ? ಮನಸ್ಸೇ ? ಅಥವಾ ಅವುಗಳಿಗಿಂತಲೂ ಭಿನ್ನವಾದ ಮತ್ತೊಂದು ಶಕ್ತಿ ಇರುವುದೇ ?' ಎಂಬ ಪ್ರಶ್ನೆಯಿಂದಲೇ 'ಕೇನೋಪನಿಷತ್' ಆರಂಭವಾಗುತ್ತದೆ. ಇಂದ್ರಿಯ, ಮನಸ್ಸು ಮತ್ತು ಜೀವಾತ್ಮ ಇವೆಲ್ಲಕ್ಕಿಂತಲೂ ಮಿಗಿಲಾದ ಮತ್ತೊಂದು ತತ್ವವೇ ಈ ಚರಾಚರಾತ್ಮಕವಾದ ವಿಶ್ವವನ್ನು ನಡೆಸುವ ಪ್ರೇರಕಶಕ್ತಿ ಎಂದು ಇಲ್ಲಿ ಹೃದಯಂಗಮವಾಗಿ ನಿರೂಪಿಸಲಾಗಿದೆ.

ಎರಡನೆಯದಾಗಿ ಇಂತಹ ಪರಮಾತ್ಮತತ್ವವನ್ನು ತಿಳಿಯುವ ಬಗೆ ಹೇಗೆ ? ಇದರ ಸ್ವರೂಪ ಯಾವುದು ? ಎಂಬ ವಿಷಯವನ್ನೂ ಇಲ್ಲಿ ವಿಸ್ತಾರವಾಗಿ ಪ್ರತಿಪಾದಿಸಲಾಗಿದೆ. ಪರಮಾತ್ಮತತ್ವವನ್ನು ಯಾರೂ 'ಇದಮಿತ್ಥಮ್' ಎಂಬುದಾಗಿ ಪೂರ್ಣವಾಗಿ ತಿಳಿಯಲು ಸಾಧ್ಯವಾಗಿಲ್ಲ. ಅಂತೆಯೇ ಇದು ಜ್ಞಾನಕ್ಕೆ ಅಗೋಚರವಾದ ವಸ್ತುವೂ ಅಲ್ಲ. ಆದ್ದರಿಂದಲೇ ಪರಮಾತ್ಮತತ್ವವನ್ನು ಪೂರ್ಣವಾಗಿ ತಿಳಿದಿರುವೆನೆಂದು ಭಾವಿಸಿರುವವನು ಅಜ್ಞ. ಅಪರಿಮಿತವಾದ ಆ ತತ್ವವನ್ನು ತನ್ನ ಜ್ಞಾನಕ್ಕೆ ಎಟುಕುವಷ್ಟು ಮಾತ್ರ ಗ್ರಹಿಸಿರುವೆನೆಂಬ ಜ್ಞಾನ ಇರುವವನೇ ಪ್ರಾಜ್ಞ. ಆ ತತ್ವವು ನಮ್ಮ ಕಣ್ಣಿಗೆ ಕಾಣುವ ತತ್ವಕ್ಕಿಂತ ಭಿನ್ನವಾದುದು. ಇವೇ ಮೊದಲಾದ ವಿಷಯಗಳನ್ನು 'ಕೇನೋಪನಿಷತ್' ಮನೋಹರವಾಗಿ ತೋರಿಸಿಕೊಟ್ಟಿದೆ.

ಪರಮಾತ್ಮನಿಂದ ಪ್ರೇರೇಪಿಸಲ್ಪಟ್ಟ ಜೀವಾತ್ಮನು ತನ್ನ ಕಾರ್ಯದಲ್ಲಿ ಸಾಫಲ್ಯವನ್ನು ಪಡೆದಾಗ, ತಾನೇ ಇದನ್ನು ಮಾಡಿದೆನೆಂದು ತಿಳಿಯುವುದು ಸಹಜ. ಇದಕ್ಕೆ ದೇವತೆಗಳೂ ಹೊರತಲ್ಲ. ಇಂತಹ ಭ್ರಮೆಯನ್ನು ಹೋಗಲಾಡಿಸುವುದಕ್ಕೋಸ್ಕರ ದೇವಾಸುರಯುದ್ಧದಲ್ಲಿ ದೇವತೆಗಳಿಗೆ ಪರಮಾತ್ಮನು ಜಯ ದೊರಕಿಸಿ ಕೊಟ್ಟನು. ಈ ಜಯಕ್ಕೆ ತಮ್ಮ ಶಕ್ತಿಯೇ ಕಾರಣ ಎಂದು ಭ್ರಮಿಸಿದ ದೇವತೆಗಳ ಅಹಂಕಾರವನ್ನು ಪರಬ್ರಹ್ಮವು ಹೋಗಲಾಡಿಸಿ ಅನುಗ್ರಹಿಸಿದ ರೀತಿಯನ್ನು ಚೇತೋಹಾರಿಯಾಗಿ ಚಿತ್ರಿಸಲಾಗಿದೆ.

ನಾಲ್ಕನೆಯ ಖಂಡವಲ್ಲಿ ದಯಾಮಯನಾದ ಆ ಪರಮಾತ್ಮನ ಸ್ವರೂಪವನ್ನು 'ತದ್ವನಂ' ಎಂಬ ಕ್ರಮದಲ್ಲಿ ಉಪಾಸಿಸುವ ರೀತಿಯನ್ನು ಹೇಳಲಾಗಿದೆ. ಇಂತಹ ಕೇನೋಪನಿಷತ್ತಿನ ಸಮಗ್ರವಾದ ಅಧ್ಯಯನ ಮಾಡಿ, ಕನ್ನಡ ದೇಶದ ಜಿಜ್ಞಾಸುಗಳಿಗೆ ಅದರಲ್ಲಿರುವ ಮುಖ್ಯ ಸಂದೇಶಗಳನ್ನು ತಲುಪಿಸುವ ಪ್ರಯತ್ನದಲ್ಲಿ ಉಪನಿಷನ್ನಿಗಮದ ಅಧ್ಯಕ್ಷರಾದ ಶ್ರೀಮಾನ್ ಎಂ. ಬಿ. ಪಾರ್ಥಸಾರಥಿ ಅಯ್ಯಂಗಾರ್ ಮತ್ತು ಅವರ ಸಂಗಡಿಗರು ವಿಶೇಷವಾಗಿ ಶ್ರಮಿಸಿದ್ದಾರೆ. ಉಪನಿಷನ್ನಿಗಮದ ಕಾರ್ಯಕರ್ತರ ಅವ್ಯಾಹತವಾದಶ್ರಮ ಈ ಪ್ರಕಾಶನವು ಸುಂದರವಾಗಿಯೂ, ಶೀಘ್ರವಾಗಿಯೂ ಬರಲು ಸಹಕಾರಿಯಾಗಿದೆ.

ಈ ಯೋಜನೆಯು ಫಲಪ್ರದವಾಗಲು ವಿಶಿಷ್ಟಾದ್ವೈತಕೋಶವಿಭಾಗದಲ್ಲಿ ಕೆಲಸ ಮಾಡುತ್ತಿರುವ ಶ್ರೀ ಎನ್. ವೆಂಕಟಾಚಾರ್ ಅವರೂ ವಿಶೇಷವಾಗಿ ಶ್ರಮಿಸಿದ್ದಾರೆ. ಈ ಗ್ರಂಥದ ತಿದ್ದುವಿಕೆಯಲ್ಲಿ ಮತ್ತು ಕೆಲವೆಡೆ ಭಾಷಾಂತರಗಳನ್ನು ಮಾಡುವಲ್ಲಿಯೂ ಕೂಡ ಸಹಕರಿಸಿದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರೀ ಎನ್. ಎಸ್. ರಾಮಭದ್ರಾಚಾರ್ ಅವರಿಗೂ ಮತ್ತು ಸಂಸ್ಥೆಯ ಹಿರಿಯ ಸಂಶೋಧಕರಿಗೂ ಕೂಡ ನಮ್ಮ ಕೃತಜ್ಞತೆಗಳು ಸಲ್ಲಬೇಕಾಗಿವೆ.

ಮುಖ್ಯವಾಗಿ ಈ ಯೋಜನೆಯು ಕಾರ್ಯರೂಪಕ್ಕೆ ಬರಬೇಕಾದರೆ ಈ ಸಂಸ್ಥೆಯ ಕಾರ್ಯಕಾರಿ ಸಮಿತಿಯು ಇದಕ್ಕೆ ಎಲ್ಲ ವಿಧದಲ್ಲೂ ಪ್ರೋತ್ಸಾಹ ಕೊಟ್ಟಿದೆ. ಈ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾದ ಶ್ರೀ ಎಂ.ಎ.ಎಸ್. ರಾಜನ್, ಐ.ಎ.ಎಸ್ (ನಿವೃತ್ತ), ಡಾ॥ ಬಿ.ಆರ್. ಶೇಷಾಚಾರ್ (ನಿವೃತ್ತ ಅಧ್ಯಕ್ಷರು) ಮತ್ತು ಸದಸ್ಯರು ಶ್ರೀ ಡಿ. ಎಸ್. ರಾಘವೇಂದ್ರಾಚಾರ್, ಐ.ಎ.ಎಸ್. (ನಿವೃತ್ತ) ಮತ್ತು ಡಾ॥ ಎನ್. ಎಸ್. ಅನಂತರಂಗಾಚಾರ್ ಮೊದಲಾದವರ ಪ್ರೋತ್ಸಾಹ ಮತ್ತು ಸಹಕಾರಗಳು ಇಲ್ಲಿ ಸ್ಮರಣೀಯ. ನಮ್ಮ ಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀಮಾನ್ ಎಸ್. ವಿಠಲ್‌ರಾವ್, ಐ.ಎ.ಎಸ್., ಧಾರ್ಮಿಕದತ್ತಿ ಆಯುಕ್ತರು, ಬೆಂಗಳೂರು, ಇವರ ಹೃತ್ಪೂರ್ವಕವಾದ ಪ್ರೋತ್ಸಾಹವನ್ನು ಮರೆಯುವಂತಿಲ್ಲ. ಅವರೆಲ್ಲರ ಆದರವಿಶ್ವಾಸಗಳಿಂದಲೂ, ತಜ್ಞಸಮಿತಿಯ ಮಾರ್ಗದರ್ಶನದಿಂದಲೂ ಇಂತಹ ಮಹತ್ವಪೂರ್ಣವಾದ ಗ್ರಂಥವು ಹೊರಬರುತ್ತಿದೆ. ಇಂತಹ ಪ್ರಕಾಶನಕ್ಕೆ ಬೆನ್ನೆಲುಬಿನಂತಿರುವ ಆರ್ಥಿಕಸಹಾಯವನ್ನು ಕೊಟ್ಟು ಉಪಕರಿಸುತ್ತಿರುವ ಭಾರತಸರ್ಕಾರಕ್ಕೂ ಮತ್ತು ರಾಜ್ಯಸರ್ಕಾರಕ್ಕೂ ನಾವು ಚಿರಋಣಿಗಳು. ಈ ಗ್ರಂಥವನ್ನು ಅಂದವಾಗಿಯೂ, ಅತ್ಯಂತ ಶೀಘ್ರವಾಗಿಯೂ ಮುದ್ರಿಸಿಕೊಟ್ಟ 'ವಿವೇಕ್ ಪ್ರಿಂಟರ್ಸ್' ಅವರಿಗೆ ನಮ್ಮ ಕೃತಜ್ಞತೆಗಳು. ಉಪನಿಷತ್ತುಗಳ ಮಾಲೆಯಲ್ಲಿ ದ್ವಿತೀಯ ಕುಸುಮವಾಗಿರುವ ಈ 'ಕೇನೋಪನಿಷತ್' ಕನ್ನಡನಾಡಿನ ಜನತೆಗೆ ಆದರಣೀಯವಾಗಿ, ಅವರ ಶಾಂತಿಯುತ ಜೀವನಕ್ಕೆ ದಾರಿದೀಪವಾಗಲಿ ಎಂದು ಹಾರೈಸುತ್ತೇನೆ.

ಎಂ. ಎ. ಲಕ್ಷ್ಮೀತಾತಾಚಾರ್
ಪ್ರಧಾನ ಸಂಪಾದಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಕೇತಾಕ್ಷರಸೂಚಿ

ತೈತ್ತಿರೀಯೋಪನಿಷತ್ ; ಆನಂದವಲ್ಲೀ	ತೈ.ಉ.ಆ.
ತೈತ್ತಿರೀಯ ನಾರಾಯಣೋಪನಿಷತ್	ತೈ.ನಾ.
ಶ್ವೇತಾಶ್ವತರೋಪನಿಷತ್	ಶ್ವೇ.ಉ.
ಶ್ರೀಭಾಷ್ಯ-ಜಿಜ್ಞಾಸಾಧಿಕರಣ	ಶ್ರೀ.ಭಾ.ಜ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಷಯಸೂಚಿ

ಕ್ರ.ಸಂ.	ವಿಷಯ			ಪುಟ
1	ಪ್ರಸ್ತಾವನೆ	....	....	1–19
2	ಕೇನೋಪನಿಷತ್ ಮೂಲ	....	....	21–26

(ಕೇನೋಪನಿಷತ್ ಸಂಸ್ಕೃತ ಮೂಲ-ಕನ್ನಡ ಮೂಲ-ಪ್ರತಿಪದಾರ್ಥ-ತಾತ್ಪರ್ಯ-ರಂಗರಾಮಾನುಜಭಾಷ್ಯ-ಭಾಷಾಂತರ-ಭಾಷ್ಯಸಾರ ಸಹಿತ)

3	ಶಾಂತಿಪಾಠ	....	....	1
4	ತಾತ್ಪರ್ಯ	....	....	1
5	ಉಪನಿಷತ್ತಿನ ಉಪದೇಶ	....	....	2

ಪ್ರಥಮಖಂಡ

ಮಂತ್ರ ೧

6	ಮಂತ್ರ	....	....	3
7	ಪ್ರತಿಪದಾರ್ಥ	....	....	3
8	ತಾತ್ಪರ್ಯ	....	....	3
9	ರಂಗರಾಮಾನುಜಭಾಷ್ಯ	....	....	4
10	ಭಾಷಾಂತರ	....	....	4
11	ಭಾಷ್ಯಸಾರಭೂಮಿಕೆ	....	....	5
12	ಭಾಷ್ಯಸಾರ	....	....	5–8

ಮಂತ್ರ ೨

13	ಮಂತ್ರ	....	....	9
14	ಪ್ರತಿಪದಾರ್ಥ	....	....	9
15	ತಾತ್ಪರ್ಯ	....	....	9
16	ರಂಗರಾಮಾನುಜಭಾಷ್ಯ	....	....	9
17	ಭಾಷಾಂತರ	....	....	10
18	ಭಾಷ್ಯಸಾರ	....	....	10–12

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೩

ಕ್ರ.ಸಂ.	ವಿಷಯ			ಪುಟ
19	ಮಂತ್ರ	....	....	13
20	ಪ್ರತಿಪದಾರ್ಥ	....	....	13
21	ತಾತ್ಪರ್ಯ	....	....	13
22	ರಂಗರಾಮಾನುಜಭಾಷ್ಯ	....	....	13
23	ಭಾಷಾಂತರ	....	....	13–14
24	ಭಾಷ್ಯಸಾರ (4ನೇ ಮಂತ್ರದಲ್ಲಿ ಅಳವಡಿಸಲಾಗಿದೆ)			14

ಮಂತ್ರ ೪

25	ಮಂತ್ರ	....	....	15
26	ಪ್ರತಿಪದಾರ್ಥ	....	....	15
27	ತಾತ್ಪರ್ಯ	....	....	15
28	ರಂಗರಾಮಾನುಜಭಾಷ್ಯ	....	....	15
29	ಭಾಷಾಂತರ	....	....	15
30	ಭಾಷ್ಯಸಾರ (3-4)	....	....	16–19

ಮಂತ್ರ ೫

31	ಮಂತ್ರ	....	....	20
32	ಪ್ರತಿಪದಾರ್ಥ	....	....	20
33	ತಾತ್ಪರ್ಯ	....	....	20
34	ರಂಗರಾಮಾನುಜಭಾಷ್ಯ	....	....	20
35	ಭಾಷಾಂತರ	....	....	21
36	ಭಾಷ್ಯಸಾರ	....	....	21

ಮಂತ್ರ ೬

37	ಮಂತ್ರ	....	....	22
38	ಪ್ರತಿಪದಾರ್ಥ	....	....	22
39	ತಾತ್ಪರ್ಯ	....	....	22
40	ಭಾಷ್ಯಸಾರ	....	....	22

ಮಂತ್ರ ೭

41	ಮಂತ್ರ	....	....	23
42	ಪ್ರತಿಪದಾರ್ಥ	....	....	23
43	ತಾತ್ಪರ್ಯ	....	....	23
44	ಭಾಷ್ಯಸಾರ	....	....	23

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೮

ಕ್ರ.ಸಂ.	ವಿಷಯಂ	ಪುಟ
45	ಮಂತ್ರ	24
46	ಪ್ರತಿಪದಾರ್ಥ	24
47	ತಾತ್ಪರ್ಯ	24
48	ಭಾಷ್ಯಸಾರ	24

ಮಂತ್ರ ೯

49	ಮಂತ್ರ	25
50	ಪ್ರತಿಪದಾರ್ಥ	25
51	ತಾತ್ಪರ್ಯ	25
52	ಭಾಷ್ಯಸಾರ	25

ದ್ವಿತೀಯಖಂಡ

ಮಂತ್ರ ೧

53	ಮಂತ್ರ	27
54	ಪ್ರತಿಪದಾರ್ಥ	27
55	ತಾತ್ಪರ್ಯ	27
56	ರಂಗರಾಮಾನುಜಭಾಷ್ಯ	28
57	ಭಾಷಾಂತರ	28
58	ಭಾಷ್ಯಸಾರ	28–29

ಮಂತ್ರ ೨

59	ಮಂತ್ರ	30
60	ಪ್ರತಿಪದಾರ್ಥ	30
61	ತಾತ್ಪರ್ಯ	30
62	ರಂಗರಾಮಾನುಜಭಾಷ್ಯ	30
63	ಭಾಷಾಂತರ	31
64	ಭಾಷ್ಯಸಾರ	31–32

ಮಂತ್ರ ೩

65	ಮಂತ್ರ	33
66	ಪ್ರತಿಪದಾರ್ಥ	33

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ರ.ಸಂ.	ವಿಷಯ			ಪುಟ
67	ತಾತ್ಪರ್ಯ	....	....	33
68	ರಂಗರಾಮಾನುಜಭಾಷ್ಯ	....	....	33
69	ಭಾಷಾಂತರ	....	....	34
70	ಭಾಷ್ಯಸಾರ	....	....	34–35

ಮಂತ್ರ ೪

71	ಮಂತ್ರ	....	....	36
72	ಪ್ರತಿಪದಾರ್ಥ	....	....	36
73	ತಾತ್ಪರ್ಯ	....	....	36
74	ರಂಗರಾಮಾನುಜಭಾಷ್ಯ	....	....	36
75	ಭಾಷಾಂತರ	....	....	37
76	ಭಾಷ್ಯಸಾರ	...	....	37–38

ಮಂತ್ರ ೫

77	ಮಂತ್ರ	....	....	39
78	ಪ್ರತಿಪದಾರ್ಥ	....	....	39
79	ತಾತ್ಪರ್ಯ	....	....	39
80	ರಂಗರಾಮಾನುಜಭಾಷ್ಯ	....	....	39
81	ಭಾಷಾಂತರ	....	....	40
82	ಭಾಷ್ಯಸಾರ	....	....	40–41

ತೃತೀಯಖಂಡ

ಮಂತ್ರ ೧

83	ಮಂತ್ರ	....	....	43
84	ಪ್ರತಿಪದಾರ್ಥ	....	....	43
85	ತಾತ್ಪರ್ಯ	....	....	43
86	ರಂಗರಾಮಾನುಜಭಾಷ್ಯ	....	....	44
87	ಭಾಷಾಂತರ	....	....	44
88	ಭಾಷ್ಯಸಾರ	....	....	44

ಮಂತ್ರ ೨

89	ಮಂತ್ರ	....	....	45
90	ಪ್ರತಿಪದಾರ್ಥ	....	....	45
91	ತಾತ್ಪರ್ಯ	....	....	45

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ರ.ಸಂ.	ವಿಷಯ			ಪುಟ
92	ರಂಗರಾಮಾನುಜಭಾಷ್ಯ	....	....	45
93	ಭಾಷಾಂತರ	....	....	45
94	ಭಾಷ್ಯಸಾರ	....	....	46
	ಮಂತ್ರ ೩			
95	ಮಂತ್ರ	....	....	47
96	ಪ್ರತಿಪದಾರ್ಥ	....	....	47
97	ತಾತ್ಪರ್ಯ	....	....	47
98	ರಂಗರಾಮಾನುಜಭಾಷ್ಯ	...	....	47
99	ಭಾಷಾಂತರ	....	....	48
100	ಭಾಷ್ಯಸಾರ	....	....	48
	ಮಂತ್ರ ೪			
101	ಮಂತ್ರ	....	....	49
102	ಪ್ರತಿಪದಾರ್ಥ	....	....	49
103	ತಾತ್ಪರ್ಯ	....	....	49
104	ಭಾಷ್ಯಸಾರ	....	....	49
	ಮಂತ್ರ ೫			
105	ಮಂತ್ರ	....	....	50
106	ಪ್ರತಿಪದಾರ್ಥ	....	....	50
107	ತಾತ್ಪರ್ಯ	....	....	50
108	ಭಾಷ್ಯಸಾರ	....	....	50
	ಮಂತ್ರ ೬			
109	ಮಂತ್ರ	....	....	51
110	ಪ್ರತಿಪದಾರ್ಥ	....	....	51
111	ತಾತ್ಪರ್ಯ	....	....	51
112	ಭಾಷ್ಯಸಾರ	....	....	51-52
	ಮಂತ್ರ ೭			
113	ಮಂತ್ರ	....	....	53
114	ಪ್ರತಿಪದಾರ್ಥ	....	....	53

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ರ.ಸಂ.	ವಿಷಯ	ಪುಟ
115	ತಾತ್ಪರ್ಯ	53
116	ಭಾಷ್ಯಸಾರ	53
	ಮಂತ್ರ ೮	
117	ಮಂತ್ರ	54
118	ಪ್ರತಿಪದಾರ್ಥ	54
119	ತಾತ್ಪರ್ಯ	54
120	ಭಾಷ್ಯಸಾರ	54
	ಮಂತ್ರ ೯	
121	ಮಂತ್ರ	55
122	ಪ್ರತಿಪದಾರ್ಥ	55
123	ತಾತ್ಪರ್ಯ	55
124	ಭಾಷ್ಯಸಾರ	55
	ಮಂತ್ರ ೧೦	
125	ಮಂತ್ರ	56
126	ಪ್ರತಿಪದಾರ್ಥ	56
127	ತಾತ್ಪರ್ಯ	56
128	ಭಾಷ್ಯಸಾರ	56-57
	ಮಂತ್ರ ೧೧	
129	ಮಂತ್ರ	58
130	ಪ್ರತಿಪದಾರ್ಥ	58
131	ತಾತ್ಪರ್ಯ	58
132	ರಂಗರಾಮಾನುಜಭಾಷ್ಯ	58
133	ಭಾಷಾಂತರ	59
134	ಭಾಷ್ಯಸಾರ	59
	ಮಂತ್ರ ೧೨	
135	ಮಂತ್ರ	60
136	ಪ್ರತಿಪದಾರ್ಥ	60
137	ತಾತ್ಪರ್ಯ	60
138	ಭಾಷ್ಯಸಾರ	60-61

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾಲ್ಕನೆಖಂಡ

ಮಂತ್ರ ೧

ಕ್ರ.ಸಂ.	ವಿಷಯ			ಪುಟ
139	ಮಂತ್ರ	....	....	63
140	ಪ್ರತಿಪದಾರ್ಥ	....	....	63
141	ತಾತ್ಪರ್ಯ	....	....	63
142	ರಂಗರಾಮಾನುಜಭಾಷ್ಯ	....	....	63
143	ಭಾಷಾಂತರ	....	....	64
144	ಭಾಷ್ಯಸಾರ	....	....	64

ಮಂತ್ರ ೨

145	ಮಂತ್ರ	....	....	65
146	ಪ್ರತಿಪದಾರ್ಥ	....	....	65
147	ತಾತ್ಪರ್ಯ	....	....	65
148	ರಂಗರಾಮಾನುಜಭಾಷ್ಯ	....	....	65
149	ಭಾಷಾಂತರ	....	....	66
150	ಭಾಷ್ಯಸಾರ	....	....	66

ಮಂತ್ರ ೩

151	ಮಂತ್ರ	....	....	67
152	ಪ್ರತಿಪದಾರ್ಥ	....	....	67
153	ತಾತ್ಪರ್ಯ	....	....	67
154	ರಂಗರಾಮಾನುಜಭಾಷ್ಯ	....	....	67
155	ಭಾಷಾಂತರ	....	....	67
156	ಭಾಷ್ಯಸಾರ	....	....	68

ಮಂತ್ರ ೪

157	ಮಂತ್ರ	....	....	69
158	ಪ್ರತಿಪದಾರ್ಥ	....	....	69
159	ತಾತ್ಪರ್ಯ	....	....	69
160	ರಂಗರಾಮಾನುಜಭಾಷ್ಯ	....	....	69
161	ಭಾಷಾಂತರ	....	....	70
162	ಭಾಷ್ಯಸಾರ	....	....	70–72

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೫

ಕ್ರ.ಸಂ.	ವಿಷಯ			ಪುಟ
163	ಮಂತ್ರ	....	....	73
164	ಪ್ರತಿಪದಾರ್ಥ	....	....	73
165	ತಾತ್ಪರ್ಯ	....	....	73
166	ರಂಗರಾಮಾನುಜಭಾಷ್ಯ	....	....	73
167	ಭಾಷಾಂತರ	....	....	74
168	ಭಾಷ್ಯಸಾರ	....	....	74–75

ಮಂತ್ರ ೬

169	ಮಂತ್ರ	....	....	76
170	ಪ್ರತಿಪದಾರ್ಥ	....	....	76
171	ತಾತ್ಪರ್ಯ	....	....	76
172	ರಂಗರಾಮಾನುಜಭಾಷ್ಯ	...	....	76
173	ಭಾಷಾಂತರ	....	....	76
174	ಭಾಷ್ಯಸಾರ	....	....	77

ಮಂತ್ರ ೭

175	ಮಂತ್ರ	....	....	78
176	ಪ್ರತಿಪದಾರ್ಥ	....	....	78
177	ತಾತ್ಪರ್ಯ	....	....	78
178	ರಂಗರಾಮಾನುಜಭಾಷ್ಯ	....	....	78
179	ಭಾಷಾಂತರ	....	....	78
180	ಭಾಷ್ಯಸಾರ	....	....	79

ಮಂತ್ರ ೮

181	ಮಂತ್ರ	....	....	80
182	ಪ್ರತಿಪದಾರ್ಥ	....	....	80
183	ತಾತ್ಪರ್ಯ	...	....	80
184	ರಂಗರಾಮಾನುಜಭಾಷ್ಯ	....	....	80
185	ಭಾಷಾಂತರ	....	....	80
186	ಭಾಷ್ಯಸಾರ	....	....	81

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೯

ಕ್ರ.ಸಂ.	ವಿಷಯ			ಪುಟ
187	ಮಂತ್ರ	....	....	82
188	ಪ್ರತಿಪದಾರ್ಥ	....	....	82
189	ತಾತ್ಪರ್ಯ	....	....	82
190	ರಂಗರಾಮಾನುಜಭಾಷ್ಯ	....	....	82
191	ಭಾಷಾಂತರ	....	....	83
192	ಭಾಷ್ಯಸಾರ	....	....	83-84

ಅನುಬಂಧ

೧

193 ಮಂತ್ರಗಳ ಅಕಾರಾದಿ 87–88

೨

194 ಪ್ರಮಾಣಾಕರ ಅಕಾರಾದಿಸೂಚಿ 89

೩

195 ಅಪೂರ್ವಪದಗಳು 89

೪

196 ಭಗವನ್ನಾಮಗಳು 90

೫

197 ವ್ಯಕ್ತಿಸೂಚಿ 90

೬

198 ಕೇನೋಪನಿಷದರ್ಥಸಂಗ್ರಹಃ 91–92
(ಮೂಲ ಮತ್ತು ಕನ್ನಡ ಅನುವಾದ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೭

ಭಾಷ್ಯಕಾರರ ಚರಿತ್ರೆ

ಕ್ರ.ಸಂ.	ವಿಷಯ			ಪುಟ
199	ರಾಮಾನಂದ	....	....	93
200	ರಂಗರಾಮಾನುಜಮುನಿ	....	....	94–97
201	ಗೋಪಾಲಾನಂದಸ್ವಾಮಿ	....	....	98-99
202	ಭಾರದ್ವಾಜರಾಮಾನುಜಾಚಾರ್ಯ	....	....	100

೮

ಉಲ್ಲೇಖಕಾರರ ಚರಿತ್ರೆ

203	ಭಗವದ್ರಾಮಾನುಜ	....	....	101-104
204	(ಕೂರ) ನಾರಾಯಣಮುನಿ	....	....	105
205	ವ್ಯಾಸಾರ್ಯ	....	....	106
206	ಮಹಾಚಾರ್ಯ	....	....	107-108

೯

ಉಲ್ಲೇಖಗ್ರಂಥವಿವರಣೆಗಳು

207	ಶ್ರೀಭಾಷ್ಯ-ಜಿಜ್ಞಾಸಾಧಿಕರಣ	....	....	109
208	ಶ್ರೀಭಾಷ್ಯ-ಸಮನ್ವಯಾಧಿಕರಣ	....	....	109
209	ಶ್ರೀಭಾಷ್ಯ-ಸರ್ವತ್ರಪ್ರಸಿದ್ಧ್ಯಧಿಕರಣ	....	....	110
210	ವಿಷಯವಾಕ್ಯದೀಪಿಕಾ-ಸಮನ್ವಯಾಧಿಕರಣ		....	110
211	ವೇದಾಂತವಿಜಯಮಂಗಳದೀಪಿಕಾ	....	....	110-112

೧೦

ಕೇನೋಪನಿಷತ್ ಗ್ರಂಥಸೂಚಿ

212	ಸಂಕೇತಾಕ್ಷರಸೂಚಿ	....	....	113
213	ಮೂಲ ಮತ್ತು ಭಾಷ್ಯಗ್ರಂಥಗಳು	....	....	115-118

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾಷಾಂತರಗಳು

ಕ್ರ.ಸಂ.	ವಿಷಯ			ಪುಟ
214	ಕನ್ನಡ	....	....	119
215	ತಮಿಳು	....	....	119
216	ಹಿಂದಿ	....	....	120
217	ಇಂಗ್ಲೀಷ್	....	....	120-122
218	ಹಸ್ತಲಿಖಿತ, ತಾಳಪತ್ರಗಳು	....	....	123

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೇನೋಪನಿಷತ್

ಪ್ರಸ್ತಾವನೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಸ್ತಾವನೆ

ಜಗತ್ತಿನಲ್ಲಿ ಪ್ರಾಣಿ ಸಾಮಾನ್ಯವು ದುಃಖನಿವೃತ್ತಿಪೂರ್ವಕವಾದ ಸುಖಪ್ರಾಪ್ತಿಗಾಗಿ ಯತ್ನಿಸುತ್ತದೆ ಎಂಬುದು ವಿಚಾರಶೀಲರೆಲ್ಲರಿಗೂ ತಿಳಿದ ಅಂಶ. ಆದರೆ ಸಾಮಾನ್ಯವಾಗಿ ಬಹಳ ಜನರು ಐಹಿಕಸುಖಕ್ಕಾಗಿಯೇ ಯತ್ನಿಸುತ್ತಾರೆ. ಪಾರಲೌಕಿಕಸುಖಕ್ಕೆ ಯತ್ನಿಸುವುದಿಲ್ಲ. ಕೆಲವರು ಲೌಕಿಕ ಸುಖವು ನಶ್ವರವೆಂದು ತಿಳಿದು ಪರಲೋಕದಲ್ಲಿ ದೊರೆಯುವ ಸುಖಗಳಿಗಾಗಿ ಯತ್ನಿಸುತ್ತಾರೆ. ಆದರೆ ಆ ಸುಖವನ್ನು ಪಡೆಯಲು ಉಪಾಯವೇನೆಂಬುದನ್ನು ಸುಲಭವಾಗಿ ಅರಿಯಲು ಸಾಧ್ಯವಿಲ್ಲ. ಅದಕ್ಕಾಗಿ ವೇದಗಳು ಯಜ್ಞಾದಿಸಾಧನಗಳನ್ನು ಉಪದೇಶಿಸಿವೆ. ಇದರಿಂದ ಸಿಗುವ ಸ್ವರ್ಗಾದಿ ಫಲಗಳೂ 'ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ' ಎಂಬಂತೆ ನಶ್ವರ ಎಂದು ಮುಮುಕ್ಷುಗಳು ಸತತವಾಗಿ ಪರಮ ಶ್ರೇಯಸ್ಕರವಾದ ಆಧ್ಯಾತ್ಮಿಕ ಜಿಜ್ಞಾಸೆಗಳಲ್ಲಿ ತೊಡಗುತ್ತಾರೆ.

ಆಧ್ಯಾತ್ಮಚಿಂತನೆಯು ಪ್ರತಿಯೊಬ್ಬನ ಸೂಕ್ಷ್ಮಬುದ್ಧಿಗೂ ಎಟುಕುವುದಿಲ್ಲ. ಈ ಸತ್ಯವನ್ನು ಎಲ್ಲರೂ ಒಪ್ಪಿರುತ್ತಾರೆ. ಕೆಲವರು ಇದನ್ನು ಜೀವನದ ಆರಂಭದಲ್ಲಿ ಅರಿಯಬಹುದು. ಮತ್ತೆ ಕೆಲವರು ಜೀವನದ ಅಂತಿಮ ಘಟ್ಟದಲ್ಲಿ ಇದರ ಅರಿವನ್ನು ಪಡೆಯಬಹುದು. ನಾಸ್ತಿಕರಾದ ಕೆಲವರು ಸಮೀಪಕ್ಕೂ ಬಾರದಿರಬಹುದು.

ಈ ಆಧ್ಯಾತ್ಮಿಕ ಚಿಂತನೆ ಅಥವಾ ಬ್ರಹ್ಮಜಿಜ್ಞಾಸೆಗೆ ವಿಷಯವಾಗಿರುವ ಬ್ರಹ್ಮತತ್ತ್ವವು ಈಶಾದಿಉಪನಿಷತ್ತುಗಳ ಮಂತ್ರಗಳಲ್ಲಿ ಉಕ್ತವಾಗಿದೆ. 'ಉಪ' ಮತ್ತು 'ನಿ' ಎಂಬ ಉಪಸರ್ಗದೊಡಗೂಡಿದ (ವಿಶರಣಗತ್ಯವಸಾದನಾರ್ಥಕವಾದ) 'ಸದ್' ಧಾತುವಿಗೆ 'ಕ್ವಿಪ್' ಎಂಬ ಪ್ರತ್ಯಯ ಸೇರಿ 'ಉಪನಿಷತ್' ಎಂಬ ರೂಪವಾಗಿದೆ. ಉಪ-ನಿಷದ್ಯಗೃಹ್ಯಮಾಣತ್ವಾತ್ 'ಉಪನಿಷತ್' ಎಂಬ ಒಂದು ಪ್ರಾಚೀನ ನಿರ್ವಚನವುಂಟು. ಆಚಾರ್ಯನ ಅತಿಸಮೀಪದಲ್ಲಿ ಕುಳಿತು ಪರಮರಹಸ್ಯವಾಗಿ ಬ್ರಹ್ಮವಿದ್ಯೆಯನ್ನು ಅಭ್ಯಸಿಸುವುದರಿಂದ ಇದು ಉಪನಿಷತ್ ಎನಿಸುತ್ತದೆ. ಬ್ರಹ್ಮತತ್ತ್ವದ ಉಪಾಸನಾಪ್ರಕಾರಗಳೇ ವಿದ್ಯೆಗಳು. ಇವನ್ನು ತಿಳಿಸುವ ಗ್ರಂಥಗಳೂ ಉಪನಿಷತ್ ಎನಿಸಿವೆ. ಹೀಗೆ ಉಪನಿಷತ್ತುಗಳು ಮುಮುಕ್ಷುಗಳನ್ನು ಬ್ರಹ್ಮದ ಬಳಿ ಸೇರಿಸುತ್ತವೆ. ಆದ್ದರಿಂದ ಇವೂ ಬ್ರಹ್ಮವಿದ್ಯೆ ಎನಿಸುತ್ತವೆ.

ಶ್ರುತಪ್ರಕಾಶಿಕಾಚಾರ್ಯರು 'ಉಪನಿಷತ್' ಶಬ್ದಕ್ಕೆ ಅಪೂರ್ವವಾದ ಈ ಅರ್ಥವನ್ನು ಹೇಳಿರುತ್ತಾರೆ. ಬ್ರಹ್ಮದಲ್ಲಿ ಉಪನಿಷಣ್ಣವಾದುದು ಯಾವುದೋ ಅದು ಉಪನಿಷತ್ ಎನಿಸುವುದು. ವೇದದ ಎಲ್ಲ ಭಾಗಗಳೂ ಬ್ರಹ್ಮವನ್ನೇ ಪ್ರತಿಪಾದಿಸುವುದಾದರೂ ಶಾರೀರಕ ಭಾಗವು ವಿಲಕ್ಷಣವಾಗಿದೆ. ಅಂದರೆ ಉಳಿದ ಭಾಗಗಳಲ್ಲಿ ಬ್ರಹ್ಮವಸ್ತುವಿನ ಶರೀರರೂಪವಾದ ಅಗ್ನಿ, ಇಂದ್ರ ಮೊದಲಾದ ದೇವತೆಗಳ ಮೂಲಕ ಬ್ರಹ್ಮಸ್ವರೂಪವೂ ಅದರ ವೈಭವವೂ ಪ್ರತಿಪಾದಿತವಾದರೆ, ಶಾರೀರಕದಲ್ಲಿ ಯಾವುದೇ ದ್ವಾರವೂ ಇಲ್ಲದೆ ಸಾಕ್ಷಾತ್ತಾಗಿ ಬ್ರಹ್ಮಸ್ವರೂಪವು ಪ್ರತಿಪಾದಿಸಲ್ಪಟ್ಟಿದೆ. ಆದ್ದರಿಂದ (ಉಪನಿಷಣ್ಣವಾದುದರಿಂದ) ಉಪನಿಷತ್ ಎನಿಸಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಋಗ್ಯಜುಸ್ಸಾಮಾಥರ್ವಣವೆಂಬ ನಾಲ್ಕು ವೇದಗಳಲ್ಲಿರುವ ಉಪನಿಷತ್ತುಗಳಲ್ಲಿ 108 ಉಪನಿಷತ್ತುಗಳು ಪ್ರಚಲಿತವಾಗಿವೆ. ಇವುಗಳಲ್ಲಿ

ಈಶ-ಕೇನ-ಕಠ-ಪ್ರಶ್ನ-ಮುಂಡ-ಮಾಂಡೂಕ್ಯ-ತಿತ್ತಿರಿಃ ।
ಐತರೇಯಂ ಚ ಛಾಂದೋಗ್ಯಂ ಬೃಹದಾರಣ್ಯಕಂ ದಶ ॥

ಎಂದು ಹತ್ತು ಉಪನಿಷತ್ತುಗಳು ಮುಖ್ಯವೆನಿಸಿವೆ. ಇದಲ್ಲದೆ ಕೌಷೀತಕೀ, ಸುಬಾಲ, ಶ್ವೇತಾಶ್ವತರ ಮತ್ತು ಮಂತ್ರಿಕೋಪನಿಷತ್ತುಗಳ ಮಹತ್ವವನ್ನು ವಿಷಯದೃಷ್ಟಿಯಿಂದ ಅಲ್ಲಗಳೆಯುವಂತಿಲ್ಲ. ಎಲ್ಲ ಉಪನಿಷತ್ತುಗಳಲ್ಲೂ ಸಾಮಾನ್ಯವಾಗಿ ಬ್ರಹ್ಮಸ್ವರೂಪ ಮತ್ತು ಅದರ ಉಪಾಸನೆಗಳು ಪ್ರತಿಪಾದಿಸಲ್ಪಟ್ಟಿವೆ. ಈ ಉಪಾಸನೆಗಳಲ್ಲಿ ಕೆಲವು ಸ್ವತಂತ್ರವಾಗಿಯೂ, ಮತ್ತೆ ಕೆಲವು ಕರ್ಮಾಂಗವಾಗಿಯೂ ಹೇಳಲ್ಪಟ್ಟಿವೆ. ಉಪನಿಷತ್ತುಗಳಲ್ಲಿ ಈ ವಿಷಯುಗಳನ್ನು ಸುಲಭವಾಗಿ ತಿಳಿಸಲು ಕೆಲವೆಡೆ ಕಥೆಗಳೂ ಹೇಳಲ್ಪಟ್ಟಿವೆ. ಕೆಲವೆಡೆ ವಿವಿಧ ವಸ್ತುಗಳ ವರ್ಣನೆಯೂ, ಕೆಲವೆಡೆ ಕೇವಲ ಬ್ರಹ್ಮಸ್ವರೂಪವರ್ಣನೆಯೂ ಇದೆ. ಕೆಲವೆಡೆಗಳಲ್ಲಿ ಬ್ರಹ್ಮದಸ್ವರೂಪ–ಗುಣ–ವಿಭೂತಿಗಳ ವರ್ಣನೆಯೂ ಇವೆ. ಮತ್ತೆ ಕೆಲವೆಡೆ ಕಥೆಗಳೇ ಇಲ್ಲ. ಕೆಲವೆಡೆ ಉಪಾಸನಾವಿಶಿಷ್ಟವಾದ ಕಥೆಗಳಿವೆ. ಆದರೆ ಬ್ರಹ್ಮಸ್ವರೂಪವನ್ನು ತಿಳಿಸದಿರುವ ಯಾವುದೇ ಉಪನಿಷತ್ತುಗಳೂ ಇಲ್ಲ.

ಪ್ರಚಲಿತವಾಗಿರುವ 108 ಉಪನಿಷತ್ತುಗಳಿಗೆ ಶಾಂತಿಮಂತ್ರಗಳು ಭಿನ್ನಭಿನ್ನವಾಗಿವೆ. ಋಗ್ವೇದದಲ್ಲಿರುವ ಕೌಷೀತಕೀ ಮೊದಲಾದ 10 ಉಪನಿಷತ್ತುಗಳಿಗೆ 'ವಾಙ್ಮೇ ಮನಸಿ' ಎಂಬುದು ಶಾಂತಿಮಂತ್ರ. ಶುಕ್ಲಯಜುರ್ವೇದಕ್ಕೆ ಸೇರಿದ ಈಶಾದಿ 19 ಉಪನಿಷತ್ತುಗಳಿಗೆ 'ಪೂರ್ಣಮದಃ' ಎಂಬುದು ಶಾಂತಿಮಂತ್ರ. ಕೃಷ್ಣಯಜುರ್ವೇದಕ್ಕೆ ಸೇರಿದ ಕಠಾದಿ 32 ಉಪನಿಷತ್ತುಗಳಿಗೆ 'ಸಹನಾವವತು' ಎಂಬುದು ಶಾಂತಿಮಂತ್ರ. ಸಾಮವೇದಕ್ಕೆ ಸೇರಿದ ಕೇನಾದಿ 16 ಉಪನಿಷತ್ತುಗಳಿಗೆ 'ಆಪ್ಯಾಯಂತು' ಎಂಬುದು ಶಾಂತಿಮಂತ್ರ. ಅಥರ್ವವೇದಕ್ಕೆ ಸೇರಿದ ಪ್ರಶ್ನಾದಿ 31 ಉಪನಿಷತ್ತುಗಳಿಗೆ 'ಭದ್ರಂಕರ್ಣೇಭಿಃ' ಎಂಬುದು ಶಾಂತಿಮಂತ್ರ.

ಉಪನಿಷತ್-ಬ್ರಹ್ಮಸೂತ್ರ-ಭಗವದ್ಗೀತೆ ಇವುಗಳು ಪ್ರಸ್ಥಾನತ್ರಯುಗಳೆನಿಸಿವೆ. ಇವುಗಳಲ್ಲಿ ಉಪನಿಷತ್ತುಗಳು ಅತಿಮುಖ್ಯ. ಬ್ರಹ್ಮಸೂತ್ರ ಭಗವದ್ಗೀತೆಗಳಿಗೆ ಈ ಉಪನಿಷತ್ತುಗಳೇ ಆಧಾರವೆನ್ನಬಹುದು. ಉಪನಿಷತ್ತಿನ ವಾಕ್ಯಗಳನ್ನು ಆಯ್ದು ಕಟ್ಟಿರುವ ಮಾಲೆಯಂತಿವೆ ಬ್ರಹ್ಮಸೂತ್ರಗಳು. ಉಪನಿಷತ್ತಿನಲ್ಲಿ ಇಲ್ಲದ ಯಾವುದೇ ವಿಷಯವೂ ಬ್ರಹ್ಮಸೂತ್ರಗಳಲ್ಲಿಲ್ಲ. ಉಪನಿಷತ್ತುಗಳಲ್ಲಿ ಆಪಾತತಃ ಕಾಣುವ ಪರಸ್ಪರ ವಿರೋಧಗಳನ್ನು ಪರಿಹರಿಸಿ ಸಮನ್ವಯಗೊಳಿಸಲು ಬ್ರಹ್ಮಸೂತ್ರಗಳು ರಚಿಸಲ್ಪಟ್ಟವು.

ಈ ಉಪನಿಷತ್ತುಗಳೇ ಭಗವದ್ಗೀತೆಗೆ ಆಧಾರ. ಉಪನಿಷತ್ತುಗಳಲ್ಲಿ ಹೇಳಿರುವ ವಿಷಯುಗಳನ್ನು ಶ್ರೀಕೃಷ್ಣನು ಎಲ್ಲರಿಗೂ ಅರ್ಥವಾಗುವಂತೆ ಸುಲಭಮಾಡಿ ಹೇಳಿರುವನು. ಗೀತಾಧ್ಯಾನಶ್ಲೋಕದಲ್ಲಿ ಹೀಗೆ ಹೇಳಿದೆ—

ಸರ್ವೋಪನಿಷದೋ ಗಾವಃ ದೋಗ್ಧಾ ಗೋಪಾಲನಂದನಃ ।
ಪಾರ್ಥೋ ವತ್ಸಃ ಸುಧೀಃ ಭೋಕ್ತಾ ದುಗ್ಧಂ ಗೀತಾಮೃತಂ ಮಹತ್ ॥ ಎಂದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉಪನಿಷತ್ತುಗಳು ಗೋವುಗಳು. ಶ್ರೀಕೃಷ್ಣನು ಹಾಲು ಕರೆಯುವವನು. ಅರ್ಜುನನು ಕರು. ಮಹತ್ತಾದ ಗೀತಾಮೃತವೇ ಹಾಲು. ಜ್ಞಾನಿಗಳು ಆ ಹಾಲನ್ನು ಕುಡಿಯುವವರು.

ಹೀಗೆ ವೇದಾಂತದರ್ಶನಕ್ಕೆ ಪ್ರಸ್ಥಾನತ್ರಯಗಳೇ ಆಧಾರವೆನಿಸಿದರೂ ಬ್ರಹ್ಮಸೂತ್ರ-ಭಗವದ್ಗೀತೆಗಳಿಗೂ ಉಪನಿಷತ್ತುಗಳೇ ಆಧಾರವಾಗಿರುವುದರಿಂದ ಇವು ಅತಿ ಮುಖ್ಯವೆನಿಸಿವೆ.

ಸತ್ಯಾನ್ವೇಷಣೆಯೇ ಉಪನಿಷತ್ತುಗಳ ಗುರಿ. ಉಪನಿಷದ್ದ್ರಷ್ಟಾರರೆನಿಸಿದ ಋಷಿಗಳು ಸತ್ಯವನ್ನು ತಿಳಿಯುವುದಕ್ಕಾಗಿ ಧೀರಯಾತ್ರಿಕರಂತೆ ಎಂತಹ ತ್ಯಾಗಕ್ಕಾದರೂ ಸಿದ್ಧರಿದ್ದರು. ಸತ್ಯಾನ್ವೇಷಣೆಗಾಗಿ ಸತತ ಚಿಂತನಶೀಲರಾಗಿದ್ದರು. ಉಪನಿಷತ್ತುಗಳಿಂದ ಭಿನ್ನವಾದ ಲೌಕಿಕ, ವೈದಿಕಶಾಸ್ತ್ರಗಳು ಎಷ್ಟೇ ಪವಿತ್ರವಾಗಿರಲಿ, ಎಷ್ಟೇ ಗಹನವಾಗಿರಲಿ, ಅದರ ಮಿತಿ ಏನೆಂಬುದನ್ನು ಅರಿತು ಮುಂದುವರೆಯಲು ಸಿದ್ಧರಾಗಿದ್ದರು. ಮುಂಡಕೋಪನಿಷತ್ತಿನಲ್ಲಿ ಇದು ಸ್ಪಷ್ಟವಾಗಿ ತಿಳಿಯುತ್ತದೆ. 'ಗೃಹಸ್ಥನಾದ ಶೌನಕನು ಅಂಗಿರಸನನ್ನು ವಿಧಿವತ್ತಾಗಿ ಸಮೀಪಿಸಿ' 'ಹೇ ಭಗವನ್, ಯಾವುದನ್ನು ತಿಳಿದರೆ ಇವೆಲ್ಲವುಗಳನ್ನೂ ತಿಳಿದಂತೆ ಆಗುವುದು ?' ಎಂದು ಕೇಳುತ್ತಾನೆ. ಅದಕ್ಕೆ ಅಂಗಿರಸನು ಎಲೈ ಶೌನಕನೇ, ಬ್ರಹ್ಮಜ್ಞಾನಿಗಳು ಎರಡು ವಿದ್ಯೆಗಳನ್ನು ತಿಳಿದುಕೊಳ್ಳಬೇಕು. ಅವೇ ಪರವಿದ್ಯೆ ಮತ್ತು ಅಪರವಿದ್ಯೆ. ಅವುಗಳಲ್ಲಿ ಶಾಸ್ತ್ರಗಳೆನಿಸಿದ ನಾಲ್ಕು ವೇದಗಳು, ಆರು ವೇದಾಂಗಗಳೂ ಅಪರವಿದ್ಯೆ. ಯಾವುದರಿಂದ ಅಕ್ಷರ (ಪರಬ್ರಹ್ಮ)ವು ಹೊಂದಲ್ಪಡುವುದೋ ಅದನ್ನು (ಉಪನಿಷತ್ತು) ಪರವಿದ್ಯೆ ಎಂದು ಹೇಳುತ್ತಾರೆ. ಇದರಿಂದ ಶಾಸ್ತ್ರದ ಮಿತಿಯನ್ನು ಅವರು ಅರಿತಿದ್ದರೆಂದು ತಿಳಿಯುತ್ತದೆ.

ಉಪನಿಷತ್ತುಗಳಲ್ಲಿ ಹೇಳಿರುವ ತತ್ತ್ವವು ಸಾರ್ವಕಾಲಿಕಸತ್ಯವು. ಇದನ್ನು ಸಾಕ್ಷಾತ್ಕರಿಸಿ ಮಾನವಕೋಟಿಗೆ ಕೊಟ್ಟವರು ಖ್ಯಾತಿಲಾಭ-ಪೂಜೆಗಳಿಗೆ ಮನಸೋತವರಲ್ಲ. ಅಹಂಕಾರವನ್ನು ಅಳಿಸಿಕೊಂಡು ಮಾನವಕಲ್ಯಾಣವನ್ನೇ ಲಕ್ಷ್ಯವಾಗಿ ಉಳ್ಳವರು. ತಾವು ಕಂಡ ಸತ್ಯವು ಸೃಷ್ಟಿಯಷ್ಟೇ ಅನಾದಿಯೆಂದು ತಿಳಿದವರು. ನಮ್ಮ ಸಾಧನೆಯನ್ನು ಮುಂದುವರಿಸಿ ಜ್ಞಾನಿಗಳಾದರೆ ನಮಗೂ ಆ ತತ್ತ್ವಗಳು ಅನುಭವಕ್ಕೆ ಬರುತ್ತವೆ.

ಈ ತತ್ತ್ವಗಳನ್ನು ಅರಿಯುವುದರಿಂದ ಭಾರತೀಯರಾದ ನಾವು ಬಹಳ ದೂರ ಉಳಿದಿದ್ದೇವೆ. ಇದರಿಂದ ಜೀವನದ ಎಲ್ಲ ಮುಖಗಳಲ್ಲೂ ಸಮಸ್ಯೆಗಳು ತುಂಬಿ ಅಶಾಂತಿ ತಾಂಡವವಾಡುತ್ತಿದೆ. ಜೀವನದ ಎಲ್ಲ ರಂಗಗಳಲ್ಲೂ ಕಾಡುತ್ತಿರುವ ಸಮಸ್ಯೆಗಳನ್ನು ಪರಿಹರಿಸಿಕೊಂಡು ಶಾಂತವಾದ ಲೌಕಿಕಜೀವನವನ್ನೂ ಆಧ್ಯಾತ್ಮಿಕಶ್ರೇಯಸ್ಸನ್ನೂ ಪಡೆಯುವಲ್ಲಿ ನಮ್ಮ ಬಯಕೆ ಜಾಗೃತವಾಗಬೇಕು.

ಉಪನಿಷತ್ತಿನ ಬೋಧನಾ ವಿಧಾನ

ತತ್ತ್ವೋಪದೇಶಕ್ಕೆ ಹಲವು ವಿಧಾನಗಳಿವೆ. ಇದರಲ್ಲಿ ಮೊದಲನೆಯದು ಸಿದ್ಧಾಂತ ರೂಪವಾಗಿ ಹೇಳುವುದು. ಈ ಕ್ರಮದಲ್ಲಿ ಪ್ರತಿಪಾದ್ಯವಿಷಯವನ್ನು ಆರಂಭದಿಂದ ಕೊನೆಯವರೆಗೆ ಗಣಿತಶಾಸ್ತ್ರದಂತೆ ಹಂತಹಂತವಾಗಿ ನಿರೂಪಿಸುವರು. ಉಪನಿಷತ್ತುಗಳಲ್ಲಿ ಈ ಕ್ರಮವು ಅಷ್ಟಾಗಿ ಕಾಣುವುದಿಲ್ಲ. ನಮ್ಮಲ್ಲಿರುವ ಪ್ರಕರಣಗ್ರಂಥಗಳಲ್ಲಿ ಈ ಕ್ರಮವನ್ನು ಕಾಣಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎರಡನೆಯದು ಕಥಾ ರೀತಿಯಲ್ಲಿ ಹೇಳುವುದು. ತತ್ತ್ವೋಪದೇಶವು ಸಾಧಾರಣ ಮನುಷ್ಯರಿಗೆ ನೀರಸವಾಗಿರುವುದು. ತತ್ತ್ವವನ್ನು ಕಥೆಯಲ್ಲಿಟ್ಟು ಹೇಳಿದರೆ ಎಲ್ಲರೂ ಕೇಳುವರು. ಕಥೆಯಿಂದ ಆಕರ್ಷಿತರಾಗಿ ಬಂದರೂ ಆದರೊಡನೆ ತತ್ತ್ವವೂ ನಮಗರಿವಿಲ್ಲದಂತೆ ನಮ್ಮೊಳಗೆ ಸೇರುವುದು. ಭಾರತದಲ್ಲಿ ತತ್ತ್ವಹರಡಿರುವುದೇ ಹೀಗೆ. ಆದುದರಿಂದಲೇ ಪುರಾಣ ಇತಿಹಾಸಗಳು ನಮ್ಮಲ್ಲಿ ವಿಪುಲವಾಗಿ ಬೆಳೆದಿವೆ. ಇದನ್ನು ಸಾಮಾನ್ಯಜನರೂ ಓದಿ ತಿಳಿದುಕೊಳ್ಳಬಹುದು.

ಪ್ರಶ್ನೋತ್ತರ ಮೂಲಕ ತತ್ತ್ವವನ್ನು ವಿವರಿಸುವುದು ಮೂರನೆಯ ಕ್ರಮ. ಇದನ್ನು ಕೇನೋಪನಿಷತ್ತಿನಲ್ಲಿ ಕಾಣಬಹದು. ಶಿಷ್ಯ ಗಹನವಾದ ಪ್ರಶ್ನೆಯನ್ನು ಕೇಳಿದಾಗ ಗುರುವು ಶಿಷ್ಯನ ದರ್ಜೆಗಿಳಿದು ಸರಿಯಾದ ಉತ್ತರಕೊಡುವನು. ಉಪನಿಷತ್ತುಗಳಲ್ಲಿ ಅನುಸರಿಸಿರುವ ವಿಧಾನ ಇದು. ಇದು ಉಳಿದೆರಡು ಮಾರ್ಗಗಳಿಗಿಂತ ತತ್ತ್ವವನ್ನು ಬೋಧಿಸಲು ಅನುಕೂಲ ವಾದುದು. ತತ್ತ್ವವನ್ನರಿಯಬೇಕೆಂಬ ಬಯಕೆಯುಳ್ಳವನು ಮಾತ್ರ ಗುರುವಿನ ಬಳಿ ಬರುವನು. ಅವನು ತತ್ತ್ವಪ್ರತಿಪಾದಕ ಕಥೆಗಳನ್ನೆಲ್ಲಾ ಓದಬೇಕಾಗಿಲ್ಲ. ನೇರವಾಗಿ ತಾತ್ತ್ವಿಕ ಪ್ರಸಂಗಕ್ಕೆ ಬರುವನು. ಓದಿ ತಿಳಿಯುವ ಕ್ರಮದಲ್ಲಿ ಗ್ರಂಥಕಾರನಿಗೂ, ಓದುಗನಿಗೂ ಯಾವುದೇ ಸಂಬಂಧವಿರುವುದಿಲ್ಲ. ಆದರೆ ಪ್ರಶ್ನೋತ್ತರಮಾರ್ಗದಲ್ಲಿ ಗುರುಶಿಷ್ಯರಿಗೆ ಅನ್ಯೋನ್ಯ ಸಂಬಂಧವಿದೆ. ಶಿಷ್ಯನಪ್ರಶ್ನೆ ಗುರುವಿಗೆ ಅರ್ಥವಾಗುತ್ತದೆ. ಶಿಷ್ಯನಮಟ್ಟಕ್ಕಿಳಿದು ಉತ್ತರಿಸು ವನು. ಈ ಪ್ರತ್ಯಕ್ಷಸಂಬಂಧ ತಾತ್ತ್ವಿಕ ಪ್ರಪಂಚದಲ್ಲಿ ಅತಿಮುಖ್ಯ. ಗುರುವಿನ ಮಾತು ಮಾತ್ರವಲ್ಲ, ಆತನ ವ್ಯಕ್ತಿತ್ವವೂ ಶಿಷ್ಯನ ಅನೇಕ ಸಮಸ್ಯೆಗಳನ್ನು ಪರಿಹರಿಸಬಲ್ಲದು. ಅಲ್ಲದೆ ಸಾಕ್ಷಾತ್ಕಾರಮಾಡಿಕೊಂಡ ಗುರುವಿನಮಾತಿನಲ್ಲಿ ಒಂದು ಚೈತನ್ಯವಿರುತ್ತದೆ. ಅದು ಕೇಳು ವವನಲ್ಲಿ ಪ್ರಭಾವಬೀರುತ್ತದೆ. ಗುರುವಿನ ಮಾತನ್ನು ಕೇಳಿದಾಗ ಅಸದೃಶವಾದ ಅನುಭವ ವಾಗುವುದು. ಈ ಅನುಭವವು ಕೇವಲ ಗ್ರಂಥದ ಅಧ್ಯಯನದಿಂದ ಉಂಟಾಗಲಾರದು.

ತಾತ್ತ್ವಿಕವಿಷಯಗಳನ್ನು ಗುಂಪಿನಲ್ಲಿ ಕುಳಿತು ಕೇಳುವುದಕ್ಕೂ, ಪ್ರಶಾಂತವಾತಾವರಣ ದಲ್ಲಿ ಗುರುವಿನಬಳಿ ಕುಳಿತು ಕೇಳುವುದಕ್ಕೂ ಎಷ್ಟೋ ಅಂತರವಿದೆ. ಗುಂಪಿನಲ್ಲಿ ಸೂಕ್ಷ್ಮ ವಿಚಾರಗಳನ್ನು ಹೇಳಲಿಕ್ಕೆ ಬೇಕಾದ ವಾತಾವರಣವಿರುವುದಿಲ್ಲ. ಉಚಿತವಾತಾವರಣವಿಲ್ಲದೆ ಹೇಳಿದ ಮಾತು ಪರಿಣಾಮಕಾರಿಯಾಗಲಾರದು. ಆದ್ದರಿಂದ ಜನನಿಬಿಡವಲ್ಲದ, ಪ್ರಶಾಂತ ವಾದ ವಾತಾವರಣವಿರುವ ಗುರುವಿನ ಆಶ್ರಮದಲ್ಲಿ ಗುರುವಿನ ಬಳಿ ಕುಳಿತು ತತ್ತ್ವಗಳನ್ನು ಕೇಳಬೇಕು. ಗುರುವಿನ ಬಳಿ ಕುಳಿತು ಅಭ್ಯಸಿಸಬೇಕು. ಈ ಬೋಧನಾ ಕ್ರಮವನ್ನು ತಿಳಿಸುವುದೇ ಉಪನಿಷತ್ತಿನ ಮತ್ತೊಂದು ಗುರಿ.

ವಿದ್ಯಾಭ್ಯಾಸದಲ್ಲಿ ಗುರು-ಶಿಷ್ಯಸಂಬಂಧ ಅತಿಮುಖ್ಯ. ಅದರಲ್ಲಿಯೂ ಆಧ್ಯಾತ್ಮಿಕ ವಿದ್ಯೆಗೆ ಗುರುಶಿಷ್ಯನ ಸಂಬಂಧ ಅತ್ಯಂತ ಮುಖ್ಯವಾದುದು. ಉಪನಿಷತ್ತಿನಗುರು ತಿಳುವಳಿಕೆ ಯನ್ನು ಮಾತ್ರ ಕೊಡುವುದಿಲ್ಲ. ತನ್ನ ಸಾಕ್ಷಾತ್ಕಾರಶಕ್ತಿಯನ್ನೂ ಕೊಡುವನು. ಆದುದರಿಂದ ಇಲ್ಲಿನ ಗುರುಶಿಷ್ಯಸಂಬಂಧ ಅತಿ ಪವಿತ್ರವಾದ ಸಂಬಂಧ. ಇದರಿಂದಲೇ ಇಂತಹ ಶ್ರೇಷ್ಠವಾದ ಜ್ಞಾನವು ಪ್ರಪಂಚಕ್ಕೆ ದೊರೆತು, ಇಂದಿನವರೆಗೂ ಉಳಿಯಲು ಸಾಧ್ಯವಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಿಷ್ಯನು ಲಕ್ಷಾಧಿಪತಿಯಿರಲಿ, ರಾಜಪುತ್ರನಿರಲಿ, ಗುರುವಿನ ಬಳಿ ಕಲಿಯಲು ಹೋಗುವಾಗ ನಮ್ರತೆಯಿಂದ ಗುರುವಿಗೆ ಬೇಕಾದ ವಸ್ತುಗಳನ್ನು ಒಯ್ಯುತ್ತಿದ್ದನು. ಗುರುಕುಲದಲ್ಲಿ ಯಾವುದೇ ಕೆಲಸಮಾಡಲು ಸಿದ್ಧನಾಗುತ್ತಿದ್ದನು. ಇದರಿಂದ ವಿದ್ಯಾಭ್ಯಾಸಕ್ಕೆ ಬೇಕಾದ ನಮ್ರತೆ, ಶ್ರಮಸಹಿಷ್ಣುತೆ ಬೆಳೆಯುತ್ತಿತ್ತು. ಗುರುವೂ ಶಿಷ್ಯನನ್ನು ಸ್ವಾಗತಿಸಿ ತನ್ನ ಮಗನಂತೆ (ಮಗನಿಗಿಂತ ಹೆಚ್ಚಾಗಿ) ಪ್ರೀತಿಸುತ್ತಿದ್ದನು. ಮಗನು ಕೇವಲ ರಕ್ತಮಾಂಸವನ್ನು ಹಂಚಿಕೊಂಡು ಹುಟ್ಟುವನು. ಆದರೆ ಶಿಷ್ಯ ಗುರುವಿನ ತಪಸ್ಸು, ವಿದ್ಯೆ, ಆದರ್ಶಗಳಿಗೆ ಹಕ್ಕುದಾರನಾಗಿ ಜ್ಞಾನಸಂತತಿಯನ್ನು ಬೆಳೆಸುತ್ತಾನೆ. ಗುರು ತಾನು ಕಲಿತ ವಿದ್ಯೆ ತನ್ನ ನಂತರ ಮಾನವಕಲ್ಯಾಣಕ್ಕಾಗಿ ಇರಬೇಕೆಂದು ಆಶಿಸುತ್ತಾನೆ. ಇದು ಯೋಗ್ಯಶಿಷ್ಯನಿಂದ ಮಾತ್ರ ಸಾಧ್ಯ. ನಾವು ಕಲಿಯುವುದು ಕಲಿಸುವುದಕ್ಕಾಗಿ. ಕಲಿಕೆ ಅರ್ಧಭಾಗ ಮಾತ್ರ. ಕಲಿಸಿದಾಗಲೇ ಅದು ಪೂರ್ಣವಾಗುವುದು. ಈ ತತ್ವವನ್ನು ಉಪನಿಷತ್ತಿನ ಋಷಿಗಳು ಅರಿತಿದ್ದರು. ತೈತ್ತಿರೀಯ ಉಪನಿಷತ್ತಿನಲ್ಲಿ 'ಎಲ್ಲ ಕಡೆಯಿಂದಲೂ ಬ್ರಹ್ಮಚಾರಿಗಳು ನನ್ನಲ್ಲಿಗೆ ಬರಲಿ'. 'ಬ್ರಹ್ಮಚಾರಿಗಳು ದಯೆಯುಳ್ಳವರಾಗಲಿ', 'ದಮ ಉಳ್ಳವರಾಗಲಿ' ಎಂದು ಪ್ರಾರ್ಥಿಸುತ್ತಿದ್ದರೆಂದು ಹೇಳಿದೆ.

ಶಿಷ್ಯರು ಬಂದಮೇಲೆ ಗುರುವು ಶಿಷ್ಯರನ್ನು ಪರೀಕ್ಷಿಸುತ್ತಿದ್ದನು. ಯೋಗ್ಯನಾದವನಿಗೆ ಮಾತ್ರ ಆಧ್ಯಾತ್ಮಿಕವಿದ್ಯೆಯನ್ನು ಕೊಡುತ್ತಿದ್ದನು. ಅಯೋಗ್ಯನಿಗೆ ವಿದ್ಯೆ ಹೇಳಿದರೆ ಆ ವಿದ್ಯೆ ನಾಶವಾಗುವುದು ಮಾತ್ರವಲ್ಲದೆ, ಆತನು ತಪ್ಪು ತಿಳಿದುಕೊಂಡು ಇತರರಿಗೂ ಅದನ್ನು ಹೇಳಿ ಸತ್ಯಕ್ಕೆ ಕಳಂಕ ಬರುವಂತೆ ಮಾಡುತ್ತಾನೆ. ಪರಮಸತ್ಯವು ವ್ಯರ್ಥವಾಗದಂತೆ ನೋಡಿಕೊಳ್ಳುವುದು ಗುರುವಿನ ಜವಾಬ್ದಾರಿ. ಅದಕ್ಕಾಗಿ ಗುರುವು ಶಿಷ್ಯನನ್ನು ಹಲವು ರೀತಿಯಲ್ಲಿ ಪರೀಕ್ಷಿಸುತ್ತಿದ್ದನು. ಈ ಪರೀಕ್ಷೆಯೆಂಬ ಗಾಳಿಯಲ್ಲಿ ತೂರಿಹೋದ ಜಳ್ಳನ್ನು ಬಿಟ್ಟು ಉಳಿದ ಗಟ್ಟಿಯನ್ನು ಮಾತ್ರ ಸ್ವೀಕರಿಸುತ್ತಿದ್ದನು.

ಶಿಷ್ಯನು ಪ್ರಶ್ನೆ ಕೇಳಿದ ತಕ್ಷಣ ಗುರುವು ಉತ್ತರ ಕೊಡುತ್ತಿರಲಿಲ್ಲ. ಸ್ವಲ್ಪಕಾಲ ತಾಳುವಂತೆ ಹೇಳುತ್ತಿದ್ದನು. ಕೇವಲ ಕುತೂಹಲದಿಂದ ಪ್ರಶ್ನೆಕೇಳಿದ ಶಿಷ್ಯನು ಬೇಸರಪಟ್ಟು ಹೊರಟು ಹೋಗುತ್ತಿದ್ದನು. ತೀವ್ರ ಆಸಕ್ತಿಯುಳ್ಳವನು ಮಾತ್ರ ಕಾಯಲು ಸಿದ್ಧವಾಗುತ್ತಿದ್ದನು. ಆಕಾಲದಲ್ಲಿ ಕೇಳಿದ ಪ್ರಶ್ನೆಗೆ ಸಮಾಧಾನ ಸಿಗುತ್ತಿತ್ತು. ಅಥವಾ ಗುರು ಹೇಳುವ ಮಾತನ್ನು ಅರ್ಥಮಾಡಿಕೊಳ್ಳುವ ಸ್ಥಿತಿಗೆ ಬರುತ್ತಿದ್ದನು. ಇದನ್ನು ಪ್ರಶ್ನೋಪನಿಷತ್ತಿನಲ್ಲಿ ಕಾಣಬಹುದು.

ಶಿಷ್ಯನ ಮುಂದೆ ಪ್ರಲೋಭನೆಗಳನ್ನಿಟ್ಟು ಅವನನ್ನು ಕದಲಿಸಬೇಕೆಂದು ಗುರು ಯತ್ನಿಸುತ್ತಿದ್ದನು. ಇದನ್ನು ಕಠೋಪನಿಷತ್ತಿನ ನಚಿಕೇತೋಪಾಖ್ಯಾನದಲ್ಲಿ ಕಾಣಬಹುದು.

ಛಾಂದೋಗ್ಯದ ಸತ್ಯಕಾಮಜಾಬಾಲನ ವೃತ್ತಾಂತವು ಶಿಷ್ಯನ ಸತ್ಯಸಂಧತೆಯ ಪರೀಕ್ಷೆಗೆ ಉದಾಹರಣೆಯಾಗಿದೆ. ಕಠೋರವಾದ ಸತ್ಯವನ್ನು ಯಾವನು ಹೇಳಲು ಸಿದ್ಧನಾಗಿರುವನೋ ಅವನು ಬ್ರಹ್ಮೋಪಾಸನೆಗೆ ಯೋಗ್ಯನೆಂದು ಹೇಳುತ್ತಾನೆ ಗೌತಮ.

ಗುರುವು ಶಿಷ್ಯನಿಗೆ ಗೊತ್ತಿರುವ ವಿಷಯವನ್ನು ತಿಳಿದುಕೊಂಡು ಮುಂದೆ ಮೆಟ್ಟಲು ಮೆಟ್ಟಲಾಗಿ ಮೇಲಕ್ಕೆ ಕರೆದೊಯ್ಯುತ್ತಿದ್ದನು. ಇದಕ್ಕೆ ಛಾಂದೋಗ್ಯದ ನಾರದ-ಸನತ್ಕುಮಾರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂವಾದ ಒಳ್ಳೆಯ ಉದಾಹರಣೆಯಾಗಿದೆ. ನಾರದನು ಬ್ರಹ್ಮವಿದ್ಯೆ ಕಲಿಯಲು ಸನತ್ಕುಮಾರನಲ್ಲಿ ಬಂದಾಗ ಸನತ್ಕುಮಾರನು ನೀನು ತಿಳಿದ ವಿಷಯವನ್ನು ಮೊದಲು ಹೇಳು ಎಂದನು. ನಾರದನು ತಾನರಿತ ವೇದವೇದಾಂಗಗಳನ್ನು ತಿಳಿಸಿದಾಗ ಅವು ಬರಿ ಹೆಸರುಗಳು. ಇದಕ್ಕಿಂತ ವಾಕ್, ಮನಸ್ಸು, ಸಂಕಲ್ಪ, ಚಿತ್ತ, ಧ್ಯಾನ, ವಿಜ್ಞಾನಗಳು ಒಂದಕ್ಕಿಂತ ಒಂದು ಹೆಚ್ಚು ಎಂದು ಹೇಳಿ ಕೊನೆಗೆ ಭೂಮದ ಬಾಗಿಲಲ್ಲಿ ನಿಲ್ಲಿಸಿ ಯಾವುದು ಭೂಮವೋ (ಹಿರಿದೋ) ಅದೇ ಸುಖ, ಅಲ್ಪದಲ್ಲಿ ಸುಖವಿಲ್ಲ, ಭೂಮವನ್ನೇ ತಿಳಿದುಕೊಳ್ಳಲು ಬಯಸಬೇಕು ಎಂದನು.

ಗುರು ಬೋಧಿಸುವಾಗ ಶಿಷ್ಯನ ವಿಚಾರಶಕ್ತಿಯನ್ನು ಕುಂಠಿತಮಾಡುತ್ತಿರಲಿಲ್ಲ ; ಪ್ರಚೋದಿಸುತ್ತಿದ್ದನು. ಏನನ್ನು ಹೇಳಿದರೂ ವಿಚಾರಮಾಡಿ, ಆಲೋಚನೆಮಾಡಿ ಅದರೊಳಗಿನದನ್ನು ಅರಿಯುವ ಶಕ್ತಿಯನ್ನು ಪಡೆಯಬೇಕು. ಹೊಸ ವಿಷಯಗಳು ಮನಸ್ಸಿನ ಸ್ವಾಸ್ಥ್ಯವನ್ನು ಕೆಡಿಸುವುವು. ಮನಸ್ಸಿನಲ್ಲಿ ಆಂದೋಳನವುಂಟಾಗುವುದು. ಆದರೆ ಹೊಸದನ್ನು ಕಲಿಯುವಲ್ಲಿ ಬೆಲೆ ಕೊಡಬೇಕು. ಶ್ರಮವೇ ಆ ಬೆಲೆ. ಶ್ರಮವಿಲ್ಲದೆ ಕಲಿತಿದ್ದು ಉಳಿಯಲಾರದು. ಅದು ನಮ್ಮ ಶಾಶ್ವತ ಜ್ಞಾನಭಂಡಾರವಾಗಲಾರದು. ಹೊಸವಿಷಯವನು ಗುರು ಹೇಳಿದರೆ, ಶಿಷ್ಯ ಆದನ್ನು ಚಿಂತಿಸಿ, ಯಥಾವತ್ತಾಗಿ ಗ್ರಹಿಸಿದರೆ ಒಂದು ಮೆಟ್ಟಲು ಏರಿದಂತೆ. ಅದನ್ನು ಚಿಂತಿಸಿ, ಗುರುವಿನೊಡನೆ ಚರ್ಚಿಸಿದರೆ ಎರಡು ಮೆಟ್ಟಲು ಏರಿದಂತೆ.

ಛಾಂದೋಗ್ಯದಲ್ಲಿ ದೇವಾಸುರರಪ್ರತಿನಿಧಿಗಳಾದ ಇಂದ್ರ-ವಿರೋಚನರು ಪ್ರಜಾಪತಿಯ (ಬ್ರಹ್ಮನ) ಬಳಿ ಆತ್ಮವನ್ನು ತಿಳಿಯಲು ಹೋದಾಗ ನೀರಿನಲ್ಲಿ ಕಾಣುವ ಬಿಂಬವೇ ಆತ್ಮ ಎನಲು, ಇಬ್ಬರೂ ದೇಹವೇ ಅದು ಎಂದು ತಿಳಿದರು. ಇಂದ್ರನಿಗೆ ದೇಹದಲ್ಲಾಗುವ ಬದಲಾವಣೆ ಬಿಂಬದಲ್ಲೂ ಆಗುವುದರಿಂದ ಬಿಂಬ ಹೇಗೆ ಆತ್ಮವಾದೀತು ಎಂಬ ಅನುಮಾನ ವುಂಟಾದಾಗ ಗುರುವಿನ ಬಳಿ ಬಂದನು. ಆಗ ಗುರು ಆತನನ್ನು ಹಂತಹಂತವಾಗಿ ಪರಮಾತ್ಮ ವಿಷಯಕ್ಕೆ ಕರೆದೊಯ್ದನು. ಹೀಗೆ ಕರೆದೊಯ್ಯಬೇಕಾದರೆ ಶಿಷ್ಯನಿಂದ ಪ್ರಚೋದನೆ ಬರಬೇಕು.

ತಂದೆ ಮಗ ಇಬ್ಬರೂ ಒಂದೇ ಮನೆಯಲ್ಲಿದ್ದರೂ ತಂದೆ ಮಗನಿಗೆ ಎಲ್ಲ ತಾತ್ತ್ವಿಕಾಂಶಗಳನ್ನೂ ಹೇಳುತ್ತಿರಲಿಲ್ಲ. ಸ್ವಲ್ಪ ಸ್ವಲ್ಪವಾಗಿ ಹೇಳುತ್ತಿದ್ದನು. ಮಗನಿಗೆ ಸ್ವಂತ ಚಿಂತನೆಯಿಂದ (ತಪಸ್ಸಿನಿಂದ) ಅರಿಯಲು ತಿಳಿಸುತ್ತಿದ್ದನು. ತೈತ್ತಿರೀಯದಲ್ಲಿ ಭೃಗುವು ತಂದೆಯಾದ ವರುಣನಲ್ಲಿ 'ಬ್ರಹ್ಮವನ್ನು ಉಪದೇಶಿಸು' ಎಂದು ಕೇಳಿದನು. ಯಾವುದರಿಂದ ಈ ಪ್ರಾಣಿಗಳು ಹುಟ್ಟುವುವೋ, ಎಲ್ಲಿ ಜೀವಿಸುವುವೋ, ಎಲ್ಲಿ ಅಂತ್ಯವಾಗುವುವೋ ಅದೇ ಬ್ರಹ್ಮ ; ಎಂದನು ವರುಣ. ಅನಂತರ ಭೃಗು ತಪಸ್ಸು ಮಾಡಿ, ಅನ್ನ-ಪ್ರಾಣ-ಮನಸ್ಸು-ವಿಜ್ಞಾನ-ಆನಂದದವರೆಗೆ ತಿಳಿದುಕೊಳ್ಳುತ್ತಾ ಹೋದನು. ಇಲ್ಲಿ ಗುರು ನಿರ್ದೇಶಕ. ಹೀಗೆ ಗುರುವಿನ ನೇತೃತ್ವದಲ್ಲಿ ಶಿಷ್ಯ ಸಾಧನೆಮಾಡಿ ತಿಳಿದುಕೊಳ್ಳುತ್ತಾನೆ. ಇದು ಉನ್ನತ ಮಟ್ಟದ ಬೋಧನಾ ಕ್ರಮ.

ಸ್ತ್ರೀಯರಿಗೆ ಗೌರವ ಸ್ಥಾನ

ಸ್ತ್ರೀಯರಿಗೆ ಆದಿನ ಸಮಾಜದಲ್ಲಿ ಗಣ್ಯಸ್ಥಾನವಿತ್ತೆಂದು ಉಪನಿಷತ್ತುಗಳಿಂದ ತಿಳಿದು ಬರುತ್ತದೆ. ಪುರುಷರಂತೆ ಅವರೂ ಬ್ರಹ್ಮವಾದಿನಿಯರಾಗಿದ್ದರು. ಸ್ತ್ರೀಯರೂ ವೇದಗಳಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬರುವ ಕೆಲವು ಸೂಕ್ತಗಳ ದ್ರಷ್ಟಾರರಾಗಿದ್ದರು. ಅಂತಹ ಮಂತ್ರದ್ರಷ್ಟಾರರಲ್ಲಿ ಅಪಾಲಾ, ಘೋಷಾ, ವಿಶ್ವಾವರಾ ಮುಂತಾದ ಸ್ತ್ರೀಯರ ಹೆಸರುಗಳು ಪ್ರಸಿದ್ಧವಾಗಿವೆ. ಈ ಸ್ತ್ರೀಯರು ರೇನೂ ಮೇಧಾವಿಪುರುಷರಿಗಿಂತ ಹಿಂದುಳಿದಿರಲಿಲ್ಲ ಎಂಬುದು ಒಂದೆರಡು ಪ್ರಸಂಗಗಳಿಂದ ತಿಳಿದುಬರುತ್ತದೆ.

ಬೃಹದಾರಣ್ಯಕೋಪನಿಷತ್ತಿನಲ್ಲಿ (4–4–4) ಯಾಜ್ಞವಲ್ಕ್ಯನು ತನ್ನ ಪತ್ನಿಯರಾದ ಕಾತ್ಯಾಯನೀ ಮತ್ತು ಮೈತ್ರೇಯಿಯರಿಗೆ ತನ್ನ ಸಂಪತ್ತನ್ನು ಹಂಚಿ ಮೈತ್ರೇಯಿಯನ್ನು ಕುರಿತು "ನನ್ನ ಸ್ವತ್ತನ್ನೆಲ್ಲಾ ಹಂಚಿ ನಾನು ಗೃಹಸ್ಥಾಶ್ರಮವನ್ನು ತ್ಯಜಿಸಿ ವಾನಪ್ರಸ್ಥ ನಾಗಬೇಕೆಂದಿರುವೆ" ಎಂದನು. ಮೈತ್ರೇಯಿಯು ಪೂಜ್ಯನೇ! ನೀನು ಕೊಟ್ಟ ಧನದಿಂದ ಪೂರ್ಣವಾದ ಈ ಪೃಥ್ವಿಯೇ ಸಿಕ್ಕಿದರೂ, ನಾನು ಅಮೃತಳಾಗುವೆನೆ? ನಾನು ಯಾವುದರಿಂದ ಅಮೃತಳಾಗುವುದಿಲ್ಲವೋ ಆ ಧನದಿಂದ ನನಗೇನು ಪ್ರಯೋಜನ. ನೀನು ಅರಿತುಕೊಂಡಿರುವ ಅಮೃತತ್ವೋಪಾಯವನ್ನೇ ನನಗೆ ಹೇಳು ಎಂದಳು. ಆಗ ಯಾಜ್ಞವಲ್ಕ್ಯನು ಮೈತ್ರೇಯಿಗೆ ಬ್ರಹ್ಮವನ್ನು ಕುರಿತು ಉಪದೇಶಿಸಿದನು. ಇದು ವೇದಾಂತದ ಸಾರದಂತಿದೆ.

ಅಂತೆಯೇ ಜನಕನ ಆಸ್ಥಾನದಲ್ಲಿ ನಡೆದ ಒಂದು ಘಟನೆಯೂ ಸ್ತ್ರೀಯರ ಸ್ಥಾನದ ಬಗ್ಗೆ ತಿಳಿಸುತ್ತದೆ. ಜನಕನು 'ಬಹುದಕ್ಷಿಣ' ವೆಂಬ ಯಾಗವಮಾಡಿದನು. ಆಗ ಅನೇಕ ಬ್ರಹ್ಮಜ್ಞಾನಿಗಳು ಬಂದಿದ್ದರು. ಜನಕನಿಗೆ ಅವರಲ್ಲಿ ಶ್ರೇಷ್ಠನಾರು? ಎಂದು ಅರಿಯುವ ಕುತೂಹಲ ಉಂಟಾಯಿತು. ಅದಕ್ಕೆ ಒಂದುಸಾವಿರ ಗೋವುಗಳನ್ನು ತರಿಸಿ, ಅವುಗಳ ಕೊಂಬುಗಳಿಗೆ 10–10 ಚಿನ್ನದ ನಾಣ್ಯಗಳನ್ನು ಕಟ್ಟಿಸಿದನು. ಅಲ್ಲಿ ನೆರೆದಿದ್ದ ಜ್ಞಾನಿಗಳನ್ನು ಕುರಿತು, 'ನಿಮ್ಮಲ್ಲಿ ಬ್ರಹ್ಮಿಷ್ಠನಾದವನು ಈ ಗೋವುಗಳನ್ನು ಹೊಡೆದುಕೊಂಡು ಹೋಗಲಿ' ಎಂದನು. ಆ ಗೋವುಗಳನ್ನು ಹೊಡೆದುಕೊಂಡುಹೋಗಲು ಯಾವ ಬ್ರಹ್ಮಜ್ಞಾನಿಗೂ ಧೈರ್ಯ ಬರಲಿಲ್ಲ. ಯಾಜ್ಞವಲ್ಕ್ಯರು ಮಾತ್ರ ತಮ್ಮ ಶಿಷ್ಯರನ್ನು ಕರೆದು 'ಹಸುಗಳನ್ನು ಹೊಡೆದುಕೊಂಡು ಹೋಗಿ' ಎಂದು ಹೇಳಿದರು. ಇತರ ಬ್ರಹ್ಮಜ್ಞಾನಿಗಳು ಕೋಪಗೊಂಡು ಅವರನ್ನು ಕುರಿತು ಪ್ರಶ್ನೆಗಳನ್ನು ಕೇಳಲಾರಂಭಿಸಿದರು. ಯಾಜ್ಞವಲ್ಕ್ಯರ ಉತ್ತರದಿಂದ ಅವರೆಲ್ಲ ಸೋತರು. (ಬೃ. ಉ. 5–1)

ಆಗ ಯಾಜ್ಞವಲ್ಕ್ಯರ ಶಿಷ್ಯೆಯಾದ ವಾಚಕ್ನವಿಗಾರ್ಗಿ ಎಂಬ ಬ್ರಹ್ಮವಾದಿನಿ ಎದ್ದು ಯಾಜ್ಞವಲ್ಕ್ಯನನ್ನು ಕುರಿತು ಗಹನವಾದ ಪ್ರಶ್ನೆಗಳನ್ನು ಕೇಳಿದಳು. 'ನಾನು ಶತ್ರು ಹೃದಯ ಭೇದಕಗಳಾದ ಬಾಣದಂತಹ ಎರಡು ಪ್ರಶ್ನೆಗಳನ್ನು ಕೇಳುತ್ತೇನೆ, ಉತ್ತರ ಕೊಡಿ' ಎಂದು ಹೇಳಿ 'ಎಲ್ಲವೂ ಆಕಾಶದಲ್ಲಿ ಓತಪ್ರೋತವಾಗಿದೆ. ಈ ಆಕಾಶ ಯಾವುದರಲ್ಲಿ ಓತಪ್ರೋತವಾಗಿದೆ?' ಎಂದು ಕೇಳಿದಳು. ಇದರಿಂದ ತಾತ್ವಿಕ ಪ್ರಪಂಚದಲ್ಲಿ ಜಟಿಲ ಸಮಸ್ಯೆಗಳು ಎದ್ದವು. ಆಗ ಯಾಜ್ಞವಲ್ಕ್ಯನು (ಆಧ್ಯಾತ್ಮಿಕತೆಯ ಉತ್ತುಂಗಶಿಖರದ ಮೇಲೆ ನಿಂತು) ಉತ್ತರಿಸುತ್ತಾನೆ. ಹೀಗೆ ಯಾಜ್ಞವಲ್ಕ್ಯನು, ಉತ್ತುಂಗಶಿಖರವೇರಲು ಗಾರ್ಗಿಯ ಪ್ರಶ್ನೆಯೇ ಕಾರಣ. ಯಾಜ್ಞವಲ್ಕ್ಯನು; ಇದಕ್ಕೆ ಗಾರ್ಗಿ, ಆಕಾಶವು ಅಕ್ಷರದಲ್ಲಿ (ಪರಮಾತ್ಮನಲ್ಲಿ) ಓತಪ್ರೋತವಾಗಿದೆ. ಇದು ಅಸ್ಥೂಲ, ಅನಣು....ಅನಂತರ ಅಬಾಹ್ಯ. ಇದರ ಆದೇಶದಿಂದಲೇ ಸೂರ್ಯಚಂದ್ರರು ತಮ್ಮ ಸ್ಥಾನದಲ್ಲಿ ನಿಂತಿರುವರು. ದ್ಯುಲೋಕ, ಪೃಥ್ವಿಗಳು ಅವುಗಳ ಸ್ಥಾನದಲ್ಲಿ ನಿಂತಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಮೇಷ, ಮುಹೂರ್ತ, ಅಹೋರಾತ್ರ, ಪಕ್ಷ, ಮಾಸಗಳು ತಮ್ಮ ಸ್ಥಾನದಲ್ಲಿವೆ. ನದಿಗಳು ಪೂರ್ವ-ಪಶ್ಚಿಮಾದಿ ದಿಕ್ಕುಗಳಲ್ಲಿ ಪ್ರವಹಿಸುತ್ತವೆ. ಈ ಅಕ್ಷರವನ್ನು ಅರಿಯದೆ ಮಾಡಿದ ಕರ್ಮಾದಿಗಳೂ, ಅವುಗಳ ಫಲಗಳೂ ನಶ್ವರ. ಈ ಅಕ್ಷರವನ್ನು ಅರಿಯದೆ ಈ ಲೋಕದಿಂದ ಹೋಗುವವನು ಕೃಪಣ. ಅರಿತು ಹೋಗುವವನು ಬ್ರಹ್ಮಜ್ಞಾನಿ.

ಇದು ನೋಡಲ್ಪಡುವುದಿಲ್ಲ, ಆದರೆ ನೋಡುತ್ತದೆ (ದ್ರಷ್ಟಾ). ಕೇಳಲ್ಪಡುವುದಿಲ್ಲ, ಆದರೆ ಕೇಳುತ್ತದೆ (ಶ್ರೋತಾ). ಮನನಕ್ಕೆ ವಿಷಯವಲ್ಲ, ಆದರೆ ಮನನ ಮಾಡುತ್ತದೆ (ಮಂತಾ). ತಿಳಿಯಲ್ಪಡುವುದಿಲ್ಲ, ಆದರೆ ತಿಳಿಯುತ್ತದೆ (ವಿಜ್ಞಾತಾ). ಇದಕ್ಕಿಂತ ಬೇರೆ ಸಾಕ್ಷಿ, ಶ್ರೋತೃ, ಮಂತಾ, ವಿಜ್ಞಾತೃವಿಲ್ಲ. ಈ ಅವ್ಯಕ್ತ-ಅಕ್ಷರದಿಂದಲೇ, ಅವ್ಯಕ್ತ-ಆಕಾಶ ವ್ಯಾಪ್ತವಾಗಿದೆ ಎಂದು ಹೇಳಿದನು.

ಇದನ್ನು ಕೇಳಿ ಗಾರ್ಗಿ ಸುಮ್ಮನಾದಳು. ಇವರನ್ನು ಯಾರೂ ಗೆಲ್ಲಲಾರಿರಿ ಎಂದು ಇತರ ಬ್ರಹ್ಮಜ್ಞಾನಿಗಳಿಗೆ ಹೇಳಿ ಇವರಿಗೆ ನಮಸ್ಕರಿಸಿ ಬೀಳ್ಕೊಂಡರೆ ಅದೇ ಹೆಚ್ಚು ಎಂದು ಹೇಳಿದಳು.

ಪ್ರಚಂಡಬ್ರಹ್ಮವಾದಿಗೆ ತುಂಬಿದ ಸಭೆಯಲ್ಲಿ ಸವಾಲು ಹಾಕಬೇಕಾದರೆ ಗಾರ್ಗಿಯಲ್ಲಿ ಎಂತಹ ಸತ್ತ್ವವಿತ್ತೆಂಬುದನ್ನು ನೆನೆಸಿಕೊಂಡರೂ ಮೈನವಿರೇಳುವುದು. ಇದರಿಂದ ಉಪನಿಷತ್ತಿನಲ್ಲಿ ಸ್ತ್ರೀಯರಿಗೂ ಉನ್ನತ ಸ್ಥಾನವಿತ್ತೆಂಬುದು ತಿಳಿದುಬರುತ್ತದೆ. (ಬೃ. ಉ. 5–6, 5–8)

ಉಪನಿಷತ್ತಿನ ಬಗ್ಗೆ ವಿಭಿನ್ನ ದೃಷ್ಟಿಕೋನಗಳು

ಮೇಲ್ಕಂಡ ದಶೋಪನಿಷತ್ತುಗಳಿಗೆ ಅನೇಕ ವ್ಯಾಖ್ಯಾನಗಳಿವೆ. ಇದರಲ್ಲಿ ಶಂಕರಾಚಾರ್ಯರ ವ್ಯಾಖ್ಯಾನವು ದೇಶ, ವಿದೇಶಗಳಲ್ಲಿ ವಿಶೇಷವಾಗಿ ಪ್ರಚಾರಗೊಂಡಿದೆ. ಇತರ ಆಚಾರ್ಯರ ವ್ಯಾಖ್ಯಾನಗಳ ಬಗ್ಗೆ ವಿಶ್ವದ ಜನತೆಗೆ ಅಷ್ಟಾಗಿ ತಿಳಿದಿಲ್ಲ. ಶಂಕರರ ದೃಷ್ಟಿಕೋನಕ್ಕಿಂತ ಭಿನ್ನವಾದ ದೃಷ್ಟಿಕೋನವುಂಟೆಂಬುದು ರಾಮಾನುಜರು ಮತ್ತು ಇವರ ಅನುಯಾಯಿಗಳ ವ್ಯಾಖ್ಯಾನದ ಅಧ್ಯಯನದಿಂದ ತಿಳಿಯುತ್ತದೆ. ಶಂಕರಾಚಾರ್ಯರು ಕೇವಲ ನಿವೃತ್ತಿಮಾರ್ಗವನ್ನು ಬೋಧಿಸಿದ್ದಾರೆ. ರಾಮಾನುಜರು ಮತ್ತು ಇವರ ಅನುಯಾಯಿಗಳು ಪ್ರವೃತ್ತಿಮಾರ್ಗ ಸಹಿತವಾದ ನಿವೃತ್ತಿಮಾರ್ಗ ಅತಿಮುಖ್ಯ ಎಂಬುದನ್ನು ತೋರಿಸುತ್ತಾರೆ. ವೇದಾಂತವೆಂದರೆ ಮೂಗುಮುರಿಯುವ ಈಗಿನ ಸಮಾಜಕ್ಕೆ ಈ ದೃಷ್ಟಿಕೋನ ಅತ್ಯಂತ ಆವಶ್ಯಕವಾಗಿದೆ. ಪಾಶ್ಚಿಮಾತ್ಯ ಸಂಸ್ಕೃತಿಯಿಂದ ಪ್ರಭಾವಿತವಾಗಿರುವ ನಮ್ಮ ಸಮಾಜಕ್ಕೆ ಈ ನಿವೃತ್ತಿಯೊಡನೆ ಕೂಡಿರುವ ಪ್ರವೃತ್ತಿ, ತ್ಯಾಗಸಹಿತವಾದ ಭೋಗಮಾರ್ಗವು ಐಹಿಕ ಮತ್ತು ಆಮುಷ್ಮಿಕ (ಲೌಕಿಕ ಮತ್ತು ಅಲೌಕಿಕ) ಜೀವನದಲ್ಲಿ ಸಾಮರಸ್ಯವನ್ನು ಮೂಡಿಸಿಕೊಂಡು ಜೀವನದಲ್ಲಿ ಸಾರ್ಥಕತೆ ಪಡೆಯಲು ಅತ್ಯಂತ ಉಪಯುಕ್ತವಾಗಿದೆ.

ಈ ಉದ್ದೇಶದಿಂದಲೇ ಈ ಸಂಸ್ಥೆಯು ಉಪನಿಷದ್ವಿಭಾಗವು ದಶೋಪನಿಷತ್ತುಗಳ ವಿಮರ್ಶಾತ್ಮಕ ಪ್ರಕಟಣಾಕಾರ್ಯವನ್ನು ಕೈಗೆತ್ತಿಕೊಂಡು ಈಶಾವಾಸ್ಯದ ಕನ್ನಡ ಅವತರಣಿಕೆಯನ್ನು ಪ್ರಕಟಿಸಿದೆ. ಈಗ ಕೇನೋಪನಿಷತ್ತಿನ ವಿಮರ್ಶಾತ್ಮಕ ಕನ್ನಡ ಅವತರಣಿಕೆಯನ್ನೂ ಪ್ರಕಟಿಸುತ್ತಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೇನೋಪನಿಷತ್

ಕೇನೋಪನಿಷತ್ತು ಸಾಮವೇದದ ಜೈಮಿನೀಯ ಅಥವಾ ತಲವಕಾರಬ್ರಾಹ್ಮಣದ ಭಾಗವಾಗಿದೆ. ಆದ್ದರಿಂದ ಇದಕ್ಕೆ 'ತಲವಕಾರೋಪನಿಷತ್' ಎಂದೂ ಹೆಸರು. ಈ ಉಪನಿಷತ್ತಿನಲ್ಲಿ ಬೇರೆ ಉಪನಿಷತ್ತುಗಳಲ್ಲಿ ಹೇಳಿರುವ ಎಲ್ಲ ವಿಷಯಂಗಳೂ ಉಕ್ತವಾಗಿವೆ. ಆದುದರಿಂದ ಇದನ್ನು ಎಲ್ಲಾ ಅವಯವಗಳಿಂದ ಕೂಡಿದ ಉಪನಿಷತ್ತೆಂದು ಹೇಳುವರು.

'ಈಶಾ' ಎಂದು ಆರಂಭವಾಗುವುದರಿಂದ 'ಈಶೋಪನಿಷತ್' ಎಂದು ಹೆಸರು ಬಂದಂತೆ 'ಕೇನ' ಎಂದು ಆರಂಭವಾಗುವ ಈ ಉಪನಿಷತ್ತಿಗೂ 'ಕೇನೋಪನಿಷತ್' ಎಂಬ ಹೆಸರು ಬಂದಿದೆ. ಈಶಾವಾಸ್ಯೋಪನಿಷತ್ತಿನಂತೆಯೇ ಕೇನೋಪನಿಷತ್ತೂ ಚಿಕ್ಕದಾದ ಉಪನಿಷತ್ತು. ಇದು ಹೀಗೆ ಆಕಾರದಲ್ಲಿ ವಾಮನನಂತಿದ್ದರೂ ಪ್ರಭಾವದಲ್ಲಿ ತ್ರಿವಿಕ್ರಮನಂತಿದೆ.

ಇದರಲ್ಲಿ ನಾಲ್ಕು ಖಂಡಗಳಿವೆ. ಇವುಗಳನ್ನು ಎರಡು ಭಾಗವಾಗಿ ವಿಭಾಗಿಸಬಹುದು. ಮೊದಲನೆಯ ಭಾಗವು 'ಪರಬ್ರಹ್ಮ'ವನ್ನು ಇಂದ್ರಿಯಗಳಿಂದ ತಿಳಿಯಲು ಸಾಧ್ಯವಿಲ್ಲ ಮತ್ತು ಪರಬ್ರಹ್ಮವೇ ಈ ಎಲ್ಲ ಜ್ಞಾನದ ತಳಹದಿಯಾಗಿದೆ ಎಂದು ತಿಳಿಸುತ್ತದೆ. ಅಲ್ಲದೆ ಪರಬ್ರಹ್ಮ ವನ್ನು ಇಣುಕುನೋಟದಿಂದ ಕಾಣಲು ನಮಗೆ ಶಕ್ತಿಯಿದ್ದರೂ ಪೂರ್ಣತಿಳಿದಿದ್ದೇವೆ ಎಂದು ಭಾವಿಸಿದರೆ ಪರಬ್ರಹ್ಮದ ಜ್ಞಾನ ಮತ್ತು ಮಹಿಮೆಗಳಿಂದ ವಂಚಿತರಾಗುತ್ತೇವೆ ಎಂದೂ ತಿಳಿಸುತ್ತದೆ. ಈ ಉಪನಿಷತ್ತಿನಲ್ಲಿ ಹೀಗೆ ಸೂಕ್ಷ್ಮವಾದ ಮಾನಸಿಕ ವಿಶ್ಲೇಷಣೆಯಿದೆ. ಬಹಳ ಶಕ್ತಿಶಾಲಿಗಳೆನಿಸಿದ ದೇವತೆಗಳಲ್ಲಿರುವ ಪ್ರಭಾವವೂ ಪರಬ್ರಹ್ಮದಿಂದಲೇ ದತ್ತವಾದುದು ಎಂಬುದನ್ನು ಎರಡನೇ ಭಾಗವು ಸ್ಪಷ್ಟಪಡಿಸುತ್ತದೆ. ಇದನ್ನು ಸರಿಯಾಗಿ ಅರ್ಥಮಾಡಿಕೊಂಡರೆ ಅದು ನೇರವಾಗಿ ಪರಬ್ರಹ್ಮದ ಬಾಗಿಲಿಗೆ ನಮ್ಮನ್ನು ಕೊಂಡೊಯ್ಯುತ್ತದೆ. ಇತರ ಉಪನಿಷತ್ತಿನಲ್ಲಿ ಬ್ರಹ್ಮಜಿಜ್ಞಾಸೆಯನಂತರ ಬ್ರಹ್ಮಸ್ವರೂಪದ ಸಾಕ್ಷಾತ್ಕಾರವು ವಿವರಿಸಲ್ಪಟ್ಟರೆ ಈ ಉಪನಿಷತ್ತಿನಲ್ಲಿ ಬ್ರಹ್ಮಸ್ವರೂಪವನ್ನು ನೋಡಿದ ಮೇಲೆ ಬ್ರಹ್ಮಜಿಜ್ಞಾಸೆ ಆರಂಭ ವಾಗುತ್ತದೆ. ಇದು ಈ ಉಪನಿಷತ್ತಿನ ವೈಶಿಷ್ಟ್ಯ.

ಕೇನೋಪನಿಷತ್ತಿನ ಸಾರ

ಐಹಿಕಾಮುಷ್ಮಿಕಫಲಗಳನ್ನು ಹೊಂದಬೇಕಾದರೆ ಕರಣ ಕಳೇಬರಗಳು ಮುಖ್ಯ ಸಾಧನಗಳು. ಈ ಕರಣ ಕಳೇಬರದಲ್ಲಿ ಕಣ್ಣು, ಕಿವಿ, ವಾಕ್, ಮನಸ್ಸು, ಪ್ರಾಣಗಳು ಸೇರಿವೆ. ಬ್ರಹ್ಮಜ್ಞಾನವನ್ನು ಪ್ರಸ್ತಾಪಿಸಿರುವ ಹಲವೆಡೆಗಳಲ್ಲಿ ಇವುಗಳ ಪ್ರಶಂಸೆಮಾಡಿರುವುದನ್ನು ಉಪನಿಷದಧ್ಯೇತೃಗಳು ಮನಗಾಣಬಹುದು. ಈ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು ಶಿಷ್ಯನೊಬ್ಬನು 'ಕೇನೇಷಿತಮ್' ಎಂದು ಪ್ರಶ್ನಿಸುತ್ತಾನೆ.

ಪ್ರಶ್ನೆ :— ಮನಸ್ಸು ತನಗಿಷ್ಟವಾದ ಮತ್ತು ಇಷ್ಟವಿಲ್ಲದ ವಿಷಯಗಳಲ್ಲಿ ಪ್ರವರ್ತಿಸುವುದು ಯಾರ ಪ್ರೇರಣೆಯಿಂದ ? ಇದೇ ರೀತಿ ಪ್ರಾಣದ ಸಂಚಾರ, ವಾಗಿಂದ್ರಿಯ ವ್ಯಾಪಾರ, ಕಣ್ಣು ಮತ್ತು ಕಿವಿಗಳು ತಮ್ಮ ತಮ್ಮ ಕಾರ್ಯಗಳನ್ನು ಮಾಡುವುದು ಯಾರ ಪ್ರೇರಣೆಯಿಂದ ? ಎಂದು ಕೇಳಿದನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉತ್ತರ :– ಪ್ರಾಣಕ್ಕೆ ಪ್ರಾಣನಾಗಿ, ಹಾಗೆಯೇ ಮಿಕ್ಕ ಉಪಕರಣಗಳು ತಮ್ಮ ಕಾರ್ಯ ಮಾಡಲು ಬೇಕಾದ ಶಕ್ತಿಯನ್ನು ಕೊಟ್ಟು ಅವುಗಳಿಗೆ ಆಧಾರವಾಗಿರುವವನು ಆ ಪರಮಾತ್ಮನು. ಅವನ ಅನುಗ್ರಹದಿಂದಲೇ ಪ್ರತಿ ಉಪಕರಣಗಳಿಗೂ ತಮ್ಮ ತಮ್ಮ ಕೆಲಸಗಳನ್ನು ಮಾಡಲು ಶಕ್ತಿ ಬರುತ್ತದೆ. ಇವುಗಳಿಗೆ ಆ ಪರಮಾತ್ಮನನ್ನು ತಿಳಿಯುವ (ಅನುಭವಿಸುವ) ಶಕ್ತಿಯಿಲ್ಲ.

ಯಾರೇ ಪರಮಾತ್ಮನನ್ನು ಚೆನ್ನಾಗಿ ಅರಿತಿರುವೆನೆಂದು ಎಣಿಸಿದರೂ, ಅವರು ತಿಳಿದುದು 'ಮಹಾಸಮುದ್ರದಲ್ಲಿ (ಏಕದೇಶವನ್ನು) ಒಂದು ಹನಿಯನ್ನು ತಿಳಿದಂತೆ' ಸ್ವಲ್ಪವೇ ಸರಿ. 'ಪರಮಾತ್ಮನನ್ನು ಪೂರ್ಣವಾಗಿ ತಿಳಿದಿಲ್ಲ' ಎಂದು ತಿಳಿದವನೇ ಬ್ರಹ್ಮವನ್ನು ಚೆನ್ನಾಗಿ (ಪೂರ್ಣವಾಗಿ) ತಿಳಿದವನಾಗುವನು. ಯಾರೂ, ಎಲ್ಲಿಯೂ ಪರಮಾತ್ಮನನ್ನು ಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲ. ದೇವಲೋಕದಲ್ಲಿಯೂ ಇವನನ್ನು ತಿಳಿದವರಿಲ್ಲ. (ದೇವತೆಗಳೂ ಪೂರ್ಣವಾಗಿ ಇವನನ್ನು ತಿಳಿದಿಲ್ಲ) ಈ ವಿಷಯದಲ್ಲಿ ಒಂದು ಉಪಾಖ್ಯಾನವಿದೆ.

ಯಕ್ಷಬ್ರಹ್ಮೋಪಾಖ್ಯಾನ :— ಪರಬ್ರಹ್ಮವು ದೇವತೆಗಳಲ್ಲಿ ಅಭಿಮಾನವನ್ನಿಟ್ಟು, ಅವರಿಗಾಗಿ ಅಸುರರನ್ನು ಜಯಿಸಿತು. ವಿಷಯ ಹೀಗಿರುವಾಗ ದೇವತೆಗಳು ತಾವೇ ಜಯಿಸಿದುದಾಗಿ ಗರ್ವತಾಳಿದರು. ಈ ಗರ್ವವನ್ನು ಹೋಗಲಾಡಿಸಿ, ಸತ್ಯವಾದ ವಿಷಯವನ್ನು ದೇವತೆಗಳಿಗೆ ತಿಳಿಯಪಡಿಸಿ ಅನುಗ್ರಹಿಸಬೇಕೆಂದು ಬ್ರಹ್ಮವು ಸಂಕಲ್ಪಿಸಿತು. ಕೂಡಲೇ ಯಕ್ಷರೂಪದಲ್ಲಿ ದೇವತೆಗಳಿಗೆ ಕಾಣಿಸಿತು. ದೇವತೆಗಳು ಇದನ್ನು ನೋಡಿದರು ; ಯಾವುದೆಂದು ತಿಳಿಯಬೇಕೆಂದು ಬಯಸಿ ಅಗ್ನಿದೇವನನ್ನು ಕುರಿತು 'ನೀನು ಎಲ್ಲವನ್ನು ಅರಿತವನಲ್ಲವೇ ? ಆದುದರಿಂದ ಯಕ್ಷರೂಪವಾವುದೆಂದು ತಿಳಿದು ಬಾ' ಎಂದು ಹೇಳಿದರು.

ಅಗ್ನಿಯೂ ಯಕ್ಷಬ್ರಹ್ಮದ ಸಮೀಪಕ್ಕೆ ಓಡಿಬಂದನು. ಯಕ್ಷಬ್ರಹ್ಮವು ನೀನ್ಯಾರೆಂದು ಪ್ರಶ್ನಿಸಲು, ಅಗ್ನಿಯು ತನ್ನ ಹಿರಿಮೆಗಳನ್ನು ಹೇಳಿದನು. ಪುನಃ ನಿನ್ನಲ್ಲಿರುವ ವೀರ್ಯವಾವುದೆಂದು ಕೇಳಲು, ಅಗ್ನಿಯು ಭೂಮ್ಯಂತರಿಕ್ಷಗಳಲ್ಲಿರುವ ಎಲ್ಲವನ್ನೂ ದಹಿಸಬಲ್ಲೆನು ಎಂದನು. ಯಕ್ಷಬ್ರಹ್ಮವು ಒಂದು ಹುಲ್ಲನ್ನು ದಹಿಸಲು ಹೇಳಿದನು. ತನ್ನೆಲ್ಲ ಶಕ್ತಿಯನ್ನು ಒಟ್ಟುಗೂಡಿಸಿ ನೋಡಿದನು. ಹುಲ್ಲನ್ನು ಸುಡಲಾಗಲಿಲ್ಲ. ಆಗ ಈ ಯಕ್ಷರೂಪವನ್ನು ಅರಿಯಲು ಸಾಧ್ಯವಿಲ್ಲ ಎಂದು ತಿಳಿದು ಹಿಂತಿರುಗಿದನು.

ಅನಂತರ ದೇವತೆಗಳು ವಾಯುದೇವನನ್ನು ಕಳುಹಿಸಿದರು. ಅವನೂ ಗರ್ವಭಂಗ ಗೊಂಡು ಯಕ್ಷರೂಪವನ್ನು ತಿಳಿಯಲಾಗದೆ ನಾಚಿಕೆಯಿಂದ ಹಿಂದಿರುಗಿದನು. ಕೊನೆಗೆ ದೇವತೆಗಳು ಇಂದ್ರನನ್ನು ಪ್ರಾರ್ಥಿಸಿ ಕಳುಹಿಸಿದರು. ಇಂದ್ರನು ಯಕ್ಷರೂಪ ಬ್ರಹ್ಮದ ಸಮೀಪಕ್ಕೆ ಬರುವಾಗ ಯಕ್ಷವು ಅವನನ್ನು ಯಾವುದೇ ಪ್ರಶ್ನೆ ಕೇಳದೆ ಅಂತರ್ಧಾನ ಹೊಂದಿತು. ಇಂದ್ರನು ದೇವತೆಗಳ ಒಡೆಯನಾದುದರಿಂದ ಪರಿಭವ ಪಡಿಸಲಾಗದು ಎಂದಿರಬೇಕು. ಅಗ್ನಿ, ವಾಯುಗಳಿಗಿರುವಂತೆ ತನ್ನ ಅಸಾಧಾರಣ ಯೋಗ್ಯತೆಗಳನ್ನು ಹೇಳಿಕೊಳ್ಳಲು ಸಾಧ್ಯವಿಲ್ಲ ಎಂದಾದರೂ ಇರಬಹುದು. ಅಥವಾ ತನ್ನ ಮಹಿಮೆಯನ್ನು ತಿಳಿಯಪಡಿಸಲು ಸಕಾಲವಲ್ಲ ವೆಂದಾದರೂ ಇರಬಹುದು, ಇಂದ್ರನು ತಿಳಿದುಕೊಳ್ಳದೇ ಹಿಂತಿರುಗುವವನಲ್ಲವಾದುದರಿಂದ ತನ್ನ ಸ್ವರೂಪವನ್ನು ಬೇರೆಯವರಿಂದ ತಿಳಿಯಪಡಿಸಿ, ದೇವತೆಗಳಿಗಿಂತಲೂ ಮೇಲಿನವರು ಇದ್ದಾರೆಂಬ ಜ್ಞಾನಬರಲಿ ಎಂದೂ ಇರಬಹುದು; ಯಾವುದೇ ಕಾರಣವಿರಲಿ ಯಕ್ಷರೂಪವು ಮರೆಯಾಯಿತು. ಇಂದ್ರನು ಸ್ತಬ್ಧನಾಗಿ ನಿಂತಿದ್ದನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅದೇ ಕ್ಷಣದಲ್ಲಿ ಯಕ್ಷನಿದ್ದ ಸ್ಥಳದಲ್ಲಿ ಸರ್ವಾಭರಣಭೂಷಿತವಾದ ಸ್ತ್ರೀರೂಪವೊಂದು ಕಾಣಿಸಿತು. ಇಂದ್ರನು ಅದರ ಬಳಿ ಬಂದು ಈ ಯಕ್ಷವಾವುದು ? ಎಂದು ಕೇಳಿದನು. ಆಗ ಆ ಸ್ತ್ರೀಯು ಎಲೈ ಇಂದ್ರನೇ ! ಅದು ಪರಬ್ರಹ್ಮವು. ಆದರಿಂದಲೇ ನಿಮಗೆ ಜಯವು ಲಭಿಸಿತು. ಅದರ ಅನುಗ್ರಹವಿಲ್ಲದಿದ್ದರೆ ನಿಮ್ಮಿಂದ ಏನು ತಾನೇ ಮಾಡಲು ಸಾಧ್ಯ ? ನಮ್ಮಿಂದಲೇ ಜಯ ದೊರಕಿತೆಂಬ ಅಹಂಕಾರವನ್ನು ಬಿಡಿ ಎಂದು ಹೇಳಿದಳು.

ಹೀಗೆ ಇಂದ್ರನು ಬ್ರಹ್ಮಸ್ವರೂಪವನ್ನು ತಿಳಿದು ಅಗ್ನಿ, ವಾಯು ಮತ್ತು ಇತರ ದೇವತೆಗಳಿಗೂ ತಿಳಿಸಿದನು. ಈ ಬ್ರಹ್ಮಸ್ವರೂಪವು ಇತರರಿಗೆ ತಿಳಿಯುವುದು ಮಿಂಚು ಹೊಳೆದು ಮರೆಯಾಗುವಂತೆ ; ಮನಸ್ಸು ವಿಷಯಗಳಲ್ಲಿ ಕ್ಷಣಕಾಲ ನೆಲೆಸುವಂತೆ ಕ್ಷಣಕಾಲ ಮಾತ್ರ. ಬ್ರಹ್ಮವು ಆನಂದರೂಪವಾಗಿ, ಅನೇಕ ಕಲ್ಯಾಣಗುಣವಿಶಿಷ್ಟವಾಗಿರುವುದರಿಂದ ' ವನ ' ಎಂದು ಕರೆಯಲ್ಪಡುತ್ತದೆ. ' ವನ ' ಅಂದರೆ ಆಶ್ರಯಣೀಯ ಎಂದರ್ಥ. ಹೀಗೆ ' ತದ್ವನಮ್ ' ಎಂದು ಉಪಾಸನೆ ಮಾಡುವವನು ಎಲ್ಲರ ಗೌರವಕ್ಕೆ ಪಾತ್ರನಾಗುತ್ತಾನೆ.

ವೇದವೇದಾಂಗಗಳನ್ನು ಅಧ್ಯಯನಮಾಡಿ. ಸತ್ಯವಾದಿಯಾಗಿರುವವರಿಗೆ ಬ್ರಹ್ಮಜ್ಞಾನವು ಹುಟ್ಟುತ್ತದೆ. ಇಂದ್ರಿಯನಿಗ್ರಹಮಾಡಿ, ತಪಸ್ಸುಗಳನ್ನು ಆಚರಿಸುವವರಿಗೆ ಬ್ರಹ್ಮವಿದ್ಯೆಯು ಸ್ಥಿರವಾಗುತ್ತದೆ. ಈ ವಿದ್ಯೆಯನ್ನು ಹೊಂದಿದವರು ಪರಮಾತ್ಮನು ನೆಲೆಸಿರುವ ವೈಕುಂಠ ಲೋಕವನ್ನು ಸೇರುತ್ತಾರೆ. ಸಂಸಾರಬಂಧನದಿಂದ ಬಿಡುಗಡೆ ಹೊಂದುತ್ತಾರೆ. ಈ ಮಾನವ ಜನ್ಮದಲ್ಲಿ ಬ್ರಹ್ಮಜ್ಞಾನವನ್ನು ಪಡೆಯದಿದ್ದರೆ ಮಹತ್ತರ ಹಾನಿಯೂ, ಪಡೆದರೆ ಅಮೃತತ್ವವೂ ಉಂಟಾಗುವುದೆಂದು ಈ ಉಪನಿಷತ್ತು ಹೇಳುತ್ತಿದೆ.

ಈ ಉಪನಿಷತ್ತಿನಲ್ಲಿ 1–13ರವರೆಗೂ ಬ್ರಹ್ಮವನ್ನು ಕುರಿತ ಪ್ರಶ್ನೆಯನ್ನು ಆರಂಭಿಸಿ ಬ್ರಹ್ಮಸ್ವರೂಪದ ವರ್ಣನೆಯನ್ನೂ, 14–28ರವರೆಗೆ ಯಕ್ಷರೂಪಬ್ರಹ್ಮದ ಮಾಹಾತ್ಮ್ಯ ಬೋಧಕ ಕಥೆಯನ್ನೂ, ಮುಂದೆ ಬ್ರಹ್ಮಪ್ರಾಪ್ತಿಗಾಗಿ ಆಧ್ಯಾತ್ಮಿಕ, ಆದಿದೈವಿಕ ಉಪಾಸನಾ ದ್ವಯವನ್ನೂ, ಮುಂದೆ ' ತದ್ವನಮಿತ್ಯುಪಾಸೀತ ' ಎಂದು ತದ್ವನೋಪಾಸನರೂಪವಾದ ವನ ವಿದ್ಯೆಯನ್ನೂ ನಂತರ ಉಪಾಸನೆಯಿಂದುಂಟಾಗಬಹುದಾದ ಫಲವನ್ನೂ ತಿಳಿಸಿದೆ. ಹೀಗೆ ಉಪಕ್ರಮದಿಂದ ಉಪಸಂಹಾರದವರೆಗೆ ಬ್ರಹ್ಮವಿಷಯವನ್ನೇ ಪ್ರತಿಪಾದಿಸಿರುತ್ತದೆ. ಆದುದರಿಂದ ಈ ಉಪನಿಷತ್ತು ಬ್ರಹ್ಮವಿಷಯಕವಾದುದು ಎಂಬುದು ನಿರ್ವಿವಾದ ವಿಷಯ.

ಈ ಉಪನಿಷತ್ತಿನ ಕಥೆಯಿಂದ ನಮಗೆ ಈ ಕೆಳಗಿನ ಅಂಶಗಳು ತಿಳಿದುಬರುತ್ತವೆ. ಪ್ರಪಂಚದ ಎಲ್ಲ ವೇದಾಂತಿಗಳೂ ಸತ್ಯಾನ್ವೇಷಣೆಯಲ್ಲಿ ತೊಡಗಿರುತ್ತಾರೆ. ಈ ಉಪನಿಷತ್ತಿನ 1, 2ನೇ ಭಾಗಗಳು ಈ ಸತ್ಯಾನ್ವೇಷಣೆಗೆ ಸಂಬಂಧಿಸಿವೆ. ಕೊನೆಯ ಎರಡು ಭಾಗಗಳಲ್ಲಿ ವ್ಯವಸ್ಥಿತವಾಗಿ ಸೂಕ್ಷ್ಮದೃಷ್ಟಿಯಿಂದ ವಿವರಿಸಲಾಗಿರುವ ಈ ನೀತಿಕಥೆಯನ್ನು ಒಂದು ನಿಶ್ಚಿತ ಉದ್ದೇಶಕ್ಕಾಗಿಯೇ ಅಳವಡಿಸಲಾಗಿದೆ. ಯಜ್ಞ-ಯಾಗಾದಿಕರ್ಮಗಳ ಮತ್ತು ಅವುಗಳಿಗೆ ಸಂಬಂಧಿಸಿದ ಇತರ ದೇವತೆಗಳ ಮಹತ್ವವನ್ನು ತಗ್ಗಿಸಿ, ಅವುಗಳಿಗಿಂತ ಶ್ರೇಷ್ಠವಾದ ಪರಬ್ರಹ್ಮವನ್ನೂ ಅದರಲ್ಲಿ ಇಡಬೇಕಾದ ಉಪಸನಾರೂಪವಾದ ಭಕ್ತಿಯನ್ನೂ ಅವುಗಳಿಗಿಂತ ಉನ್ನತ ಸ್ಥಾನದಲ್ಲಿ ಸ್ಥಾಪಿಸುವುದೇ ಇದರ ಉದ್ದೇಶ. ಇದರಲ್ಲಿ ಉಪಯೋಗಿಸಿರುವ ಪದಗಳು ಮತ್ತು ಅವುಗಳ ಅರ್ಥಗಳು ಬಹು ಮನೋಹರವಾಗಿವೆ. ಈ ಉಪನಿಷತ್ತಿನ ಭಾಷೆಯು ಈಶೋಪನಿಷತ್ತಿನ ಭಾಷೆಗಿಂತ ಸರಳವಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ಉಪನಿಷತ್ತು ಆರಂಭವಾಗುವ 'ಕೇನ' ಎಂಬ ಪದಕ್ಕೆ ಒಂದು ವಿಶೇಷವಾದ ಅರ್ಥವಿದೆ. ಋಗ್ವೇದದಲ್ಲೂ 'ಕಃ' ಎಂದು ಆರಂಭವಾಗುವ ಒಂದು ಸೂಕ್ತವಿದೆ. ವಿಶ್ವ ಪ್ರಭುವಿನ-ಸರ್ವೇಶ್ವರನ ಸರ್ವವ್ಯಾಪಿತ್ವ ಮತ್ತು ಸರ್ವಾತೀತತ್ವವನ್ನು ಹೆಸರಿಸಲು ಸಾಧ್ಯವಿಲ್ಲ ವೆಂಬುದನ್ನು ತಿಳಿಯಪಡಿಸುವುದೇ ಈ ಮಂತ್ರದ್ರಷ್ಟಾರರ ಉದ್ದೇಶ. ಆದ್ದರಿಂದಲೇ 'ಕಃ' ಎಂದು ಪ್ರಶ್ನಾರ್ಥಕವಾಗಿ ತಿಳಿಸಿದ್ದಾರೆ. ಇದಕ್ಕೆ ಉತ್ತರವಾಗಿ ಋಗ್ವೇದದಲ್ಲಿ 'ತತ್' ಎಂಬ ಪದವನ್ನು ಉಪಯೋಗಿಸಲಾಗಿದೆ. ಅಂತೆಯೇ ಈ ಉಪನಿಷತ್ತಿನಲ್ಲೂ 'ಕೇನ' ಎಂದು ಆರಂಭಿಸಿ, ಮುಂದೆ 'ಯೇನಸ್ಸದ್ವ್ಯಾಚಚಕ್ಷಿರೇ' 'ತದೇವ ಬ್ರಹ್ಮ ತ್ವಂ ವಿದ್ಧಿ' ಎಂಬೆಡೆಗಳಲ್ಲಿ 'ತತ್' ಎಂದು ಉಪಯೋಗಿಸಿರುವರು. 'ತತ್' ಎಂಬುದು ವಿಶ್ವದ ತಳಹದಿಯಾಗಿಯೂ, ವಿಶ್ವವನ್ನೆಲ್ಲಾ ಮೀರಿ ನಿಂತಿರುವುದೂ ಆಗಿದೆ. ಇದರಿಂದ ಪ್ರಾಚೀನ ಉಪನಿಷತ್ತಿನ ಋಷಿಗಳ ವಿಚಾರಶೀಲತೆ ಅರಿವಾಗುವುದು. ಅವರಿಗೆ ಅಪೂರ್ಣವಾದ ಉತ್ತರದಿಂದ ತೃಪ್ತಿಯಿಲ್ಲ. ತಮ್ಮ ಅನ್ವೇಷಣೆಯನ್ನು 'ನೈಷಾ ತರ್ಕೇಣ ಮತಿರಾಪನೇಯಾ' ಎಂಬಂತೆ ಬಹಳದೂರದ ವರೆಗೆ ಅಂದರೆ 'ಈ ಜ್ಞಾನವು ತರ್ಕಕ್ಕೆ ಮೀರಿದ್ದು' ಎಂಬ ಜ್ಞಾನ ಉಂಟಾಗುವವರೆಗೂ ಕೊಂಡೊಯ್ಯುತ್ತಿದ್ದರು ಎಂಬುದಕ್ಕೆ ಇದು ಸತ್ಯಸಾಕ್ಷಿ.

ಈ ಕಥೆಯಿಂದ ನಮಗೆ ಮತ್ತೊಂದು ವಿಷಯ ತಿಳಿಯುತ್ತದೆ. ಪರಬ್ರಹ್ಮದ ದರ್ಶನ ಪಡೆದ ನಂತರ ದೇವತೆಗಳಿಗೆ ಸತ್ಯಸ್ವಭಾವದ ಅರಿವಾಗಿ, ತಮ್ಮ ಶಕ್ತಿಗೆ ಆಧಾರಭೂತವಾದದ್ದು ಬ್ರಹ್ಮ ಎಂದು ತಿಳಿಯಿತು. ಕೂಡಲೇ ಅವರ ಅಭಿಮಾನ ಮತ್ತು ಅಹಂಕಾರಗಳು ನಾಶವಾದುವು ಮತ್ತು ಪರಬ್ರಹ್ಮದ ದರ್ಶನಾನಂತರ ದೇವತೆಗಳಲ್ಲಿ ಭಕ್ತಿಯುಂಟಾಯಿತು. ನಾವು ಕೇವಲ ಶಕ್ತಿಯನ್ನು ಪಡೆಯುವವರು. ಆ ಶಕ್ತಿದಾತ ಸಕಲಾಧಾರಭೂತನಾದ ಪರಬ್ರಹ್ಮನು. ಅವನೇ ಪರಿಪೂರ್ಣದಿವ್ಯಚೇತನವಾದ ಪರಮಾತ್ಮನು. ಅವನ ಅನುಗ್ರಹದಿಂದಲೇ ಸಿದ್ಧಿಸುವ ಉಪಾಸನೆಯ ಮೂಲಕ ಈ ಪರಬ್ರಹ್ಮದ ಸಾಕ್ಷಾತ್ಕಾರ ಪಡೆಯಬಹುದು ಎಂದೂ ತಿಳಿಯುತ್ತದೆ. ಹೀಗೆ ಈ ಉಪನಿಷತ್ತು ಚಿಕ್ಕದಾಗಿದ್ದರೂ ಹಿರಿದಾದ ವೇದಾಂತಾರ್ಥವುಳ್ಳ ದ್ದಾಗಿದೆ.

ಈಶಾವಾಸ್ಯದಲ್ಲಿ ಭಗವದ್ಗೀತೆಯ ಕರ್ಮಯೋಗವು ಕಂಡುಬಂದರೆ ಕೇನೋಪನಿಷತ್ತಿನಲ್ಲಿ ಭಗವದ್ಗೀತೆಯಲ್ಲಿ ವಿಕಾಸಗೊಂಡಿರುವ ಭಕ್ತಿಯೋಗದ ಮೊಳಕೆಯನ್ನು ಕಾಣಬಹುದು. ಯಕ್ಷರೂಪವು ಉಮೆಯ ಮೂಲಕ ತನ್ನ ಪರಬ್ರಹ್ಮತ್ವವನ್ನು ಪ್ರಕಾಶಪಡಿಸಿದರೆ ಗೀತೆಯಲ್ಲಿ ಶ್ರೀಕೃಷ್ಣನು ತಾನು ಪರಬ್ರಹ್ಮವೆಂಬುದನ್ನು ಕ್ರಮಕ್ರಮವಾಗಿ ವಿಶದಪಡಿಸುತ್ತಾನೆ. ಈ ವಿಶ್ವವೆಲ್ಲವೂ ಅವನ ಶರೀರ. ಇವನ ಆದೇಶದಂತೆ ಚಲಿಸುತ್ತಿರುವ, ಪ್ರಕೃತಿಯ ಲಕ್ಷಾಂತರ ರೂಪಗಳೂ ಅವನ ಅಂಶಗಳೇ. ಅವನು ಎಲ್ಲದರಲ್ಲೂ ಅಂತರ್ಯಾಮಿಯಾಗಿರುವವನು. ನಮ್ಮೆಲ್ಲರ ಭಕ್ತಿಗೆ ಪಾತ್ರನಾದವನು. ನಾವು ಮಾಡುವ ಕರ್ಮಗಳೂ ಅವನಿಗಾಗಿಯೇ. ನಾವೆಲ್ಲರೂ ಅವನಲ್ಲೇ ಶರಣಾಗತಿ ಮಾಡಬೇಕು. ಇದರಿಂದ ಎಲ್ಲ ಪಾಪಗಳಿಂದಲೂ ಮುಕ್ತ ರಾಗಿ ಶಾಶ್ವತ ಸುಖ ಪಡೆಯುತ್ತೇವೆ ಎಂದು ಗೀತೆಯಲ್ಲಿ ವಿಷಯವು ವಿಕಾಸಹೊಂದಿ, ಕೊನೆಯಲ್ಲಿ ಸರ್ವಧರ್ಮಫಲಸಂಗಕರ್ತೃತ್ವಗಳನ್ನು ಬಿಟ್ಟು ಅವನಲ್ಲಿ ಶರಣಾಗುವುದೇ ಸರ್ವವೇದಗಳ ಉಪದೇಶಸಾರ ಎಂದು ಗೀತೆಯಲ್ಲಿ ವ್ಯಕ್ತವಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇದರಿಂದ ಅಗ್ನಿ, ವಾಯು, ಇಂದ್ರರು ನೋಡಿದ ಯಕ್ಷರೂಪವು ಅವರ ದಿವ್ಯಶಕ್ತಿಗೆ ಆಧಾರಮಾತ್ರವಲ್ಲ. ಅವರ ಹೃದಯವನ್ನು ಆಕರ್ಷಿಸಿದುದೂ, ಅವರಿಗೆ ಆತ್ಮವೂ ಆಗಿದೆ ಎಂಬ ಅರಿವೂ ಉಂಟಾಗುತ್ತದೆ. ಹೀಗೆ ಕಥೆಯ ಮೂಲಕ ಬಹು ಸುಂದರವಾಗಿ ಉಪದೇಶಿಸಲ್ಪಟ್ಟ ಈ ವಿಷಯದತ್ತ ಅನೇಕ ವ್ಯಾಖ್ಯಾಕಾರರ ಗಮನ ಹರಿದಿಲ್ಲ.

ವಿವಿಧ ವಿಚಾರಗಳು

ಆದಿಶಂಕರರು "'ಕೇನೇಷಿತಮ್' ಎಂದು ಪ್ರಾರಂಭವಾಗುವ ಮತ್ತು 'ಪರಬ್ರಹ್ಮವನ್ನು ಉಪದೇಶಿಸುವುದೆಂತು ?' ಎಂದು ತಿಳಿಸುವ ಈ ಉಪನಿಷತ್ತು ಸಾಮವೇದದ ಜೈಮಿನಿ ಬ್ರಾಹ್ಮಣದ ಒಂಭತ್ತನೆಯ ಅಧ್ಯಾಯದ ಪ್ರಾರಂಭದಲ್ಲಿದೆ. ಇದರ ಹಿಂದಿನ ಎಂಟು ಅಧ್ಯಾಯಗಳಲ್ಲಿ ವಿವಿಧ ಯಜ್ಞ-ಯಾಗಗಳು ಸಂಪೂರ್ಣ ವಿವರಿಸಲ್ಪಟ್ಟಿವೆ. ಹಾಗೆಯೇ ಎಲ್ಲ ಯಜ್ಞಗಳಿಗೂ ಸಂಬಂಧಿಸಿದ 'ಪ್ರಾಣೋಪಾಸನೆ' ಮತ್ತು ಪಂಚಸಾಮ-ಸಪ್ತಸಾಮಗಳೂ ವಿವರಿಸಲ್ಪಟ್ಟಿವೆ. ಇದರ ನಂತರ 'ಗಾಯತ್ರೀಸಾಮ' ಮತ್ತು 'ವಂಶವೃಕ್ಷ'ಗಳಿವೆ" ಎಂದು ಹೇಳಿದ್ದಾರೆ. ಇವೆಲ್ಲವೂ ಸಾಮವೇದಬ್ರಾಹ್ಮಣದ ವಿಷಯಗಳಾಗಿವೆ. ಛಾಂದೋಗ್ಯ ಉಪನಿಷತ್ತಿನಲ್ಲಿ ಶಂಕರರ ಈ ವಿವರಣೆಗೆ ಹೊಂದುವ ಭಾಗಗಳಿವೆ.

ಈ ಉಪನಿಷತ್ತು ಇದ್ದ ಯಾವ ಬ್ರಾಹ್ಮಣವೂ ನಮಗೆ ತಿಳಿಯದಿದ್ದುದರಿಂದ ಈ ಮಾತುಗಳನ್ನು ನಂಬಿಕೆಯ ಆಧಾರದ ಮೇಲೆ ಸ್ವೀಕರಿಸಿದ್ದೆವು. ಆದಿಶಂಕರಾಚಾರ್ಯರು ವಿವರಿಸಿರುವಂತೆಯೇ ಇರುವ ಒಂದು ಸಾಮವೇದಬ್ರಾಹ್ಮಣವನ್ನು ಡಾ॥ ಬರ್ನೇಲ್‌ರವರು ಕಂಡುಹಿಡಿದಿದ್ದಾರೆ. ಅವರು ಈ ರೀತಿ ತಿಳಿಸುತ್ತಾರೆ. 'ಈ ಬ್ರಾಹ್ಮಣದ ಕೊನೆಯ ಅಧ್ಯಾಯದ ಹಿಂದಿನ ಅಧ್ಯಾಯಕ್ಕೆ 'ಉಪನಿಷದ್ ಬ್ರಾಹ್ಮಣ' ಎಂದು ಹೆಸರು ಕೊಡಲಾಗಿದೆ. ಗಾಯತ್ರಿಸಾಮಕ್ಕೆ ಸಂಬಂಧಿಸಿದ 145 ಖಂಡಗಳು ಇದರಲ್ಲಿದೆ. 134ನೆಯದು ಒಂದು ವಂಶ (ಭಾಗ). ಕೇನೋಪನಿಷತ್ತು ಇದರ 135–145 ಖಂಡಗಳಾಗಿದೆ; ಅಥವಾ ಒಂದು ಅಧ್ಯಾಯದ ಹತ್ತನೆಯ ಅನುವಾಕವಾಗಿದೆ. ಶಂಕರರು ಹೇಳಿರುವ ಎಲ್ಲ ವಿಷಯಗಳೂ ಇಲ್ಲಿವೆ. ಆದರೆ ವಿಭಾಗಗಳ ಕ್ರಮ ಮಾತ್ರ ವ್ಯತ್ಯಾಸವಾಗಿದೆ. 'ಒಂಭತ್ತನೆಯ ಅಧ್ಯಾಯದ ಪ್ರಾರಂಭವೇ ಕೇನೋಪನಿಷತ್ತು' ಎಂದು ಶಂಕರರು ತಿಳಿಸುತ್ತಾರೆ. ಆದರೆ ಇದರ ಹಸ್ತಪ್ರತಿಯಿಲ್ಲ.

ಈ ಬ್ರಾಹ್ಮಣದ ಕೊನೆಯ ಬ್ರಾಹ್ಮಣ-ಆರ್ಷೇಯ ಬ್ರಾಹ್ಮಣ. ಈ ಬ್ರಾಹ್ಮಣದಲ್ಲಿ ಉದ್ಧೃತವಾದ ಆಚಾರ್ಯರುಗಳ ಹೆಸರುಗಳಲ್ಲಿ 'ತಾಂಡ್ಯ' ಮತ್ತು 'ಶಾಟ್ಯಾಯನಿ'ಯವರ ಹೆಸರುಗಳನ್ನು ಕಾಣುತ್ತೇವೆ. 'ಶಾಟ್ಯಾಯನಿಗಳು' ತಲವಕಾರ ಬ್ರಾಹ್ಮಣದ ಬಹಳ ಸಮೀಪ ಸಂಬಂಧ ಹೊಂದಿರುವುದಾಗಿ ತಿಳಿದುಬಂದಿದೆ.

ಸಾಮವೇದ ಬ್ರಾಹ್ಮಣಕ್ಕೆ ಸೇರಿದ ಮೂಲಪಾಠದ ಜೊತೆಗೆ ಅಥರ್ವವೇದಕ್ಕೆ ಸೇರಿದ ಮೂಲಪಾಠವೂ ಸಿಕ್ಕಿದೆ. ಇವುಗಳಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಈ ಎರಡು ಪಾಠಗಳ ಮೇಲೂ ವ್ಯಾಖ್ಯಾನಗಳಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನವೀನ ವಿಚಾರಗಳು

ಡಾಯುಸನ್ ಮೊದಲಾದವರು ಇದು ಗದ್ಯ ಪದ್ಯ ಭೇದದಿಂದಲೂ, ವಿಚಾರ ಭೇದ ದಿಂದಲೂ ಎರಡು ವಿಧವಾಗಿದೆ ಎಂದು ಹೇಳುವರು.

1 ರಿಂದ 13ರಲ್ಲಿ 9ನೇ ಮಂತ್ರವನ್ನು ಉಳಿದು ಇತರ ಮಂತ್ರಗಳು ಪದ್ಯಗಳಾಗಿವೆ. 14 ರಿಂದ 28ರವರೆಗೆ ಗದ್ಯರೂಪದಲ್ಲಿದೆ. ವಿಚಾರದೃಷ್ಟಿಯಿಂದ 1–13 ನಿರ್ವಿಶೇಷ ಬ್ರಹ್ಮ ಪ್ರತಿಪಾದಕ 14-28 ಕಥಾಮೂಲಕ ಸವಿಶೇಷಬ್ರಹ್ಮಪ್ರತಿಪಾದಕವೆಂದೂ ಎರಡು ವಿಧ. ಮತ್ತೆ ಕೆಲವರು ಮೂರು ವಿಧವಾಗಿ ವಿಭಾಗಿಸುತ್ತಾರೆ. 1-13 ನಿರ್ವಿಶೇಷ ಬ್ರಹ್ಮಪ್ರತಿಪಾದಕ. ಇದು ವೇದಾಂತದ ಪೂರ್ಣಪರಿಸ್ಥಿತಿಯಲ್ಲಿ ರಚಿಸಲ್ಪಟ್ಟಿದೆ. ಆದ್ದರಿಂದ ಇದು ನವೀನ. 14–28 ಎರಡನೆಯ ಭಾಗ. ಇಲ್ಲಿ ಅಲಂಕಾರಿಕರ ರೀತಿಯಿಂದ ಸವಿಶೇಷಬ್ರಹ್ಮವನ್ನು ಹೇಳಿರುವುದ ರಿಂದಲೂ, ಪರಬ್ರಹ್ಮ ಮತ್ತು ದೇವತೆಗಳಲ್ಲಿ ಪ್ರಧಾನ ಮತ್ತು ಗೌಣಭಾವ ಹೇಳಿರುವುದರಿಂದಲೂ ವೇದಾಂತವಿಚಾರದ ಪೂರ್ಣದಶೆಗಿಂತಲೂ ಮೊದಲು ರಚಿಸಲ್ಪಟ್ಟಿದೆ.ಆದ್ದರಿಂದ 1-13ಕ್ಕಿಂತಲೂ ಮೊದಲು ರಚಿತವಾಗಿದೆ. ಅನಂತರ 3ನೇ ಭಾಗ 28–35ರವರೆಗೆ ಪರಿಶಿಷ್ಟದಂತಿದೆ. ಬ್ರಹ್ಮವು ಕಾಲಾತೀತನೆಂದು ಉಪಮಾನದ ಮೂಲಕ ಹೇಳಿದೆ. ಬ್ರಹ್ಮವಿದ್ಯೆ ಉಪನಿಷತ್ ಎನಿಸಿದೆ. ಆದುದರಿಂದ ಫಲವನ್ನು ವಿವರಿಸಿದೆ. ಆದುದರಿಂದ ಈ 3 ಭಾಗಗಳು ಭಿನ್ನಕರ್ತೃಕ ಮತ್ತು ಭಿನ್ನಕಾಲಿಕ ಎಂದು ಹೇಳುವರು.

ಇದು ವೇದದ ವಿಷಯಪ್ರತಿಪಾದನಾಸರಣಿಯನ್ನು ಅರಿಯದವರು ಹೇಳುವ ಮಾತು. ವೇದದ ಕರ್ಮಕಾಂಡದಲ್ಲಿ ಮೊದಲು ವಿಧಿಯನ್ನು ಹೇಳಿ, ನಂತರ ಅರ್ಥವಾದ, ನಂತರ ಅದನ್ನು ಮಾಡುವ ರೀತಿ ಮತ್ತು ಫಲಗಳನ್ನು ತಿಳಿಸುವಂತೆ ಉಪನಿಷತ್ತುಗಳಲ್ಲೂ ಮೊದಲು ಬ್ರಹ್ಮ ಸ್ವರೂಪವನ್ನು ಹೇಳಿ, ಅನಂತರ ಬ್ರಹ್ಮದ ಮಹಿಮಾಬೋಧಕ ಕಥೆಯನ್ನು ತಿಳಿಸಲಾಗಿದೆ. ನಂತರ ಅದನ್ನು ಸಾಕ್ಷಾತ್ಕರಿಸುವ ಉಪಾಸನೆಯನ್ನು ತಿಳಿಸಿ ಕೊನೆಯಲ್ಲಿ ಇದರ ಫಲವನ್ನು ತಿಳಿಸುತ್ತದೆ. ಅಂತೆಯೇ 'ಕೇನ'ದಲ್ಲಿಯೂ 1–13ರವರೆಗೆ ಬ್ರಹ್ಮಸ್ವರೂಪವನ್ನೂ, 14–28ರವರೆಗೆ, ಕಥೆಯ ಮೂಲಕ ಬ್ರಹ್ಮಮಹಿಮೆಯನ್ನೂ ತಿಳಿಸಿ, ಆಧ್ಯಾತ್ಮಿಕ, ಆದಿದೈವಿಕ ಉಪಮಾನದಮೂಲಕ ಉಪಾಸನಾಕ್ರಮಗಳನ್ನು ತಿಳಿಸಿ, ಅಪುನರಾವೃತ್ತಿರೂಪಮೋಕ್ಷವನ್ನು ಫಲವಾಗಿ ತಿಳಿಸಿದ್ದಾರೆ. ಆದ್ದರಿಂದ ಕಾಲಭೇದವನ್ನಾಗಲೀ ಕರ್ತೃಭೇದವನ್ನಾಗಲೀ ಕಲ್ಪಿಸು ವುದು ಶಕ್ಯವೂ ಅಲ್ಲ ; ಸೂಕ್ತವೂ ಅಲ್ಲ.

'ನ ಚೇದಿಹಾವೇದೀನ್ಮಹತೀ ವಿನಷ್ಟಿಃ' ಎಂಬ ಮಾತು ಕೇನ ಮತ್ತು ಬೃಹದಾರಣ್ಯಕ ಗಳಲ್ಲಿ ಬಂದಿದೆ. ಇದು ಕೇನದಿಂದ ಬೃಹದಾರಣ್ಯಕ ಅಥವಾ ಬೃಹದಾರಣ್ಯಕದಿಂದ ಕೇನಕ್ಕೆ ಬಂದಿರಬಹುದೆಂಬ 'ರೇಯ್' ಅವರ ಮಾತೂ ಉಚಿತವಲ್ಲ. ಅರ್ಥ ಅಥವಾ ಭಾವಸಾಮ್ಯ ವಿರುವೆಡೆಗಳಲ್ಲಿ ಶಬ್ದಸಾಮ್ಯವೂ ಬರುವುದು ಸಹಜ. ಆದ್ದರಿಂದ ಮತ್ತೊಂದು ಕಡೆಯಿಂದ ತೆಗೆದುಕೊಂಡಿದೆ ಎಂದು ಹೇಳುವುದೂ ಕಷ್ಟ. ಮತ್ತೊಂದೆಡೆಯಿಂದ ತೆಗೆದುಕೊಂಡ ಮಾತು ಗಳನ್ನು ಉದಾಹರಿಸುವಾಗ ಋಷಿಯು ಹೀಗೆ ಹೇಳಿದ್ದಾರೆ ಎಂಬ ಮಾತನ್ನು ಬ್ರಾಹ್ಮಣಗಳಲ್ಲಿ ಕಾಣುತ್ತೇವೆ. ಛಾಂದೋಗ್ಯ ಐತರೇಯಗಳಲ್ಲಿ 'ತದೇಷ ಶ್ಲೋಕಃ'. 'ತದಪ್ಯೇಷ ಶ್ಲೋಕೋ ಭವತಿ' ಎಂದು ಹೇಳಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರೇಯ್ ಅವರು ' ಉಮಾ ', ' ಹೈಮವತೀ ' ಶಬ್ದಗಳು ಇಲ್ಲಿ ಬಂದಿರುವುದರಿಂದ ಇದು ಶೈವ ಉಪನಿಷತ್ತೆಂದು ಹೇಳುವರು ಮತ್ತು ಎಲ್ಲ ಶೈವೋಪನಿಷತ್ತುಗಳೂ ಅಥರ್ವವೇದಕ್ಕೆ ಸಂಬಂಧಿಸಿರುವುದರಿಂದ ಇದೂ ಅಥರ್ವವೇದಕ್ಕೆ ಸೇರಿದ್ದೆಂದೂ ಹೇಳುವರು. ಇದು ಕೇವಲ ಮೇಲ್ನೋಟದ ವಾದ, ಕೇವಲ ' ಉಮಾ ', ' ಹೈಮವತೀ ' ಶಬ್ದಗಳು ಶೈವತ್ವ ಸಾಧಕವಾಗಲಾರವು. ' ಸಾಸ್ಯ ದೇವತಾ ' ಎಂಬ ಪಾಣಿನಿಸೂತ್ರದಂತೆ, ' ಶಿವೋ ದೇವತಾ ಅಸ್ಯಾಃ ಶೈವೀ ' ಎಂದಾಗುತ್ತದೆ. ಆದುದರಿಂದ ಶಿವಮಾಹಾತ್ಮ್ಯಪ್ರತಿಪಾದಕವೂ ಶೈವೋಪಯೋಗಿರುದ್ರಾಕ್ಷಾದಿಗಳನ್ನು ತಿಳಿಸುವುದೂ ಆದ ಉಪನಿಷತ್ತುಗಳನ್ನು ಶೈವವೆಂದು ಹೇಳಬಹುದು ; ಮತ್ತು ಶೈವೋಪನಿಷತ್ತುಗಳು ಅಥರ್ವವೇದದಲ್ಲಿ ಮಾತ್ರ ಬರುತ್ತದೆ ಎಂದು ಹೇಳಲಾಗುವುದಿಲ್ಲ. ಶೈವಾಗಮೋಪಯೋಗಿಯಾದ ರುದ್ರಾಕ್ಷ–ಜಾಬಾಲಿ ಮುಂತಾದ ಉಪನಿಷತ್ತುಗಳು ಸಾಮವೇದದಲ್ಲಿವೆ. ಇವುಗಳಿಗೆ ಆಪ್ಯಾಯಂತು ಎಂಬುದೇ ಶಾಂತಿ ಮಂತ್ರ. ಮುಕ್ತಿಕೋಪನಿಷತ್ತಿನಲ್ಲೂ ಇವುಗಳನ್ನು ಸಾಮವೇದಾಂತರ್ಗತವೆಂದು ಹೇಳಿದೆ. ಇದರಿಂದ ರೋಲಿಕ್ ಮುಂತಾದ ವಿಮರ್ಶಕರು, ' ಕೇನವು ಅಥರ್ವವೇದದಲ್ಲಿದೆ ' ಎಂದು ಹೇಳುವ ಮಾತೂ ಸಾಧುವಲ್ಲವೆಂದು ನಿಶ್ಚಿತವಾಗುತ್ತದೆ.

ಮಂತ್ರಗಳ ಸಂಖ್ಯಾಕ್ರಮವು ಸಾಮ–ಅಥರ್ವಗಳಲ್ಲಿ ಭಿನ್ನವಾಗಿವೆ. ಕೇನದ ಮಂತ್ರಗಳ ಸಂಖ್ಯಾಕ್ರಮವು ಈಗಿನ ಗ್ರಂಥಗಳಲ್ಲಿ ಎರಡೂ ರೀತಿಯಲ್ಲಿರುವುದರಿಂದ ಉಭಯವೇದಗಳಲ್ಲೂ ಕೇನವಿದೆ ಎಂಬ ಮಾತೂ ಸೂಕ್ತವಲ್ಲ. ಲೇಖಕರ ಇಚ್ಛೆಗೆ ಅನುಗುಣವಾಗಿ ಸಂಖ್ಯಾಭೇದ ಉಂಟಾಗುವುದು. ಕೆಲವರು ಆರಂಭದಿಂದ ಕೊನೆಯವರೆಗೆ ಸಂಖ್ಯೆಯನ್ನು ನಿರ್ದೇಶಿಸುತ್ತಾರೆ. ಮತ್ತೆ ಕೆಲವರು ಪ್ರತಿ ಖಂಡಕ್ಕೂ ಬೇರೆ ಬೇರೆ ಸಂಖ್ಯೆಯನ್ನು ನಿರ್ದೇಶಿಸುತ್ತಾರೆ.

ಶಂಕರರು ಜೈಮಿನೀಯಬ್ರಾಹ್ಮಣದ 9ನೇ ಅಧ್ಯಾಯದಲ್ಲಿದೆ ಎಂದು ಹೇಳಿರುವರು. ಆದರೆ ಈಗಿನ ಪುಸ್ತಕಗಳಲ್ಲಿ ಅಂದರೆ ಡಾ॥ ಬರ್ನೇಲ್ ಅವರಿಗೆ ಉಪಲಬ್ಧವಾದ ಗ್ರಂಥದಲ್ಲಿ 5ನೇ ಅಧ್ಯಾಯದಲ್ಲಿದೆ ಎಂದು ಹೇಳಿರುವರು. ಇದರಿಂದ ಶಂಕರಾಚಾರ್ಯರಿಂದ ಈಚೆಗೆ, ಡಾ॥ ಬರ್ನೇಲ್ ಅವರ ಕಾಲದ ಮಧ್ಯೆ ಇದರ ಕೆಲವು ಭಾಗಗಳು ಲುಪ್ತವಾಗಿ, 9ನೇ ಅಧ್ಯಾಯವು 5ನೇ ಅಧ್ಯಾಯವಾಗಿ ಉಳಿದಿರಬಹುದೆಂಬ ಊಹೆಗೆ ಕಾರಣವಾಗುವುದು.

ಉಪನಿಷತ್ತುಗಳ ಅಧ್ಯಯನದಲ್ಲಿ ಕಾಲ, ಕರ್ತೃ. ಶೈಲಿ, ಅಧ್ಯಾಯಗಳಿಗಿಂತಲೂ ವಿಷಯವೇ ಪ್ರಧಾನವಾಗಿದೆ. ಈ ದೃಷ್ಟಿಯಿಂದಲೇ ಉಪನಿಷತ್ತುಗಳ ಅಧ್ಯಯನ ಮಾಡಬೇಕು. ಆದರೂ ಕೇನದ ಬಗ್ಗೆ ಇರುವ ಅಭಿಪ್ರಾಯಭೇದಗಳನ್ನು ವಾಚಕರ ಅವಗಾಹನೆಗಾಗಿ ಇಲ್ಲಿ ಅಳವಡಿಸಲಾಗಿದೆ.

ಹೊಸಪ್ರಕಾಶನದ ವಿಶೇಷಗಳು

ಈ ಪ್ರಕಾಶನದಲ್ಲಿ ಕೇನೋಪನಿಷತ್ತಿನ ಮಂತ್ರಗಳನ್ನು ಸಂಸ್ಕೃತ ಮತ್ತು ಕನ್ನಡ ಲಿಪಿಗಳಲ್ಲಿ ಕೊಡಲಾಗಿದೆ. ಮುಂದೆ ಪ್ರತಿ ಮಂತ್ರಕ್ಕೂ ಕನ್ನಡದಲ್ಲಿ ಪ್ರತಿಪದಾರ್ಥವನ್ನೂ ಅನಂತರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಾತ್ಪರ್ಯವನ್ನೂ ಅಳವಡಿಸಿದೆ. ಇದರಿಂದ ಮಂತ್ರಾರ್ಥಗಳನ್ನು ಸುಲಭವಾಗಿ ಅರಿಯಲು ಮತ್ತು ಮಂತ್ರಗಳ ತಾತ್ಪರ್ಯವನ್ನು ಅರಿಯಲು ಅನುಕೂಲವಾಗಿದೆ. ಮುಂದೆ ರಂಗರಾಮಾನುಜರ ಸಂಸ್ಕೃತ ಭಾಷ್ಯವನ್ನು ಕನ್ನಡ ಲಿಪಿಯಲ್ಲೂ ಅದರಡಿ ಅದರ ಕನ್ನಡ ಭಾಷಾಂತರವನ್ನೂ ಕೊಟ್ಟಿದೆ. ಇದರಿಂದ ಮಂತ್ರದ ತಿರುಳು ತಿಳಿಯುತ್ತದೆ.

ಮುಂದೆ ಕೇನೋಪನಿಷತ್ತಿಗೆ ವ್ಯಾಖ್ಯಾನಮಾಡಿರುವ ಶ್ರೀ ರಾಮಾನಂದರು ಮತ್ತು ಗೋಪಾಲಾನಂದರ ಭಾಷ್ಯಗಳ ಸಾರವನ್ನು ವಿಶೇಷಗಳೊಡನೆ ಸಂಗ್ರಹಿಸಿ ಅಳವಡಿಸಲಾಗಿದೆ.

ಕೊನೆಯಲ್ಲಿ ಅನುಬಂಧಗಳನ್ನು ಅಳವಡಿಸಲಾಗಿದೆ. ಇವುಗಳಲ್ಲಿ ಕ್ರಮವಾಗಿ ಭಾಷ್ಯಕಾರರ ಪರಿಚಯ, ಉಲ್ಲೇಖಕಾರರ ಚರಿತ್ರೆ ಕೇನೋಪನಿಷತ್ತಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಇತರ ಗ್ರಂಥಗಳಲ್ಲಿನ ವಿವರಣೆ, ಮಂತ್ರ ಅಕಾರಾದಿ, ಪ್ರಮಾಣಾಕರ ಅಕಾರಾದಿ, ಭಗವನ್ನಾಮಾವಳಿ, ಕೇನೋಪನಿಷದರ್ಥಸಂಗ್ರಹ ಗ್ರಂಥಸೂಚಿ ಮೊದಲಾದುವನ್ನೂ ಅಳವಡಿಸಲಾಗಿದೆ.

ಈ ಕನ್ನಡ ಅವತರಣಿಕೆಯ ನಿರ್ಮಾಣಕಾರ್ಯದಲ್ಲಿ ಸೂಕ್ತ ಮಾರ್ಗದರ್ಶನ ಮತ್ತು ಸಹಕಾರಗಳನ್ನಿತ್ತ ಸಂಸ್ಥೆಯ ಇತರ ಸಂಶೋಧಕ ಬಂಧುಗಳಿಗೂ, ಕಾರ್ಯಕರ್ತರಿಗೂ ಕೃತಜ್ಞತೆಗಳನ್ನರ್ಪಿಸುತ್ತೇನೆ. ಈ ಅವತರಣಿಕೆಯನ್ನು ಸಿದ್ಧಗೊಳಿಸುವಲ್ಲಿ ರೂಪರೇಖೆಗಳನ್ನು ರೂಪಿಸಿ, ಕಾಲಕಾಲದಲ್ಲಿ ಸೂಕ್ತವಾದ ಮಾರ್ಗದರ್ಶನವಿತ್ತ ಸಂಸ್ಕೃತ ಸಂಶೋಧನ ಸಂಸತ್ತಿನ ಕೆಲಸಚಿವರೂ ಪ್ರಧಾನಸಂಪಾದಕರೂ ಆದ ವಿದ್ವಾನ್ ಶ್ರೀ ಉ॥ ವೇ॥ ಎಂ. ಎ. ಲಕ್ಷ್ಮೀತಾತಾಚಾರ್ಯರಿಗೆ ಕೃತಜ್ಞತಾಪೂರ್ವಕ ವಂದನೆಗಳನ್ನು ಅರ್ಪಿಸುತ್ತೇನೆ.

ಈ ಅವತರಣಿಕೆಯನ್ನು ಸಿದ್ಧಗೊಳಿಸುವಲ್ಲಿ ಕರಡುಪ್ರತಿಯನ್ನು ಅವಲೋಕಿಸಿ ಸಲಹೆಗಳನ್ನಿತ್ತ ಸಂಸ್ಥೆಯ ಕಾರ್ಯಕಾರಿಸಮಿತಿಯ ಸದಸ್ಯರುಗಳಾದ ಡಾ॥ ಶ್ರೀ ಬಿ. ಆರ್. ಶೇಷಾಚಾರ್ ಮತ್ತು ಶ್ರೀ ಎನ್. ಎಸ್. ಅನಂತರಂಗಾಚಾರ್, ಗೌರವಕಾರ್ಯನಿರ್ವಾಹಕರಾದ ಶ್ರೀ ಅರೈಯರ್ ಶ್ರೀರಾಮಶರ್ಮ ಅವರುಗಳಿಗೂ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ. ಎ. ಎಸ್. ರಾಜನ್ ಅವರು ವಿಷಯಗಳನ್ನು ಪರಿಶೀಲಿಸಿ, ಚರ್ಚಿಸಿ, ಸೂಕ್ತ ಸಲಹೆಗಳನ್ನಿತ್ತು ಪ್ರೋತ್ಸಾಹಿಸಿರುವರು. ಇವರಿಗೆ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇನೆ.

ಇದರ ಬಗ್ಗೆ ಉದಾರ ಧನಸಹಾಯವಿತ್ತ ಕರ್ನಾಟಕದ ಘನಸರ್ಕಾರಕ್ಕೂ ಕೃತಜ್ಞತೆಗಳನ್ನರ್ಪಿಸುತ್ತೇನೆ.

ಈ ಅವತರಣಿಕೆಯನ್ನು ವಿಶೇಷ ಆಸಕ್ತಿ ವಹಿಸಿ ಅಂದವಾಗಿ ಅತ್ಯಲ್ಪಕಾಲದಲ್ಲಿ ಮುದ್ರಿಸಿ ಕೊಟ್ಟ ವಿವೇಕ್ ಮುದ್ರಣಾಲಯದ ಮಾಲೀಕರಾದ ಶ್ರೀ ಡಿ. ಗುರುರಾಜ್ ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ಗ್ರಂಥವು ಕೇನೋಪನಿಷತ್ತಿಗೆ ರಾಮಾನುಜದರ್ಶನಪರವಾದ ಅರ್ಥವನ್ನು ಅರಿಯಲು ಮತ್ತು ಅದರಿಂದ ಇತರ ದರ್ಶನಗಳ ತುಲನಾತ್ಮಕ ಅಧ್ಯಯನಗಳಿಗೆ ಸಾಧನವೂ ಆಗಲಿ ಎಂದು ಹಾರೈಸುತ್ತೇನೆ.

ಇಂತು

ಎಂ. ಬಿ. ಪಾರ್ಥಸಾರಥಿ ಅಯ್ಯಂಗಾರ್

ಸಂಪಾದಕ

ಸಂಸ್ಕೃತ ಸಂಶೋಧನ ಸಂಸತ್

ಮೇಲುಕೋಟೆ

ದಿನಾಂಕ : 13-8-1984

ವಿ.ಸೂ. – ಈ ಪ್ರಸ್ತಾವನೆಯನ್ನು ರೂಪಿಸುವಲ್ಲಿ ಉಪನಿಷದ್ಭಾವಧಾರೆ, ಶ್ರೀಧರಶಾಸ್ತ್ರಿಪಾಠಕ್ ಸಂಪಾದಿತ ಕೇನೋಪನಿಷತ್, ಭಾರತೀಯ ವಿದ್ಯಾಭವನ ಮತ್ತು ರಾಮಕೃಷ್ಣಾಶ್ರಮದ ಕೆಲವು ಪ್ರಕಾಶನಗಳ ಪೂರ್ಣಸಹಕಾರ ಪಡೆದಿದೆ. ಇವುಗಳನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತೇವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

7882

पुस्तकालय
गुरुकुल कांगड़ी विश्वविद्यालय

ಕೇನೋಪನಿಷತ್

ಮೂಲ

DONATION

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೇನೋಪನಿಷತ್

(ತಲವಕಾರೋಪನಿಷತ್)

ಶಾಂತಿಮಂತ್ರಃ

ಓಂ ಆಪ್ಯಾಯಂತು ಮಮಾಂಗಾನಿ ವಾಕ್ಪ್ರಾಣಶ್ಚಕ್ಷುಃ ಶ್ರೋತ್ರಮಥೋ ಬಲಮಿಂದ್ರಿಯಾಣಿ ಚ ಸರ್ವಾಣಿ । ಸರ್ವಂ ಬ್ರಹ್ಮೋಪನಿಷದಮ್ ಮಾಽಹಂ ಬ್ರಹ್ಮ ನಿರಾಕುರ್ಯಾಮ್ । ಮಾ ಮಾ ಬ್ರಹ್ಮ ನಿರಾಕರೋತ್ । ಅನಿರಾಕರಣಮಸ್ತು । ಅನಿರಾಕರಣಂ ಮೇಽಸ್ತು । ತದಾತ್ಮನಿ ನಿರತೇ ಯ ಉಪನಿಷತ್ಸು ಧರ್ಮಾಸ್ತೇ ಮಯಿ ಸಂತು ತೇ ಮಯಿ ಸಂತು । ಓಂ ಶಾಂತಿಃ ಶಾಂತಿಃ ಶಾಂತಿಃ ॥

ಹರಿಃ ಓಮ್

॥ ಪ್ರಥಮಃ ಖಂಡಃ ॥

ಕೇನೇಷಿತಂ ಪತತಿ ಪ್ರೇಷಿತಂ ಮನಃ
ಕೇನ ಪ್ರಾಣಃ ಪ್ರಥಮಃ ಪ್ರೈತಿ ಯುಕ್ತಃ ।
ಕೇನೇಷಿತಾಂ ವಾಚಮಿಮಾಂ ವದಂತಿ
ಚಕ್ಷುಶ್ಶ್ರೋತ್ರಂ ಕ ಉ ದೇವೋ ಯುನಕ್ತಿ ॥ ೧ ॥

ಶ್ರೋತ್ರಸ್ಯ ಶ್ರೋತ್ರಂ ಮನಸೋ ಮನೋ ಯತ್
ವಾಚೋ ಹ ವಾಚಂ ಸ ಉ ಪ್ರಾಣಸ್ಯ ಪ್ರಾಣಃ ।
ಚಕ್ಷುಷಶ್ಚಕ್ಷುರತಿಮುಚ್ಯ ಧೀರಾಃ
ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವನ್ತಿ ॥ ೨ ॥

ನ ತತ್ರ ಚಕ್ಷುರ್ಗಚ್ಛತಿ ನ ವಾಕ್ ಗಚ್ಛತಿ ನೋ ಮನಃ ।
ನ ವಿದ್ಮೋ ನ ವಿಜಾನೀಮೋ ಯಥೈತದನುಶಿಷ್ಯಾತ್ ॥ ೩ ॥

ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ ।
ಇತಿ ಶುಶ್ರುಮ ಪೂರ್ವೇಷಾಂ ಯೇ ನಸ್ತದ್ವ್ಯಾಚಚಕ್ಷಿರೇ ॥ ೪ ॥

ಯದ್ವಾಚಾಽನಭ್ಯುದಿತಂ ಯೇನ ವಾಗಭ್ಯುದ್ಯತೇ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೫ ॥

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯನ್ಮನಸಾ ನ ಮನುತೇ ಯೇನಾಹುರ್ಮನೋ ಮತಮ್ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೬ ॥

ಯಚ್ಚಕ್ಷುಷಾ ನ ಪಶ್ಯತಿ ಯೇನ ಚಕ್ಷೂಂಷಿ ಪಶ್ಯತಿ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೭ ॥

ಯಚ್ಛ್ರೋತ್ರೇಣ ನ ಶೃಣೋತಿ ಯೇನ ಶ್ರೋತ್ರಮಿದಂ ಶ್ರುತಮ್ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೮ ॥

ಯತ್ಪ್ರಾಣೇನ ನ ಪ್ರಾಣಿತಿ ಯೇನ ಪ್ರಾಣಃ ಪ್ರಣೀಯತೇ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೯ ॥

॥ ಇತಿ ಪ್ರಥಮಃ ಖಂಡಃ ॥

॥ ಅಥ ದ್ವಿತೀಯಃ ಖಂಡಃ ॥

ಯದಿ ಮನ್ಯಸೇ ಸುವೇದೇತಿ ದಭ್ರಮೇವಾಪಿ ನೂನಂ ತ್ವಂ ವೇತ್ಥ ಬ್ರಹ್ಮಣೋ ರೂಪಮ್ ।
ಯದಸ್ಯ ತ್ವಂ ಯದಸ್ಯ ದೇವೇಷು ಅಥ ನು ಮೀಮಾಂಸ್ಯಮೇವ ತೇ ಮನ್ಯೇ ವಿದಿತಮ್ ॥ ೧ ॥

ನಾಹಂ ಮನ್ಯೇ ಸುವೇದೇತಿ ನೋ ನ ವೇದೇತಿ ವೇದ ಚ ।
ಯೋ ನಸ್ತದ್ವೇದ ತದ್ವೇದ ನೋ ನ ವೇದೇತಿ ವೇದ ಚ ॥ ೨ ॥

ಯಸ್ಯಾಮತಂ ತಸ್ಯ ಮತಂ ಮತಂ ಯಸ್ಯ ನ ವೇದ ಸಃ ।
ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಮ್ ॥ ೩ ॥

ಪ್ರತಿಬೋಧವಿದಿತಂ ಮತಮಮೃತತ್ವಂ ಹಿ ವಿಂದತೇ ।
ಆತ್ಮನಾ ವಿಂದತೇ ವೀರ್ಯಂ ವಿದ್ಯಯಾ ವಿಂದತೇಽಮೃತಮ್ ॥ ೪ ॥

ಇಹ ಚೇದವೇದೀದಥ ಸತ್ಯಮಸ್ತಿ ನ ಚೇದಿಹಾವೇದೀನ್ಮಹತೀ ವಿನಷ್ಟಿಃ ।
ಭೂತೇಷುಭೂತೇಷು ವಿಚಿತ್ಯ ಧೀರಾಃ ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವನ್ತಿ ॥ ೫ ॥

॥ ಇತಿ ದ್ವಿತೀಯಃ ಖಂಡಃ ॥

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

॥ ಅಥ ತೃತೀಯಃ ಖಂಡಃ ॥

ಬ್ರಹ್ಮ ಹ ದೇವೇಭ್ಯೋ ವಿಜಿಗ್ಯೇ । ತಸ್ಯ ಹ ಬ್ರಹ್ಮಣೋ ವಿಜಯೇ
ದೇವಾ ಅಮಹೀಯನ್ತ । ತ ಐಕ್ಷನ್ತ, ಅಸ್ಮಾಕ ಮೇವಾಯಂ
ವಿಜಯೋಽಸ್ಮಾಕಮೇವಾಯಂ ಮಹಿಮೇತಿ ॥ ೧ ॥

ತದ್ಧೈಷಾಂ ವಿಜಜ್ಞೌ । ತೇಭ್ಯೋ ಹ ಪ್ರಾದುರ್ಬಭೂವ ।
ತನ್ನ ವ್ಯಜಾನತ ಕಿಮಿದಂ ಯಕ್ಷಮಿತಿ ॥ ೨ ॥

ತೇಽಗ್ನಿಮಬ್ರುವನ್, ಜಾತವೇದಃ ! ಏತದ್ವಿಜಾನೀಹಿ ಕಿಮೇತದ್ಯಕ್ಷಮಿತಿ ।
ತಥೇತಿ ॥ ೩ ॥

ತದಭ್ಯದ್ರವತ್ । ತಮಭ್ಯವದತ್ ಕೋಽಸೀತಿ । ಅಗ್ನಿರ್ವಾ
ಅಹಮಸ್ಮೀತ್ಯಬ್ರವೀತ್, ಜಾತವೇದಾ ವಾ ಅಹಮಸ್ಮೀತಿ ॥ ೪ ॥

ತಸ್ಮಿಂಸ್ತ್ವಯಿ ಕಿಂ ವೀರ್ಯಮಿತಿ । ಅಪೀದಂ ಸರ್ವಂ
ದಹೇಯಮ್ ಯದಿದಂ ಪೃಥಿವ್ಯಾಮಿತಿ ॥ ೫ ॥

ತಸ್ಮೈ ತೃಣಂ ನಿದಧೌ, ಏತದ್ದಹೇತಿ । ತದುಪಪ್ರೇಯಾಯ
ಸರ್ವಜವೇನ । ತನ್ನ ಶಶಾಕ ದಗ್ಧುಮ್ । ಸ ತತ ಏವ ನಿವವೃತೇ, ನೈತ
ದಶಕಂ ವಿಜ್ಞಾತುಮ್, ಯದೇತದ್ಯಕ್ಷಮಿತಿ ॥ ೬ ॥

ಅಥ ವಾಯುಮಬ್ರುವನ್, ವಾಯೋ ಏತದ್ವಿಜಾನೀಹಿ ಕಿಮೇತದ್ಯಕ್ಷಮಿತಿ । ತಥೇತಿ ॥ ೭ ॥

ತದಭ್ಯದ್ರವತ್ । ತಮಭ್ಯವದತ್, ಕೋಽಸೀತಿ । ವಾಯುರ್ವಾ ಅಹಮಸ್ಮೀತ್ಯ
ಬ್ರವೀತ್, ಮಾತರಿಶ್ವಾ ವಾ ಅಹಮಸ್ಮೀತಿ ॥ ೮ ॥

ತಸ್ಮಿಂಸ್ತ್ವಯಿ ಕಿಂ ವೀರ್ಯಮಿತಿ । ಅಪೀದಂ ಸರ್ವಮಾದದೀಯಂ,
ಯದಿದಂ ಪೃಥಿವ್ಯಾಮಿತಿ ॥ ೯ ॥

ತಸ್ಮೈ ತೃಣಂ ನಿದಧೌ, ಏತದಾದತ್ಸ್ವೇತಿ । ತದುಪಪ್ರೇಯಾಯ ಸರ್ವಜವೇನ ।
ತನ್ನ ಶಶಾಕಾಽಽದಾತುಮ್ । ಸ ತತ ಏವ ನಿವವೃತೇ, ನೈತದಶಕಂ
ವಿಜ್ಞಾತುಮ್, ಯದೇತದ್ಯಕ್ಷಮಿತಿ ॥ ೧೦ ॥

ಅಥೇಂದ್ರಮಬ್ರುವನ್, ಮಘವನ್ನೇತದ್ವಿಜಾನೀಹಿ ಕಿಮೇತದ್ಯಕ್ಷಮಿತಿ ।
ತಥೇತಿ । ತದಭ್ಯದ್ರವತ್ । ತಸ್ಮಾತ್ ತಿರೋದಧೇ ॥ ೧೧

ತಸ್ಮಿನ್ನೇವಾಕಾಶೇ ಸ್ತ್ರಿಯಮಾಜಗಾಮ ಬಹುಶೋಭಮಾನಾಮುಮಾಂ
ಹೈಮವತೀಮ್ । ತಾಂ ಹೋವಾಚ ಕಿಮೇತದ್ಯಕ್ಷಮಿತಿ ॥ ೧೨ ॥

॥ ಇತಿ ತೃತೀಯಃ ಖಂಡಃ ॥

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಥ ಚತುರ್ಥಃ ಖಂಡಃ

ಬ್ರಹ್ಮೇತಿ ಹೋವಾಚ, ಬ್ರಹ್ಮಣೋ ವಾ ಏತದ್ವಿಜಯೇ ಮಹೀಯಧ್ವಮ್
ಇತಿ । ತತೋ ಹೈವ ವಿದಾಂಚಕಾರ ಬ್ರಹ್ಮೇತಿ ॥ ೧ ॥

ತಸ್ಮಾದ್ವಾ ಏತೇ ದೇವಾ ಅತಿತರಾಮಿವಾನ್ಯಾನ್ ದೇವಾನ್, ಯದಗ್ನಿರ್ವಾಯುರಿಂದ್ರಃ ।
ತೇ ಹ್ಯೇನನ್ನೇದಿಷ್ಠಂ ಪಸ್ಪೃಶುಃ । ತೇ ಹ್ಯೇನತ್ ಪ್ರಥಮೋ ವಿದಾಂಚಕಾರ ಬ್ರಹ್ಮೇತಿ ॥೨॥

ತಸ್ಮಾದ್ವಾ ಇಂದ್ರೋಽತಿತರಾಮಿವಾನ್ಯಾನ್ ದೇವಾನ್ । ಸ ಹ್ಯೇನನ್ನೇದಿಷ್ಠಂ
ಪಸ್ಪೃಶುಃ । ಸ ಹ್ಯೇನತ್ ಪ್ರಥಮೋ ವಿದಾಂಚಕಾರ ಬ್ರಹ್ಮೇತಿ ॥ ೩ ॥

ತಸ್ಯೈಷ ಆದೇಶೋ ಯದೇತದ್ವಿದ್ಯುತೋ ವ್ಯದ್ಯುತದಾ ಇತಿ, ಇನ್ನ್ಯಮಿಷದಾ
ಇತ್ಯಧಿದೈವತಮ್ ॥ ೪ ॥

ಅಥಾಧ್ಯಾತ್ಮಮ್, ಯದೇತದ್ಗಚ್ಛತೀವ ಚ ಮನೋ ನ ಚೈನದುಪಸ್ಮರತ್ಯ-
ಭೀಕ್ಷ್ಣಂ ಸಂಕಲ್ಪಃ ॥ ೫ ॥

ತದ್ಧ ತದ್ವನಂನಾಮ ತದ್ವನಮಿತ್ಯುಪಾಸಿತವ್ಯಮ್ । ಸ ಯ ಏತದೇವಂ
ವೇದ, ಅಭಿ ಹೈನಂ ಸರ್ವಾಣಿ ಭೂತಾನಿ ಸಂವಾಂಛನ್ತಿ ॥ ೬ ॥

ಉಪನಿಷದಂ ಭೋ ಬ್ರೂಹೀತಿ । ಉಕ್ತಾ ತ ಉಪನಿಷತ್ । ಬ್ರಾಹ್ಮೀಂ
ವಾವ ತ ಉಪನಿಷದಮಬ್ರೂಮೇತಿ ॥ ೭ ॥

ತಸ್ಮೈ ತಪೋ ದಮಃ ಕರ್ಮೇತಿ ಪ್ರತಿಷ್ಠಾ ; ವೇದಾಃ ಸರ್ವಾಂಗಾನಿ ಸತ್ಯಮಾಯತನಮ್ ॥೮॥

ಯೋ ವಾ ಏತಾಮೇವಂ ವೇದ, ಅಪಹತ್ಯ ಪಾಪ್ಮಾನಮನಂತೇ ಸ್ವರ್ಗೇ
ಲೋಕೇ ಜ್ಯೇಯೇ ಪ್ರತಿತಿಷ್ಠತಿ ಪ್ರತಿತಿಷ್ಠತಿ ॥ ೯ ॥

॥ ಇತಿ ಚತುರ್ಥಃ ಖಂಡಃ ॥

॥ ಇತಿ ಸಾಮವೇದೀಯ ತಲವಕಾರೋಪನಿಷತ್ ॥

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"Forwarded free of cost, and with the Compliments of the Department of Education, Government of India, New Delhi."

ಕೇನೋಪನಿಷತ್

(ಸಂಸ್ಕೃತಮೂಲ-ಕನ್ನಡಮೂಲ-ಪ್ರತಿಪದಾರ್ಥ-ತಾತ್ಪರ್ಯ-
ರಂಗರಾಮಾನುಜಭಾಷ್ಯ-ಭಾಷಾಂತರ-ಭಾಷ್ಯಸಾರ ಸಹಿತ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

केनोपनिषत्

(तलवकारोपनिषत्)

[सामवेदशान्तिपाठः[1]]

ओं आप्यायन्तु ममाङ्गानि वाक्प्राणश्चक्षुः श्रोत्रमथो बलमिन्द्रियाणि च सर्वाणि । सर्वं ब्रह्मो(ह्मौ)पनिषदम् । माऽहं ब्रह्म निराकुर्यांम् । मा मा ब्रह्म निराकरोत् । अनिराकरणमस्तु । अनिराकरणं मेऽस्तु तदात्मनि निरते य उपनिषत्सु धर्मास्ते मयि सन्तु ते मयि सन्तु । ओं शान्तिः शान್तिः शान्तिः ॥

ಕೇನೋಪನಿಷತ್

(ತಲವಕಾರೋಪನಿಷತ್)

(ಸಾಮವೇದ ಶಾಂತಿಪಾಠ)

ಓಮ್ ಆಪ್ಯಾಯಂತು ಮಮಾಂಗಾನಿ ವಾಕ್ಪ್ರಾಣಶ್ಚಕ್ಷುಃ ಶ್ರೋತ್ರಮಥೋ ಬಲ ಮಿಂದ್ರಿಯಾಣಿ ಚ ಸರ್ವಾಣಿ । ಸರ್ವಂ ಬ್ರಹ್ಮೋ(ಹ್ಮೌ)ಪನಿಷದಮ್ ಮಾಽಹಂ ಬ್ರಹ್ಮ ನಿರಾ ಕುರ್ಯಾಮ್ । ಮಾ ಮಾ ಬ್ರಹ್ಮ ನಿರಾಕರೋತ್ । ಅನಿರಾಕರಣಮಸ್ತು । ಅನಿರಾಕರಣಂ ಮೇಽಸ್ತು । ತದಾತ್ಮನಿ ನಿರತೇ ಯ ಉಪನಿಷತ್ಸು ಧರ್ಮಾಸ್ತೇ ಮಯಿ ಸಂತು ತೇ ಮಯಿ ಸಂತು । ಓಮ್ ಶಾಂತಿಃ ಶಾಂತಿಃ ಶಾಂತಿಃ ॥

ತಾತ್ಪರ್ಯ

ನನ್ನ ಅವಯವಗಳೂ, ಪ್ರಾಣವಾಣಿಗಳೂ, ಕಣ್ಣು ಕಿವಿಗಳೂ, ಇತರ ಎಲ್ಲ ಇಂದ್ರಿಯ ಗಳೂ ಬಲಗೊಳ್ಳಲಿ. ಸರ್ವಾತ್ಮಕವಾದ ಬ್ರಹ್ಮದ ವಿಷಯವೆಲ್ಲವೂ ಉಪನಿಷತ್ತಿನಲ್ಲಿದೆ. ನಾನಂ ಬ್ರಹ್ಮವನ್ನು ನಿರಾಕರಿಸದಂತಾಗಲಿ. ಬ್ರಹ್ಮವು ನನ್ನನ್ನು ನಿರಾಕರಿಸದಿರಲಿ. ಬ್ರಹ್ಮ ದಿಂದ ನನ್ನ ನಿರಾಕರಣವಾಗದಿರಲಿ. ನನ್ನಿಂದ ಬ್ರಹ್ಮದ ನಿರಾಕರಣವಾಗದಿರಲಿ. ಉಪನಿಷತ್ತು ಗಳಲ್ಲಿ ಹೇಳಿರುವ ಎಲ್ಲ ಧರ್ಮಗಳೂ ಆತ್ಮನಿರತನಾದ ನನ್ನಲ್ಲಿ ನೆಲೆಗೊಳ್ಳಲಿ, ಬೇರೂರಲಿ.

1. ಉಪನಿಷತ್ಪಾಠದ ಆರಂಭದಲ್ಲಿ ವಿಘ್ನಪರಿಹಾರಕ್ಕಾಗಿ ಶಾಂತಿಪಾಠ ಹೇಳುವ ಸಂಪ್ರದಾಯವಿದೆ. ಇವು ಶಾಖಾಭೇದದಿಂದ ಭಿನ್ನಭಿನ್ನವಾಗಿವೆ ಎಂದು ಮುಕ್ತಿಕೋಪನಿಷತ್ತಿನಲ್ಲಿ ಹೇಳಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉಪನಿಷತ್ತಿನ ಉಪದೇಶ

ಈಶಾವಾಸ್ಯೋಪನಿಷತ್ತಿನಲ್ಲಿ ಹೇಳಿದಂತೆ ಈ ಉಪನಿಷತ್ತಿನಲ್ಲೂ ಆರಂಭದಲ್ಲಿ 'ಕೇನೇಷಿತಂ ಪತತಿ ಪ್ರೇಷಿತಂ ಮನಃ' ಮುಂತಾದವುಗಳಿಂದ ಕೇಳಿದ 'ಈ ಜಗತ್ತೆಲ್ಲವೂ ಯಾವ ದೇವನಿಂದ ಪ್ರೇರೇಪಿಸಲ್ಪಟ್ಟು ಚಲಿಸುತ್ತದೆ' ಎಂಬ ಪ್ರಶ್ನೆಗೆ ಅನುಗುಣವಾಗಿ 'ಯದ್ವಾಚಾನಭ್ಯುದಿತಂ' ಮುಂತಾದವುಗಳಿಂದ ಈ ಜಗತ್ತೆಲ್ಲವೂ ಪರಮಾತ್ಮನಿಂದ ಪ್ರಕಾಶಗೊಂಡಿದೆ. ಆ ಪರಬ್ರಹ್ಮವು ಯಾವುದರಿಂದಲೂ ಪ್ರಕಾಶ್ಯವಲ್ಲ. ಅದು ಸ್ವಯಂಪ್ರಕಾಶ ಎಂದು ಹೇಳಿದೆ.

ಮತ್ತೆ 'ಇಹಚೇದವೇದೀನ್ಮಹತೀವಿನಷ್ಟಿಃ' ಮುಂತಾದವುಗಳಿಂದ ಬ್ರಹ್ಮವನ್ನು ಅರಿತರೆ ಮುಕ್ತಿ, ಅರಿಯದಿದ್ದರೆ ಸಂಸಾರಬಂಧನವೆಂದೂ, 'ತಸ್ಮೈತೃಣಂ ನಿದಧೌ ಏತದ್ದಹ' ಮುಂತಾದವುಗಳಿಂದ ಅಗ್ನಿ, ವಾಯು, ಇಂದ್ರಾದಿಗಳಿಗೂ ಶಕ್ತಿಯಿಲ್ಲವೆಂಬುದನ್ನೂ, ಯಕ್ಷರೂಪ ಬ್ರಹ್ಮವು ಸರ್ವಶಕ್ತವೂ, ಸ್ವತಂತ್ರವೂ ಆಗಿರುವುದೆಂಬುದನ್ನೂ ಹೇಳಿದೆ.

ಕೊನೆಯಲ್ಲಿ 'ಯೋವಾ ಏತಾಮೇವಂ ವೇದ ಅಪಹತ್ಯ ಪಾಪ್ಮಾನಂ ಅನಂತೇ ಸ್ವರ್ಗೇ ಜ್ಯೇಯೇ ಪ್ರತಿತಿಷ್ಠತಿ' ಮುಂತಾದವುಗಳಿಂದ ಈ ಬ್ರಹ್ಮವಿದ್ಯೆ ಅರಿತವರಿಗೆ ಶಾಶ್ವತ ವೈಕುಂಠವಾಸವುಂಟಾಗುತ್ತದೆ ಎಂಬ ವಿಷಯಗಳನ್ನು ಹೇಳಿದೆ.

'ಮೊದಲು ನಿರ್ವಿಶೇಷ ಚಿನ್ಮಾತ್ರ ಪರಬ್ರಹ್ಮವಿದೆ. ಅದು ಮಾಯಾ ಅವಿದ್ಯಾವರಣದಿಂದ ಭ್ರಾಂತವಾಗುವುದು. ಆಪ್ತನ ಉಪದೇಶದಿಂದ ಈ ಮಾಯಾ, ಅವಿದ್ಯೆಗಳು ನಾಶವಾಗಿ ಪುನಃ ಬ್ರಹ್ಮಭಾವ ಬರುತ್ತದೆ ಎಂಬ ವಿಷಯಗಳನ್ನು ಉಪದೇಶಿಸುವುದಿಲ್ಲ' ಎಂಬುದು ಕೇನೋಪನಿಷತ್ತಿನ ಉಪದೇಶ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಥಮಖಂಡ

ಮಂತ್ರ ೧

हरिः ओम्

केनेषितं पतति प्रेषितं मनः
केन प्राणः प्रथमः प्रैति युक्तः ।
केनेषितां वाचमिमां वदन्ति
चक्षुःश्रोत्रं क उ देवो युनक्ति ॥

ಹರಿಃ ಓಮ್

ಕೇನೇಷಿತಂ ಪತತಿ ಪ್ರೇಷಿತಂ ಮನಃ
ಕೇನ ಪ್ರಾಣಃ ಪ್ರಥಮಃ ಪ್ರೈತಿ ಯುಕ್ತಃ ।
ಕೇನೇಷಿತಾಂ ವಾಚಮಿಮಾಂ ವದಂತಿ
ಚಕ್ಷುಶ್ಶ್ರೋತ್ರಂ ಕ ಉ ದೇವೋ ಯುನಕ್ತಿ ॥

ಪ್ರತಿಪದಾರ್ಥ

ಮನಃ-ಮನಸ್ಸು, ಕೇನ-ಯಾರಿಂದ, ಪ್ರೇಷಿತಮ್-ಪ್ರೇರೇಪಿಸಲ್ಪಟ್ಟು, ಇಷಿತಮ್-ಇಷ್ಟವಾದ ವಸ್ತುವನ್ನು, ಪತತಿ-ಹೋಗಿ ಸೇರುತ್ತದೆ. ಪ್ರಥಮಃ ಪ್ರಾಣಃ-ಮುಖ್ಯವಾದ ಪ್ರಾಣವು, ಕೇನ ಯುಕ್ತಃ-ಯಾವನಿಂದ ಪ್ರೇರೇಪಿಸಲ್ಪಟ್ಟು. ಪ್ರೈತಿ-ತನ್ನ ಕಾರ್ಯ ಮಾಡುತ್ತದೆ. ಕೇನ (ಪ್ರೇರಿತಾಃ ಜನಾಃ)-ಜನರು ಯಾವನಿಂದ ಪ್ರೇರೇಪಿಸಲ್ಪಟ್ಟು, ಇಷಿತಾಂ ಇಮಾಂ ವಾಚಮ್-ಇಷ್ಟವಾದ ಈ ಮಾತನ್ನು, ವದಂತಿ-ಹೇಳುತ್ತಾರೆ. ಚಕ್ಷುಃ ಶ್ರೋತ್ರಮ್-ಕಣ್ಣು ಕಿವಿಗಳನ್ನು, ಕ ಉ ದೇವಃ-ಯಾವ ದೇವನು, ಯುನಕ್ತಿ-ಪ್ರೇರೇಪಿಸುತ್ತಾನೆ.

ತಾತ್ಪರ್ಯ

ಮನುಷ್ಯನು ಬುದ್ಧಿಜೀವಿ. ಯಾವುದೇ ಜ್ಞಾನವಾಗಲೀ ಅವನಿಗೆ ಇಂದ್ರಿಯಗಳಿಂದಲೇ ಉಂಟಾಗಬೇಕು. ಕಣ್ಣು (ಚಕ್ಷುಃ), ಕಿವಿ (ಶ್ರೋತ್ರಂ), ಮನಸ್ಸು (ಮನಃ), ಮಾತು (ವಾಕ್), ಪ್ರಾಣ (ಪಾಣಃ), ಎಂಬ ಈ ಐದು ಇಂದ್ರಿಯಗಳು ಉಪನಿಷತ್ತುಗಳಲ್ಲಿ ಹೇಳಿರುವ ಬ್ರಹ್ಮಜ್ಞಾನಕ್ಕೂ ಸಾಧನಗಳಾಗಿವೆ. ಆದರೆ ಸಹಜವಾಗಿ ಇವು ಬ್ರಹ್ಮದತ್ತ ನಡೆಯುವುದು ಕಾಣಸಿಗದು. ಬ್ರಹ್ಮಜ್ಞಾನವಿಲ್ಲದೆ ಪರಮಾನಂದಕ್ಕೆ ಕಾರಣವಾದ ಅಮೃತತ್ವ ದೊರಕಲಾರದು. ಈ ಇಂದ್ರಿಯಗಳನ್ನು ಅಂಕೆಗೆ ಒಳಪಡಿಸಿ ಬ್ರಹ್ಮದತ್ತ ಸಂಚರಿಸುವಂತೆ ಮಾಡಿದಾಗ ಮಾತ್ರ ಬ್ರಹ್ಮಜ್ಞಾನ ಸಾಧ್ಯ. ಆದ್ದರಿಂದ ಶಿಷ್ಯನು ಆಚಾರ್ಯನನ್ನು ಸಮೀಪಿಸಿ ಈ ರೀತಿ ಕೇಳುತ್ತಾನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬ್ರಹ್ಮಜ್ಞಾನಸಾಧನವಾದ ಈ ಇಂದ್ರಿಯಗಳಿಗೆ ಪ್ರೇರಕನಾರು ? ಅವನ ಅನುಗ್ರಹದಿಂದ ಮಾತ್ರ ಇಂದ್ರಿಯಗಳನ್ನು ವಶಪಡಿಸುವುದು ಸಾಧ್ಯ.

'ಶಿಷ್ಯನ ಪ್ರಶ್ನೆ-ಆಚಾರ್ಯನ ಉತ್ತರ' ಈ ರೂಪದಲ್ಲಿ ಕೇನೋಪನಿಷತ್ತು ಬ್ರಹ್ಮ ಸ್ವರೂಪವನ್ನು ವಿವರಿಸುತ್ತದೆ.

'ಮನಸ್ಸು, ಮುಖ್ಯಪ್ರಾಣ, ಕಣ್ಣು, ಕಿವಿ ಮುಂತಾದ ಕರಣ(ಇಂದ್ರಿಯ)ಗಳು ಯಾರಿಂದ ಪ್ರೇರಿತವಾಗಿ ವಿಷಯದತ್ತ ಹೋಗುವುವು ? ಶರೀರಧಾರಣೆ, ನೋಟ, ಕೇಳುವುದು ಮುಂತಾದ ತಮ್ಮ ಕಾರ್ಯಗಳನ್ನು ಮಾಡುತ್ತವೆ ? ಜನರು ಯಾರಿಂದ ಪ್ರೇರಿತರಾಗಿ ಮಾತಿನ ಮೂಲಕ ವ್ಯವಹರಿಸುತ್ತಾರೆ ?' ಎಂದು ಬ್ರಹ್ಮಜಿಜ್ಞಾಸುವಾದ ಶಿಷ್ಯನು ಆಚಾರ್ಯನಲ್ಲಿ ಕೇಳಿದನು.

ರಂಗರಾಮಾನುಜಭಾಷ್ಯ

ಪರಮಾತ್ಮಸ್ವರೂಪಂ ಪ್ರಶ್ನಪ್ರತಿವಚನರೂಪಪ್ರಕಾರೇಣ (ಪ್ರಕಾರರೂಪೇಣ) ಪ್ರಕಾಶ ಯಿತುಂ ಪ್ರಸ್ತೌತಿ—"ಕೇನೇಷಿತಂ ಪತತಿ ಪ್ರೇಷಿತಂ ಮನಃ ಕೇನ ಪ್ರಾಣಃ ಪ್ರಥಮಃ ಪ್ರೈತಿ ಯುಕ್ತಃ । ಕೇನೇಷಿತಾಂ ವಾಚಮಿಮಾಂ ವದಂತಿ ಚಕ್ಷುಶ್ಶ್ರೋತ್ರಂ (ತ್ರೇ) ಕ ಉ ದೇವೋ ಯುನಕ್ತಿ" । ಮನಃ ಕೇನ ವಾ (?) ಪ್ರೇಷಿತಮ್ ಪ್ರೇರಿತಂ ಸತ್ ಸ್ವವಿಷಯೇ ಪ್ರವರ್ತತೇ ಇತಿ ಭಾವಃ। ಇಷಿತಮ್-ಇಷ್ಟಂ, ಮತಮ್। ಪ್ರಾಣಾನಾಂ ಮಧ್ಯೇ ಪ್ರಥಮಃ ಪ್ರಾಣಃ-ಮುಖ್ಯ ಪ್ರಾಣಃ ಕೇನ ಪ್ರೇರಿತಃ ಸನ್ ಪ್ರೈತಿ-ಪ್ರಕರ್ಷೇಣ ಸಂಚರತಿ ? ತಥಾ ಕೇನ ವಾ ಪ್ರೇರಿತಾಂ ಇಮಾಂ ವಾಚಮ್-ವಾಗಿಂದ್ರಿಯಮವಲಂಬ್ಯ ವ್ಯವಹರಂತಿ ಲೋಕಾಃ ? ತಥಾ ಚಕ್ಷುಃ ಶ್ರೋತ್ರಯೋಶ್ಚ ಕಃ ಪ್ರೇರಕಃ ? ಅಚೇತನಾನಾಂ ಏಷಾಂ ಚೇತನಾಪ್ರೇರಿತಾನಾಂ ಕಾರ್ಯ ಕರತ್ವಾಸಂಭವಾತ್-ಇತಿ ಗುರುಮುಪೇತ್ಯ ಶಿಷ್ಯಃ ಪಪ್ರಚ್ಛ ಇತ್ಯರ್ಥಃ ।

ಭಾಷಾಂತರ

ಪರಮಾತ್ಮನ ಸ್ವರೂಪವನ್ನು ಪ್ರಶ್ನೆ ಮತ್ತು ಉತ್ತರಗಳ ರೂಪದಲ್ಲಿ (ರೀತಿಯಿಂದ) ಪ್ರಕಾಶಪಡಿಸಲು ಪ್ರಸ್ತಾಪ ಮಾಡುತ್ತಾನೆ. — "ಕೇನೇಷಿತಂ ಪತತಿ ಪ್ರೇಷಿತಂ ಮನಃ ಕೇನ ಪ್ರಾಣಃ ಪ್ರಥಮಃ ಪ್ರೈತಿ ಯುಕ್ತಃ । ಕೇನೇಷಿತಾಂ ವಾಚಮಿಮಾಂ ವದಂತಿ ಚಕ್ಷುಶ್ಶ್ರೋತ್ರಂ (ತ್ರೇ) ಕ ಉ ದೇವೋ ಯುನಕ್ತಿ" । ಮನಸ್ಸು ಯಾರಿಂದ ಪ್ರೇಷಿತಮ್-ಪ್ರೇರೇಪಿಸಲ್ಪಟ್ಟು ತನ್ನ ವಿಷಯಗಳಲ್ಲಿ ತೊಡಗುತ್ತದೆ ? ಇಷಿತಮ್—ಇಷ್ಟವಾದುದು, ಅಭಿಮತವಾದುದು. ಪ್ರಾಣಗಳ ನಡುವೆ ಪ್ರಥಮಃ ಪ್ರಾಣಃ-ಮುಖ್ಯವಾದ ಪ್ರಾಣವು ಯಾರಿಂದ ಪ್ರೇರಿತವಾಗಿ ಪ್ರೈತಿ-ಭರದಿಂದ ಸಂಚರಿಸುತ್ತದೆ ? ಹಾಗೆಯೇ ಯಾರಿಂದ ಪ್ರೇರೇಪಿಸಲ್ಪಟ್ಟು ಈ ವಾಚಮ್-ವಾಗಿಂದ್ರಿಯವನ್ನು ಆಶ್ರಯಿಸಿ ಜನರು ವ್ಯವಹಾರ (ಶಬ್ದಪ್ರಯೋಗ) ವನ್ನು ಮಾಡುತ್ತಾರೆ ? ಅದರಂತೆ ಕಣ್ಣು-ಕಿವಿಗಳಿಗೆ ಪ್ರೇರಕನು ಯಾರು ? ಏಕೆಂದರೆ ಜಡವಾದ ಇವು (ಇಂದ್ರಿಯ ಗಳು) ಚೇತನನಿಂದ ಪ್ರೇರಿತವಾಗದೇ (ತಮ್ಮ ತಮ್ಮ) ಕಾರ್ಯಗಳನ್ನು ನಿರ್ವಹಿಸುವುದು ಸಾಧ್ಯವಿಲ್ಲ. ಹೀಗೆ ಶಿಷ್ಯನು ಗುರುವನ್ನು ಸಮೀಪಿಸಿ ಪ್ರಶ್ನೆಕೇಳಿದನು ಎಂದು ಅಭಿಪ್ರಾಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾಷ್ಯಸಾರಭೂಮಿಕೆ

ಕ್ಷೀರಸಮುದ್ರಮಥನಕ್ಕಾಗಿ ಕೂರ್ಮರೂಪ ತಳೆದು ಮಂದರಪರ್ವತವನ್ನು ಹೊತ್ತವನೂ, ಕ್ರೂರರಾಕ್ಷಸರನ್ನು ಸಂಹರಿಸಿದವನೂ ಆದ ಹರಿಯನ್ನೂ[1], ಶಬರಿಗೆ ಬದರೀ ಫಲವಿತ್ತುದಕ್ಕಾಗಿ ಮೋಕ್ಷಕೊಟ್ಟವನೂ, ಬ್ರಹ್ಮರುದ್ರಾದಿವಂದ್ಯನೂ, ಸದ್ಗುಣ ಸಾಗರನೂ, ದಿವ್ಯದೇಹಿಯೂ ಆದ ಶ್ರೀರಾಮನನ್ನೂ,[2] ದೇವಾದಿದೇವನೂ, ದೇವಾದಿಗಳಿಂದ ಅಪ್ರಕಾಶ್ಯನೂ, ವಾಯು ಅಗ್ನಿ ಮುಂತಾದ ದೇವತೆಗಳಿಗೆ ಕಾರ್ಯಸಾಮರ್ಥ್ಯವನ್ನಿತ್ತವನೂ, ಉಪನಿಷತ್ಪ್ರತಿಪಾದ್ಯನೂ ಆದ ನಾರಾಯಣನನ್ನೂ[3] ನಮಸ್ಕರಿಸಿ, ಲಕ್ಷ್ಮೀಪತಿಯಾದ ನಾರಾಯಣನಿಂದ ಆರಂಭಿಸಿ ಈವರೆಗೂ ಬಂದಿರುವ ಗುರುಪರಂಪರೆಯನ್ನೂ ನಮಿಸಿ ಈ ಭಾಷ್ಯಸಾರವನ್ನು ಅಳವಡಿಸುತ್ತೇವೆ.

ಭಾಷ್ಯಸಾರ

ಶಿಷ್ಯನೊಬ್ಬನಿಗೆ ಬ್ರಹ್ಮಜ್ಞಾನದ ಹಂಬಲ. ಜ್ಞಾನವು ಇಂದ್ರಿಯಗಳ ಮೂಲಕವೇ ಸಾಧ್ಯ. ಬ್ರಹ್ಮಜ್ಞಾನವೂ ಅಷ್ಟೇ. ಆದರೆ, ಈ ಇಂದ್ರಿಯಗಳೋ ನಾವು ಹೇಳಿದಂತೆ ಕೇಳವು. ಅಚೇತನವಾದ ಈ ಇಂದ್ರಿಯಗಳಿಗೆ ಪ್ರೇರಕನೊಬ್ಬನಿರಲೇಬೇಕು. ನಮ್ಮ ಪ್ರೇರಣೆಯಂತೆ ಅವು ನಡೆಯುವುದಿಲ್ಲ. ಆದ್ದರಿಂದ ನಮಗಿಂತ ಬೇರೊಬ್ಬ ಪ್ರೇರಕನಿರಬೇಕು, ಅಂತಹ ಪ್ರೇರಕನ ಅನುಗ್ರಹದಿಂದ ಮಾತ್ರ ಇಂದ್ರಿಯಗಳನ್ನು ನಮ್ಮ ವಶದಲ್ಲಿಟ್ಟುಕೊಳ್ಳಬಹುದು. ಆಗಲೇ ಬ್ರಹ್ಮಜ್ಞಾನ ಸಾಧ್ಯ. ಈ ರೀತಿ ಯೋಚಿಸಿ ಬ್ರಹ್ಮಜಿಜ್ಞಾಸುವಾದ ಶಿಷ್ಯನೊಬ್ಬನು 'ಇಂದ್ರಿಯಗಳಿಗೆ ಪ್ರೇರಕನಾರು'? ಎಂದು ಆಚಾರ್ಯನನ್ನು ಕೇಳುತ್ತಾನೆ.

ಕತ್ತಿ, ಕೊಡಲಿ, ಲೇಖನಿ ಮೊದಲಾದವು ಉಪಕರಣಗಳು. ಇವು ಜಡವಸ್ತುಗಳು. ಇವನ್ನು ಮನುಷ್ಯನು ಉಪಯೋಗಿಸಿದಾಗ ಮಾತ್ರ ಅವು ಕಾರ್ಯಸಮರ್ಥವಾಗುತ್ತವೆ. ಅಚೇತನಗಳಾದ ಇವು ತಮಗೆ ತಾವೇ 'ಕತ್ತರಿಸುವುದು', 'ಬರೆಯುವುದು' ಮೊದಲಾದ ಕೆಲಸಗಳನ್ನು ಮಾಡಲಾರವು. ಅಂತೆಯೇ ಮನಸ್ಸು ಮೊದಲಾದ ಇಂದ್ರಿಯಗಳೂ ಜಡವಸ್ತುಗಳು. ಇವು ಮತ್ತೊಬ್ಬ ಚೇತನನ ಸಹಾಯವಿಲ್ಲದೆ ತಮ್ಮ ಕೆಲಸ ಮಾಡಲಾರವು. ಯಾವುದೇ ಜ್ಞಾನವನ್ನುಂಟುಮಾಡಲು ಚೇತನನಿಂದ ಪ್ರೇರಿತವಾದಾಗ ಮಾತ್ರ ಇವು ಸಾಧನಗಳಾಗುತ್ತವೆ.

---

1. ಕ್ಷೀರೋದಧೇರ್ಮಂಥನಾಯ ಮಂದರಂ ಧೃತವಾಂಶ್ಚ ಯಃ । ಕೂರ್ಮಮೂರ್ತಿಂ ಹರಿಂ ವಂದೇ ಕ್ರೂರರಾಕ್ಷಸಸೂದನಮ್ ॥ (ಪ್ರತಿಪದಾರ್ಥ ದೀಪಿಕೆ)
2. ಬದರೀಫಲಮಪಿದತ್ವಾ ಶಬರೀ ಲೇಭೇ ಗತಿಂ ಯತಃ ಪರಮಾಮ್ । ತಮಹಂ ದೇವಂ ವಂದೇऽನುಪಧಿ–ದಯಾಸಾಗರಂ ರಾಮಮ್ ॥ (ಆನಂದಭಾಷ್ಯ)
3. ದೇವಾನಾಮಪಿ ಯೋ ದೇವೋ ನ ದೇವಾ ದ್ಯೋತಯಂತಿ ಯಮ್ । ಅಮತಸ್ತು ಮತೋ ಯೋऽಸೌ ತಮಾನಂದಘನಂ ಶ್ರಯೇ ॥ ವಾತಿ ವಾಯುರ್ದಹತ್ಯಗ್ನಿಃ ಯೇನೈವಾಹಿತಶಕ್ತಿಕಃ । ತಮೇತಮೌಪನಿಷದಂ ನಾರಾಯಣಮುಪಾಸ್ಮಹೇ ॥ (ಸುಬೋಧಿನೀ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮನಸ್ಸು, ಕಣ್ಣು, ಕಿವಿ ಮುಂತಾದ ಸಾಧನಗಳನ್ನು ಪ್ರೇರಿಸುವವನು ಜೀವನಲ್ಲವೇ! ನಮ್ಮ ಇಚ್ಛೆಗೆ ಅನುಗುಣವಾಗಿ ಇಂದ್ರಿಯಗಳು ಕೆಲಸಮಾಡುತ್ತಿವೆಯಲ್ಲವೇ! ಆದ್ದರಿಂದ ಈ ಜೀವನೇ ಇಂದ್ರಿಯಗಳಿಗೆ ಏಕೆ ಪ್ರೇರಕನಾಗಬಾರದು? ಎಂಬ ಪ್ರಶ್ನೆ ಉದ್ಭವಿಸ ಬಹುದು. ಆದರೆ ಜೀವನು ಇಂದ್ರಿಯಗಳಿಗೆ ಪ್ರೇರಕನಾಗಲಾರನು ಎಂಬುದು ಅನುಭವ ದಿಂದ ತಿಳಿಯುತ್ತದೆ. ಶಾಸ್ತ್ರಾಧ್ಯಯನ ಮಾಡಿರುವ ಜೀವಾತ್ಮನಿಗೆ 'ಇದನ್ನು ಮಾಡಬೇಕು, ಇದನ್ನು ಮಾಡಬಾರದು' ಎಂಬ ವಿಧಿನಿಷೇಧಗಳ ತಿಳಿಯಾದ ಜ್ಞಾನವಿದೆ. ಅದನ್ನು ಅನು ಸರಿಸಬೇಕೆಂಬ ಇಚ್ಛೆಯಿಂದ ವಿಹಿತ ವಿಷಯಗಳಲ್ಲಿ ಪ್ರವೃತ್ತಿಯೂ, ನಿಷಿದ್ಧವಿಷಯಗಳಲ್ಲಿ ನಿವೃತ್ತಿಯೂ ಉಂಟಾಗಬೇಕಾದುದು ಸಹಜ. ಆದರೆ ಇಂದ್ರಿಯಗಳು ಜೀವಾತ್ಮನ ಇಚ್ಛೆಗೆ ವಿರುದ್ಧವಾಗಿ ನಿಷಿದ್ಧ ವಿಷಯಗಳಲ್ಲಿ ಪ್ರವರ್ತಿಸುವುದೂ ವಿಹಿತವಿಷಯಗಳಿಂದ ನಿವೃತ್ತವಾಗು ವುದೂ ಅನುಭವದಿಂದ ತಿಳಿದಿದೆ. ಜೀವಾತ್ಮನೇ ಇಂದ್ರಿಯಗಳಿಗೆ ಪ್ರೇರಕನಾಗಿದ್ದ ಪಕ್ಷದಲ್ಲಿ ಈ ರೀತಿ ಆಗುತ್ತಿರಲಿಲ್ಲ. ಆದ್ದರಿಂದ ಜೀವಾತ್ಮನಿಗಿಂತ ಬೇರೆಯಾದ ಮತ್ತೊಬ್ಬ ಪ್ರೇರಕನು ಇರಬೇಕು ಎಂದೆನಿಸುತ್ತದೆ. ಇಂತಹ ಪ್ರೇರಕನಾರು? ಎಂಬುದೇ ಶಿಷ್ಯನ ಪ್ರಶ್ನೆ.

ಮನಸ್ಸು ತನಗೆ ಇಷ್ಟವಾದ ವಿಷಯಗಳಲ್ಲಿ ನೆಲೆಗೊಳ್ಳುತ್ತದೆ. 'ಕೇನೇಷಿತಂ ಪತತಿ ಪ್ರೇಷಿತಂ ಮನಃ' ಎಂಬಲ್ಲಿ ಇಷಿತಂ ಎಂಬ ಪದಕ್ಕೆ ಇಷ್ಟವಾದದ್ದು ಎಂದರ್ಥ. ಮನಸ್ಸು ಇಷ್ಟವಾದ ವಿಷಯಗಳತ್ತ ಧಾವಿಸುವಂತೆ ಅನಿಷ್ಟವಾದ ವಿಷಯಗಳತ್ತಲೂ ಓಡುತ್ತದೆ. ಇಷಿತಂ ಎಂಬ ಪದವು ಉಪಲಕ್ಷಣ ವಿಧಯಾ[1] ಅನಿಷ್ಟ ವಿಷಯಗಳನ್ನೂ ಸೂಚಿಸುತ್ತದೆ ಎಂಬ ದೃಷ್ಟಿಯಿಂದ, ಯಾರ ಪ್ರೇರಣೆಯಿಂದ ಮನಸ್ಸು ಇಷ್ಟಾನಿಷ್ಟ ವಿಷಯಗಳಲ್ಲಿ ಹೋಗಿ ಸೇರುತ್ತದೆ ಎಂದು ಭಾಷ್ಯಕಾರರು ವ್ಯಾಖ್ಯಾನಿಸಿದ್ದಾರೆ.

ಮನಸ್ಸಿಗೆ ಜೀವನೇ ಪ್ರೇರಕನೆಂಬುದು ತರವಲ್ಲ. ಕಾರಣ ಮನಸ್ಸು ಜೀವನು ಇಷ್ಟ ಪಡದ ವಿಷಯಗಳಲ್ಲೂ ಪ್ರವರ್ತಿಸುವುದಲ್ಲವೇ? ಜೀವನ ತಡೆಯನ್ನೂ ಮೀರಿ ಪ್ರವರ್ತಿಸುವ ಮನಸ್ಸಿಗೆ ಅವನಿಗಿಂತ ಪ್ರಬಲನಾದ ಮತ್ತೊಬ್ಬ ಪ್ರೇರಕನಿರಬೇಕು. ಅವನಾರು? ಎಂಬುದೇ 'ಕೇನೇಷಿತಂ ಪತತಿ ಪ್ರೇಷಿತಂ ಮನಃ' ಎಂಬ ಪ್ರಶ್ನೆಯ ತಾತ್ಪರ್ಯ.

ಶರೀರದಲ್ಲಿ ಪ್ರಾಣವುಸಂಚರಿಸುತ್ತಿದ್ದಾಗ ಶರೀರವು ಜೀವಂತವಾಗಿರುತ್ತದೆ. ಹೀಗೆ ಶರೀರ ದಲ್ಲಿ ಸಂಚರಿಸುವ ವಾಯುವಿಗೆ ಸಂಚರಿಸುವ ಸ್ಥಾನಕ್ಕೆ ಅನುಗುಣವಾಗಿ ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ ಎಂಬ ಐದು ಹೆಸರುಗಳಿವೆ. ಹೃದಯಸ್ಥಾನದಲ್ಲಿ ಸಂಚರಿಸುವ ವಾಯುವಿಗೆ 'ಪ್ರಾಣ' ಎಂದು ಹೆಸರು. ಇದನ್ನೇ 'ಮುಖ್ಯ ಪ್ರಾಣ' ಎಂದು ಕರೆಯುವು ದುಂಟು. ಪ್ರಶ್ನೋಪನಿಷತ್ತಿನಲ್ಲಿ "ಎಲೈ ಆಕಾಶಾದಿಗಳೇ ನಾವೇ ಶರೀರಧಾರಕರೆಂಬ ಅಭಿಮಾನವನ್ನು ತೊರೆಯಿರಿ. ನಾನೇ ನನ್ನನ್ನು ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನವೆಂದು ಐದು ವಿಧವಾಗಿ ವಿಭಾಗ ಮಾಡಿಕೊಂಡು ಈ ಶರೀರವನ್ನು ವ್ಯಾಪಿಸಿ

1. ತನ್ನರ್ಥದೊಡನೆ ತನಗೆ ಸಮಾನವಾದ ಮತ್ತೊಂದು ಅರ್ಥವನ್ನು ಸೂಚಿಸುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧರಿಸಿದ್ದೇನೆ[1]" ಎಂದು ಹೇಳಿದೆ. ಇದರಿಂದ ಶರೀರಧಾರಣೆಯೇ ಪ್ರಾಣದ ಕೆಲಸ ಎಂದು ತಿಳಿಯುತ್ತದೆ. ಯಾರ ಪ್ರೇರಣೆಯಿಂದ ಅಚೇತನವಾದ ಈ ಮುಖ್ಯ ಪ್ರಾಣವು ಶರೀರದಲ್ಲಿ ಉತ್ಕೃಷ್ಟವಾಗಿ ಸಂಚರಿಸುತ್ತಾ ಶರೀರಧಾರಣೆ ಮಾಡುತ್ತದೆ ಎಂಬುದು 'ಕೇನ ಪ್ರಾಣಃ ಪ್ರಥಮಃ ಪ್ರೈತಿ ಯುಕ್ತಃ' ಎಂಬ ಪ್ರಶ್ನೆಯ ಸಾರಾರ್ಥ.

ಮುಂದಿನ ಪ್ರಶ್ನೆ ಕರ್ಮೇಂದ್ರಿಯಗಳಿಗೆ ಸಂಬಂಧಪಟ್ಟಿದ್ದು. ಈ ವಾಕ್ (ಮಾತು), ಪಾಣಿ (ಕೈಗಳು), ಪಾದ (ಕಾಲುಗಳು), ಪಾಯು (ಆಸನ), ಉಪಸ್ಥ (ಜನನೇಂದ್ರಿಯ) ಎಂಬುವು ಐದು ಕರ್ಮೇಂದ್ರಿಯಗಳು. ಇದರಲ್ಲಿ ವಾಕ್‌ಎಂಬ ಕರ್ಮೇಂದ್ರಿಯದಿಂದ ಜನರು ಇಷ್ಟವಾದ ಅಥವಾ ಅನಿಷ್ಟವಾದ ಮಾತುಗಳನ್ನಾಡುತ್ತಾರೆ. ಅಂತೆಯೇ ಲೌಕಿಕ ಅಥವಾ ವೈದಿಕರೂಪವಾದ ಮಾತುಗಳನ್ನಾಡುತ್ತಾರೆ. 'ಕೇನೇಷಿತಾಂ ವಾಚಮಿಮಾಂ (ಜನಾಃ) ವದಂತಿ' ಎಂಬ ಪ್ರಶ್ನೆಗೆ ಯಾರಿಂದ ಪ್ರೇರಿತರಾಗಿ ಜನರು ತಮಗೆ ಇಷ್ಟವಾದ ಅಥವಾ ಅನಿಷ್ಟವಾದ ಮಾತುಗಳನ್ನಾಡುತ್ತಾರೆ, ಎಂದು ತಾತ್ಪರ್ಯ. ಇದರಿಂದ ಇಂದ್ರಿಯಗಳಿಗೆ ಒಡೆಯ(ಕರಣಾಧಿಪ)ನೆಂದು ಪರಿಗಣಿಸಲ್ಪಟ್ಟಿರುವ ಜೀವನು ತಾನು ಆಡುವ ಮಾತಿನ ವಿಷಯದಲ್ಲಿ ಸ್ವತಂತ್ರನಲ್ಲ. ಅವನಿಗೂ ಅಧಿಪ (ಕರಣಾಧಿಪಾಧಿಪ) ನೊಬ್ಬನಿರಬೇಕೆಂಬ ವಿಷಯ ಸ್ಪಷ್ಟವಾಗುತ್ತದೆ. ಅವನಾರು ? ಎಂಬುದೇ ಪ್ರಶ್ನೆ. ಆದ್ದರಿಂದಲೇ ಭಾಷ್ಯಕಾರರು ಈ ಪ್ರಶ್ನೆಯು ಕರಣಾಧಿಪಾಧಿಪನಾದ ಹೃಷೀಕೇಶನನ್ನು ಕುರಿತದ್ದಾಗಿದೆ ಎಂದಿದ್ದಾರೆ. ಇಲ್ಲಿ ಯಾರ ಪ್ರೇರಣೆಯಿಂದ ವಾಗಿಂದ್ರಿಯವು ಮಾತನಾಡುತ್ತದೆ (ವದಂತಿ) ಎಂದು ಅರ್ಥಮಾಡಲಾಗದು. ಕಾರಣ, ವದಂತಿ ಎಂಬ ಬಹುವಚನವಿದೆಯೇ ಹೊರತು ವದತಿ ಎಂದು ಏಕವಚನವಿಲ್ಲ.

ಕಣ್ಣು, ಕಿವಿಗಳಿಗೆ ಪ್ರೇರಕನಾದ ದೇವನಾರು ? ಅಂದರೆ ಕಣ್ಣಿಂದ ನೋಡುವ, ಕಿವಿಯಿಂದ ಕೇಳುವ ಕಾರ್ಯಗಳಿಗೆ ಪ್ರೇರಕನಾರು ? ಇಲ್ಲಿ 'ಚಕ್ಷುಃಶ್ರೋತ್ರಂ' ಎಂಬುದು ಮೂಗು ಇತ್ಯಾದಿ ಇಂದ್ರಿಯಗಳಿಗೂ ಸೂಚಕ. 'ದೇವೋ ಯುನಕ್ತಿ' ಎಂದು ದೇವಶಬ್ದವನ್ನು ಉಪಯೋಗಿಸಿರುವುದರಿಂದ ಇದು ಜೀವಾತ್ಮನಿಗಿಂತ ಬೇರೆಯಾದ ಅವನಿಗಿಂತಲೂ ಶಕ್ತಿಶಾಲಿಯಾದ ಪ್ರೇರಕವಿಷಯವಾದ ಪ್ರಶ್ನೆ ಎಂದು ತಿಳಿಯುವುದು.

ಅರಿವಿಲ್ಲದ ಕೆಲವರು ಜೀವಾತ್ಮನ ಸ್ವರೂಪ ತಿಳಿಯದೆ ಇದು ಜೀವ ವಿಷಯಕ ಪ್ರಶ್ನೆ ಎಂದು ಹೇಳುತ್ತಾರೆ. ಆದರೆ ಇಲ್ಲಿ ಜೀವ ವಿಷಯಕ ಪ್ರಶ್ನೆ ಉಚಿತವೆನಿಸದು. ಕಾರಣ ಜೀವನನ್ನೂ ಅತಿಕ್ರಮಿಸಿ ಇಂದ್ರಿಯಗಳು ತಮ್ಮ ಕಾರ್ಯದಲ್ಲಿ ತೊಡಗುವುದೇ ಆಗಿದೆ. ನಮಗೆ ಕ್ಷೇತ್ರ (ಶರೀರ) ಬೇರೆ, ಕ್ಷೇತ್ರಜ್ಞ (ಶರೀರಿ-ಆತ್ಮ) ಬೇರೆ ಎಂಬ ಜ್ಞಾನವಿದ್ದರೂ ನಮಗಿಷ್ಟವಾದ ವಿಷಯವನ್ನು ಅನುಭವಿಸಲು ಅಥವಾ ಅರಿಯಲು ನಾವೇ ಶಕ್ತರು. ಇಂದ್ರಿಯಗಳು ನಮಗೆ ಅಧೀನ. ನಮ್ಮನ್ನು ನಿಯಮಿಸುವವ ಮತ್ತೊಬ್ಬನಿಲ್ಲ. ನಾವೇ ಸ್ವತಂತ್ರರು ಎಂಬ ಭ್ರಮೆ ಇರುವುದು. ಈ ಭ್ರಮೆಯನ್ನು ಹೋಗಲಾಡಿಸಲು 'ಕೇನೇಷಿತಂ' ಮೊದಲಾದ ವಾಕ್ಯಗಳು ಹೊರಟಿವೆ ಎಂದು ಕೆಲವರ ಅಭಿಪ್ರಾಯ. ಇಲ್ಲಿ[2] 'ಕಿಂ' ಶಬ್ದ ಆಕ್ಷೇಪ ಸೂಚಕ.

---

1. ತಾನ್ (ಆಕಾಶಾದೀನ್) ವರಿಷ್ಠಃ ಪ್ರಾಣ ಉವಾಚ। ಮಾ ಮೋಹಮಾಪದ್ಯಥಾಃ। ಅಹಮೇವೈತತ್ ಪಂಚಧಾಽಽತ್ಮಾನಂ ವಿಭಜ್ಯೈತದ್ಬಾಣಮವಷ್ಟಭ್ಯ ವಿಧಾರಯಾಮಿ ಇತಿ। (ಪ್ರ.ಉ. 2-3)
2. ಇಲ್ಲಿಂದ ಸುಬೋಧಿನಿಯ ವಿಶೇಷ ವಿಷಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆದ್ದರಿಂದ ಕೇನೋಪನಿಷತ್ತಿನ ಮೊದಲಭಾಗ ಪ್ರಶ್ನ-ಪ್ರತಿವಚನ ರೂಪದ ಆರಂಭವಲ್ಲ; ಆಕ್ಷೇಪ ಮೂಲವಾದುದು. ಎಲೈ ಮಾನವರೇ! ಈ ಮನಸ್ಸೇ ಮೊದಲಾದ ಇಂದ್ರಿಯಗಳು ನಿಮಗೆ ಸಾಧನಗಳೆಂಬ ಅಂಶ ನಿಜ. ಆದರೆ ಇವು ಯಾರಿಂದ ಪ್ರೇರೇಪಿಸಲ್ಪಟ್ಟು ನಿಮಗೆ ಉಪಕರಣಗಳಾಗಿ ಕಾರ್ಯ ಮಾಡುತ್ತವೆ? ನಿಮ್ಮ ಪ್ರೇರಣೆಯಿಂದಲ್ಲ. ನಾವೇ ಇವುಗಳಿಗೆ ನಿಯಾಮಕರೆಂಬ ಭಾವನೆ ಭ್ರಮಾತ್ಮಕವಾದುದು. ಹಾಗಾದಲ್ಲಿ ಪ್ರೇರಕನಾರು? ಎಂಬ ಪ್ರಶ್ನೆಗೆ ಎಲ್ಲರಿಗೂ ಅಂತರಾತ್ಮನಾಗಿರುವ ಶ್ರೋತ್ರಾದಿಗಳಿಗೂ ಅಭಿವ್ಯಂಜಕನಾಗಿರುವ ಮತ್ತೊಬ್ಬ ನಿರುವನು ಎಂದು ಸಮಾಧಾನ.

ಹಿಂದೆ ದೇವಾಸುರಯುದ್ಧದಲ್ಲಿ ದೇವತೆಗಳಿಗೆ ದೊರೆತ ಜಯಕ್ಕೆ ತಾವೇ ಕಾರಣರು, ಇದು ನಮ್ಮ ಮಹಿಮೆ ಎಂದು ದೇವತೆಗಳು ಅಭಿಮಾನಪಟ್ಟರು. ಈ ಅಹಂಕಾರವನ್ನು ಖಂಡಿಸಲು ಬ್ರಹ್ಮ ಯಕ್ಷನಾಗಿ ಅವತರಿಸಿದನು. ಅಭಿಮಾನದಿಂದ ತುಂಬಿದ, ಸರ್ವದಾಹಕನಾದ ಅಗ್ನಿಯ ಮುಂದೆ ಅಲ್ಪವಾದ ಹುಲ್ಲು ಕಡ್ಡಿಯನ್ನಿಟ್ಟು ಸುಡು ಎಂದು ಹೇಳಲು ಅಗ್ನಿ ಅಸಮರ್ಥನಾದನು. ಆದುದರಿಂದ ನಾವೇ ಸಮರ್ಥರೆಂಬ ಭ್ರಮೆ ಸಲ್ಲದು. ಅಂತರಾತ್ಮನಾದ ಪರಮಾತ್ಮನ ಶಕ್ತಿಯಿಂದಲೇ ನಾವು ಜೀವಿಸಿರುವೆವು. ಅವನ ಸಹಾಯದಿಂದಲೇ ನಮ್ಮ ವ್ಯವಹಾರಗಳು. ಆದುದರಿಂದ ನಾವು ಪರತಂತ್ರರೆಂದು ಭಾವಿಸಬೇಕು ಎಂದು ಬೋಧಿಸುತ್ತದೆ. (ಸುಬೋಧಿನೀ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೨

श्रोत्रस्य श्रोत्रं मनसो मनो
यद्वाचो ह वाचं स उ प्राणस्य प्राणः ।
चक्षुषश्चक्षुरतिमुच्य धीराः
प्रेत्यास्माल्लोकादमृता भवन्ति ॥

ಶ್ರೋತ್ರಸ್ಯ ಶ್ರೋತ್ರಂ ಮನಸೋ ಮನೋ
ಯದ್ವಾಚೋ ಹ ವಾಚಂ ಸ ಉ ಪ್ರಾಣಸ್ಯ ಪ್ರಾಣಃ ।
ಚಕ್ಷುಷಶ್ಚಕ್ಷುರತಿಮುಚ್ಯ ಧೀರಾಃ
ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವಂತಿ ॥

ಪ್ರತಿಪದಾರ್ಥ

ಶ್ರೋತ್ರಸ್ಯ-ಕಿವಿಗೆ, **ಶ್ರೋತ್ರಮ್**-ಶಬ್ದವನ್ನು ಗ್ರಹಿಸುವ ಶಕ್ತಿಯಿತ್ತವನು, ಸ, ಉ–ಆ ಪರಮಾತ್ಮನೇ, **ಮನಸಃ**-ಮನಸ್ಸಿಗೆ, **ಮನಃ**-ತಿಳಿಯುವ ಶಕ್ತಿಯಿತ್ತವನು, ಸ, ಉ–ಆ ಪರಮಾತ್ಮನೇ, **ವಾಚಃ** ಹ-ವಾಗಿಂದ್ರಿಯಕ್ಕೆ, **ವಾಚಮ್**-ವಾಗ್ವ್ಯಾಪಾರ ಮಾಡುವ (ವ್ಯವಹರಿಸುವ) ಶಕ್ತಿಯಿತ್ತವನು, ಸ, ಉ-ಆ ಪರಮಾತ್ಮನೇ, **ಪ್ರಾಣಸ್ಯ**-ಮುಖ್ಯಪ್ರಾಣನಿಗೆ, **ಪ್ರಾಣಃ**-ಎಲ್ಲ ಕಡೆಯಲ್ಲಿಯೂ ಸಂಚರಿಸಿ ಶರೀರಧಾರಣಮಾಡುವ ಶಕ್ತಿಯಿತ್ತವನು, ಸ, ಉ-ಆ ಪರಮಾತ್ಮನೇ, **ಚಕ್ಷುಷಃ**-ನೇತ್ರೇಂದ್ರಿಯಕ್ಕೆ, **ಚಕ್ಷುಃ**-ನೋಡುವ ಶಕ್ತಿಯಿತ್ತವನು, ಸ,ಉ-ಆ ಪರಮಾತ್ಮನೇ, **ಧೀರಾಃ** –ಚೇತನ-ಅಚೇತನ-ಈಶ್ವರ ಎಂಬ ಮೂರು ತತ್ತ್ವಗಳನ್ನು ತಿಳಿದವರು, **ಅತಿಮುಚ್ಯ**-ಮೇಲೆ ತಿಳಿಸಿದ ರೀತಿಯಲ್ಲಿ ಅರಿತು, **ಪ್ರೇತ್ಯ**-ಈ ಶರೀರವನ್ನು ಬಿಟ್ಟನಂತರ, **ಅಸ್ಮಾತ್ ಲೋಕಾತ್**-ಈ ಪ್ರಕೃತಿಮಂಡಲದಿಂದ ಬೇರೊಂದು ಲೋಕಕ್ಕೆ ಹೋಗಿ, **ಅಮೃತಾಃ ಭವಂತಿ**-ಜನನ–ಮರಣವಿಲ್ಲದವರಾಗುತ್ತಾರೆ.

ತಾತ್ಪರ್ಯ

ಮನಸ್ಸು, ಮಾತು, ಪ್ರಾಣ, ಕಣ್ಣು, ಕಿವಿಗಳಿಗೆ ಅವುಗಳ ಕಾರ್ಯಗಳನ್ನು ಮಾಡುವ ಶಕ್ತಿಯನ್ನುಂಟುಮಾಡುವವನು ಪರಮಾತ್ಮನೇ ಎಂದು ಚೇತನ-ಅಚೇತನ-ಈಶ್ವರ ಎಂಬ ತತ್ತ್ವತ್ರಯವನ್ನು ತಿಳಿದವರು ಹೇಳುತ್ತಾರೆ. ಈ ವಿಷಯವನ್ನು ತಿಳಿದವರು ಈ ಶರೀರವನ್ನು ಬಿಟ್ಟು ನಂತರ ವೈಕುಂಠಲೋಕಕ್ಕೆ ಹೋಗಿ ಪುನರ್ಜನ್ಮವಿಲ್ಲದವರಾಗಿ ಅಲ್ಲಿ ಶಾಶ್ವತವಾಗಿ ನೆಲೆಸುವರು.

ರಂಗರಾಮಾನುಜಭಾಷ್ಯ

ಗುರುಃ ಪ್ರತಿವಕ್ತಿ. **ಶ್ರೋತ್ರಸ್ಯ ಶ್ರೋತ್ರಂ..........ಭವಂತಿ ।** ಚಕ್ಷುರಾದೀನಾಂ ಪ್ರಕಾಶಕಂ ಚಕ್ಷುರಾದ್ಯನಧೀನಪ್ರಕಾಶಂ ಅಪ್ರಾಣಾಧೀನಪ್ರಾಣನಂ ಚ ಯತ್,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ, ಉ–ಸ ಏವ, ಇತ್ಯೇವಮ್, ಅತಿಮುಚ್ಯ-ಜ್ಞಾತ್ವಾ, ಅಸ್ಮಾಲ್ಲೋಕಾತ್-ಅರ್ಚಿರಾದಿನಾ ಮಾರ್ಗೇಣ ಗತ್ವಾ ಮುಕ್ತಾ ಭವಂತೀತ್ಯರ್ಥಃ ।

ಭಾಷಾಂತರ

ಆಚಾರ್ಯನು ಉತ್ತರಿಸುತ್ತಾನೆ. ಶ್ರೋತ್ರಸ್ಯ ಶ್ರೋತ್ರಂ........ಭವಂತಿ–ಯಾವುದು ಕಣ್ಣು ಮೊದಲಾದವುಗಳನ್ನು ಪ್ರಕಾಶಪಡಿಸುವುದೋ, ಯಾವುದರ ಪ್ರಕಾಶವು ಕಣ್ಣು ಮೊದಲಾದವುಗಳಿಗೆ ಅಧೀನವಲ್ಲವೋ, ಯಾವುದರ ಪ್ರಾಣನವು ಮುಖ್ಯ ಪ್ರಾಣಕ್ಕೆ ಅಧೀನವಲ್ಲವೋ, ಅದು ಸ, ಉ–ಅವನೇ (ಪರಮಾತ್ಮನೇ) ಹೀಗೆಂಬುದಾಗಿ, ಅತಿಮುಚ್ಯ–ತಿಳಿದು, ಅಸ್ಮಾಲ್ಲೋಕಾತ್–(ಈ ಲೋಕದಿಂದ) ಅರ್ಚಿರಾದಿಮಾರ್ಗದಿಂದ ತೆರಳಿ ಮುಕ್ತರಾಗುತ್ತಾರೆ.

ಭಾಷ್ಯಸಾರ

ಮನಸ್ಸೇ ಮೊದಲಾದ ಇಂದ್ರಿಯಗಳಿಗೆ ಪ್ರೇರಕನಾರೆಂಬ ಶಿಷ್ಯನ ಪ್ರಶ್ನೆಗೆ ಗುರುವು ಉತ್ತರಿಸುತ್ತಾನೆ.

ಶ್ರೋತ್ರಸ್ಯ ಶ್ರೋತ್ರಂ :—ಜೀವನಿಗೆ ಶಬ್ದಗಳನ್ನು ಕೇಳುವಲ್ಲಿ ಉಪಕಾರಕವಾದ ಇಂದ್ರಿಯ ಕಿವಿ. ಈ ಕಿವಿಗೆ ಶಬ್ದ ಗ್ರಹಿಸುವ ಶಕ್ತಿ ಕೊಡುವವನು ಪರಮಾತ್ಮ. ಸರ್ವಾಂತರ್ಯಾಮಿಯಾದ ಪರಬ್ರಹ್ಮ ಶಕ್ತಿಕೊಡದಿದ್ದಲ್ಲಿ ಯಾವ ಇಂದ್ರಿಯವೂ ತಮ್ಮ ಕಾರ್ಯಗಳನ್ನು ಮಾಡಲು ಸಮರ್ಥವಾಗಲಾರದು. ಕಿವಿ ಕಣ್ಣು ಮುಂತಾದ ಉಪಕರಣಗಳೆಲ್ಲವೂ ಪರಬ್ರಹ್ಮದಿಂದ ಕೊಡಲ್ಪಟ್ಟ ಶಕ್ತಿಯಿಂದ ಕೂಡಿಯೇ ಜೀವನಿಗೆ ಉಪಕರಣಗಳಾಗಬಲ್ಲವು. ಆದ್ದರಿಂದ ಕಿವಿಗೂ–ಕಿವಿ ಪರಮಾತ್ಮ ಎಂದು ಹೇಳಿದೆ.

ಕೆಲವರು 'ಶ್ರೋತ್ರಸ್ಯ ಶ್ರೋತ್ರಮ್' ಎಂಬುದರಿಂದ ಶರೀರದಲ್ಲಿರುವ ಜೀವನೇ ಹೇಳಲ್ಪಡುತ್ತಾನೆ ಎಂದು ಹೇಳುವರು. ಇದು ಅಷ್ಟು ಉಚಿತವಲ್ಲ. ಜೀವನಿಗೆ ಶಬ್ದ ಸಾಕ್ಷಾತ್ಕಾರದಲ್ಲಿ ಉಪಕಾರಕವಾದುದು ಕಿವಿ. ಅದರಿಂದ ಉಪಕಾರ ಪಡೆಯುವವ (ಉಪಕೃತ) ಜೀವ. ಉಪಕೃತನಾದ ಆ ಜೀವ ಉಪಕಾರಕ ಹೇಗಾದಾನು ? ಬೆಳಕಿನಿಂದ ಉಪಕೃತವಾಗುವ ಕಣ್ಣು ಬೆಳಕಿಗೂ ಬೆಳಕಾಗಬಲ್ಲುದೇ ?

ಶ್ರೋತ್ರ ಅಂದ ಕೂಡಲೇ ಜೀವನಿಗೆ ಇದು ಒಂದು ಉಪಕರಣವೆಂದು ತಿಳಿಯುವುದು. ಸರ್ವಾಂತರ್ಯಾಮಿಯೂ, ಎಲ್ಲಕ್ಕೂ ಶಕ್ತಿದಾತನೂ ಆದ ಪರಮಾತ್ಮನಿಂದಲೇ ಶ್ರೋತ್ರ ಉಪಕರಣವಾಗಬಲ್ಲದು. ಆದ್ದರಿಂದಲೇ 'ಶ್ರೋತ್ರಸ್ಯ ಶ್ರೋತ್ರಮ್' ಎಂಬ ಮಾತು ಪರಮಾತ್ಮನಲ್ಲಿ ಸ್ವರಸವಾಗಿ ಅನ್ವಯಿಸುವುದು. ಅಲ್ಲದೆ ಕಿವುಡನಿಗೆ ಕಿವಿ ಕೇಳದು. ಅಂತೆಯೇ ಅಶಕ್ತನಾದ ಜೀವನು ಹೇಗೆ ಪ್ರೇರಕನಾದಾನು ?

ಮನಸೋ ಮನಃ :—ಸುಖದುಃಖಾದಿಗಳ ಸಾಕ್ಷಾತ್ಕಾರಕ್ಕೆ ಅನುಕೂಲವಾದ ಇಂದ್ರಿಯ ಮನಸ್ಸು. ಈ ಮನಸ್ಸಿಗೆ ಸುಖದುಃಖಾದಿಗಳನ್ನು ಅರಿಯುವ ಶಕ್ತಿಕೊಟ್ಟವನು ಪರಮಾತ್ಮ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ಶಕ್ತಿ ಮನಸ್ಸಿಗಿಲ್ಲದಿದ್ದಲ್ಲಿ ಜೀವನಿಗೆ ಸುಖದುಃಖಾದಿಗಳ ಅನುಭವಗಳೇ ಉಂಟಾಗುತ್ತಿರಲಿಲ್ಲ. ಆದ್ದರಿಂದಲೇ ಮನಸ್ಸಿಗೂ ಮನಸ್ಸು ಪರಮಾತ್ಮ.

ವಾಚೋ ವಾಚಃ :—ಜೀವನಿಗೆ ಶಬ್ದಪ್ರಯೋಗ ರೂಪ ಕ್ರಿಯೆಯಲ್ಲಿ (ವ್ಯವಹಾರದಲ್ಲಿ) ಸಾಧನವಾದುದು ವಾಗಿಂದ್ರಿಯ. ಇದಕ್ಕೆ ಶಬ್ದವನ್ನು ಉಚ್ಚರಿಸುವ ಶಕ್ತಿ ಕೊಡುವವನು ಪರಮಾತ್ಮ. ಹೀಗೆ ಪರಮಾತ್ಮನಿಂದ ಪಡೆದ ಶಕ್ತಿಯಿಂದ ವಾಗಿಂದ್ರಿಯವು ಮಾತನಾಡುವಲ್ಲಿ ಸಾಧನವಾಗುವುದು. ಆದುದರಿಂದ ಪರಮಾತ್ಮನು ವಾಗಿಂದ್ರಿಯಕ್ಕೂ ವಾಕ್.[1]

ಪ್ರಾಣಸ್ಯ ಪ್ರಾಣಃ :— ಶರೀರಧಾರಣಕ್ಕೆ ಕಾರಣವಾದ, ಶರೀರದಲ್ಲಿ ಎಲ್ಲ ಕಡೆ ಯಲ್ಲಿಯೂ ಸಂಚರಿಸುವ ವಾಯುವೇ ಪ್ರಾಣ. ಅದಕ್ಕೆ ಈ ಶಕ್ತಿಯು ಪರಮಾತ್ಮನಿಂದ ಕೊಡಲ್ಪಟ್ಟಿದೆ. ಪರಮಾತ್ಮನು ಕೊಟ್ಟ ಶಕ್ತಿಯಿಂದಲೇ ಪ್ರಾಣವು ಶರೀರದಲ್ಲಿ ಸಂಚರಿಸಿ ಅದನ್ನು ರಕ್ಷಿಸುತ್ತದೆ. ಆದ್ದರಿಂದಲೇ ಪ್ರಾಣಕ್ಕೆ ಪ್ರಾಣ ಪರಮಾತ್ಮ.

ಚಕ್ಷುಷಃ ಚಕ್ಷುಃ :—ರೂಪಸಾಕ್ಷಾತ್ಕಾರದಲ್ಲಿ ಜೀವನಿಗೆ ಉಪಕಾರಕವಾದ ಇಂದ್ರಿಯ ಕಣ್ಣು. ಆ ಕಣ್ಣಿಗೆ ನೋಡುವ ಶಕ್ತಿ ಕೊಟ್ಟವನು ಪರಮಾತ್ಮ. ಪರಮಾತ್ಮನಿಂದ ದತ್ತವಾದ ಶಕ್ತಿಯುಳ್ಳ ಕಣ್ಣೇ ರೂಪಾದಿಗಳನ್ನು ನೋಡುವಲ್ಲಿ ಜೀವನಿಗೆ ಸಾಧನವಾಗಿವೆ. ಆದ್ದರಿಂದ ಪರಮಾತ್ಮ ಕಣ್ಣಿಗೂ ಕಣ್ಣು.[2]

ಎಲೈ ಶಿಷ್ಯನೇ ! ಕಣ್ಣು-ಕಿವಿ ಮುಂತಾದ ಇಂದ್ರಿಯಗಳಿಗೆ ಶಕ್ತಿದಾತನಾದ ಪರಮಾತ್ಮ ಇಂದ್ರಿಯ ಪ್ರೇರಕನಾದ ದೇವನೆಂದು ತಿಳಿ ಎಂದು ತಾತ್ಪರ್ಯ.

ಅಂತರ್ಯಾಮಿಯಾದ ಪರಮಾತ್ಮನು 'ಮನಸ್ಸನ್ನು ನಿಯಮಿಸುತ್ತಾನೆ.' 'ವಾಗಿಂದ್ರಿಯ ವನ್ನು ನಿಯಮಿಸುತ್ತಾನೆ.' 'ಕಿವಿಯನ್ನು ನಿಯಂತ್ರಿಸುತ್ತಾನೆ.' 'ಕಣ್ಣನ್ನು ನಿಯಂತ್ರಿಸು ತ್ತಾನೆ.' 'ಪ್ರಾಣವನ್ನು ನಿಯಂತ್ರಿಸುತ್ತಾನೆ.'[3] ಮುಂತಾದ ಶ್ರುತಿಗಳಿಂದ ಮನಸ್ಸು ಮೊದಲಾ ದವುಗಳನ್ನು ನಿಯಂತ್ರಿಸುವವನು ಪರಮಾತ್ಮ ಎಂದು ಸಿದ್ಧವಾಗುವುದು.

ಶ್ರೋತ್ರ ಮುಂತಾದ ಇಂದ್ರಿಯಗಳಿಗೆ ಸರ್ವೇಶ್ವರನೇ ಪ್ರೇರಕ. ಈ ರೀತಿ ಅರಿಯು ವುದರಿಂದಾಗುವ ಫಲವನ್ನು ತಿಳಿಸುತ್ತಾರೆ 'ಅತಿಮುಚ್ಯ ಧೀರಾಃ' ಎಂದು. ಅಥವಾ ಯಾರು ಕರಣಗಳ ವಿಷಯದಲ್ಲಿ ತಾವು ಸ್ವತಂತ್ರರೆಂಬ ಭ್ರಮೆಯನ್ನು ತೊರೆದು ಇಂದ್ರಿಯ ಗಳಿಗೆ ಅಧಿದೇವನಾದ ಹೃಷೀಕೇಶನೇ ಇಂದ್ರಿಯಗಳನ್ನು ನಿಯಂತ್ರಿಸುವವನು ಮತ್ತು ಎಲ್ಲ ವನ್ನೂ ಅಂತರ್ಯಾಮಿಯಾದ ಪರಮಾತ್ಮನೇ ಮಾಡಿಸುವವನು ಎಂದು ತಿಳಿದಿದ್ದಾರೋ

---

1. 'ವಾಚೋ ಹ ವಾಚಮ್' ಎಂಬಲ್ಲಿ ವಾಚಂ ಎಂಬುದು ಛಾಂದಸಪ್ರಯೋಗ. 'ವಾಕ್' ಎಂಬ ಪ್ರಥಮಾರ್ಥದಲ್ಲಿ ದ್ವಿತೀಯೆ ಬಂದಿದೆ.
2. 'ಚಕ್ಷುಷಃ ಚಕ್ಷುಃ' ಎಂಬುದು ಇತರ ಇಂದ್ರಿಯಗಳಿಗೂ ಉಪಲಕ್ಷಕವಾಗಿದೆ.
3. "ಯೋ ಮನೋಂತರೋ ಯಮಯತಿ" "ವಾಚಮಂತರೋ ಯಮಯತಿ" "ಶ್ರೋತ್ರಮಂತರೋ ಯಮಯತಿ" "ಚಕ್ಷುರಂತರೋ ಯಮಯತಿ" "ಪ್ರಾಣಮಂತರೋ ಯಮಯತಿ" (ಬೃ.ಉ. 5-7, 20–24)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಂತಹವರು ಈ ದೇಹವನ್ನು ಮೂರ್ಧನೀನಾಡಿ[1]ಯಿಂದ ತೊರೆಯುತ್ತಾರೆ. ಅರ್ಚಿರಾದಿ ಮಾರ್ಗದಿಂದ ಹೋಗಿ ಲಿಂಗಶರೀರ[2]ವನ್ನೂ ಬಿಟ್ಟು, ಪರಮಾತ್ಮನ ನೆಲೆಯಾದ ವೈಕುಂಠ (ಪರಮಪದ) ವನ್ನು ಸೇರಿ ಮುಕ್ತರಾಗುವರು ಎಂದು ತಾತ್ಪರ್ಯ.

ಇದರಿಂದ "ಮುಕ್ತರಿಗೆ ಪರಲೋಕಗಮನವಿಲ್ಲ. ಬ್ರಹ್ಮಭಾವವೇ ಅವರಿಗೆ ಉಂಟಾಗುವುದು" ಎಂಬ ಅಭಿಪ್ರಾಯಕ್ಕೆ ಇಲ್ಲಿ ಅವಕಾಶವಿಲ್ಲ. ಮುಕ್ತರ ಸ್ಥಾನ ಪರಮಾತ್ಮನಿಗೆ ನೆಲೆಯಾದ ಮತ್ತೊಂದು ಲೋಕ ಎಂದೂ ತಿಳಿಯುತ್ತದೆ.

1. ನಾಭಿಯಿಂದ ನೆತ್ತಿಯವರೆಗೂ ವ್ಯಾಪಿಸಿರುವ ಮುಖ್ಯವಾದ ನಾಡಿ.
2. ಸೂಕ್ಷ್ಮ ಶರೀರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೩

न तत्र चक्षुर्गच्छति न वाग्गच्छति नो मनः ।
न विद्मो न विजानीमो यथैतदनुशिष्यात् ॥

ನ ತತ್ರ ಚಕ್ಷುರ್ಗಚ್ಛತಿ ನವಾಗ್ಗಚ್ಛತಿ ನೋ ಮನಃ ।
ನ ವಿದ್ಮೋ ನ ವಿಜಾನೀಮೋ ಯಥೈತದನುಶಿಷ್ಯಾತ್ ॥

ಪ್ರತಿಪದಾರ್ಥ

ತತ್ರ-ಅಲ್ಲಿ (ಶ್ರೋತ್ರಾದಿಗಳಿಗೆ ಆತ್ಮಭೂತನಾದ ಪರಮಾತ್ಮನ ವಿಷಯದಲ್ಲಿ), **ಚಕ್ಷುಃ**-ಕಣ್ಣು, **ನ ಗಚ್ಛತಿ**-ಪ್ರಸರಿಸುವುದಿಲ್ಲ, (ಹೋಗಿ ತಿಳಿಯಲಾರದು) ವಾಕ್-ಮಾತು, ತತ್ರ-ಆ ಪರಮಾತ್ಮನ ವಿಷಯದಲ್ಲಿ, ನ ಗಚ್ಛತಿ-ಹೋಗುವುದಿಲ್ಲ, (ಅವನ ಹಿರಿಮೆಯನ್ನು ಹೇಳಲು ಸಮರ್ಥವಲ್ಲ.) ಮನಃ-ಅಂತರಿಂದ್ರಿಯವಾದ ಮನಸ್ಸೂ, **ಗಚ್ಛತಿ**-ಪ್ರವರ್ತಿಸುವುದಿಲ್ಲ. (ಧ್ಯಾನ ಮಾಡಲು ಸಮರ್ಥವಲ್ಲ). **ಯಥಾ**-ಯಥಾವಸ್ಥಿತವಾದ ವಸ್ತುವನ್ನು, ನ ವಿದ್ಮಃ-ಅಂತರಿಂದ್ರಿಯದಿಂದ ತಿಳಿಯಲಾರೆವು. ನ ವಿಜಾನೀಮಃ-ಬಹಿರಿಂದ್ರಿಯಗಳಿಂದಲೂ ತಿಳಿಯಲಾರೆವು. ಆದರೆ, ಏತತ್-ಈ ಪರಬ್ರಹ್ಮನನ್ನು, ಅನುಶಿಷ್ಯಾತ್-ಪ್ರಾಕೃತವಾದ ಕಣ್ಣು ಮೊದಲಾದ ಇಂದ್ರಿಯಗಳಿಗೆ ಪ್ರತ್ಯಕ್ಷವಾಗುವುದಿಲ್ಲವೆಂದು ಶಿಷ್ಯನಿಗೆ ಬೋಧಿಸಬೇಕು ಎಂದು ತಾತ್ಪರ್ಯ.

ತಾತ್ಪರ್ಯ

ಇಂದ್ರಿಯ ಮತ್ತು ಪ್ರಾಣಾದಿಗಳಿಗೆ ಅಂತರಾತ್ಮನಾದ ಪರಮಾತ್ಮಸ್ವರೂಪವನ್ನು ಕಣ್ಣು ನೋಡಲಾರದು, ಮಾತು ವರ್ಣಿಸಲಾರದು, ಮನಸ್ಸು ಧ್ಯಾನ ಮಾಡಲಾರದು. ಇಂತಹ ಪರಮಾತ್ಮಸ್ವರೂಪವನ್ನು ಉಪದೇಶಿಸುವ ರೀತಿಯು ನಮಗೆ ತಿಳಿದಿಲ್ಲ. ನಾವು ವಿಶೇಷರೀತಿಯಿಂದಲೂ ಅರಿತಿಲ್ಲ.

ರಂಗರಾಮಾನುಜಭಾಷ್ಯ

ತದೇವ ಪ್ರಪಂಚಯತಿ— ನ ತತ್ರ ಚಕ್ಷುರ್ಗಚ್ಛತಿ ನ ವಾಕ್ ಗಚ್ಛತಿ ನೋ ಮನಃ । ತತ್ ಕಿಮುಪದೇಷ್ಟವ್ಯಂ (ತರ್ಹಿ ತತ್ ಕಥಮುಪದೇಷ್ಟವ್ಯಮ್ ?) ಇತ್ಯತ್ರಾಹ— ನ ವಿದ್ಮೋ ನ ವಿಜಾನೀಮಃ ಯ(ತ ?) ಥೈತದನುಶಿಷ್ಯಾತ್— ಕಿಂ ತದಿತಿ ಪೃಷ್ಟ ಆಚಾರ್ಯಃ, 'ನಾಂತರಿಂದ್ರಿಯೇಣ ನ ಬಹಿರಿಂದ್ರಿಯೇಣ ಚ ಜ್ಞೇಯಂ ತತ್' ಇತ್ಯೇವ ತದುಪದಿಶೇತ್ ।

ಭಾಷಾಂತರ

ಅದನ್ನೇ (ಇಂದ್ರಿಯಾಗೋಚರನು ಎಂಬ ವಿಷಯವನ್ನೇ) ವಿವರಿಸುತ್ತಾನೆ. ನ ತತ್ರ ಚಕ್ಷುರ್ಗಚ್ಛತಿ ನ ವಾಗ್ಗಚ್ಛತಿ ನೋ ಮನಃ— ಅದನ್ನು ಏನೆಂದು ಉಪದೇಶಿಸಬೇಕು ? [ಆದರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅದನ್ನು (ಪರವಸ್ತು) ಹೇಗೆ ಉಪದೇಶಿಸಬೇಕು ?] ಎಂಬಲ್ಲಿ (ಎಂಬ ಸಂದೇಹವುಂಟಾದಾಗ) ಹೇಳುತ್ತಾನೆ. ನ ವಿದ್ಮೋ ನ ವಿಜಾನೀಮಃ ಯ(ತ ?)ಥೈತದನುಶಿಷ್ಯಾತ್—ಅದು ಏನು ? ಎಂದು ಪ್ರಶ್ನಿಸಲ್ಪಟ್ಟ ಆಚಾರ್ಯನು, "ನಾಂತರಿಂದ್ರಿಯೇಣ ನ ಬಹಿರಿಂದ್ರಿಯೇಣ ಚ ಜ್ಞೇಯಂ ತತ್" — "ಅಂತರಿಂದ್ರಿಯದಿಂದಲೂ ಬಹಿರಿಂದ್ರಿಯಗಳಿಂದಲೂ ಅದನ್ನು ತಿಳಿಯಲು ಸಾಧ್ಯವಿಲ್ಲ" ಎಂದೇ ಅದನ್ನು ಉಪದೇಶಿಸತಕ್ಕದ್ದು.

ಭಾಷ್ಯಸಾರ[1]

1. 4ನೇ ಮಂತ್ರದಲ್ಲಿ ಅಳವಡಿಸಲಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೪

अन्यदेव तद्विदितादथो अविदितादधि ।
इति शुश्रुम पूर्वेषां ये नस्तद्व्याचचक्षिरे ॥

ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ ।
ಇತಿ ಶುಶ್ರುಮ ಪೂರ್ವೇಷಾಂ ಯೇ ನಸ್ತದ್ವ್ಯಾಚಚಕ್ಷಿರೇ ॥

ಪ್ರತಿಪದಾರ್ಥ

ಯೇ-ಯಾವ ಪೂರ್ವಾಚಾರ್ಯರು, ನಃ–ನಮಗೆ, (ಯತ್-ಯಾವ ಪರಮಾತ್ಮಸ್ವರೂಪವನ್ನು) ವ್ಯಾಚ ಚಕ್ಷಿರೇ-ಉಪದೇಶ ಮಾಡಿರುವರೋ, ತತ್-ಆ ಪರಮಾತ್ಮಸ್ವರೂಪವು, ವಿದಿತಾತ್–ಎಲ್ಲ ವಿಧದಿಂದಲೂ ತಿಳಿಯಲು ಸಾಧ್ಯವಾದ ವಸ್ತುವಿಗಿಂತಲೂ, ಅನ್ಯತ್–ವಿಲಕ್ಷಣವಾದುದು, ಅಥ–ಅನಂತರ, ಅವಿದಿತಾತ್–ಪೂರ್ವಾಚಾರ್ಯರುಗಳಿಗೆ ಯಾವುದೇ ವಿಧದಿಂದಲೂ ತಿಳಿಯದ ವಸ್ತುಗಿಂತಲೂ, ಅಧಿ–ವಿಲಕ್ಷಣವಾದುದು, ಇತಿ–ಎಂದು, ಪೂರ್ವೇಷಾಮ್–ಹಿಂದಿನ ಆಚಾರ್ಯರುಗಳಿಂದ, ಶುಶ್ರುಮ–ಕೇಳಿರುತ್ತೇವೆ.

ತಾತ್ಪರ್ಯ

ನಮ್ಮ ಹಿಂದಿನ ಗುರುಗಳು ಈ ಪರಮಾತ್ಮಸ್ವರೂಪವು ಜಡವಸ್ತುವಿಗಿಂತಲೂ ಭಿನ್ನ ವಾದುದು. ಚೇತನವಾದ ಜೀವನಿಗಿಂತಲೂ ವಿಲಕ್ಷಣವಾದುದು ಎಂದು ಹೇಳಿರುವರು. ಇಂತಹ ಮಾತುಗಳನ್ನು ಅವರಿಂದ ಕೇಳಿರುವೆವು ಎಂದು ಆಚಾರ್ಯರು ಶಿಷ್ಯನಿಗೆ ಬ್ರಹ್ಮಸ್ವರೂಪ ವನ್ನು ತಿಳಿಸುತ್ತಾರೆ.

ರಂಗರಾಮಾನುಜಭಾಷ್ಯ

ನನು ತಸ್ಯ ಸರ್ವಾತ್ಮನಾ ಜ್ಞಾನಾವಿಷಯತ್ವೇ ತುಚ್ಛತ್ವಂ ಸ್ಯಾತ್ ; ಬ್ರಹ್ಮಜಿಜ್ಞಾಸಯಾ ಗುರೂಪಸದನಾದಿಕಂ ಚ ನ ಸ್ಯಾದಿತ್ಯತ್ರಾಹ–' ಅನ್ಯದೇವ ತತ್ ವಿದಿತಾದಥೋ........ ತದ್ವ್ಯಾಚಚಕ್ಷಿರೇ ' । ಯೇ–ಅಸ್ಮಾಕಂ ಪೂರ್ವೇ ಗುರವಃ ಬ್ರಹ್ಮೋಪಾದಿಶನ್ ತೇಷಾಮ್, " ಸರ್ವಾತ್ಮನಾ ವಿದಿತಾದಪಿ ವಿಲಕ್ಷಣಂ ಸರ್ವಾತ್ಮನಾ ಅವಿದಿತಾದಪಿ ವಿಲಕ್ಷಣಮೇವಂರೂಪಂ ಬ್ರಹ್ಮ " ಇತೀದೃಶೀಂ ವಾಚಂ ವಯಂ ಶ್ರುತವಂತಃ ಇತ್ಯರ್ಥಃ ।

ಭಾಷಾಂತರ

ಅದು (ಪರವಸ್ತು) ಎಲ್ಲ ರೀತಿಯಿಂದಲೂ ಜ್ಞಾನದಲ್ಲಿ ವಿಷಯವಾಗಲಾರದು (ತಿಳುವಳಿಕೆಯಲ್ಲಿ ತೋರದಿರುವುದು) ಎಂದಾದರೆ ಅದು ತುಚ್ಛ (ಇಲ್ಲದ್ದು–ಶೂನ್ಯ–ಬರಿದು) ಎಂದಾದೀತು ! ಅಂತೆಯೇ ಬ್ರಹ್ಮವನ್ನು ತಿಳಿಯುವ ಅಭಿಲಾಷೆಯಿಂದ ಗುರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶುಶ್ರೂಷೆ ಮೊದಲಾದವುಗಳು (ಕರ್ತವ್ಯವಾಗಿ) ಬೇಕಾದದ್ದಿಲ್ಲ ಎಂದೂ ಆದೀತು ! ಎನ್ನುವಾಗ ಹೇಳುತ್ತಾನೆ— 'ಅನ್ಯದೇವ ತತ್..........ತದ್ವ್ಯಾಚಚಕ್ಷಿರೇ' । ಯೇ– ಯಾವ ನಮ್ಮ ಹಿಂದಿನ ಆಚಾರ್ಯರು ಬ್ರಹ್ಮವನ್ನು ಉಪದೇಶಿಸಿರುವರೋ ಅವರ "ಸರ್ವಾತ್ಮನಾ ವಿದಿತಾದಪಿ ವಿಲಕ್ಷಣಂ ಸರ್ವಾತ್ಮನಾ ಅವಿದಿತಾದಪಿ ವಿಲಕ್ಷಣಮೇವಂರೂಪಂ ಬ್ರಹ್ಮ" — "ಎಲ್ಲ ರೀತಿಯಿಂದ ತಿಳುವಳಿಕೆಗೆ ಬರುವುದಕ್ಕಿಂತಲೂ ವಿಲಕ್ಷಣವು, ಎಲ್ಲ ರೀತಿಯಿಂದ ತಿಳುವಳಿಕೆಗೆ ಬಾರದಿರುವುದಕ್ಕಿಂತಲೂ ಬೇರೆಯಾದ ಸ್ವರೂಪವುಳ್ಳದ್ದು ಬ್ರಹ್ಮ"— ಈ ರೀತಿಯ ಮಾತುಗಳನ್ನು ನಾವು ಕೇಳಿದ್ದೇವೆ ಎಂದು ತಾತ್ಪರ್ಯ.

ಭಾಷ್ಯಸಾರ (3-4)

ಸಮಸ್ತ ಇಂದ್ರಿಯಗಳಿಗೆ ಪ್ರೇರಕನಾದ ಪರಮಾತ್ಮನು ಲೌಕಿಕವಾದ ವಸ್ತುಗಳಿಗಿಂತ ವಿಲಕ್ಷಣನು ಎಂದು 'ನ ತತ್ರ' ಎಂಬ ಮಂತ್ರದಲ್ಲಿ ವಿವರಿಸುತ್ತಾರೆ.

ಮನಸ್ಸು, ಪ್ರಾಣಾದಿಗಳಿಗೆ ಪ್ರೇರಕನಾದ ಪರಮಾತ್ಮನಲ್ಲಿ ಚಕ್ಷುರಿಂದ್ರಿಯವು ತನ್ನ ವ್ಯಾಪಾರ(ಕೆಲಸ)ವನ್ನು ಮಾಡಲಾರದು. ಅಂದರೆ ಕಣ್ಣು ಪರಮಾತ್ಮನನ್ನು ನೋಡಲಾರದು. ಇಲ್ಲಿ 'ಚಕ್ಷುಃ' ಎಂಬ ಪದವು ಪ್ರತ್ಯಕ್ಷಪ್ರಮಾಣವನ್ನು ಸೂಚಿಸುತ್ತದೆ. ಅಂತೆಯೇ 'ವಾಕ್' ಶಬ್ದವು ಪ್ರತ್ಯಕ್ಷಮೂಲವಾದ ಶಬ್ದಪ್ರಮಾಣವನ್ನೂ 'ಮನಃ' ಶಬ್ದವು ಪ್ರತ್ಯಕ್ಷಮೂಲವಾದ ಅನುಮಾನ ಪ್ರಮಾಣವನ್ನೂ ಸೂಚಿಸುತ್ತವೆ.

ಲೌಕಿಕ ವಸ್ತುಗಳು ಪ್ರತ್ಯಕ್ಷ, ಅನುಮಾನ ಮತ್ತು ಶಬ್ದಪ್ರಮಾಣಗಳಿಂದ ತಿಳಿಯಲ್ಪಡುತ್ತವೆ. ಪರಮಾತ್ಮಸ್ವರೂಪವು ಹಾಗಲ್ಲ. ಇಂದ್ರಿಯಾಗೋಚರವಾದ ಪರಮಾತ್ಮಸ್ವರೂಪವನ್ನು ಇತರ ಪದಾರ್ಥಗಳಂತೆ ಕಣ್ಣು ಮುಂತಾದ ಇಂದ್ರಿಯಗಳಿಂದ ತಿಳಿಯಲು ಸಾಧ್ಯವಿಲ್ಲ.

ವಾಗಿಂದ್ರಿಯದಿಂದಲೂ ಪರಮಾತ್ಮಸ್ವರೂಪವನ್ನು ತಿಳಿಯಲು ಸಾಧ್ಯವಿಲ್ಲ. 'ವಾಕ್' ಶಬ್ದದಿಂದ ಸೂಚಿಸಲ್ಪಡುವ ವಾಗಿಂದ್ರಿಯವು ಅತೀಂದ್ರಿಯವಾದ ಪರಮಾತ್ಮಸ್ವರೂಪವನ್ನು ತಿಳಿಸಲಾರದು. ಪರಮಾತ್ಮನು ಲೌಕಿಕ ವ್ಯವಹಾರ ಗಮ್ಯನಲ್ಲ ಎಂದು ತಾತ್ಪರ್ಯ.

'ನಾಪಿ ಮನಃ' ಎಂಬಲ್ಲಿ 'ಮನಃ' ಎಂಬ ಶಬ್ದವು ಮನೋವ್ಯಾಪಾರವೇ ಮುಖ್ಯವಾದ ಅನುಮಾನಪ್ರಮಾಣವನ್ನು ಸೂಚಿಸುತ್ತದೆ. ಈ ಅನುಮಾನಪ್ರಮಾಣದಿಂದಲೂ ಪರಮಾತ್ಮಸ್ವರೂಪವನ್ನು ತಿಳಿಯಲಾಗುವುದಿಲ್ಲ. ಅನುಮಾನವು ಪ್ರತ್ಯಕ್ಷಮೂಲವಾದುದು. ಪ್ರತ್ಯಕ್ಷಪ್ರಮಾಣಕ್ಕೆ ಮೀರಿದ ಪರಮಾತ್ಮಸ್ವರೂಪವನ್ನು ಪ್ರತ್ಯಕ್ಷಪ್ರಮಾಣವೇ ಆಧಾರವಾಗಿರುವ ಅನುಮಾನವು ಹೇಗೆ ತಾನೇ ತಿಳಿಸೀತು ?

ಆದ್ದರಿಂದ ಅಲೌಕಿಕಪ್ರಮಾಣಮಾತ್ರದಿಂದ ಪರಮಾತ್ಮಸ್ವರೂಪವನ್ನು ತಿಳಿಯಲು ಸಾಧ್ಯ ಎಂದು ಸಿದ್ಧವಾಗುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಲ್ಲಿ 'ಚಕ್ಷುಃ' ಶಬ್ದವು ಪ್ರತ್ಯಕ್ಷಪ್ರಮಾಣವನ್ನು ಸೂಚಿಸುವುದರಿಂದ ಅದನ್ನನುಸರಿಸಿ ಹೇಳಿದ ವಾಕ್, ಮನಃ ಶಬ್ದಗಳಿಂದ ಶಬ್ದ ಮತ್ತು ಅನುಮಾನಪ್ರಮಾಣಗಳನ್ನು ತೆಗೆದು ಕೊಳ್ಳುವುದೇ ಉಚಿತ.

ಪ್ರತ್ಯಕ್ಷ, ಅನುಮಾನ, ಶಬ್ದಪ್ರಮಾಣಗಳಿಂದ ಪರಮಾತ್ಮಸ್ವರೂಪವನ್ನು ತಿಳಿಯ ಲಾಗದು, ಎಂಬುದರಿಂದ ಪರಮಾತ್ಮಸ್ವರೂಪವನ್ನು ಸ್ಪಷ್ಟಪಡಿಸಿದಂತಾಗುವುದೇ ? ಪರಮಾತ್ಮಸ್ವರೂಪವನ್ನು ಉಪದೇಶಿಸುವ ಪ್ರಕಾರ ಎಂತು ? ಎಂದಲ್ಲಿ 'ನ ವಿದ್ಮಃ' ಎಂದು ಉತ್ತರಿಸುತ್ತಾರೆ.

ಪ್ರತ್ಯಕ್ಷವಾಗಿ ಕಣ್ಣಿಗೆ ಕಾಣುವ ಮಡಕೆ ಇತ್ಯಾದಿ ವಸ್ತುಗಳನ್ನು ಅವುಗಳ ಆಕಾರ ಮೊದಲಾದುವುಗಳಿಂದ ಉಪದೇಶಿಸಬಲ್ಲೆವು. ಆ ರೀತಿಯಲ್ಲಿ ಪರಮಾತ್ಮನ ಸ್ವರೂಪವನ್ನು ತಿಳಿಸುವ ಬಗೆಯನ್ನು ನಾವು ತಿಳಿದಿಲ್ಲ. ಅಂದರೆ ಮಡಕೆ ಮುಂತಾದ ವಸ್ತುಗಳಿಗೆ ಆಕಾರವನ್ನು ಕೊಟ್ಟು ಉಪದೇಶಿಸುವಂತೆ ಪರಮಾತ್ಮಸ್ವರೂಪಕ್ಕೆ ಆಕಾರ ಕೊಟ್ಟು ಉಪದೇಶಿಸಲಾಗುವುದಿಲ್ಲ. ಪರಮಾತ್ಮಸ್ವರೂಪವೇ ಅಂತಹುದು. ಆದುದರಿಂದ ಇದು ಉಪದೇಶಿಸುವವನ ದೋಷವಲ್ಲ ಎಂದು ತಿಳಿ ಎಂದು ಭಾವ.

ಈ ಪ್ರಪಂಚದಲ್ಲಿ ಅನೇಕ ವಸ್ತುಗಳು ವಿಚಿತ್ರವಾಗಿವೆ. ಅಂತಹ ಒಂದು ವಿಚಿತ್ರವಸ್ತು ವನ್ನು ದೃಷ್ಟಾಂತವಾಗಿ ಕೊಟ್ಟು ಪರಮಾತ್ಮಸ್ವರೂಪವನ್ನು ಉಪದೇಶಿಸಬಹುದಲ್ಲವೇ ? ಎಂದು ಶಿಷ್ಯನು ಕೇಳಲು ಗುರುವು 'ನ ವಿಜಾನೀಮಃ' ಎಂದುತ್ತರಿಸುತ್ತಾರೆ. ಲೌಕಿಕವಾದ ವಸ್ತುಗಳಲ್ಲಿ ಲೌಕಿಕವಾದ ವಿಶೇಷಗಳೇ ಇವೆ. ಅವುಗಳಲ್ಲಿ ಯಾವ ವಿಶೇಷ ಸಂಗತಿಯು ಪರಮಾತ್ಮನ ಸ್ವರೂಪ ತಿಳಿಸಲು ಅರ್ಹವಾಗಿದೆ ಎಂದು ನಾವು ತಿಳಿದಿಲ್ಲ. ಹೀಗೆ ನಾವೇ ತಿಳಿಯದಿರುವಾಗ ವಿಶೇಷರೀತಿಯಲ್ಲಿ ಉಪದೇಶಿಸುವ ಬಗೆಯಾದರೂ ಎಂತು ?

ಲೌಕಿಕ ಪ್ರಮಾಣಗಳಿಂದ ತಿಳಿಯಲಸಾಧ್ಯವಾದ ಪರಮಾತ್ಮಸ್ವರೂಪಕ್ಕೆ ಲೌಕಿಕ ವಸ್ತುಗಳ ವಿಶೇಷಾಂಶಗಳು ದೃಷ್ಟಾಂತವಾಗಲಾರವು. ಅಲ್ಲದೆ ಪೂರ್ಣವಾಗಿ ಪರಮಾತ್ಮ ಸ್ವರೂಪದ ಉಪದೇಶವಾಗಲೀ ಪೂರ್ಣ ತಿಳಿವಾಗಲೀ ಉಂಟಾಗುವುದಿಲ್ಲ ಎಂದು ತಾತ್ಪರ್ಯ. ಆದುದರಿಂದ ಈಗ ತಿಳಿಸಿರುವ ಅಂಶದಿಂದಲೇ ತೃಪ್ತಿ ಹೊಂದು ಎಂಬುದೇ ಗುರುವಿನ ಅಭಿಪ್ರಾಯ.

ಅಥವಾ ಇಂದ್ರಿಯಗಳಿಗೆ ಪ್ರೇರಕನಾದ ದೇವನಾರು ? ಎಂಬ ಪ್ರಶ್ನೆಗೆ ಶ್ರೋತ್ರೇಂದ್ರಿ ಯಕ್ಕೆ ಶ್ರೋತ್ರರೂಪನೂ ಆಯಾಯಾ ಇಂದ್ರಿಯಗಳ ಪ್ರಕಾಶಕನೂ ಆದ ಒಬ್ಬ ಚೇತನ ನಿರುವನೆಂಬ ಉತ್ತರದಿಂದ ಬ್ರಹ್ಮಸ್ವರೂಪವನ್ನು ಸ್ಪಷ್ಟವಾಗಿ ಹೇಳಿದಂತಾಗುವುದಿಲ್ಲವೆಂದು 'ನ ತತ್ರ' ಎಂದು ವಿಶದವಾಗಿ ವಿವರಿಸುವರು.

ಲೌಕಿಕವಾದ ವಸ್ತುಸ್ವರೂಪವನ್ನು ತ್ರಿಕೋಣ, ಚತುರಶ್ರ, ಆಯತ, ಗಂಗೆದೊಗಲು, ಬಾಲ ಇತ್ಯಾದಿ ಆಕಾರದಿಂದಲೂ ಇದು ಹೀಗಿದೆ, ಇದು ಇಷ್ಟಿದೆ ಎಂಬುದರಿಂದಲೂ ತಿಳಿಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಹುದು. ಆದರೆ ಲೌಕಿಕ ಇಂದ್ರಿಯಗಳಿಂದ ತಿಳಿಯಲು ಅಸಾಧ್ಯವಾದ ಪರಮಾತ್ಮಸ್ವರೂಪ ವನ್ನು ಇದು ಹೀಗಿದೆ, ಇಷ್ಟಿದೆ ಎಂದು ತಿಳಿಸಲು ನಾವು ಸಮರ್ಥರಲ್ಲ ಎಂದು ತಾತ್ಪರ್ಯ.

ನ ವಿದ್ಮಃ – ಅಲೌಕಿಕವಾದ ವಸ್ತುಗಳನ್ನು ತಿಳಿದು ಉಪದೇಶಿಸಲು ಸಮರ್ಥರೆಂದು ಪ್ರಸಿದ್ಧರಾದ ನಮಗೂ ಪರಮಾತ್ಮಸ್ವರೂಪವು ಅಪಾರವಾದುದರಿಂದ ತಿಳಿದಿಲ್ಲ. ವೇದಾಂತ ವನ್ನು ಬಲ್ಲವರಾದ ನಾವು ಪರಮಾತ್ಮನ ಒಂದೊಂದೇ ಗುಣಗಳನ್ನು ಅರಿಯುವಲ್ಲೇ ಬಳಲಿರುವೆವು. ಆದ್ದರಿಂದ ಬ್ರಹ್ಮಸ್ವರೂಪ ಇಷ್ಟಿದೆ, ಹೀಗಿದೆ ಎಂದು ತಿಳಿಸಲು ಹೇಗೆ ಸಮರ್ಥರಾಗಬಲ್ಲೆವು ?

ಆದುದರಿಂದ 'ನ ವಿದ್ಮಃ' ಎಂಬುದು ಅಲೌಕಿಕಪ್ರಮಾಣವಾದ ವೇದವನ್ನು ತಿಳಿಸುತ್ತದೆ. ವೇದವೇ ಇಲ್ಲಿ ಗುರುವಿನ ಸ್ಥಾನದಲ್ಲಿದ್ದು ಉತ್ತರಿಸುತ್ತಿದೆ. 'ನ ವಿದ್ಮಃ' ಎಂಬ ಬಹುವಚನ ದಿಂದ 'ವೇದಗಳು ಅನಂತ' ಎಂದು ಸೂಚಿಸಲಾಗಿದೆ. ಆದರೂ ಪರಮಾತ್ಮನ ಸ್ವರೂಪವನ್ನು ಪೂರ್ಣವಾಗಿ ತಿಳಿದಿಲ್ಲ ಎಂದು ಹೇಳಿದಂತಾಗುತ್ತದೆ.

ಹೀಗಾದಲ್ಲಿ ಗುರು ಶಿಷ್ಯನಿಗೆ ಹೇಗೆ ಉತ್ತರಿಸಬಲ್ಲರು ? ಎಂಬ ಶಂಕೆಗೆ 'ನ ವಿಜಾನೀಮಃ' ಎಂದು ಉತ್ತರಿಸುತ್ತಾರೆ.

ಈ ಲೌಕಿಕವಾದ ವಸ್ತುಗಳಿಗಿಂತ ವಿಲಕ್ಷಣವಾದ, ಅಳತೆಗೆ ಮೀರಿದ, ಅಲೌಕಿಕವಾದ ವಸ್ತುಗಳನ್ನು ತಿಳಿಸಬಲ್ಲ ವೇದಗಳಿಂದಲೂ ಎಲ್ಲೆಯನ್ನು ಕಾಣಲಾರದ ಸ್ವರೂಪವನ್ನು ಯಾವ ರೀತಿ ಉಪದೇಶಿಸಬೇಕೆಂಬುದನ್ನು ನಾವು ಅರಿತಿಲ್ಲ. ಅಂದರೆ ಪೂರ್ಣವಾಗಿ ಬ್ರಹ್ಮಸ್ವರೂಪ ವನ್ನು ಉಪದೇಶಿಸಲಾಗಲೀ ತಿಳಿಯಲಿಕ್ಕಾಗಲೀ ಸಾಧ್ಯವಿಲ್ಲ ಎಂದು ತಾತ್ಪರ್ಯ.

ಬಾಹ್ಯವಸ್ತುಗಳಿಗಿಂತ ವಿಲಕ್ಷಣವಾದ, ಇಂತು, ಇಷ್ಟು ಎಂದು ಪರಿಚ್ಛೇದರಹಿತವಾದ ಪರಮಾತ್ಮಸ್ವರೂಪವನ್ನು ಲೌಕಿಕ ವಸ್ತುಗಳಂತೆ ಉಪದೇಶಿಸಲಾಗುವುದಿಲ್ಲ ಎಂಬಲ್ಲಿ ಶಂಕಾ ಪರಿಹಾರ ಹೇಗೆ ಎಂಬುದಕ್ಕೆ 'ಅನ್ಯದೇವ ತದ್ವಿದಿತಾತ್' ಎಂದು ಉತ್ತರಿಸುತ್ತಾರೆ.

ಜ್ಞಾನಗೋಚರವಾಗುವ ವಸ್ತುಗಳಿಗಿಂತ ವಿಲಕ್ಷಣವಾದುದು ಪರಮಾತ್ಮಸ್ವರೂಪ ; ಅಂದರೆ ತಿಳಿದ ವಸ್ತುಗಳ ಸಮುದಾಯದಲ್ಲಿ ಪರಮಾತ್ಮಸ್ವರೂಪವನ್ನು ಅಂತರ್ಭಾವ ಮಾಡಲು ಸಾಧ್ಯವಿಲ್ಲ. ಪರಮಾತ್ಮಸ್ವರೂಪವನ್ನು ಜ್ಞಾನಾಗೋಚರ (ಜ್ಞಾನಗೋಚರವಲ್ಲ) ಎಂದಲ್ಲಿ ಆಕಾಶಕುಸುಮದಂತೆ ತುಚ್ಛವು ಎಂದಾಗುವುದಿಲ್ಲವೇ ? ಇಲ್ಲ.

ಜ್ಞಾನಗೋಚರವಲ್ಲದ ವಸ್ತುವಿಗಿಂತ (ಆಕಾಶಕುಸುಮಕ್ಕಿಂತ) ವಿಲಕ್ಷಣವಾಗಿದೆ ಬ್ರಹ್ಮಸ್ವರೂಪ. ಆಕಾಶಪುಷ್ಪವು ತಿಳಿಯಲು ಸಾಧ್ಯವೇ ಇಲ್ಲದ ವಸ್ತು. ಪರಮಾತ್ಮ ಸ್ವರೂಪ ಹಾಗಲ್ಲ. ಉಪನಿಷತ್ಪ್ರಮಾಣಗಳಿಂದ ಅರಿಯಲು ಸಾಧ್ಯವಿದೆ. ಇದೇ ಆಕಾಶ ಪುಷ್ಪ ಮತ್ತು ಪರಮಾತ್ಮಸ್ವರೂಪಗಳಿಗೆ ಇರುವ ವ್ಯತ್ಯಾಸ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜ್ಞಾನಗೋಚರವಲ್ಲದ ವಸ್ತುವಿಗಿಂತ ವಿಲಕ್ಷಣ – ಇದು ಇಷ್ಟಿದೆ ಎಂದು ತಿಳಿಯಲು ಸಾಧ್ಯವಿಲ್ಲದುದರಿಂದ ವಿದಿತವಿಲಕ್ಷಣ. ಶಾಸ್ತ್ರಗಳಿಂದ ಅರಿಯಲು ಸಾಧ್ಯವಿರುವುದರಿಂದ 'ಅವಿದಿತವಿಲಕ್ಷಣವೂ ಆಗಿದೆ ಪರಬ್ರಹ್ಮಸ್ವರೂಪ' ಎಂದು ಉಪದೇಶಿಸಬೇಕು ಎಂದು ತಾತ್ಪರ್ಯ.

ಈ ಮಾತನ್ನು ನಮ್ಮ ಪೂರ್ವಾಚಾರ್ಯರುಗಳಿಂದ ಕೇಳಿ ತಿಳಿದಿದ್ದೇವೆ. ಅವರು ಸಂಪ್ರದಾಯಪರಂಪರೆಯಿಂದ ಬಂದ ವಿಷಯವನ್ನು ಪರ್ಯಾಲೋಚಿಸಿ, ಭಗವತ್ಸ್ವರೂಪವನ್ನು ಉಪದೇಶಿಸುವರು. ಆದುದರಿಂದ ಪರಮಾತ್ಮಸ್ವರೂಪವನ್ನು ಪೂರ್ಣವಾಗಿ ಉಪದೇಶಿಸುವುದಕ್ಕಾಗಲೀ ಪೂರ್ಣವಾಗಿ ತಿಳಿಯುವುದಕ್ಕಾಗಲೀ ಸಾಧ್ಯವಿಲ್ಲ. ಮತ್ತು ತಿಳಿದಿರುವುದಕ್ಕಿಂತಲೂ ವಿಲಕ್ಷಣವೂ ವೇದಾಂತವಾಕ್ಯಗಳಿಂದಲೇ ತಿಳಿಯಬೇಕಾಗಿರುವುದೂ ಆಗಿದೆ ಪರಮಾತ್ಮಸ್ವರೂಪ ಎಂದು ಭಾವ.

ಅಥವಾ 'ಅವಿದಿತ' ಶಬ್ದವು ಅಚಿದಂಶವನ್ನೂ, 'ವಿದಿತ' ಶಬ್ದವು ಚಿದಂಶವನ್ನೂ ತಿಳಿಸಿ, ಇವುಗಳಿಗಿಂತ ವಿಲಕ್ಷಣನಾದ ಸರ್ವೇಶ್ವರನೇ ಇವುಗಳ ಅಂತರ್ಯಾಮಿಯಾಗಿರುವನು ಎಂದರ್ಥ.

ಅಥವಾ ಈ ಪ್ರಪಂಚದಲ್ಲಿ ಅಚಿತ್ತನ್ನು ಪಂಡಿತಪಾಮರರೆಲ್ಲರೂ ತಿಳಿದಿರುವರು ಎಂದು ವಿದಿತ ಶಬ್ದವು ತಿಳಿಸುತ್ತದೆ. ಪ್ರಮಾಣವಿಶೇಷ, ಅಧಿಕಾರಿವಿಶೇಷಭೇದವಿಲ್ಲದೆ ತಿಳಿಯುವುದೇ 'ವೇದನ' ಶಬ್ದಾರ್ಥ. ಆದುದರಿಂದ ಪಂಡಿತ–ಪಾಮರ ಸಾಧಾರಣ ಎಂಬುದೇ ಸ್ವರಸವಾದ ಅರ್ಥ, ಎಂದು ಸುಬೋಧಿನೀಕಾರರ ಅಭಿಪ್ರಾಯ.

'ಅವಿದಿತ' ಶಬ್ದವು 'ವಿದಿತ' ಶಬ್ದದಿಂದ ಹೇಳಲ್ಪಟ್ಟ ಅಚಿತ್ತಿಗಿಂತ ಭಿನ್ನವಾದ ಚೇತನವನ್ನು ತಿಳಿಸುತ್ತದೆ. ಈ ಚಿತ್ತು-ಅಚಿತ್ತುಗಳಿಂದ ವಿಲಕ್ಷಣವಾದುದು ಪರಮಾತ್ಮಸ್ವರೂಪ ಎಂದು ತಾತ್ಪರ್ಯ. ಹೀಗೆ ನಮ್ಮ ಪೂರ್ವಾಚಾರ್ಯರಿಂದ ನಾವು ಕೇಳಿ ತಿಳಿದಿರುವೆವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೫

यद्वाचाऽनभ्युदितं येन वागभ्युद्यते ।
तदेव ब्रह्म त्वं विद्धि नेदं यदिदमुपासते ॥

ಯದ್ವಾಚಾಽನಭ್ಯುದಿತಂ ಯೇನ ವಾಗಭ್ಯುದ್ಯತೇ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥

ಪ್ರತಿಪದಾರ್ಥ

ಯತ್-ಯಾವ ಪರಬ್ರಹ್ಮಸ್ವರೂಪವು, ವಾಚಾ-ವಾಗಿಂದ್ರಿಯದಿಂದ, ಅನಭ್ಯುದಿತಮ್-ಪ್ರಕಾಶಿಸಲ್ಪಡುವುದಿಲ್ಲವೋ, ಯೇನ-ಯಾವ ಪರಬ್ರಹ್ಮದಿಂದ, ವಾಕ್-ವಾಗಿಂದ್ರಿಯವು, ಅಭ್ಯುದ್ಯತೇ-ಪ್ರಕಾಶಿಸಲ್ಪಡುತ್ತದೋ, ತದೇವ-ಅದನ್ನೇ, ತ್ವಮ್-ನೀನು, ಬ್ರಹ್ಮ-ಬ್ರಹ್ಮವೆಂದು, ವಿದ್ಧಿ-ತಿಳಿ, ಯತ್-ಯಾವ ವಸ್ತುವನ್ನು, ಇದಮಿತಿ-ಈ ಆಕಾರದಿಂದ ಕೂಡಿದೆ ಎಂದು, ಉಪಾಸತೇ-ಜನರು ಕಾಣುತ್ತಾರೋ, ತತ್-ಅದು, ಬ್ರಹ್ಮ ನ-ಬ್ರಹ್ಮವಲ್ಲ.

ತಾತ್ಪರ್ಯ

ವೇದವೇ ಮೊದಲಾದ ಎಲ್ಲ ಮಾತುಗಳನ್ನೂ ಪರಮಾತ್ಮನು ಪ್ರಕಾಶಪಡಿಸುತ್ತಾನೆ. ಆ ಪರಮಾತ್ಮನ ಸ್ವರೂಪವನ್ನು ವೇದವೇ ಮೊದಲಾದ ಯಾವುದೇ ಶಬ್ದಗಳಿಗೂ ಇಷ್ಟೆಂದು ತಿಳಿಸಲು ಸಾಮರ್ಥ್ಯವಿಲ್ಲ. ಅಂದರೆ ವೇದಗಳೂ ಪರಮಾತ್ಮನ ಸ್ವರೂಪವನ್ನು ವಿವರಿಸಲು ಹೊರಟು ಸೋತುಹೋದವು. ಬ್ರಹ್ಮವು, ಜನರು ಅಂಗೈಯ ನೆಲ್ಲೀಕಾಯಿಯಂತೆ ತಿಳಿಯುವ ವಸ್ತುವಲ್ಲ. ಬ್ರಹ್ಮವು ಅಳತೆಗೆ ಮೀರಿದುದು ಎಂದು ತಾತ್ಪರ್ಯ.

ರಂಗರಾಮಾನುಜಭಾಷ್ಯ[1]

ಏತದೇವ ಪ್ರಪಂಚಯತಿ—'ಯದ್ವಾಚಾನಭ್ಯುದಿತಂ....ನೇದಂ ಯದಿದಮುಪಾಸತೇ'। ವಾಗಾದಿಭಿರ್ಯದಪ್ರಕಾಶ್ಯಂ ಸ್ವಯಂ ವಾಗಾದೀಂದ್ರಿಯಪ್ರಕಾಶಕಂ ಚ, ತದೇವ ಬ್ರಹ್ಮ ಇತಿ ಜಾನೀಹಿ। ಯದ್ವಸ್ತು 'ಇದಮ್' ಇತಿ ಇದಂಕಾರಗೋಚರತಯಾ ಹಸ್ತಾಮಲಕವತ್ ಸುವಿದಿತತಯಾ ಉಪಾಸತೇ ಜನಾಃ; 'ತದ್ಬ್ರಹ್ಮ ನ' ಇತ್ಯರ್ಥಃ। ಏವಮುತ್ತರತ್ರಾಪಿ।

'ಯಚ್ಚಕ್ಷುಷಾ ನ ಪಶ್ಯತಿ ಯೇನ ಚಕ್ಷೂಂಷಿ ಪಶ್ಯತಿ'। ಯೇನ ಪರಮಾತ್ಮನಾ ಸಾಧನೇನ ಪುಮಾನ್ ಇತರತ್ ಪಶ್ಯತಿ ಇತ್ಯರ್ಥಃ। ಯತ್ಪ್ರಾಣೇನ ನ ಪ್ರಾಣಿತಿ ಯೇನ ಪ್ರಾಣಃ ಪ್ರಣೀಯತೇ'। ಪ್ರಣೀಯತೇ-ಪ್ರಾಣಿತಿ ಇತ್ಯರ್ಥಃ।

---

1. ಮಂತ್ರ 5 ರಿಂದ 9ರ ಪೂರ್ತಿ ಇಲ್ಲಿ ಅಡಕವಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾಷಾಂತರ

ಇದನ್ನೇ ವಿಶದವಾಗಿ ವರ್ಣಿಸುತ್ತಾನೆ—'ಯದ್ವಾಚಾಽನಭ್ಯುದಿತಂ........ನೇದಂ ಯದಿದ ಮುಪಾಸತೇ'। ಯಾವುದು ವಾಕ್ ಮೊದಲಾದ ಇಂದ್ರಿಯಗಳಿಂದ ಪ್ರಕಾಶಪಡಿಸ ಲಾರದುದೋ, ವಾಕ್ ಮೊದಲಾದ ಇಂದ್ರಿಯಗಳನ್ನು ಪ್ರಕಾಶಪಡಿಸುವಂತಹುದೋ ಅದೇ ಬ್ರಹ್ಮವೆಂದು ತಿಳಿ. ಯಾವ ವಸ್ತುವನ್ನು 'ಇದಮ್' – 'ಇದು' ಎಂದು ತೋರಿಬರುವುದು ಎಂದೂ, ಅಂಗೈ-ನೆಲ್ಲೀಕಾಯಿಯಂತೆ ಸ್ಫುಟವಾಗಿರುವುದು ಎಂದೂ ತಿಳಿದು ಜನರು ಉಪಾಸಿಸು ತ್ತಾರೆಯೋ ಅದು ಬ್ರಹ್ಮವಲ್ಲ ಎಂದರ್ಥ. ಹೀಗೆಯೇ ಮುಂದೆಯೂ ಸಹ ಅರ್ಥವನ್ನು ನಿರ್ಣಯಿಸಬೇಕು. ಯಚ್ಚಕ್ಷುಷಾ ನ ಪಶ್ಯತಿ ಯೇನ ಚಕ್ಷೂಂಷಿ ಪಶ್ಯತಿ। ಪುರುಷನು ಯಾವ ಪರಮಾತ್ಮನೆಂಬ ಸಾಧನದಿಂದ ಉಳಿದವಸ್ತುಗಳನ್ನು ನೋಡುವನೋ ಎಂದರ್ಥ. 'ಯತ್ಪ್ರಾಣೇನ ನ ಪ್ರಾಣಿತಿ ಯೇನ ಪ್ರಾಣಃ ಪ್ರಣೀಯತೇ। ಪ್ರಣೀಯತೇ – ಉಸಿರಾಟ ಮಾಡುತ್ತದೆ ಎಂದರ್ಥ.

ಭಾಷ್ಯಸಾರ

ವಾಗಾದಿಇಂದ್ರಿಯಗಳಿಗೆ ಪ್ರೇರಕವು, ಅವುಗಳಿಂದ ತಿಳಿಯಲು ಅಸಾಧ್ಯವೂ ಆದ ಪರಮಾತ್ಮಸ್ವರೂಪವು 'ಇದಂ' ಎಂಬ ಶಬ್ದಕ್ಕೆ ಗೋಚರವಾದುದಕ್ಕಿಂತ ಭಿನ್ನವೂ, ಆಳತೆಗೆ ಮೀರಿದುದೂ ಆಗಿದೆ ಎಂದು 'ಯದ್ವಾಚಾ' ಮೊದಲಾದ ಮಂತ್ರಗಳಿಂದ ವಿವರಿಸುತ್ತಾರೆ.

ಪರಮಾತ್ಮಸ್ವರೂಪವು ವಾಗಿಂದ್ರಿಯದಿಂದ ಪ್ರಕಾಶಿಸಲ್ಪಡುವುದಿಲ್ಲ. ಅಂದರೆ ವೇದ ಗಳಿಗೂ ಸಿಗುವುದಿಲ್ಲ. ಹೀಗಿರುವಾಗ ಲೌಕಿಕಶಬ್ದಗಳ ಬಗ್ಗೆ ಹೇಳಬೇಕಾದುದೇ ಇಲ್ಲ. ವಾಗಿಂದ್ರಿಯವು ಪರಮಾತ್ಮನಿಂದ ಪ್ರಕಾಶಿಸುತ್ತದೆ. ಅಂದರೆ ಜನರು ಪರಬ್ರಹ್ಮದಿಂದ ಪ್ರೇರಿತವಾದ ವಾಗಿಂದ್ರಿಯದ ಸಹಾಯದಿಂದ ಶಬ್ದೋಚ್ಚಾರ ಮಾಡುತ್ತಾರೆ. ಮನಸ್ಸು ಮೊದಲಾದ ಇಂದ್ರಿಯಗಳಿಗೆ ಪ್ರೇರಕನಾದವನನ್ನು ಬ್ರಹ್ಮಜಿಜ್ಞಾಸುವಾದ ನೀನು ಬ್ರಹ್ಮವೆಂದು ತಿಳಿ.

ಕಾಮಾಸಕ್ತರಾದ ಜನರು ಈ ಚಿದಚಿತ್ಸ್ವರೂಪವಾದ ಪ್ರಪಂಚವನ್ನು ಬ್ರಹ್ಮವೆಂದು ತಿಳಿಯುತ್ತಾರೆ. ಆಳತೆಗೊಳಪಟ್ಟು ಅಂಗೈಯನೆಲ್ಲಿಯಕಾಯಂತೆ ಪ್ರತ್ಯಕ್ಷವಾಗಿ ಕಾಣುವ ಈ ಪ್ರಪಂಚವು ಬ್ರಹ್ಮವಲ್ಲ.

ಸ್ವರೂಪದಿಂದಲೂ, ಗುಣದಿಂದಲೂ ಎಲ್ಲದಕ್ಕಿಂತ ಹಿರಿದಾದ, ಇಂದ್ರಿಯಗಳ ಪ್ರೇರಕನೂ ಇಂದ್ರಿಯಗಳಿಗೆ ಸಿಗದವನೂ ಆದ ಪರಮಾತ್ಮನನ್ನು ಕುರಿತು ಇದು ಬ್ರಹ್ಮ ಎಂದು ನಿರ್ದಿಷ್ಟ ವಾಗಿ ಹೇಳುವುದಾದರೂ ಹೇಗೆ ? ಯಾವ ಪ್ರಪಂಚವನ್ನು ಬ್ರಹ್ಮವೆಂದು ತಿಳಿಯುವರೋ ಅದು ಬ್ರಹ್ಮವಲ್ಲ ಎಂದು ಭಾವ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೬

यन्मनसा न मनुते येनाहुर्मनो मतम्
तदेव ब्रह्म त्वं विद्धि नेदं यदिदमुपासते ॥

ಯನ್ಮನಸಾ ನ ಮನುತೇ ಯೇನಾಹುರ್ಮನೋ ಮತಂ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥

ಪ್ರತಿಪದಾರ್ಥ

ಯತ್-ಯಾವ ಬ್ರಹ್ಮಸ್ವರೂಪವು, ಮನಸಾ-ಮನಸ್ಸಿನಿಂದ, ನ ಮನುತೇ-ತಿಳಿಯಲಾರದೋ, ಯೇನ-ಯಾವ ಪರಮಾತ್ಮನಿಂದ, ಮನಃ-ಮನಸ್ಸು, ಮತಮ್-ತಿಳಿಯಲ್ಪಡುತ್ತದೆ ಎಂದು, ಆಹುಃ-ಹೇಳುತ್ತಾರೋ, ತದೇವ-ಅದನ್ನೇ. ತ್ವಮ್-ನೀನು, ಬ್ರಹ್ಮ-ಬ್ರಹ್ಮವೆಂದು ವಿದ್ಧಿ-ತಿಳಿ, ಯತ್-ಯಾವ ವಸ್ತುವನ್ನು, ಇದಮಿತಿ-ಈ ಆಕಾರದಿಂದ ಕೂಡಿದೆ ಎಂದು, ಉಪಾಸತೇ-ನೋಡುವರೋ, ತದಿದಮ್-ಈ ಜಗತ್ತು, ಬ್ರಹ್ಮ ನ-ಬ್ರಹ್ಮವಲ್ಲ.

ತಾತ್ಪರ್ಯ

ಎಲ್ಲರ ಮನಸ್ಸನ್ನು ತಿಳಿದುಕೊಳ್ಳಬಲ್ಲ ಪರಮಾತ್ಮನನ್ನು ಯಾರೂ ಮನಸ್ಸಿನಿಂದ ತಿಳಿಯಲು ಸಾಧ್ಯವಿಲ್ಲ. ಪರಮಾತ್ಮಸ್ವರೂಪವು ಮನಸ್ಸಿಗೂ ಮೀರಿದುದು. ಪರಮಾತ್ಮ, ಇಷ್ಟೆಂದು ಅಳತೆಮಾಡಿ ಮನಸ್ಸಿನಿಂದ ತಿಳಿಯತಕ್ಕ ವಸ್ತುವಲ್ಲ.

ಭಾಷ್ಯಸಾರ

ಪರಮಾತ್ಮಸ್ವರೂಪವನ್ನು ಮನಸ್ಸೆಂಬ ಇಂದ್ರಿಯದಿಂದ ಹೀಗಿದೆ ಎಂದು ಪೂರ್ಣವಾಗಿ ತಿಳಿಯಲಾಗುವುದಿಲ್ಲ. ಪರಮಾತ್ಮನು ಅಂತಃಕರಣರೂಪವಾದ ಮನಸ್ಸನ್ನು ಪ್ರಕಾಶಪಡಿಸುತ್ತಾನೆ. ಪರಮಾತ್ಮನಿಂದ ಪ್ರೇರಿತವಾದ ಮನಸ್ಸು ಇತರ ವಸ್ತುಗಳನ್ನು ತಿಳಿಯಲು ಸಮರ್ಥವಾಗುತ್ತದೆ ಎಂದು ಪೂರ್ವಾಚಾರ್ಯರು ಹೇಳುತ್ತಾರೆ. ಅಥವಾ 'ಮತಮ್' ಎಂಬಲ್ಲಿ ಭಾವೇ 'ಕ್ತ' ಪ್ರತ್ಯಯ. ಇದರಿಂದ ಮನೋವೃತ್ತಿ ಎಂದು ಅರ್ಥವಾಗುತ್ತದೆ. ಇಲ್ಲಿ 'ಅರ್ಶಾದ್ಯಚ್' ಪ್ರತ್ಯಯ ಬಂದಿದೆ. ಇದರಿಂದ ಮನಸ್ಸು ಪರಮಾತ್ಮನಿಂದ ಮನನ ವ್ಯಾಪಾರವುಳ್ಳದ್ದಾಗುತ್ತದೆ. ಆದುದರಿಂದ ಬ್ರಹ್ಮ ಮನಸ್ಸಿಗೂ ಮನಸ್ಸು. ಇಂತಹುದನ್ನೇ ಬ್ರಹ್ಮವೆಂದು ತಿಳಿ. ಈ ಕಣ್ಣಿಗೆ ಕಾಣುವ ಪ್ರಪಂಚವು ಬ್ರಹ್ಮವಲ್ಲ. ಬ್ರಹ್ಮ ಅಗೋಚರವಾದ ವಸ್ತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೬

यच्चक्षुषा न पश्यति येन चक्षूंषि पश्यति ।
तदेव ब्रह्म त्वं विद्धि नेदं यदिदमुपासते ॥

ಯಚ್ಚಕ್ಷುಷಾ ನ ಪಶ್ಯತಿ ಯೇನ ಚಕ್ಷೂಂಷಿ ಪಶ್ಯತಿ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥

ಪ್ರತಿಪದಾರ್ಥ

ಯತ್–ಯಾವ ಬ್ರಹ್ಮಸ್ವರೂಪವನ್ನು, ಚಕ್ಷುಷಾ–ಕಣ್ಣಿನಿಂದ, ನ ಪಶ್ಯತಿ–ನೋಡಲಾರೆವೋ, ಯೇನ–ಯಾವ ಪರಮಾತ್ಮನಿಂದ, ಚಕ್ಷೂಂಷಿ-ಕಣ್ಣುಗಳು, ಪಶ್ಯತಿ-ನೋಡುತ್ತವೋ, ತದೇವ–ಅದನ್ನೇ, ತ್ವಮ್-ನೀನು, ಬ್ರಹ್ಮ–ಬ್ರಹ್ಮವೆಂದು, ವಿದ್ಧಿ-ತಿಳಿ, ಯತ್-ಯಾವುದನ್ನು, ಇದಮಿತಿ-ಇಷ್ಟೆಂದು, ಉಪಾಸತೇ–ತಿಳಿಯುತ್ತಾರೋ. ತದಿದಮ್–ಅಂತಹ ಈ ಜಗತ್ತು, ಬ್ರಹ್ಮ ನ–ಬ್ರಹ್ಮವಲ್ಲ.

ತಾತ್ಪರ್ಯ

ಪರಮಾತ್ಮನನ್ನು ನಮ್ಮ ಕಣ್ಣಿನಿಂದ ನೋಡಲಾಗುವುದಿಲ್ಲ. ನಮ್ಮ ಕಣ್ಣಿಗೆ ರೂಪ ನೋಡುವ ಶಕ್ತಿಯನ್ನು ಪರಮಾತ್ಮನು ಕೊಡುತ್ತಾನೆ. ಅಳತೆಗೆ ಒಳಪಟ್ಟ ಈ ಪ್ರಪಂಚ ಬ್ರಹ್ಮವಲ್ಲ. ಅದು ಇಂದ್ರಿಯಾಗೋಚರ.

ಭಾಷ್ಯಸಾರ

ಯಾರೂ ಚಕ್ಷುರಿಂದ್ರಿಯದಿಂದ ಪರಮಾತ್ಮನನ್ನು ನೋಡಲಾಗುವುದಿಲ್ಲ. ಪರಮಾತ್ಮನ ಸಹಾಯದಿಂದ ಕಣ್ಣುಗಳು ನೋಡುತ್ತವೆ. ಇಲ್ಲಿ 'ನ ಪಶ್ಯಂತಿ' ಎಂದು ಬಹುವಚನವಿರಬೇಕಿತ್ತು. ಏಕವಚನವು ಆರ್ಷಪ್ರಯೋಗ.

[1]ಅಥವಾ ಪಶ್ಯಂತಿ ಅಂದರೆ ಪರಮಾತ್ಮನಿಂದ ಕಣ್ಣುಗಳು ನೋಡಲ್ಪಡುತ್ತವೆ ಎಂದರ್ಥ. ಚಕ್ಷುರಿಂದ್ರಿಯಕ್ಕೆ ಅತೀಂದ್ರಿಯತ್ವವು ನಮ್ಮ ದೃಷ್ಟಿಯಿಂದಲೇ ವಿನಃ ಪರಮಾತ್ಮನ ದೃಷ್ಟಿಯಿಂದಲ್ಲ ಎಂದು ಭಾವ. ಇಲ್ಲಿ ಬಹುವಚನಕ್ಕೆ ಬದಲಾಗಿ ಏಕವಚನವೂ, ಕರ್ಮಾರ್ಥದಲ್ಲಿ ಕರ್ತೃಪ್ರತ್ಯಯವೂ ಆರ್ಷಪ್ರಯೋಗವಾದುದರಿಂದ ಸಾಧು. ಇಂತಹ ಕಣ್ಣಿಗೆ ಪ್ರೇರಕನಾದವನನ್ನೇ ಬ್ರಹ್ಮವೆಂದು ತಿಳಿ. ಈ ಕಣ್ಣಿಗೆ ಕಾಣುವ ಪ್ರಪಂಚವು ಬ್ರಹ್ಮವಲ್ಲ.

---

1. ರಾಮಾನಂದರ ಅಭಿಪ್ರಾಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೮

यच्छ्रोत्रेण न श्रुणोति येन श्रोत्रमिदं श्रुतम् ।
तदेव ब्रह्म त्वं विद्धि नेदं यदिदमुपासते ॥

ಯಚ್ಛ್ರೋತ್ರೇಣ ನ ಶ್ರುಣೋತಿ ಯೇನ ಶ್ರೋತ್ರಮಿದಂ ಶ್ರುತಂ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥

ಪ್ರತಿಪದಾರ್ಥ

ಯತ್–ಯಾವ ಬ್ರಹ್ಮಸ್ವರೂಪವನ್ನು, ಶ್ರೋತ್ರೇಣ–ಶ್ರೋತ್ರೇಂದ್ರಿಯದಿಂದ, ನ ಶ್ರುಣೋತಿ–ಕೇಳಲಾರೆವೋ, ಯೇನ–ಯಾವ ಪರಮಾತ್ಮನಿಂದ, ಇದಂ ಶ್ರೋತ್ರಮ್–ಈ ಶ್ರೋತ್ರೇಂದ್ರಿಯವು, ಶ್ರುತಂ ಭವತಿ–ಕೇಳಲು ಸಮರ್ಥವಾಗುವುದೋ, ತದೇವ–ಅದನ್ನೇ, ತ್ವಮ್–ನೀನು, ಬ್ರಹ್ಮ–ಬ್ರಹ್ಮವೆಂದು, ವಿದ್ಧಿ–ತಿಳಿ, ಯತ್–ಯಾವುದನ್ನು, ಇದಮ್–ಇಷ್ಟೆಂದು, ಉಪಾಸತೇ–ತಿಳಿಯುವರೋ, ತದಿದಮ್–ಅಂತಹ ಈ ಜಗತ್ತು, ಬ್ರಹ್ಮ ನ–ಬ್ರಹ್ಮವಲ್ಲ.

ತಾತ್ಪರ್ಯ

ಶ್ರೋತ್ರೇಂದ್ರಿಯಕ್ಕೆ ಕೇಳುವ ಶಕ್ತಿಕೊಡುವವನು ಪರಮಾತ್ಮ. ಶ್ರೋತ್ರೇಂದ್ರಿಯದಿಂದಲೂ ಪರಬ್ರಹ್ಮಸ್ವರೂಪವನ್ನು ತಿಳಿಯಲು ಸಾಧ್ಯವಿಲ್ಲ. ಅಳತೆಗೆ ಒಳಪಟ್ಟ ಈ ಪ್ರಪಂಚ ಬ್ರಹ್ಮವಲ್ಲ. ಅವನು ಶ್ರೋತ್ರೇಂದ್ರಿಯಕ್ಕೂ ಮೀರಿದವನು.

ಭಾಷ್ಯಸಾರ

ಯಾರೂ ಶ್ರೋತ್ರೇಂದ್ರಿಯದಿಂದ ಪರಮಾತ್ಮಸ್ವರೂಪವನ್ನು ತಿಳಿಯಲಾರರು. ಅಂದರೆ ಪರಮಾತ್ಮತತ್ತ್ವವು ಶ್ರೋತ್ರೇಂದ್ರಿಯಾಗೋಚರ. ಆದುದರಿಂದ ಬ್ರಹ್ಮವು ಶ್ರೋತ್ರೇಂದ್ರಿಯಕ್ಕೆ ವಿಷಯವಾಗಲಾರದು. ಪರಮಾತ್ಮನಿಂದ ಪ್ರೇರಿತವಾದ ಶ್ರೋತ್ರೇಂದ್ರಿಯವು ಶ್ರಾವಣಪ್ರತ್ಯಕ್ಷಕ್ಕೆ ಸಾಧನವಾಗುವುದು. ಅಂದರೆ ಪರಮಾತ್ಮನ ಸಹಾಯದಿಂದ ಶ್ರೋತ್ರೇಂದ್ರಿಯವು ಕೇಳಲು ಶಕ್ತವಾಗುತ್ತದೆ. ಹೀಗೆ ಕಿವಿಗೆ ಪ್ರೇರಕನಾದವನನ್ನೇ ಬ್ರಹ್ಮವೆಂದು ತಿಳಿ. ಈ ಕಣ್ಣಿಗೆ ಕಾಣುವ ಪ್ರಪಂಚವು ಬ್ರಹ್ಮವಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೯

यत्प्राणेन प्राणिति येन प्राणः प्रणीयते ।
तदेव ब्रह्म त्वं विद्धि नेदं यदिदमुपासते ॥

ಯತ್ಪ್ರಾಣೇನ ಪ್ರಾಣಿತಿ ಯೇನ ಪ್ರಾಣಃ ಪ್ರಣೀಯತೇ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ॥

ಪ್ರತಿಪದಾರ್ಥ

ಯತ್-ಯಾವ ಬ್ರಹ್ಮಸ್ವರೂಪವು, ಪ್ರಾಣೇನ-ಪ್ರಾಣವಾಯುವಿನಿಂದ, ನ ಪ್ರಾಣಿತಿ–ಉಸಿರಾಡುವುದಿಲ್ಲವೋ, ಯೇನ–ಯಾವ ಪರಮಾತ್ಮನಿಂದ, ಪ್ರಾಣಃ–ಪ್ರಾಣವು, ಪ್ರಣೀಯತೇ ಉಸಿರಾಟದ ಶಕ್ತಿಯುಳ್ಳದ್ದಾಗುವುದೋ, ತದೇವ–ಅದನ್ನೇ, ತ್ವಮ್–ನೀನು, ಬ್ರಹ್ಮ-ಬ್ರಹ್ಮವೆಂದು, ವಿದ್ಧಿ–ತಿಳಿ, ಯದಿದಮ್–ಯಾವ ಈ ಜಗತ್ತನ್ನು ಇಷ್ಟೆಂದು, ಉಪಾಸತೇ–ತಿಳಿಯುವರೋ, ತದಿದಮ್–ಈ ಜಗತ್ತು, ಬ್ರಹ್ಮ ನ–ಬ್ರಹವಲ್ಲ.

ತಾತ್ಪರ್ಯ

ಪರಮಾತ್ಮನು ಪ್ರಾಣವಾಯುವಿನ ಸಹಕಾರದಿಂದ ಉಸಿರಾಡುವುದಿಲ್ಲ. ಪರಮಾತ್ಮನಿಂದಲೇ ಪ್ರಾಣಕ್ಕೆ ಉಸಿರಾಡುವ ಶಕ್ತಿ ಬಂದಿದೆ. ಅವನು ಅಳತೆಗೆ ಮೀರಿದವನು. ಆದ್ದರಿಂದ ಈ ಅಳತೆಗೆ ಒಳಪಟ್ಟ ಪ್ರಪಂಚ ಬ್ರಹ್ಮವಲ್ಲ.

ಭಾಷ್ಯಸಾರ

ಮನಸ್ಸು ಮೊದಲಾದ ಇಂದ್ರಿಯಗಳಿಗೆ ಪ್ರೇರಕವಾದ ಪರಮಾತ್ಮತತ್ತ್ವವು ಪ್ರಾಣವಾಯುವಿನಿಂದ ಉಸಿರಾಡುವುದಿಲ್ಲ. ಪರಮಾತ್ಮನಿಂದ ಪ್ರೇರೇಪಿಸಲ್ಪಟ್ಟ ಪ್ರಾಣವಾಯುವು ಉಸಿರಾಡಲು ಸಮರ್ಥವಾಗಿ ಶರೀರಧಾರಣರೂಪವಾದ ತನ್ನ ಕಾರ್ಯವನ್ನು ಮಾಡಲು ಸಮರ್ಥವಾಗುತ್ತದೆ. ಇಂತಹುದನ್ನೇ ಬ್ರಹ್ಮವೆಂದು ತಿಳಿ. ಈ ಪ್ರಪಂಚವು ಬ್ರಹ್ಮವಲ್ಲ. ಅದು ಅಗೋಚರವಾದ ವಸ್ತು.

—ಮೊದಲನೆಯ ಖಂಡ ಮುಗಿಯಿತು—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದ್ವಿತೀಯಖಂಡ

ಮಂತ್ರ ೧

यदि मन्यसे सुवेदेति दभ्रमेवापि नूनं
त्वं वेत्थ ब्रह्मणो रूपम् ।
यदस्य त्वं यदस्य देवेषु अथ नु
मीमांस्यमेव ते मन्ये विदितम् ॥

ಯದಿ ಮನ್ಯಸೇ ಸುವೇದೇತಿ ದಭ್ರಮೇವಾಪಿ ನೂನಂ
ತ್ವಂ ವೇತ್ಥ ಬ್ರಹ್ಮಣೋ ರೂಪಂ ।
ಯದಸ್ಯ ತ್ವಂ ಯದಸ್ಯ ದೇವೇಷು ಅಥ ನು
ಮೀಮಾಂಸ್ಯಮೇವ ತೇ ಮನ್ಯೇ ವಿದಿತಂ ॥

ಪ್ರತಿಪದಾರ್ಥ

ಅಹಂ-ನಾನು, ಸುವೇದ ಇತಿ-ಬ್ರಹ್ಮಸ್ವರೂಪವನ್ನು ಚೆನ್ನಾಗಿ ತಿಳಿದಿರುತ್ತೇನೆ ಎಂದು, ತ್ವಮ್-ನೀನು, ಮನ್ಯಸೇ ಯದಿ-ತಿಳಿದಿದ್ದೇ ಆದರೆ, ದಭ್ರಮೇವ-(ಅದು) ಅತ್ಯಲ್ಪವೇ ಸರಿ. ನೂನಮ್-(ಇದು) ನಿಶ್ಚಯವು. ಅಸ್ಯ ಬ್ರಹ್ಮಣಃ-ಈ ಬ್ರಹ್ಮದ, ರೂಪಂ-ಸ್ವರೂಪವನ್ನು, ಅಸ್ಯ-ಈ ಲೋಕದಲ್ಲಿ, ತ್ವಂ-ನೀನು, ಯತ್-ಯಾವುದೆಂದು. ವೇತ್ಥ-ತಿಳಿಯುತ್ತೀಯೋ, ದೇವೇಷು-ಬ್ರಹ್ಮರುದ್ರಾದಿಗಳಲ್ಲಿ, (ದೇವಲೋಕದಲ್ಲಿ), ಯತ್-ಯಾವುದೆಂದು, ವೇತ್ಥ-ತಿಳಿಯುತ್ತೀಯೋ, (ತದಪಿ-ಅದೂ), ದಭ್ರಮೇವ-ಅತ್ಯಲ್ಪವೇ ಆಗಿರುತ್ತದೆ. ಅಥ ನು-ಅನಂತರ, ತೇ-ನಿನ್ನಿಂದ, ಮೀಮಾಂಸ್ಯಮೇವ-ಬ್ರಹ್ಮಸ್ವರೂಪವು ಅರ್ಥಪೂರ್ಣವಾಗಿ ವಿಚಾರಿಸಲ್ಪಡತಕ್ಕದ್ದೇ ಆಗಿದೆ ಎಂದು ಗುರುಗಳು ಹೇಳಿದರು. (ಈ ಮಾತನ್ನು ಕೇಳಿದ ಶಿಷ್ಯನು) ವಿದಿತಂ ಮನ್ಯೇ-(ಈ ಹಿಂದೆ ನಾನು ಬ್ರಹ್ಮಸ್ವರೂಪವನ್ನು ಚೆನ್ನಾಗಿ ಅರಿತಿರಲಿಲ್ಲ. ಈಗ ಆಲೋಚಿಸಿದನಂತರ ಬ್ರಹ್ಮಸ್ವರೂಪವು) ತಿಳಿಯಿತು ಎಂದು ಭಾವಿಸುತ್ತೇನೆ ಎಂದನು.

ತಾತ್ಪರ್ಯ

ಬ್ರಹ್ಮಸ್ವರೂಪವನ್ನು ಅಳತೆಗೊಳಪಡಿಸಿ ತಿಳಿಯುವುದು ಸಾಧ್ಯವಿಲ್ಲ ಎಂಬ ವಿಷಯವನ್ನು 'ನೇದಂ ಯದಿದಮುಪಾಸತೇ' ಎಂಬ ಮಾತುಗಳಿಂದ ಈ ಹಿಂದೆ ಹೇಳಲಾಯಿತು. ಅದೇ ವಿಷಯವನ್ನು ದೃಢಪಡಿಸಲು ಗುರುವು 'ಯದಿ ಮನಸ್ಯೇ ಸುವೇದೇತಿ' ಮೊದಲಾದ ಮಂತ್ರಗಳಿಂದ ಉಪದೇಶಿಸುತ್ತಾರೆ.

ಶಿಷ್ಯನೇ ! ಈ ಲೋಕ ಮತ್ತು ದೇವಲೋಕಗಳಲ್ಲಿರುವ ಪರಮಾತ್ಮನ ವಿಭವ, ವ್ಯೂಹ ರೂಪಗಳನ್ನು ತಿಳಿದು, ನಾನು ಪರಮಾತ್ಮನ ಸ್ವರೂಪವನ್ನು ಚೆನ್ನಾಗಿ ತಿಳಿದಿರುತ್ತೇನೆ ಎಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನೀನು ಭಾವಿಸಿದ್ದರೆ, ನೀನು ತಿಳಿದಿರುವುದು ಪರಮಾತ್ಮನ ಸ್ವರೂಪದಲ್ಲಿ ಸ್ವಲ್ಪ ಭಾಗ ಮಾತ್ರ. ನೀನು ಬ್ರಹ್ಮಸ್ವರೂಪದ ಬಗ್ಗೆ ಇನ್ನೂ ವಿಚಾರ ಮಾಡಿ ತಿಳಿದುಕೊಳ್ಳಬೇಕು ಎಂದು ಗುರುವು ಶಿಷ್ಯನಿಗೆ ಹೇಳುತ್ತಾನೆ. ಆಗ ಶಿಷ್ಯನು ನಾನು ಈ ಮೊದಲು ಬ್ರಹ್ಮಸ್ವರೂಪವನ್ನು ಚೆನ್ನಾಗಿ ತಿಳಿದಿರಲಿಲ್ಲ. ಈಗ ವಿಚಾರ ಮಾಡಿದುದರಿಂದ ಪರಮಾತ್ಮಸ್ವರೂಪವು ತಿಳಿಯಿತು ಎಂದು ಹೇಳುತ್ತಾನೆ.

ರಂಗರಾಮಾನುಜಭಾಷ್ಯ

ಶಿಷ್ಯಂ ಪ್ರತಿ ಆಹ–'ಯದಿ ಮನ್ಯಸೇ ಸುವೇದೇತಿ....ಅಥ ನು ಮೀಮಾಂಸ್ಯಮೇವ ತೇ' । ಅಹಂ ಬ್ರಹ್ಮಸ್ವರೂಪಂ ಸುಷ್ಠು ವೇದೇತಿ ಯದಿ ಮನ್ಯಸೇ, ನ ತತ್ ತಥಾ । ಅಸ್ಯ ಬ್ರಹ್ಮಣ ಇಹ ಲೋಕೇ ಯದಪಿ ರೂಪಂ ತ್ವಂ ವೇತ್ಥ, ತನ್ನೂನಂ ದಭ್ರಮೇವ–ಅಲ್ಪಮೇವ । ದೇವೇಷು ಯದ್ರೂಪಂ ತ್ವಂ ವೇತ್ಥ, ತದಪಿ ದಭ್ರಮೇವ–ಅಲ್ಪಮೇವ । ತ್ವಯಾ ಜ್ಞಾತಂ ಸರ್ವಂ ಬ್ರಹ್ಮಣೋ ರೂಪಮಲ್ಪಮೇವ । ನ ಸರ್ವಂ ಬ್ರಹ್ಮರೂಪಂ ತ್ವಯಾ ಜ್ಞಾತಮ್ । ಅತಃಪರಮೇವ ತೇ ಬ್ರಹ್ಮ ವಿಚಾರ್ಯಮ್ ; ನಾತಃಪೂರ್ವಂ ಸಮ್ಯಗ್ವಿಚಾರಿತಮಿತ್ಯರ್ಥಃ । ಏತದ್ವಾಕ್ಯಂ ಶ್ರುತ್ವಾ ಸಮ್ಯಗ್ವಿಚಾರ್ಯ ಶಿಷ್ಯ ಆಹ 'ಮನ್ಯೇ ವಿದಿತಮ್'। ಅಹಂ ವಿದಿತಮೇವ ಮನ್ಯೇ ॥

ಭಾಷಾಂತರ

ಶಿಷ್ಯನಿಗೆ ಹೇಳುತ್ತಾನೆ.–'ಯದಿ ಮನ್ಯಸೇ ಸುವೇದೇತಿ....ಅಥ ನು ಮೀಮಾಂಸ್ಯಮೇವ ತೇ' । 'ನಾನು ಬ್ರಹ್ಮಸ್ವರೂಪವನ್ನು ಚೆನ್ನಾಗಿ ತಿಳಿದಿರುತ್ತೇನೆ' ಎಂದು ತಿಳಿಯುತ್ತೀಯಾದರೆ ಅದು ಹಾಗಲ್ಲ. (ನೀನು ತಿಳಿದಿರುವುದು ನಿಜವಲ್ಲ). ಈ ಲೋಕದಲ್ಲಿ ಪರಬ್ರಹ್ಮದ ಯಾವುದೇ ರೂಪವನ್ನು ನೀನು ತಿಳಿದರೂ, ಅದು ನಿಜವಾಗಿಯೂ ದಭ್ರಮೇವ–ಅಲ್ಪವೇ ಆಗಿದೆ. ದೇವತೆಗಳಲ್ಲಿ ಯಾವ ರೂಪವನ್ನು ತಿಳಿದರೂ ದಭ್ರಮೇವ–ಅತಿ ಕಡಿಮೆಯೇ ಆಗಿದೆ. ನೀನು ತಿಳಿದಿರುವ ಎಲ್ಲ ಬ್ರಹ್ಮಸ್ವರೂಪವೂ ಕಡಿಮೆಯೇ ಆಗಿದೆ. ನೀನು ಬ್ರಹ್ಮದ ಎಲ್ಲ ರೂಪಗಳನ್ನೂ ತಿಳಿದಿಲ್ಲ. ಆದ್ದರಿಂದ ಪರಬ್ರಹ್ಮವನ್ನು ಕುರಿತು ನೀನು ವಿಚಾರ ಮಾಡಲೇಬೇಕು ; ಇದಕ್ಕೂ ಹಿಂದೆ ಸರಿಯಾಗಿ ವಿಚಾರಮಾಡಲಿಲ್ಲ, ಎಂದರ್ಥ. ಈ ವಾಕ್ಯವನ್ನು ಕೇಳಿದ ಮೇಲೆ ಸಮಂಜಸವಾಗಿ ವಿಚಾರಮಾಡಿ ಶಿಷ್ಯನು ಹೇಳುತ್ತಾನೆ–'ಮನ್ಯೇ ವಿದಿತಂ' ನಾನು (ಬ್ರಹ್ಮವನ್ನು) ಅರಿತೇ ಇದ್ದೇನೆಂದು ಭಾವಿಸುತ್ತೇನೆ.

ಭಾಷ್ಯಸಾರ

ಎಲೈ ಶಿಷ್ಯನೇ ! 'ನಾನು ಬ್ರಹ್ಮಸ್ವರೂಪವನ್ನು ಚೆನ್ನಾಗಿ ತಿಳಿದಿರುವೆನು' ಎಂದು ನೀನು ಭಾವಿಸುವುದಾದರೆ ಬ್ರಹ್ಮಸ್ವರೂಪವನ್ನು ಪರಿಚ್ಛಿನ್ನವಾಗಿ ತಿಳಿದಂತಾಗುವುದು. ಆದುದರಿಂದ ನೀನು ಬ್ರಹ್ಮಸ್ವರೂಪದ ಸ್ವಲ್ಪಭಾಗವನ್ನು ಮಾತ್ರ ತಿಳಿದಿರುವೆ ಎಂಬ ವಿಷಯ ನಿಶ್ಚಯವಾಗುತ್ತದೆ. ಏಕೆಂದರೆ ಬ್ರಹ್ಮಸ್ವರೂಪ ಅನಂತವಾದುದು. ಅದನ್ನು ಪೂರ್ಣವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಿಳಿಯಲಾಗುವುದಿಲ್ಲ. ಯಾವುದು ಸ್ಪಷ್ಟವಾಗಿ ಕಾಣುವುದೋ ಅದು ಪರಿಚ್ಛಿನ್ನವಾದುದು. ಅಪರಿಚ್ಛಿನ್ನವಾದ ಬ್ರಹ್ಮಸ್ವರೂಪವನ್ನು 'ಅಂಗೈಯ ನೆಲ್ಲೀಕಾಯಂತೆ' ಸ್ಪಷ್ಟವಾಗಿ ಕಾಣಲಾಗುವುದಿಲ್ಲ.

ನಿನ್ನಲ್ಲಿ ಅಂತರ್ಯಾಮಿಯಾಗಿರುವ ಬ್ರಹ್ಮಸ್ವರೂಪವನ್ನೂ ದೇವತೆಗಳಲ್ಲಿರುವ ಬಹ್ಮಸ್ವರೂಪವನ್ನೂ ನೀನು ತಿಳಿದಿರುವೆ ಎಂಬ ಅಂಶ ವಿಚಾರಣೀಯ. ಅಂದರೆ ಅದೂ ಅತ್ಯಲ್ಪವಾದ ಭಾಗ ಮಾತ್ರ ಎಂದು ಭಾವ. ಅನಂತವಾದ ಬ್ರಹ್ಮಸ್ವರೂಪವನ್ನು ನೀನು ಈಗಲೂ ಪೂರ್ಣವಾಗಿ ತಿಳಿದಿಲ್ಲ. ಬ್ರಹ್ಮಸ್ವರೂಪದ ಸ್ವಭಾವವು ಪೂರ್ಣವಾಗಿ ತಿಳಿಯಲಾರದ್ದು. ಈ ಕಾರಣದಿಂದ ನೀನು ಬ್ರಹಸ್ವರೂಪವನ್ನು ಪರಿಚ್ಛಿನ್ನವಾಗಿಯೇ ತಿಳಿದಂತಾಗುವುದು. ಪೂರ್ಣವಾಗಿ ತಿಳಿದಂತಾಗುವುದಿಲ್ಲ. ಆದುದರಿಂದ ಬ್ರಹ್ಮಸ್ವರೂಪದ ಬಗ್ಗೆ ಪುನಃ ಚಿಂತಿಸಬೇಕು ಎಂದು ಗುರುವು ಹೇಳಿದನು. ಶಿಷ್ಯನು ಸ್ವಲ್ಪ ಹೊತ್ತು ಆಲೋಚಿಸಿ, ಈಗ ಬ್ರಹ್ಮಸ್ವರೂಪವನ್ನು ತಿಳಿದಿರುವೆನೆಂದು ಭಾವಿಸುತ್ತೇನೆ ಎಂದು ಹೇಳಿದನು.

—o—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೨

नाहं मन्ये सुवेदेति नो न वेदेति वेद च ।
यो नस्तद्वेद तद्वेद नो न वेदेति वेद च ॥

ನಾಹಂ ಮನ್ಯೇ ಸುವೇದೇತಿ ನೋ ನ ವೇದೇತಿ ವೇದ ಚ ।
ಯೋ ನಸ್ತದ್ವೇದ ತದ್ವೇದ ನೋ ನ ವೇದೇತಿ ವೇದ ಚ ॥

ಪ್ರತಿಪದಾರ್ಥ

ಅಹಮ್-ನಾನು, ಸುವೇದೇತಿ-ಬ್ರಹ್ಮವನ್ನು ಚೆನ್ನಾಗಿ ತಿಳಿದಿರುವೆನೆಂದು, ನ ಮನ್ಯೇ-ತಿಳಿಯುವುದಿಲ್ಲ, ನ ವೇದ ಇತಿ-ತಿಳಿದಿಲ್ಲ ಎಂದೂ, ನ ಮನ್ಯೇ-ತಿಳಿಯುವುದಿಲ್ಲ, ವೇದ ಚ-ಮತ್ತು ತಿಳಿದೇ ಇರುವೆನು. (ಎಂದು ಭಾವಿಸುತ್ತೇನೆ) ಇಲ್ಲಿ ಚಕಾರವು ತು ಎಂಬರ್ಥದಲ್ಲಿದೆ. ಇದರಿಂದ ಬ್ರಹ್ಮವನ್ನು ಸ್ವಲ್ಪವೂ ತಿಳಿದಿಲ್ಲ ಎಂಬರ್ಥವಲ್ಲ, ಸ್ವಲ್ಪ ತಿಳಿದಿರುವೆನು ಎಂದರ್ಥ. ನಃ-ನಮ್ಮ ಬ್ರಹ್ಮಚಾರಿಗಳ ಮಧ್ಯೆ, ನೋ ನ ವೇದ-ವೇದಚೇತಿ-(ನಾನು ಹೇಳಿದಂತೆ) ತಿಳಿದಿಲ್ಲ, ತಿಳಿದೂ ಇರುವೆನೆಂಬ ತತ್ತ್ವಾರ್ಥವನ್ನು, ಯಃ ವೇದ-ಯಾವನು ತಿಳಿದಿರುವನೋ, ಸಃ-ಅವನು, ತತ್-ಆ ಬ್ರಹ್ಮವನ್ನು, ವೇದ-ತಿಳಿದಿರುವನು.

ತಾತ್ಪರ್ಯ

ನಾನು ಬ್ರಹ್ಮಸ್ವರೂಪವನ್ನು ಚೆನ್ನಾಗಿ ತಿಳಿದಿರುವೆನೆಂದಾಗಲೀ, ತಿಳಿದಿಲ್ಲವೆಂದಾಗಲೀ ಭಾವಿಸುವುದಿಲ್ಲ. ಅಂದರೆ ನಾನು ಬ್ರಹ್ಮಸ್ವರೂಪವನ್ನು ಸ್ವಲ್ಪ ತಿಳಿದಿರುವೆನು. ನನ್ನಂತೆ ಯಾರು ಪೂರ್ಣವಾಗಿ ಬಹ್ಮವನ್ನು ತಿಳಿದಿಲ್ಲ, ತಿಳಿಯದೆಯೂ ಇಲ್ಲ ಎಂಬ ತತ್ವಾರ್ಥವನ್ನು ಅರಿತಿರುವರೋ ಅವರೇ ಬ್ರಹ್ಮಸ್ವರೂಪವನ್ನು ತಿಳಿದವರು.

ರಂಗರಾಮಾನುಜಭಾಷ್ಯ

ಕಥಮಿತ್ಯತ್ರಾಹ—'ನಾಹಂ ಮನ್ಯೇ ಸುವೇದೇತಿ ನೋ ನ ವೇದೇತಿ ವೇದ ಚ'। ಅಹಂ ಸಮ್ಯಗ್ವೇದೇತ್ಯಪಿ ನ ಮನ್ಯೇ; ನ ವೇದೇತ್ಯಪಿ ನ। ಅಪಿತು ವೇದ್ಮ್ಯೇವ। ತತಶ್ಚ ಕಾರ್ತ್ಸ್ನ್ಯೇನ ಜ್ಞಾತತ್ವಮಜ್ಞಾತತ್ವಂ ಚ ನಾಸ್ತಿ; ಕಿಂಚಿತ್ ಜ್ಞಾತತ್ವಂ ಅಸ್ತೀತ್ಯರ್ಥಃ ।

'ಯೋ ನಸ್ತದ್ವೇದ ತದ್ವೇದ ನೋ ನ ವೇದೇತಿ ವೇದ ಚ'। ನಃ—ಅಸ್ಮಾಕಂ ಬ್ರಹ್ಮಚಾರಿಣಾಂ ಮಧ್ಯೆ, ತತ್—'ನೋ ನ ವೇದೇತಿ ವೇದ ಚ' ಇತಿ ನಿರ್ದಿಷ್ಟಂ ತತ್ ಅರ್ಥತತ್ತ್ವಂ ಯೋ ವೇದ, ಸ ತತ್ ಬ್ರಹ್ಮ ವೇದೇತ್ಯರ್ಥಃ ।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾಷಾಂತರ

ಹೇಗೆ (ತಿಳಿದಿರುತ್ತೇನೆ ?) ಎಂಬುದನ್ನು (ಶಿಷ್ಯನು) ಹೇಳುತ್ತಾನೆ–ನಾಹಂ ಮನ್ಯೇ ಸುವೇದೇತಿ ನೋ ನ ವೇದೇತಿ ವೇದ ಚ । ನಾನು ಚೆನ್ನಾಗಿ ತಿಳಿದಿದ್ದೇನೆ ಎಂದೂ ಇಲ್ಲ, (ಚೆನ್ನಾಗಿ) ತಿಳಿದಿಲ್ಲ ಎಂದೂ ಇಲ್ಲ. ಆದರೆ ತಿಳಿದೇ ಇದ್ದೇನೆ. ಆದ್ದರಿಂದ ಪೂರ್ಣವಾದ ಜ್ಞಾನವೂ, ಅಜ್ಞಾನವೂ ಇಲ್ಲ; ಅಲ್ಪ-ಸ್ವಲ್ಪ ತಿಳಿವಳಿಕೆಯಿದೆ ಎಂದು ಅಭಿಪ್ರಾಯ. ಯೋ ನಸ್ತದ್ವೇದ ತದ್ವೇದ ನೋ ನ ವೇದೇತಿ ವೇದ ಚ । ನಃ–ಬ್ರಹ್ಮಚಾರಿಗಳಾದ ನಮ್ಮ ನಡುವೆ ತತ್–'ತಿಳಿದಿಲ್ಲ ತಿಳಿದೂ ಇದ್ದೇನೆ' ಎಂದು, ನಿರ್ದಿಷ್ಟವಾದ ಅರ್ಥವನ್ನು, ಯಾವನು ತಿಳಿಯುತ್ತಾನೆಯೋ ಅವನು ಬ್ರಹ್ಮವನ್ನು ತಿಳಿಯುತ್ತಾನೆ ಎಂದು ಅಭಿಪ್ರಾಯ.

ಭಾಷ್ಯಸಾರ

'ನಾನು ಅಜ್ಞನಾದುದರಿಂದ ಪೂರ್ಣವಾಗಿ ಬ್ರಹ್ಮಸ್ವರೂಪದ ಜ್ಞಾನವಿಲ್ಲ. ಆದರೆ ಪೂರ್ಣಜ್ಞಾನಿಗಳೆಂದು ಪ್ರಸಿದ್ಧರಾದ ನಿಮಗೆ ಬ್ರಹ್ಮಸ್ವರೂಪದ ಪೂರ್ಣ ಜ್ಞಾನವಿರಬೇಕಲ್ಲವೆ? ಎಂಬ ಶಿಷ್ಯನ ಶಂಕೆಗೆ, 'ನಾಹಂ ಮನ್ಯೇ' ಎಂಬ ಮಂತ್ರದಿಂದ ಗುರು ಉತ್ತರಿಸುವರು ಎಂದು ರಾಮಾನಂದರು ವಿವರಿಸಿರುವರು.

ಸುಬೋಧಿನೀಕಾರರು, 'ವಿದಿತಂ ಮನ್ಯೇ' ಎಂದು ಶಿಷ್ಯನು ಹೇಳಿದನು. ಹೇಗೆ ತಿಳಿಯಿತು ಎಂದು ಕೇಳಲು ಶಿಷ್ಯನು ಈ ಮಂತ್ರದಿಂದ ವಿವರಿಸುತ್ತಾನೆ ಎಂದು ವ್ಯಾಖ್ಯಾನ ಮಾಡಿರುವರು. ಮಂತ್ರಾರ್ಥ ಹೀಗಿದೆ—

ಆಚಾರ್ಯರು ಬ್ರಹ್ಮಸ್ವರೂಪವನ್ನು ಚೆನ್ನಾಗಿ ತಿಳಿದಿರುವರು ಎಂದು ಜನರು ತಿಳಿದಿರುವುದರಿಂದ ನಾನು ಹಾಗೆ ಪ್ರಸಿದ್ಧನಾಗಿರುವೆನು. ಆದರೆ ಆಚಾರ್ಯನಾದ ನಾನು ಬ್ರಹ್ಮಸ್ವರೂಪವನ್ನು ಚೆನ್ನಾಗಿ ತಿಳಿದಿರುವೆನೆಂದು ಭಾವಿಸುವುದಿಲ್ಲ. ನನಗೆ ಅಂತಹ ಅಭಿಮಾನವಿಲ್ಲ. ಹಾಗಾದಲ್ಲಿ ಸ್ವಲ್ಪವೂ ತಿಳಿದಿಲ್ಲವೇ ? ಎಂದರೆ 'ನಾನು ತಿಳಿದಿಲ್ಲ' ಎಂದು ಹೇಳಲಾಗುವುದಿಲ್ಲ. ತಿಳಿದೇ ಇರುವೆನು. ಬ್ರಹ್ಮಸ್ವರೂಪವು ಅನಂತವಾಗಿರುವುದರಿಂದ ಪೂರ್ಣವಾಗಿ ತಿಳಿದಿಲ್ಲ. ಆದರೆ ಗುರು-ಉಪದೇಶಿಸಿದಂತೆ ತಿಳಿದೇ ಇರುವೆನು ಎಂದು ಭಾವ.

ಶಿಷ್ಯನು ತಾನು ತಿಳಿದ ಬ್ರಹ್ಮಸ್ವರೂಪವನ್ನು ಹೀಗೆ ಹೇಳಿ, ಶಿಷ್ಯರ ಮಧ್ಯೆ ಮತ್ತಾರಾದರೂ ನನ್ನಂತೆಯೇ ತಿಳಿದಲ್ಲಿ ಅವರೇ ಬ್ರಹ್ಮಸ್ವರೂಪವನ್ನರಿಯಬಲ್ಲರೆಂದು 'ಯೋನಸ್ತದ್ವೇದ' ಎಂಬ ವಾಕ್ಯದಿಂದ ವಿವರಿಸುವನು.

ಯಾರು ಬ್ರಹ್ಮಸ್ವರೂಪವನ್ನು ತಿಳಿದಿಲ್ಲ ಮತ್ತು ತಿಳಿದೂ ಇರುವೆ ಎಂದು ಅರಿಯುವರೋ ಅವರೇ ಬ್ರಹ್ಮಸ್ವರೂಪವನ್ನು ಅರಿಯಬಲ್ಲರು. ಆದುದರಿಂದ 'ವಿದಿತಂ ಮನ್ಯೇ' ಎಂದು ಹಿಂದೆ ಶಿಷ್ಯನು ಹೇಳಿದ ಮಾತುಗಳು ದೃಢವಾಗುತ್ತದೆ.

ರಾಮಾನಂದರು 'ನಃ ಯಃ ತದ್ವೇದ ಸಃ ನ ತದ್ವೇದ' ಎಂದು ಅನ್ವಯ ಮಾಡಿ ಇಲ್ಲಿ 'ಇತಿ', 'ವದತಿ' ಎಂಬ ಎರಡು ಪದಗಳನ್ನು ಅಧ್ಯಾಹಾರ ಮಾಡಿಕೊಳ್ಳಬೇಕೆಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೇಳುತ್ತಾರೆ. ಆಗ ಬ್ರಹ್ಮಜ್ಞಾನಿಗಳೆಂದು ಪ್ರಸಿದ್ಧರಾದ ಆಚಾರ್ಯರ ಮಧ್ಯದಲ್ಲಿ ಯಾವನು ಬ್ರಹ್ಮಸ್ವರೂಪವನ್ನು ಪೂರ್ಣ ತಿಳಿದಿರುವೆನೆಂದು ಹೇಳುವನೋ ಅವನು ಜ್ಞಾನಾಭಿಮಾನಿ ಎನಿಸುವನು. ಅವನು ಬ್ರಹ್ಮಸ್ವರೂಪವನ್ನು ತಿಳಿಯಲೇ ಆರನು. ಅಂದರೆ ಅಂತಹ ಜ್ಞಾನಾಭಿಮಾನಿಯು ಬ್ರಹ್ಮಸ್ವರೂಪವನ್ನು ಚೆನ್ನಾಗಿ ತಿಳಿದಿಲ್ಲ ಎಂದು ಭಾವ.

ಮುಂದೆ 'ಯಶ್ಚ ನ ವೇದ, ಇತಿ ವದತಿ ಸಃ ವೇದ' ಎಂದು ಅನ್ವಯ. ಯಾವನು ಬ್ರಹ್ಮಸ್ವರೂಪವನ್ನು ಪೂರ್ಣ ತಿಳಿದಿಲ್ಲ ಎಂದು ಹೇಳುವನೋ ಅವನು ಬ್ರಹ್ಮಸ್ವರೂಪವನ್ನು ತಿಳಿದಿರುವನು. ಪೂರ್ಣವಾಗಿ ತಿಳಿಯಲಸಾಧ್ಯವಾದುದೇ ಬ್ರಹ್ಮಸ್ವರೂಪ. ಇಂತಹ ಬ್ರಹ್ಮಸ್ವರೂಪವನ್ನು ನಾನು ಪೂರ್ಣವಾಗಿ ತಿಳಿದಿಲ್ಲ ಎಂಬ ಜ್ಞಾನಿಯೇ ಬ್ರಹ್ಮಸ್ವರೂಪವನ್ನು ಚೆನ್ನಾಗಿ ತಿಳಿದವನು. ಏಕೆಂದರೆ ಬ್ರಹ್ಮ ಅಪರಿಚ್ಛಿನ್ನ ಎಂಬ ವಿಷಯವನ್ನು ಆತನು ತಿಳಿದಿರುತ್ತಾನೆ.

ನಾನು ಬ್ರಹ್ಮಸ್ವರೂಪವನ್ನು ಚೆನ್ನಾಗಿ ತಿಳಿದಿರುವೆನು ಎಂಬ ಜ್ಞಾನಿಯು ಬ್ರಹ್ಮಸ್ವರೂಪವನ್ನು ಪರಿಚ್ಛಿನ್ನವಾದುದು ಎಂದು ತಿಳಿದಿರುವುದರಿಂದ ಅವನು ಬ್ರಹ್ಮವನ್ನು ಚೆನ್ನಾಗಿ ತಿಳಿದಿಲ್ಲ ಎಂದು ಭಾವ.

ರಾಮಾನಂದರು ಬ್ರಹ್ಮಗುಣಗಳ ಬಗ್ಗೆಯೂ ಇದೇ ರೀತಿ ಯೋಜನೆಯನ್ನಿಟ್ಟುಕೊಳ್ಳಬೇಕು ಎಂದು ಹೇಳಿರುವರು. ಯಾವನು ಬ್ರಹ್ಮಗುಣಗಳನ್ನು ಪೂರ್ಣವಾಗಿ ತಿಳಿದಿರುವೆ ಎಂದು ಭಾವಿಸುವನೋ ಅವನು ಚೆನ್ನಾಗಿ ಅರಿತ ಜ್ಞಾನಿಯಲ್ಲ. ಬ್ರಹ್ಮಗುಣಗಳು ಅನಂತವಾಗಿರುವುದರಿಂದ ಪೂರ್ಣವಾಗಿ ತಿಳಿಯಲಾಗುವುದಿಲ್ಲ. ಆದುದರಿಂದ ಯಾವನು ಬ್ರಹ್ಮಗುಣಗಳನ್ನು ಅಪರಿಚ್ಛಿನ್ನ ಎಂದು ತಿಳಿಯುವುದರಿಂದ ಪೂರ್ಣ ತಿಳಿದಿಲ್ಲ ಎಂದು ಭಾವಿಸುವನೋ ಅವನೇ ಬ್ರಹ್ಮಗುಣಗಳನ್ನು ಅರಿತ ಜ್ಞಾನಿ ಎಂದು ತಿಳಿಯಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೩

यस्यामतं तस्य मतं मतं यस्य न वेद सः ।
अविज्ञातं विजानतां विज्ञातमविजानताम् ॥

ಯಸ್ಯಾಮತಂ ತಸ್ಯ ಮತಂ ಮತಂ ಯಸ್ಯ ನ ವೇದ ಸಃ ।
ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಂ ॥

ಪ್ರತಿಪದಾರ್ಥ

ಯಸ್ಯ-(ಬ್ರಹ್ಮಸ್ವರೂಪವನ್ನು ಅರಿತ) ಯಾವನಿಗೆ, ಅಮತಮ್-ಬ್ರಹ್ಮಸ್ವರೂಪವು ತಿಳಿಯಲಾಗುವುದಿಲ್ಲವೆಂದು ತಿಳಿದಿದೆಯೋ, ತಸ್ಯ-ಅಂತಹ ಬ್ರಹ್ಮಜ್ಞಾನಿಗೆ, ಮತಂ-ಬ್ರಹ್ಮಸ್ವರೂಪವು ಚೆನ್ನಾಗಿ ತಿಳಿದಿದೆ (ಎಂದು ತಾತ್ಪರ್ಯ). ಯಸ್ಯ-ಯಾವನಿಗೆ, ಮತಂ-ಬ್ರಹ್ಮಸ್ವರೂಪವು ತಿಳಿದಿದೆಯೆಂಬ ಜ್ಞಾನವಿದೆಯೋ, ಸಃ-ಅವನು, ನ ವೇದ-ಬ್ರಹ್ಮಸ್ವರೂಪವನ್ನು ತಿಳಿಯುವುದಿಲ್ಲ. ವಿಜಾನತಾಂ-ಬ್ರಹ್ಮಸ್ವರೂಪವನ್ನು ಪರಿಚ್ಛಿನ್ನವಾಗಿ (ಅಳತೆಗೊಳಪಡಿಸಿ) ತಿಳಿದಿರುವವನಿಗೆ, ಅವಿಜ್ಞಾತಂ-ಬ್ರಹ್ಮಸ್ವರೂಪವು ತಿಳಿದಿರುವುದಿಲ್ಲ. ಅವಿಜಾನತಾಂ-ಬ್ರಹ್ಮಸ್ವರೂಪವನ್ನು ಪರಿಚ್ಛಿನ್ನವಾಗಿ ತಿಳಿಯದಿರುವವನಿಗೆ, ವಿಜ್ಞಾತಂ-ವಿಶೇಷತಃ ಬ್ರಹ್ಮಸ್ವರೂಪವು ತಿಳಿದಿದೆ.

ತಾತ್ಪರ್ಯ

ಬ್ರಹ್ಮಸ್ವರೂಪವನ್ನು ಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲ ಎಂದು ತಿಳಿದವನು ಜ್ಞಾನಿಯು. ಬ್ರಹ್ಮಸ್ವರೂಪವನ್ನು ಪೂರ್ಣವಾಗಿ ತಿಳಿದಿರುವೆ ಅಂದರೆ ಅದು ಪರಿಚ್ಛಿನ್ನ ಎಂದು ತಿಳಿದುಕೊಂಡಿರುವವನು ಬ್ರಹ್ಮಜ್ಞಾನಿಯಲ್ಲ.

ರಂಗರಾಮಾನುಜಭಾಷ್ಯ

'ಯಸ್ಯಾಮತಂ ತಸ್ಯ ಮತಂ ಮತಂ ಯಸ್ಯ ನ ವೇದ ಸಃ'। ಯಃ (ಯಸ್ತು) ಪರಿಚ್ಛಿನ್ನತ್ವೇನ ಬ್ರಹ್ಮ ನ ಮನುತೇ, ಸ ಬ್ರಹ್ಮ ಮನುತೇ। ಯಸ್ತು ಪರಿಚ್ಛಿನ್ನತ್ವೇನ ಬ್ರಹ್ಮ ಮನುತೇ, ಸ ತು ನ ಜಾನಾತೀತ್ಯರ್ಥಃ। 'ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಮ್'। ಬ್ರಹ್ಮ ಏತಾವದಿತಿ ಪರಿಚ್ಛೇದಜ್ಞಾನವತಾಂ ಬ್ರಹ್ಮ ಅವಿಜ್ಞಾತಂ ಭವತಿ। ಪರಿಚ್ಛಿನ್ನತ್ವಜ್ಞಾನಶೂನ್ಯಾನಾಂ ಬ್ರಹ್ಮ ವಿಜ್ಞಾತಂ ಭವತೀತ್ಯರ್ಥಃ। ಉಕ್ತಂ ಚ ಭಗವತಾ ಭಾಷ್ಯಕೃತಾ-''ಯತೋ ವಾಚೋ ನಿವರ್ತಂತೇ। ಅಪ್ರಾಪ್ಯ ಮನಸಾ ಸಹ' ಇತಿ। ಬ್ರಹ್ಮಣೋಽನಂತಸ್ಯ ಅಪರಿಮಿತಗುಣಸ್ಯ ವಾಙ್ಮನಸಯೋರೇತಾವದಿತಿ ಪರಿಚ್ಛೇದಾಯೋಗ್ಯತ್ವ ಶ್ರವಣೇನ ಬ್ರಹ್ಮೈತಾವದಿತಿ ಬ್ರಹ್ಮಪರಿಚ್ಛೇದಜ್ಞಾನವತಾಂ ಬ್ರಹ್ಮ ಅವಿಜ್ಞಾತಂ-ಅಮಂತ ಮಿತ್ಯುಕ್ತಮ್ ಅಪರಿಚ್ಛಿನತ್ವಾತ್ ಬ್ರಹ್ಮಣಃ। ಅನ್ಯಥಾ, 'ಯಸ್ಯಾಮತಂ ತಸ್ಯ ಮತಮ್,'

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ವಿಜ್ಞಾತಮವಿಜಾನತಾಂ' ಇತಿ ತತ್ರೈವ ಮತತ್ವವಿಜ್ಞಾತತ್ವವಚನಂ ವಿರುಧ್ಯೇತ'' ಇತಿ। ತತಶ್ಚಾವಿಜ್ಞಾತತ್ವಾದಿವಚನಂ ಕಾರ್ತ್ಸ್ನ್ಯೇನ ಜ್ಞಾನಾವಿಷಯತ್ವಪರಂ; ನ ತು ಸರ್ವಾತ್ಮನಾ ಬ್ರಹ್ಮಣಃ ಜ್ಞಾನಾಗೋಚರತ್ವಪರಮಿತಿ ದ್ರಷ್ಟವ್ಯಮ್। ತಥಾ ಹಿ ಸತಿ, 'ಬ್ರಹ್ಮವಿದಾಪ್ನೋತಿ ಪರಮ್', 'ತಮೇವ ವಿದಿತ್ವಾತಿಮೃತ್ಯುಮೇತಿ' ಇತ್ಯಾದಿಶಾಸ್ತ್ರಾಣಾಮಸಂಗತಾರ್ಥಕತ್ವಪ್ರಸಂಗಾತ್; ವೇದಾಂತಾನಾಂ ನೈರರ್ಥಕ್ಯಪ್ರಸಂಗಾಚ್ಚ।

ಭಾಷಾಂತರ

'ಯಸ್ಯಾಮತಂ ತಸ್ಯ ಮತಂ ಮತಂ ಯಸ್ಯ ನ ವೇದ ಸಃ'। ಯಾವನು ಬ್ರಹ್ಮವನ್ನು ಪರಿಚ್ಛಿನ್ನವಾಗಿ (ಅಳತೆಗೊಳಪಡಿಸಿ) ತಿಳಿಯುವುದಿಲ್ಲವೋ ಅವನು ಬ್ರಹ್ಮವನ್ನು ತಿಳಿಯುತ್ತಾನೆ. ಯಾವನು ಬ್ರಹ್ಮವನ್ನು ಪರಿಚ್ಛಿನ್ನವೆಂದು ತಿಳಿಯುತ್ತಾನೆಯೋ, ಅವನು ಬ್ರಹ್ಮವನ್ನು ತಿಳಿಯುವುದಿಲ್ಲ ಎಂದು ತಾತ್ಪರ್ಯ. 'ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಂ'। 'ಬ್ರಹ್ಮ' ಇಷ್ಟು ಎಂದು (ಬ್ರಹ್ಮವನ್ನು) ಮಿತಿಗೊಳಪಡಿಸಿದ ಜ್ಞಾನವುಳ್ಳವರಿಗೆ ಬ್ರಹ್ಮ ತಿಳಿಯಲಾರದು. (ಬ್ರಹ್ಮವು) ಪರಿಚ್ಛಿನ್ನವಾಗಿದೆಯೆಂಬ ತಿಳುವಳಿಕೆಯಿಲ್ಲದವರಿಗೆ ಬ್ರಹ್ಮವು ತಿಳಿಯುತ್ತದೆ.

'ಯತೋ ವಾಚೋ ನಿವರ್ತಂತೇ। ಅಪ್ರಾಪ್ಯ ಮನಸಾ ಸಹ' ಎಂಬ ವೇದ ವಾಕ್ಯದಿಂದ ಸೀಮಾತೀತನೂ, ಅಪರಿಮಿತ ಗುಣವಿಶಿಷ್ಟನೂ ಆದ ಪರಮಾತ್ಮನು ಮಾತು ಹಾಗೂ ಮನಸ್ಸುಗಳಿಂದ 'ಇಷ್ಟು' ಎಂದು ಮಿತಿಗೊಳಿಸಲು ಸಾಧ್ಯವಿಲ್ಲದವನು ಎಂದು ತಿಳಿದುಬರುತ್ತದೆ. ಆದ್ದರಿಂದ, 'ಬ್ರಹ್ಮವು ಇಷ್ಟು' ಎಂದು ಬ್ರಹ್ಮದ ಪರಿಮಿತಜ್ಞಾನವುಳ್ಳವರಿಗೆ ಬ್ರಹ್ಮವು ತಿಳಿದಿಲ್ಲ ಎಂದು ಹೇಳಲಾಗಿದೆ. ಕಾರಣ, ಬ್ರಹ್ಮವು ಅಳತೆಗೊಳಪಟ್ಟದ್ದಲ್ಲ. ಹಾಗಲ್ಲದಿದ್ದರೆ, 'ಯಸ್ಯಾಮತಂ ತಸ್ಯ ಮತಮ್', 'ವಿಜ್ಞಾತಮವಿಜಾನತಾಂ' ಎಂಬಲ್ಲಿ ಬ್ರಹ್ಮವು ಮತವೂ, ವಿಜ್ಞಾತವೂ ಎಂಬ ಹೇಳಿಕೆಯು ವಿರುದ್ಧವಾಗುತ್ತದ' ಎಂದು ಪೂಜ್ಯರಾದ ಭಾಷ್ಯಕಾರರು[1] ವಿವರಿಸಿದ್ದಾರೆ. ಆದುದರಿಂದ (ಬ್ರಹ್ಮವು) ತಿಳಿದಿಲ್ಲ ಎಂಬ ಮಾತಿಗೆ ಪೂರ್ಣವಾಗಿ ಬ್ರಹ್ಮವನ್ನು ತಿಳಿಯಲಾಗದು ಎಂದು ಅಭಿಪ್ರಾಯವೇ ಹೊರತು ಯಾವ ರೀತಿಯಿಂದಲೂ ಬ್ರಹ್ಮವನ್ನು ತಿಳಿಯಲು ಸಾಧ್ಯವಿಲ್ಲ ಎಂದು ಅಭಿಪ್ರಾಯವಲ್ಲ. ಹಾಗೆಯೇ ಇದ್ದ ಪಕ್ಷದಲ್ಲಿ 'ಬ್ರಹ್ಮವಿದಾಪ್ನೋತಿ ಪರಂ'–ಬ್ರಹ್ಮ ತಿಳಿದವನು ಪರಮಾತ್ಮನನ್ನು ಪಡೆಯುತ್ತಾನೆ ಹಾಗೂ 'ತಮೇವ ವಿದಿತ್ವಾ ಅತಿಮೃತ್ಯುಮೇತಿ'–ಅವನನ್ನು ತಿಳಿದೇ ಸಂಸಾರವನ್ನು ಮೀರಿ ಮೋಕ್ಷವನ್ನು ಹೊಂದುತ್ತಾನೆ ಮುಂತಾದ ಶಾಸ್ತ್ರವಾಕ್ಯಗಳು ಅಸಂಗತವಾದ ಅರ್ಥವನ್ನು ಬೋಧಿಸುತ್ತವೆ ಎಂದಾದೀತು! ಉಪನಿಷತ್ತುಗಳೆಲ್ಲಾ ನಿಷ್ಫಲವೂ ಆಗಬೇಕಾದೀತು.

ಭಾಷ್ಯಸಾರ

'ಯೋನಸ್ತದ್ವೇದ' ಎಂಬ ಭಾಗದಿಂದ ಶ್ರವಣರೂಪಜ್ಞಾನಕ್ಕೆ ಬ್ರಹ್ಮಸ್ವರೂಪ

1. ರಾಮಾನುಜಾಚಾರ್ಯರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗೋಚರವಲ್ಲ ಎಂದು ಹೇಳಿದೆ. ಈಗ ಮನನ-ನಿದಿಧ್ಯಾಸನರೂಪಜ್ಞಾನಕ್ಕೆ ಬ್ರಹ್ಮಸ್ವರೂಪವು ಗೋಚರವಲ್ಲ ಎಂಬುದನ್ನು 'ಯಸ್ಯಾಮತಂ' ಎಂಬ ಮಂತ್ರದಿಂದ ಹೇಳುತ್ತಾರೆ.

ಯಾವನು ಬ್ರಹ್ಮಸ್ವರೂಪವನ್ನು ನಾನು ಪೂರ್ಣವಾಗಿ ಮನನ ಮಾಡಿಲ್ಲ ಎಂದು ತಿಳಿಯುತ್ತಾನೋ ಅವನಿಗೆ ಬ್ರಹ್ಮಸ್ವರೂಪವು ಮನನವಿಷಯವಾಗಿದೆ. ಅಂದರೆ ಅವನು ಬ್ರಹ್ಮಸ್ವರೂಪವನ್ನು ಕುರಿತು ವಿಚಾರ ಮಾಡಿರುವನೆಂದು ಭಾವ. ಏಕೆಂದರೆ ಅವನು ಬ್ರಹ್ಮಸ್ವರೂಪವು ಅನಂತವೆಂದು ಅರಿತಿರುವನು.

ಯಾವನು ಬ್ರಹ್ಮಸ್ವರೂಪವನ್ನು ನಾನು ಪೂರ್ಣವಾಗಿ ಮನನ ಮಾಡಿರುವೆನೆಂದು ತಿಳಿಯುತ್ತಾನೋ ಅವನಿಗೆ ಬ್ರಹ್ಮಸ್ವರೂಪವು ಮನನವಿಷಯವಾಗುವುದಿಲ್ಲ. ಏಕೆಂದರೆ ಬ್ರಹ್ಮಸ್ವರೂಪ ಅಪರಿಚ್ಛಿನ್ನ ಎಂದು ಆತನು ಅರಿತಿಲ್ಲ. ಅಂತೆಯೇ ನಾನು ಬ್ರಹ್ಮವನ್ನು ಚೆನ್ನಾಗಿ ನಿದಿಧ್ಯಾಸನ ಮಾಡಿರುವೆನು ಅಂದರೆ ಸಾಕ್ಷಾತ್ಕಾರ ಮಾಡಿರುವೆನು ಎಂದು ತಿಳಿಯುವ ಜ್ಞಾನಾಭಿಮಾನಿಗಳಿಗೆ ಬ್ರಹ್ಮದ ಸಾಕ್ಷಾತ್ಕಾರ ಚೆನ್ನಾಗಿ ಉಂಟಾಗುವುದಿಲ್ಲ. ಬ್ರಹ್ಮವು ಅಪರಿಚ್ಛಿನ್ನವಾಗಿರುವುದರಿಂದ ಚೆನ್ನಾಗಿ ಸಾಕ್ಷಾತ್ಕಾರ ಮಾಡಲು ಸಾಧ್ಯವಿಲ್ಲ.

ಯಾವನು ನಾನು ಬ್ರಹ್ಮಸ್ವರೂಪವನ್ನು ಚೆನ್ನಾಗಿ ನಿದಿಧ್ಯಾಸನ ಮಾಡಿಲ್ಲ ಎಂದು ತಿಳಿಯುತ್ತಾನೋ ಅವನಿಗೆ ಬ್ರಹ್ಮಸಾಕ್ಷಾತ್ಕಾರವಾಗುವುದು. ಏಕೆಂದರೆ ಅವನು ಬ್ರಹ್ಮ ಸ್ವರೂಪವು ಅಪರಿಚ್ಛಿನ್ನ ಎಂದು ತಿಳಿದಿರುವನು.

ಹೀಗೆ ಬ್ರಹ್ಮದ ಗುಣಗಳೂ (ಅಪರಿಚ್ಛಿನ್ನ) ಅನಂತವಾಗಿರುವುದರಿಂದ ಆ ಗುಣಗಳನ್ನೂ ಪೂರ್ಣವಾಗಿ ಮನನಮಾಡಲಾಗಲೀ, ನಿದಿಧ್ಯಾಸನಮಾಡಲಾಗಲೀ ಸಾಧ್ಯವಿಲ್ಲ ಎಂದು ತಿಳಿಯಬೇಕು.

ಸುಬೋಧಿನೀಕಾರರು ಈ ಮಂತ್ರಕ್ಕೆ ಬೇರೊಂದು ರೀತಿಯಲ್ಲಿ ಅರ್ಥಮಾಡುವರು.

ಗುರುಶಿಷ್ಯರ ಸಂವಾದದಿಂದ ಹೊರಗಿದ್ದು ಶ್ರುತಿಯು ಹೇಳುವ ಮಾತಿದು. ಯಾವನು ಬುದ್ಧಿಯಿಂದ ಬ್ರಹ್ಮಸ್ವರೂಪವನ್ನು ಪೂರ್ಣ ತಿಳಿದಿಲ್ಲವೆಂದು ಭಾವಿಸುತ್ತಾನೋ, ಅವನಿಗೆ ಬ್ರಹ್ಮಸ್ವರೂಪವು ತಿಳಿದಿದೆ. ಬ್ರಹ್ಮಸ್ವರೂಪವನ್ನು ಪೂರ್ಣತಿಳಿದಿರುವೆನೆಂದು ಭಾವಿಸಿದವನಿಗೆ ಬ್ರಹ್ಮಸ್ವರೂಪ ತಿಳಿದಿಲ್ಲ.

'ವಿಜಾನತಾಂ' ಅಂದರೆ ವಿಶೇಷವಾಗಿ ಅರಿತವರಿಗೆ ಎಂದರ್ಥ. ಯಾರು ಬ್ರಹ್ಮವನ್ನು ಚೆನ್ನಾಗಿ ಅರಿತಿರುವೆನೆಂದು ತಿಳಿಯುವರೋ ಅವರಿಗೆ ಬ್ರಹ್ಮಸ್ವರೂಪವು ತಿಳಿದಿಲ್ಲ. ಸಂಪೂರ್ಣ ವಾಗಿ ಬ್ರಹ್ಮಸ್ವರೂಪವನ್ನು ಅರಿತಿಲ್ಲವೆಂದು ತಿಳಿಯುವವರಿಗೆ ಬ್ರಹ್ಮಸ್ವರೂಪವು ತಿಳಿದಿದೆ. 'ಮತಂ-ವಿಜ್ಞಾತಂ' ಎಂಬುದು ಕ್ರಮವಾಗಿ ಪರೋಕ್ಷ-ಅಪರೋಕ್ಷಜ್ಞಾನವಾಚಕವಾದುದರಿಂದ ಪುನರುಕ್ತಿದೋಷವಿಲ್ಲ.

ಅಥವಾ ಶಾಸ್ತ್ರದಲ್ಲಿ ಹೇಳಿರುವಂತೆ ಬ್ರಹ್ಮಸ್ವರೂಪವನ್ನು ಅರಿತವರು ಬ್ರಹ್ಮಸ್ವರೂಪ ವನ್ನು ಪೂರ್ಣವಾಗಿ ನಾವು ತಿಳಿದಿಲ್ಲ ಎಂದೇ ಭಾವಿಸುತ್ತಾರೆ. ಶಾಸ್ತ್ರದಿಂದ ಬ್ರಹ್ಮಸ್ವರೂಪ ವನ್ನು ಅರಿಯದವರು ನಾನು ಬ್ರಹ್ಮವನ್ನು ಇಷ್ಟು ಮಾತ್ರ ಚೆನ್ನಾಗಿ ಅರಿತಿರುವೆನು ಎಂದು ಭಾವಿಸುತ್ತಾರೆ ಎಂದು ತಾತ್ಪರ್ಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೪

प्रतिबोधविदितममृत (विदितं मत) ममृतत्वं हि विन्दते ।
आत्मना विन्दते वीर्यं विद्यया विन्दतेऽमृतम् ॥

ಪ್ರತಿಬೋಧವಿದಿತಮಮೃತ (ವಿದಿತಂ ಮತ)
ಮಮೃತತ್ವಂ ಹಿ ವಿಂದತೇ ।
ಆತ್ಮನಾ ವಿಂದತೇ ವೀರ್ಯಂ ವಿದ್ಯಯಾ ವಿಂದತೇಽಮೃತಮ್ ॥

ಪ್ರತಿಪದಾರ್ಥ

ಪ್ರತಿಬೋಧವಿದಿತಮಮೃತಮ್-ಸತ್ಯತ್ವ-ಜ್ಞಾನತ್ವ-ಅನಂತತ್ವಗಳೆಂಬ ಅಸಾಧಾರಣಧರ್ಮಗಳಿಂದ ಬ್ರಹ್ಮ ಸ್ವರೂಪವನ್ನು ತಿಳಿದರೆ, ಅಂತಹವನು, ಅಮೃತತ್ವಂ ಹಿ-ಮೋಕ್ಷವನ್ನು, ವಿಂದತೇ-ಹೊಂದುತ್ತಾನೆ. ಅಂದರೆ ಬ್ರಹ್ಮವು ತನ್ನನ್ನು ಉಪಾಸನೆಮಾಡುವವನಿಗೆ ಮೋಕ್ಷ ಕೊಡುವುದು ಎಂದರ್ಥ. ಆತ್ಮನಾ-ಪರಮಾತ್ಮನಿಂದ, ವೀರ್ಯಮ್-ಬ್ರಹ್ಮವಿದ್ಯೆಯನ್ನು ಪಡೆಯಲು ಅನುಕೂಲವಾದ ಸಾಮರ್ಥ್ಯವನ್ನು, ವಿಂದತೇ-ಹೊಂದುತ್ತಾನೆ. ವಿದ್ಯಯಾ-ಉಪಾಸನೆಯಿಂದ, ಅಮೃತಮ್-ಮೋಕ್ಷವನ್ನು, ವಿಂದತೇ-ಪಡೆಯುತ್ತಾನೆ.

ತಾತ್ಪರ್ಯ

ಸತ್ಯತ್ವ–ಜ್ಞಾನತ್ವ–ಅನಂತತ್ವಗಳೆಂಬ ಅಸಾಧಾರಣ ಧರ್ಮ ವಿಶೇಷಗಳಿಂದ ಪರಬ್ರಹ್ಮವನ್ನು ತಿಳಿದು, ಅದನ್ನೇ ಮನಸ್ಸಿನಲ್ಲಿ ಚಿಂತಿಸಿ, ಅದನ್ನು ನಿರಂತರಧ್ಯಾನಮಾಡಿದವನು ಅದರ ಅನುಗ್ರಹದಿಂದ ಬ್ರಹ್ಮವಿದ್ಯೆಯನ್ನು ಪಡೆಯಲು ಅನುಕೂಲವಾದ ಸಾಮರ್ಥ್ಯವನ್ನು ಹಾಗೂ ಆ ವಿದ್ಯೆಯಿಂದ ಮೋಕ್ಷರೂಪಫಲವನ್ನು ಪಡೆಯುತ್ತಾನೆ.

ರಂಗರಾಮಾನುಜಭಾಷ್ಯ

'ಪ್ರತಿಬೋಧವಿದಿತಮಮೃತಮಮೃತತ್ವಂ ಹಿ ವಿಂದತೇ'। ಪ್ರತಿನಿಯತೋ ಬೋಧಃ ಪ್ರತಿಬೋಧಃ । ಸತ್ಯತ್ವ–ಜ್ಞಾನತ್ವ–ಅನಂತತ್ವಾದಿರೂಪಾಸಾಧಾರಣಧರ್ಮವಿಶಿಷ್ಟತಯಾ ಜ್ಞಾತಮ್ ಅಮೃತಮ್–ಬ್ರಹ್ಮಸ್ವರೂಪಂ 'ತತ್ಕ್ರತುನ್ಯಾಯೇನ'[1] ಸ್ವೋಪಾಸಕಸ್ಯಾಪ್ಯಮೃತತ್ವಂ ವಿಂದತೇ–ಲಂಭಯತಿ ಇತ್ಯರ್ಥಃ। ಅಂತರ್ಭಾವಿತಣ್ಯರ್ಥೋಽಯಂ ವಿದಿಧಾತುಃ। ಲಂಭನಪ್ರಕಾರಮೇವಾಹ–'ಆತ್ಮನಾ ವಿಂದತೇ ವೀರ್ಯಂ ವಿದ್ಯಯಾ ವಿಂದತೇಽಮೃತಮ್'। 'ಸ ನೋ ದೇವಃ ಶುಭಯಾ ಸ್ಮೃತ್ಯಾ ಸಂಯುನಕ್ತು' ಇತ್ಯುಕ್ತರೀತ್ಯಾ ವಿದ್ಯಾನಿಷ್ಪತ್ತ್ಯನುಕೂಲಂ

1. ತತ್ಕ್ರತುನ್ಯಾಯಃ- ಯಾವ ಗುಣಗಳಿಂದ ಕೂಡಿದ ಬ್ರಹ್ಮವನ್ನು ಉಪಾಸನೆ ಮಾಡುತ್ತಾನೋ ಆ ಗುಣಗಳಿಂದ ಕೂಡಿದ ಬ್ರಹ್ಮವನ್ನು ಅನುಭವಿಸುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೀರ್ಯಂ ಪ್ರಸನ್ನೇನ ಪರಮಾತ್ಮನಾ ಲಭತೇ । ಪ್ರಸನ್ನ ಪರಮಾತ್ಮಾಽಽಹಿತವೀರ್ಯಾರ್ಜಿತಯಾ ವಿದ್ಯಯಾ ಅಮೃತತ್ವಮ್ ಅಶ್ನುತೇ ಇತ್ಯರ್ಥಃ ॥

ಭಾಷಾಂತರ

ಪ್ರತಿಬೋಧವಿದಿತಮಮೃತಮಮೃತತ್ವಂ ಹಿ ವಿಂದತೇ । ಮೊದಲೇ ಗೊತ್ತುಪಡಿಸಲಾದ ಬೋಧ, ಪ್ರತಿನಿಯತಬೋಧ, ಸತ್ಯತ್ವ, ಜ್ಞಾನತ್ವ, ಅನಂತತ್ವ ಮುಂತಾದ ವಿಶೇಷ ಧರ್ಮಗಳಿಂದ ಕೂಡಿದೆ ಎಂದು ತಿಳಿಯಲ್ಪಟ್ಟ ಅಮೃತಮ್–ಬ್ರಹ್ಮಸ್ವರೂಪವು ತತ್ಕ್ರತು ನ್ಯಾಯದಿಂದ ತನ್ನ ಉಪಾಸಕನಿಗೂ ಮೋಕ್ಷವನ್ನು ವಿಂದತೇ–ಹೊಂದಿಸುತ್ತದೆ (ಕೊಡುತ್ತದೆ). ಈ 'ವಿದ್' ಧಾತುವು ಪ್ರೇರಣಾರ್ಥವನ್ನು ತನ್ನ ಅರ್ಥದೊಳಗೆ ಸೇರಿಸಿಕೊಂಡಿದೆ. (ಮೋಕ್ಷವನ್ನು) ದೊರಕಿಸುವ ರೀತಿಯನ್ನೇ ಹೇಳುತ್ತಾನೆ—'ಆತ್ಮನಾ ವಿಂದತೇ ವೀರ್ಯಂ ವಿದ್ಯಯಾ ವಿಂದತೇಽಮೃತಮ್' । 'ಸ ನೋ ದೇವಃ ಶುಭಯಾ ಸ್ಮೃತ್ಯಾ ಸಂಯುನಕ್ತು'— 'ಆ ನಮ್ಮ ಪರಮಾತ್ಮನು ಶುಭವಾದ ವಿದ್ಯೆಯಿಂದ ನಮ್ಮನ್ನು ಕೂಡಲಿ' ಎಂದು ಹೇಳಿದಂತೆ ವಿದ್ಯೆಯ ಹುಟ್ಟಿಗೆ ಅನುಕೂಲವಾದ ವೀರ್ಯವನ್ನು ಪ್ರಸನ್ನನಾದ ಪರಮಾತ್ಮನಿಂದ ಪಡೆಯುತ್ತಾನೆ. ಪ್ರಸನ್ನನಾದ ಪರಮಾತ್ಮನಿಂದ ಪಡೆದ ವೀರ್ಯದಿಂದಗಳಿಸಿದ ವಿದ್ಯೆಯಿಂದ ಅಮೃತಭಾವ(ಮೋಕ್ಷ)ವನ್ನು ಅನುಭವಿಸುತ್ತಾನೆ ಎಂದು ಆಶಯ.

ಭಾಷ್ಯಸಾರ

ಬ್ರಹ್ಮಸ್ವರೂಪವನ್ನು ಪೂರ್ಣವಾಗಿ ತಿಳಿಯಲಾಗದಿದ್ದರೆ ತಿಳಿಯುವ ಬಗೆ ಹೇಗೆ? ಬ್ರಹ್ಮಸ್ವರೂಪವನ್ನು ತಿಳಿಯದೇ ಮೋಕ್ಷಸಿಗುವುದಾದರೂ ಹೇಗೆ? ಎಂಬ ಆ ಶಂಕೆಯನ್ನು 'ಪ್ರತಿಬೋಧವಿದಿತಮ್' ಎಂಬುದರಿಂದ ಪರಿಹರಿಸುತ್ತಾರೆ.

ವಸ್ತುತಃ ಬ್ರಹ್ಮಸ್ವರೂಪವನ್ನು ಪೂರ್ಣವಾಗಿ ತಿಳಿಯಲಾಗುವುದಿಲ್ಲ. ಆದರೂ ಯಾವನು ಶಾಸ್ತ್ರದಲ್ಲಿ ಹೇಳಿರುವಂತೆ ಗುರುವಿನ ಬಳಿ ಸೇರಿ ಬ್ರಹ್ಮಸ್ವರೂಪಗಳನ್ನು ತಿಳಿಸುವ ಸತ್ಯತ್ವ–ಜ್ಞಾನತ್ವ–ಅನಂತತ್ವ–ಆನಂದತ್ವಾದಿ ಅಸಾಧಾರಣವಾದ ಧರ್ಮಗಳಿಂದ, ಇತರ ವಸ್ತುಗಳಿಗಿಂತ ವಿಲಕ್ಷಣವಾದ ಬ್ರಹ್ಮಸ್ವರೂಪವನ್ನು ಕೇಳಿರುವನೋ, ಅನಂತರ ಸಾಧಕ–ಬಾಧಕ ವಿಷಯಗಳ ಸಹಕಾರದಿಂದ ಮನಸ್ಸಿನಲ್ಲಿ ಬ್ರಹ್ಮಸ್ವರೂಪವನ್ನು ಚಿಂತಿಸುವನೋ, ಅನಂತರ ನಿರಂತರಧ್ಯಾನ ಅಥವಾ ಉಪಾಸನೆಯಿಂದ ಬ್ರಹ್ಮಸ್ವರೂಪವನ್ನು ಸಾಕ್ಷಾತ್ಕಾರಮಾಡಿರುವನೋ ಅವನಿಗೆ ಮೋಕ್ಷವು ಖಂಡಿತ ಸಿಗುವುದು. ಬ್ರಹ್ಮಸ್ವರೂಪವನ್ನು ಪೂರ್ಣವಾಗಿ ತಿಳಿಯಲಾಗದಿದ್ದರೂ ಶ್ರವಣ–ಮನನ–ನಿದಿಧ್ಯಾಸನಗಳಿಂದ ಬ್ರಹ್ಮಸ್ವರೂಪದ ಸ್ವಲ್ಪಭಾಗವನ್ನು ತಿಳಿದರೂ ಬ್ರಹ್ಮಸ್ವರೂಪ ತಿಳಿದಂತಾಗುವುದು. ಆದುದರಿಂದ ಎಲೈ ಶಿಷ್ಯನೇ ! ನೀನು ಉದ್ವಿಗ್ನನಾಗ ಬೇಡ ಎಂದು ಹೇಳಿದರೆಂದು ತಾತ್ಪರ್ಯ.

ಅಥವಾ 'ಜ್ಯೋತೀಂಷಿ ವಿಷ್ಣುಃ.......' ಎಂಬ ಶ್ರುತಿಗನುಸಾರವಾಗಿ ಪ್ರತಿವಸ್ತುವಿನಲ್ಲೂ ಬ್ರಹ್ಮಸ್ವರೂಪ ಕಾಣುವುದರಿಂದ ಬ್ರಹ್ಮಸ್ವರೂಪ ತಿಳಿದಂತಾಗುವುದು. ಹೀಗೆ ಬ್ರಹ್ಮಸ್ವರೂಪ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವನ್ನು ತಿಳಿದರೆ ಪರಮಾತ್ಮನು ಪ್ರಸನ್ನನಾಗುತ್ತಾನೆ. ಪ್ರಸನ್ನನಾದ ಪರಮಾತ್ಮನಿಂದ ವಿದ್ಯಾ ಸಿದ್ಧಿಗೆ ಬೇಕಾದ ಮನಃಸ್ಥೈರ್ಯವುಂಟಾಗುತ್ತದೆ. ಇಂತಹ ವಿದ್ಯಾಸಿದ್ಧಿಯಿಂದ ಮೋಕ್ಷ ಪಡೆಯುತ್ತಾನೆ.

ರಾಮಾನಂದರು "ಬ್ರಹ್ಮಸ್ವರೂಪ ಅರಿತರೆ ಧೃತಿ ಮೂಡುತ್ತದೆ. ಆದರಿಂದ ಮನಃಸ್ಥೈರ್ಯವೂ, ವಿದ್ಯಾಸಿದ್ಧಿಯೂ ಉಂಟಾಗುತ್ತದೆ. ವಿದ್ಯಾಸಿದ್ಧಿಯಿಂದ ಅಂದರೆ ಉಪಾಸನಾರೂಪವಾದ ಭಕ್ತಿಯಿಂದ ಪರಮಾತ್ಮಸ್ವರೂಪವನ್ನು ಕಾಣುತ್ತಾನೆ. ಮೋಕ್ಷವೂ ಸಿಗುವುದು. ಅಂದರೆ ಧೃತಿಯಿಂದ ಮನಸ್ಸನ್ನು ನೆಲೆಗೊಳಿಸಿದರೆ ವಿದ್ಯಾಸಿದ್ಧಿಯಿಂದ ಬ್ರಹ್ಮ ಸಾಕ್ಷಾತ್ಕಾರವಾಗುವುದು, ಅನಂತರ ಮೋಕ್ಷ ಸಿಗುವುದು ಎಂಬ ಕ್ರಮವನ್ನು ದಯಾಳುವಾದ ಗುರುವು ಶಿಷ್ಯನ ಮನಸ್ಸಿಗೆ ಸಮಾಧಾನವುಂಟುಮಾಡಲು ತಿಳಿಸಿದನು" ಎಂದು ಹೇಳಿರುವರು.

ಅಥವಾ ಮುಂದಿನ ಮಂತ್ರದ 'ಭೂತೇಷು ಭೂತೇಷು ವಿಚಿಂತ್ಯ ಧೀರಾಃ' ಎಂಬಲ್ಲಿ ಹೇಳಿರುವಂತೆ 'ಜ್ಯೋತೀಂಷಿ ವಿಷ್ಣುಃ ಭುವನಾನಿ ವಿಷ್ಣುಃ' ಎಂಬ ಶ್ರುತಿಯನುಸಾರವಾಗಿ ಪ್ರತಿ ವಸ್ತುವಿನಲ್ಲೂ ಬ್ರಹ್ಮನು ಅಂತರ್ಯಾಮಿಯಾಗಿರುವನೆಂದು ಯಾವನು ತಿಳಿಯುತ್ತಾನೋ ಅವನು ಬ್ರಹ್ಮಸ್ವರೂಪವನ್ನು ಚೆನ್ನಾಗಿ ಅರಿಯುತ್ತಾನೆ, ಆದರಿಂದ ಮೋಕ್ಷವನ್ನು ಪಡೆಯುತ್ತಾನೆ ಎಂದು ಭಾವ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೫

इह चेदवेदीदथ सत्यमस्ति न चेदिहावेदीन्महती विनष्टिः ।
भूतेषु भूतेषु विचिन्त्य धीराः प्रेत्यास्माल्लोकादमृता भवन्ति ॥

ಇಹ ಚೇದವೇದೀದಥ ಸತ್ಯಮಸ್ತಿ
ನ ಚೇದಿಹಾವೇದೀನ್ಮಹತೀ ವಿನಷ್ಟಿಃ ।
ಭೂತೇಷು ಭೂತೇಷು ವಿಚಿಂತ್ಯ ಧೀರಾಃ
ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವಂತಿ ॥

ಪ್ರತಿಪದಾರ್ಥ

ಇಹ-ಈ ಜನ್ಮದಲ್ಲಿ, **ಅವೇದೀತ್ ಚೇತ್**–ಬ್ರಹ್ಮಸ್ವರೂಪವನ್ನು ತಿಳಿದುಕೊಂಡರೆ, **ಅಥ**-ಈ ಜನ್ಮದ ಅನಂತರವೇ, **ಅಸ್ತಿ**-ಬ್ರಹ್ಮಲೋಕಪ್ರಾಪ್ತಿಯು ಉಂಟಾಗುವುದು, **ಸತ್ಯಮ್**-ಇದು ನಿಶ್ಚಯ. ಇಹ-ಈ ಜನ್ಮದಲ್ಲಿ, **ನ ಅವೇದೀತ್ ಚೇತ್**-ಬ್ರಹ್ಮಸ್ವರೂಪವನ್ನು ತಿಳಿದುಕೊಳ್ಳದೇ ಇದ್ದ ಪಕ್ಷದಲ್ಲಿ, **ಮಹತೀ ವಿನಷ್ಟಿಃ**-ಮಹತ್ತರವಾದ ಆತ್ಮನಾಶವು (ಖಂಡಿತ ಉಂಟಾಗುವುದು). (ಆದ್ದರಿಂದ) **ಧೀರಾಃ**-ವಿದ್ವಾಂಸರು, **ಭೂತೇಷು ಭೂತೇಷು**-ಸರ್ವಭೂತಗಳಲ್ಲೂ ಅಂತರ್ಯಾಮಿಯಾಗಿ ಇರುವ ಪರಮಾತ್ಮನನ್ನು, **ವಿಚಿಂತ್ಯ**-ತನಗಿಂತಲೂ ಭಿನ್ನವಾದ, ಸಮಸ್ತ ವಸ್ತುಗಳಿಗಿಂತಲೂ ವಿಲಕ್ಷಣವಾದವನೆಂದು ಧ್ಯಾನಿಸಿ, **ಅಸ್ಮಾತ್ ಲೋಕಾತ್**-ಈ ಲೋಕದಿಂದ, **ಪ್ರೇತ್ಯ**-ಅರ್ಚಿರಾದಿಮಾರ್ಗದಿಂದ ಪರಮಾತ್ಮನನ್ನು ಹೊಂದಿ, **ಅಮೃತಾಃ**-ಮುಕ್ತರಾಗಿ, **ಭವಂತಿ**-ಆಗುತ್ತಾರೆ.

ತಾತ್ಪರ್ಯ

ವಿದ್ವಾಂಸರು ಈ ಮನುಷ್ಯಜನ್ಮದಲ್ಲಿಯೇ, ಸಕಲ ಪ್ರಾಣಿಗಳಲ್ಲೂ ಅಂತರ್ಯಾಮಿಯಾಗಿರುವ ಇತರ ವಸ್ತುಗಳಿಗಿಂತಲೂ ವಿಲಕ್ಷಣನೂ ಆದ ಪರಮಾತ್ಮನನ್ನು ತಿಳಿದುಕೊಂಡರೆ ಈ ಲೋಕದಿಂದ ಅರ್ಚಿರಾದಿಮಾರ್ಗದಲ್ಲಿ ಪರಮಪದಕ್ಕೆ ಹೋಗಿ ಮುಕ್ತರಾಗುತ್ತಾರೆ. ಬ್ರಹ್ಮಸ್ವರೂಪವನ್ನು ಅರಿಯದಿದ್ದರೆ ಆತ್ಮನಾಶವು ಖಂಡಿತ ಎಂದು ಅಭಿಪ್ರಾಯ.

ರಂಗರಾಮಾನುಜಭಾಷ್ಯ

ತಾದೃಶಬ್ರಹ್ಮಜ್ಞಾನೇ ತ್ವರಾಮುತ್ಪಾದಯತಿ—**ಇಹ ಚೇದವೇದಿದಥ ಸತ್ಯಮಸ್ತಿ ; ನ ಚೇದಿಹಾವೇದೀತ್, ಮಹತೀ ವಿನಷ್ಟಿಃ**' । **ಇಹೈವ**–ಜನ್ಮನಿ ಬ್ರಹ್ಮಜ್ಞಾನವಾಂಶ್ಚೇತ್, **ಅಥ**–ಸಮನಂತರಮೇವ **ಅಸ್ತಿ**–ಸನ್ ಭವತಿ. ಸತ್ಯ(ಅತ್ರ ?)ಜ್ಞಾನಾಭಾವೇ ಆತ್ಮನೋ ಅಸತ್ತಾ ಭವತಿ ; 'ಅಸನ್ನೇವ ಸ ಭವತಿ । ಅಸತ್ ಬ್ರಹ್ಮೇತಿ ವೇದ ಚೇತ್ । ಅಸ್ತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬ್ರಹ್ಮೇತಿ ಚೇದ್ವೇದ । ಸಂತಮೇನಂ ತತೋ ವಿದುಃ ' ಇತಿ ಶ್ರುತ್ಯನುರೋಧಾತ್ ಇತಿ ದ್ರಷ್ಟವ್ಯಮ್ ।

'ಭೂತೇಷು ಭೂತೇಷು ವಿಚಿಂತ್ಯಧೀರಾಃ ಪ್ರೇತ್ಯಾಸ್ಮಾಲ್ಲೋಕಾತ್ ಅಮೃತಾ ಭವಂತಿ' । ಭೂತೇಷು ಭೂತೇಷು-ಸರ್ವಭೂತಸ್ಥಂ ಪರಮಾತ್ಮಾನಂ ಪ್ರಜ್ಞಾಶಾಲಿನಃ ಸ್ವೇತರಸಮಸ್ತ ವಿಲಕ್ಷಣತ್ವೇನ ನಿರ್ಧಾರ್ಯ, ಅಸ್ಮಾಲ್ಲೋಕಾತ್-ಅರ್ಚಿರಾದಿಮಾರ್ಗೇಣ ಪರಮಾತ್ಮಾನಂ ಪ್ರಾಪ್ಯ ಮುಕ್ತಾ ಭವಂತಿ ಇತ್ಯರ್ಥಃ ॥

ಭಾಷಾಂತರ

ಈ ಬಗೆಯು ಬ್ರಹ್ಮಜ್ಞಾನದಲ್ಲಿ ಆತುರವನ್ನು ಉಂಟುಮಾಡುತ್ತಾನೆ—ಇಹ ಚೇದವೇದಿದಥ ಸತ್ಯಮಸ್ತಿ, ನ ಚೇದಿಹಾವೇದೀತ್ ಮಹತೀ ವಿನಷ್ಟಿಃ । ಈ ಜನ್ಮದಲ್ಲಿಯೇ ಬ್ರಹ್ಮವನ್ನು ತಿಳಿದೆಯಾದರೆ ಅಥ-ಕೂಡಲೇ ಅಸ್ತಿ—ಅಸ್ತಿತ್ವವನ್ನು ಪಡೆಯುತ್ತಾನೆ. ಸತ್ಯವಸ್ತುವಿನ ಜ್ಞಾನವಿಲ್ಲದಿದ್ದರೆ ಆತ್ಮನ ಸತ್ತೆಯಿರಲಾರದು. (ತನ್ನ ಅಸ್ತಿತ್ವವೇ ಕಳೆದುಹೋಗುತ್ತದೆ.) ' ಅಸನ್ನೇವ ಸ ಭವತಿ । ಅಸತ್ ಬ್ರಹ್ಮೇತಿ ವೇದ ಚೇತ್ । ಅಸ್ತಿ ಬ್ರಹ್ಮೇತಿ ಚೇದ್ವೇದ । ಸಂತಮೇನಂ ತತೋ ವಿದುಃ '—'' ಬ್ರಹ್ಮ ಇಲ್ಲವೆಂದು ತಿಳಿದರೆ ಅವನು ಅಸತ್ತೇ ಆಗುತ್ತಾನೆ. ಬ್ರಹ್ಮವಿದೆ ಎಂದು ತಿಳಿದವನನ್ನು ' ಇರುವವನು ' ಎಂದು ತಿಳಿಯುತ್ತಾರೆ '' ಎಂಬ ಬೇರೆ ವೇದವಾಕ್ಯಕ್ಕೆ ಅನುಸಾರವಾಗಿ ಸತ್ಯವಸ್ತುವಿನ ಜ್ಞಾನವಿಲ್ಲದಿದ್ದರೆ ತನ್ನ ಅಸ್ತಿತ್ವವೇ ಉಳಿಯು ಲಾರದು ಎಂದು ತಿಳಿಯಬೇಕು.

ಭೂತೇಷು ಭೂತೇಷು ವಿಚಿಂತ್ಯ ಧೀರಾಃ ಪ್ರೇತ್ಯಾಸ್ಮಾಲ್ಲೋಕಾದಮೃತಾಃ ಭವಂತಿ । ಭೂತೇಷು ಭೂತೇಷು ಎಲ್ಲ ಭೂತಗಳಲ್ಲಿಯೂ ಇರುವ ಪರಮಾತ್ಮನನ್ನು, ಪ್ರಜ್ಞಾವಂತರು ತನಗಿಂತ ಬೇರೆಯಾದ, ಎಲ್ಲ ವಸ್ತುಗಳಿಗಿಂತಲೂ ವಿಲಕ್ಷಣವಾದುದೆಂದು ನಿಶ್ಚಯಿಸಿ, ಈ ಲೋಕದಿಂದ ಅರ್ಚಿರಾದಿಮಾರ್ಗದ ಮೂಲಕ ಹೋಗಿ, ಪರಮಾತ್ಮನನ್ನು ಹೊಂದಿ ಮುಕ್ತರಾಗುತ್ತಾರೆ.

ಭಾಷ್ಯಸಾರ

ಈ ಮಾನವಜನ್ಮ ಉತ್ತಮವಾದುದು. ಶಾಸ್ತ್ರಗಳನ್ನು ಅಧ್ಯಯನಮಾಡಲು ಯೋಗ್ಯ ವಾದುದು. ಈ ಜನ್ಮದಲ್ಲಿ ಬ್ರಹ್ಮವನ್ನು ತಿಳಿಯಬೇಕು. ತಿಳಿದರೆ ಕೂಡಲೇ ಸ್ಥಿರವಾದ ಫಲವಿದೆ. ಅಂದರೆ ವಿದ್ಯಾಫಲವಾದ ಬ್ರಹ್ಮಪ್ರಾಪ್ತಿಯು ಖಂಡಿತ ಸಿಗುತ್ತದೆ. ಈ ಜನ್ಮದಲ್ಲಿ ಬ್ರಹ್ಮವನ್ನು ತಿಳಿಯದಿದ್ದರೆ ಬಹಳ ಕೇಡಾಗುತ್ತದೆ. ಅಂದರೆ ಈ ಸಂಸಾರಚಕ್ರದಲ್ಲಿ ಸಿಕ್ಕಿ ನರಳಬೇಕಾಗುತ್ತದೆ. ಆದ್ದರಿಂದ ಉಪಾಸನೆಮಾಡಲು ಯೋಗ್ಯವಾದ ಈ ಜನ್ಮ ಸಿಕ್ಕಿರುವಾಗಲೇ ಬ್ರಹ್ಮವನ್ನು ಅರಿಯಲು ಯತ್ನಿಸಬೇಕು, ತಡಮಾಡಬಾರದು ಎಂದು ತಾತ್ಪರ್ಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಭೂತೇಷು ಭೂತೇಷು' ಎಂಬುದರಿಂದ ಹಿಂದಿನ ಮಂತ್ರದಲ್ಲಿ ಹೇಳಿದ 'ಪ್ರತಿಬೋಧ' ಶಬ್ದಾರ್ಥವನ್ನು ತಿಳಿಸುತ್ತಾನೆ. ಇಲ್ಲಿ 'ಧೀರಾಃ' ಎಂಬುದಕ್ಕೆ ಗೋಪಾಲಾನಂದರು ಆತ್ಮ ತತ್ವಜ್ಞಾನಿಗಳೆಂದೂ, ರಾಮಾನಂದರು ಬ್ರಹ್ಮವನ್ನು ಅರಿತರೆ ಬ್ರಹ್ಮಪ್ರಾಪ್ತಿ, ಅರಿಯದಿದ್ದರೆ ಕೇಡು ಎಂಬ ವಿವೇಕವುಳ್ಳ ಬುದ್ಧಿವಂತರೆಂದೂ ಅರ್ಥವನ್ನು ಹೇಳುತ್ತಾರೆ. ಧೀರರು ಎಲ್ಲ ಪಾಪಗಳನ್ನು ಕಳೆದುಕೊಂಡು ಈ ಪ್ರಾಕೃತಲೋಕದಿಂದ, ಮೂರ್ಧನ್ಯನಾಡಿಯಮೂಲಕ ಹೊರಟು ವೈಕುಂಠಲೋಕದಲ್ಲಿರುವ ಪರಮಾತ್ಮನನ್ನು ಸೇರುತ್ತಾರೆ. ಅಂದರೆ ಮುಕ್ತರಾಗು ತ್ತಾರೆ ಎಂದು ತಾತ್ಪರ್ಯ.

—ಎರಡನೆಯ ಖಂಡ ಮುಗಿಯಿತು—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೃತೀಯಖಂಡ

ಮಂತ್ರ ೧

ब्रह्म ह देवेभ्यो विजिग्ये ।
तस्य ह ब्रह्मणो विजये देवा अमहीयन्त ।
त ऐक्षन्त अस्माकमेवायं
विजयोऽस्माकमेवायं महिमेति ॥

ಬ್ರಹ್ಮ ಹ ದೇವೇಭ್ಯೋ ವಿಜಿಗ್ಯೇ ।
ತಸ್ಯ ಹ ಬ್ರಹ್ಮಣೋ ವಿಜಯೇ ದೇವಾ ಅಮಹೀಯಂತ ।
ತ ಐಕ್ಷಂತ ಅಸ್ಮಾಕಮೇವಾಯಂ
ವಿಜಯೋಽಸ್ಮಾಕಮೇವಾಯಂ ಮಹಿಮೇತಿ ॥

ಪ್ರತಿಪದಾರ್ಥ

ಬ್ರಹ್ಮ–ಪರಬ್ರಹ್ಮವು, ದೇವೇಭ್ಯಃ–ಇಂದ್ರಾದಿದೇವತೆಗಳ ಅನುಗ್ರಹಕ್ಕಾಗಿ, (ಪ್ರಸಿದ್ಧ ದೇವಾಸುರ ಯುದ್ಧ ಸಮಯದಲ್ಲಿ ರಾಕ್ಷಸರನ್ನು) ವಿಜಿಗ್ಯೇ–ಜಯಿಸಿತು. ತಸ್ಯ–ಆ, ಬ್ರಹ್ಮಣಃ–ಬ್ರಹ್ಮದಿಂದ, ವಿಜಯೇ ಸತಿ–ಜಯ ಉಂಟಾಗಲಿಕ್ಕಾಗಿ, ದೇವಾಃ–ಅಗ್ನಿ, ಇಂದ್ರಾದಿದೇವತೆಗಳು, ಅಮಹೀಯಂತ–ಪೂಜಿಸಲ್ಪಟ್ಟರು. ತೇ–ಅವರು (ಜಯಶೀಲರೂ, ತಮ್ಮ ಶಕ್ತಿಯನ್ನು ಅರಿಯದವರೂ ಆದ ಅಗ್ನೀಂದ್ರಾದಿದೇವತೆಗಳು), ಅಯಂ ವಿಜಯಃ–ಈ (ಪರಬ್ರಹ್ಮದ) ವಿಜಯವು, ಅಸ್ಮಾಕಮೇವೇತಿ-ನಮ್ಮ ಶಕ್ತಿಯಿಂದಲೇ ಉಂಟಾದುದು ಎಂಬುದಾಗಿ, ಐಕ್ಷಂತ–ತಿಳಿದರು. ಅಯಮ್-ಈ (ಎಲ್ಲರನ್ನೂ ಜಯಿಸುವ ಶಕ್ತಿಯುಳ್ಳ), ಮಹಿಮಾ–ಸಾಮರ್ಥ್ಯವೂ, ಅಸ್ಮಾಕಮೇವ-ನಮ್ಮದೇ ಎಂದು ತಿಳಿದರು.

ತಾತ್ಪರ್ಯ

ಮೇಲಿನ ಎರಡುಖಂಡಗಳಲ್ಲಿ ಪ್ರಶ್ನಪ್ರತಿವಚನರೂಪದಲ್ಲಿ ಹೇಳಿರುವ–'ಇಂದ್ರಿಯಗಳಿಗೆಲ್ಲಾ ಪರಮಾತ್ಮನೇ ಪ್ರೇರಕನು' ಎಂಬ ವಿಷಯವನ್ನು ಇಲ್ಲಿ ಕಥೆಯ ಮೂಲಕ ವಿವರಿಸಲಾಗಿದೆ. ಹಿಂದೊಮ್ಮೆ ದೇವತೆಗಳಿಗೂ, ಅಸುರರಿಗೂ ಯುದ್ಧನಡೆಯಲು ಪರಮಾತ್ಮನು ದೇವತೆಗಳಲ್ಲಿ ಅಂತರ್ಯಾಮಿಯಾಗಿದ್ದುಕೊಂಡು ಅವರ ಇಂದ್ರಿಯಗಳಿಗೆ ಶಕ್ತಿಯಿತ್ತು ಅವರನ್ನು ವಿಜಯಿಗಳನ್ನಾಗಿ ಮಾಡಿದನು. ಇದನ್ನು ತಿಳಿಯದ ದೇವತೆಗಳು 'ನಮ್ಮ ಶಕ್ತಿಯಿಂದಲೇ ಈ ಜಯವು ಉಂಟಾಯಿತು, ಎಲ್ಲರನ್ನೂ ಜಯಿಸುವ ಶಕ್ತಿಯುಳ್ಳ ಈ ಮಹಿಮೆಯೂ, ಸಾಮರ್ಥ್ಯವೂ ನಮ್ಮದೇ' ಎಂಬುದಾಗಿ ಗರ್ವಿಷ್ಠರಾದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಂಗರಾಮಾನುಜಭಾಷ್ಯ

'ಆತ್ಮನಾ ವಿಂದತೇ ವೀರ್ಯಮ್' ಇತ್ಯುಕ್ತಾರ್ಥೇ ಆಖ್ಯಾಯಿಕಾಮಾಹ,–'ಬ್ರಹ್ಮ ಹ ದೇವೇಭ್ಯೋ ವಿಜಿಗ್ಯೇ'। ಪರಮಾತ್ಮಾ ದೇವಾನಾಮನುಗ್ರಹಾರ್ಥಮಸುರಾದೀನ್ ಶತ್ರೂನ್ ವಿಜಿತವಾನ್। 'ತಸ್ಯ ಹ ಬ್ರಹ್ಮಣೋ ವಿಜಯೇ ದೇವಾ ಅಮಹೀಯಂತ'। ಬ್ರಹ್ಮಕರ್ತೃಕವಿಜಯೇ ಸತಿ ದೇವಾಃ ಪೂಜಿತಾ ಅಭವನ್। 'ತ ಐಕ್ಷಂತ ಅಸ್ಮಾಕಮೇವಾಯಂ ವಿಜಯೋಽಸ್ಮಾಕಮೇವಾಯಂ ಮಹಿಮೇತಿ'। ದೇವಾಃ, 'ಅಯಮಸುರವಿಜಯೋಽಸ್ಮತ್ಕರ್ತೃಕ ಏವ, ತದನುಕೂಲಸಾಮರ್ಥ್ಯಾದಿಕಮಪ್ಯಸ್ಮದೀಯಮೇವ' ಇತ್ಯಮನ್ಯಂತ ॥

ಭಾಷಾಂತರ

'ಆತ್ಮನಾ ವಿಂದತೇ ವೀರ್ಯಮ್' ಎಂದು ಹೇಳಿದ ವಿಷಯದಲ್ಲಿ ಕಥೆಯನ್ನು ಹೇಳುತ್ತಾನೆ —'ಬ್ರಹ್ಮ ಹ ದೇವೇಭ್ಯೋ ವಿಜಿಗ್ಯೇ'। ಪರಮಾತ್ಮನು ದೇವತೆಗಳನ್ನು ಅನುಗ್ರಹಿಸಲು ಶತ್ರುಗಳಾದ ರಾಕ್ಷಸರನ್ನು ಗೆದ್ದನು. 'ತಸ್ಯ ಹ ಬ್ರಹ್ಮಣೋ ವಿಜಯೇ ದೇವಾ ಅಮಹೀಯಂತ'। ಆ ಬ್ರಹ್ಮದಿಂದ ಉಂಟಾದ ವಿಜಯದಿಂದ ದೇವತೆಗಳು ಪೂಜಿಸಲ್ಪಟ್ಟರು. 'ತ ಐಕ್ಷಂತ ಅಸ್ಮಾಕಮೇವಾಯಂ ವಿಜಯೋಽಸ್ಮಾಕಮೇವಾಯಂ ಮಹಿಮೇತಿ'। ದೇವತೆಗಳು, ರಾಕ್ಷಸರ ಮೇಲಿನ ಗೆಲುವು ನಾವೇ ಸಾಧಿಸಿದ್ದು, ಇದಕ್ಕೆ ಅನುಕೂಲವಾದ ಶಕ್ತಿಯು ನಮ್ಮದೇ ಆಗಿದೆ ಎಂದು ತಿಳಿದರು.

ಭಾಷ್ಯಸಾರ

ಒಂದು ಮತ್ತು ಎರಡನೇ ಖಂಡಗಳಲ್ಲಿ ಪ್ರಶ್ನಪ್ರತಿವಚನರೂಪದಲ್ಲಿ ಮನಸ್ಸು-ಪ್ರಾಣ ಮೊದಲಾದ ಇಂದ್ರಿಯಗಳು ಪರಮಾತ್ಮನಿತ್ತಶಕ್ತಿಯಿಂದಲೇ ತಮ್ಮ ಕಾರ್ಯಮಾಡಬಲ್ಲವು ಎಂದು ಕರಣಾಧಿಪಾಧಿಪನಾದ ಪರಮಾತ್ಮನ ಸ್ವರೂಪವನ್ನು ತಿಳಿಸಿದರು. ಇಷ್ಟೇ ಅಲ್ಲ, ಶಕ್ತರೆಂದು ಪ್ರಸಿದ್ಧರಾದ ದೇವತೆಗಳೂ ಪರಮಾತ್ಮನಿತ್ತಶಕ್ತಿಯಿಂದಲೇ ತಮ್ಮ ತಮ್ಮ ಕಾರ್ಯಗಳನ್ನು ಮಾಡಲು ಶಕ್ತರಾಗಿರುವರು ಎಂಬ ವಿಷಯವನ್ನು ಒಂದು ಕಥೆಯ ಮೂಲಕ ಈ ಮೂರನೇ ಖಂಡದಲ್ಲಿ ವಿವರಿಸುತ್ತಾರೆ.

ಹಿಂದೆ ದೇವಾಸುರಯುದ್ಧದಲ್ಲಿ ಪರಮಾತ್ಮನು ದೇವತೆಗಳಿಗೆ ಜಯಸಾಧಿಸಿಕೊಟ್ಟನು. ಅಂದರೆ ಸಕಲ ಚಿದಚಿದಂತರ್ಯಾಮಿಯಾದ ಪರಮಾತ್ಮನು ದೇವತೆಗಳಲ್ಲಿ ಅಂತರ್ಯಾಮಿಯಾಗಿದ್ದು ಅವರ ಇಂದ್ರಿಯಗಳ ಶಕ್ತಿಗೆ ಪ್ರೇರಕನಾಗಿದ್ದು ದೇವತೆಗಳಿಗೆ ವಿಜಯವನ್ನು ದೊರಕಿಸಿಕೊಟ್ಟನು ಎಂದು ಭಾವ. ಇದರಿಂದ ದೇವತೆಗಳು ರಾಕ್ಷಸರಿಗಿಂತ ಸಾಮರ್ಥ್ಯವುಳ್ಳವರು, ಧರ್ಮಿಷ್ಠರು ಎಂದು ಜನರು ಭಾವಿಸಿ ದೇವತೆಗಳನ್ನು ಹೊಗಳಿ ಪೂಜಿಸಿದರು. ಹೀಗೆ ಪರಮಾತ್ಮನಿಂದಲೇ ವಿಜಯದೊರಕಿದರೂ ಈ ವಿಜಯಕ್ಕೆ ತಾವೇ ಕಾರಣಕರ್ತರು ಎಂದು ದೇವತೆಗಳು ಅಹಂಕಾರ ಪಟ್ಟರು ಮತ್ತು ಈ ವಿಜಯವು ನಮ್ಮದೇ ಮತ್ತು ಸ್ತುತಿರೂಪವಾದ ಮಹಿಮೆಯೂ ನಮ್ಮದೇ ಎಂದು ಅಭಿಮಾನ ತಳೆದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೨

तद्धैषां विजज्ञौ । तेभ्यो ह प्रादुर्बभूव ।
तन्न व्यजानत(न्त) किमिदं यक्षमिति ॥

ತದ್ಧೈಷಾಂ ವಿಜಜ್ಞೌ । ತೇಭ್ಯೋ ಹ ಪ್ರಾದುರ್ಬಭೂವ ।
ತನ್ನ ವ್ಯಜಾನತ(ಂತ) ಕಿಮಿದಂ ಯಕ್ಷಮಿತಿ ॥

ಪ್ರತಿಪದಾರ್ಥ

ಏಷಾಂ–(ಈ ದೇಹಾಭಿಮಾನಿಗಳಾದ) ದೇವತೆಗಳ, ತತ್–ಹಿಂದೆ ಹೇಳಿದ ಅಜ್ಞಾನವನ್ನು, (ಆ ಪರಮಾತ್ಮನು) ವಿಜಜ್ಞೌ ಹ–ತಿಳಿದನಲ್ಲವೇ : ಅಂದರೆ ಅರಿತನು ಎಂದು ತಾತ್ಪರ್ಯ. ತೇಭ್ಯಃ–ಆ ದೇವತೆಗಳ ಅನುಗ್ರಹಕ್ಕಾಗಿ, ಪ್ರಾದುರ್ಬಭೂವ.(ಪರಮಾತ್ಮನು ಯಕ್ಷರೂಪದಿಂದ) ಕಾಣಿಸಿಕೊಂಡನು. ತತ್-ಆ ಯಕ್ಷರೂಪವನ್ನು ನೋಡಿ, ಇದಂ ಯಕ್ಷಂ-ಈ ಪೂಜ್ಯವಾದ ಯಕ್ಷರೂಪವು, ಕಿಮ್–ಯಾವುದು ? ಎಂಬುದಾಗಿ, ನ ವ್ಯಜಾನಂತ–(ದೇವತೆಗಳು) ತಿಳಿಯಲಿಲ್ಲ. ಅಂದರೆ ಪರಬ್ರಹ್ಮವೆಂಬುದಾಗಿ ಆ ದೇವತೆಗಳು ಅರಿಯಲಿಲ್ಲ ಎಂದರ್ಥ.

ತಾತ್ಪರ್ಯ

ದೇಹಾಭಿಮಾನಿಗಳಾದ ದೇವತೆಗಳ ಅಹಂಕಾರವನ್ನು ತಿಳಿದ ಆ ಪರಬ್ರಹ್ಮವು ಅವರ ಅಹಂಕಾರವನ್ನು ಹೋಗಲಾಡಿಸಬೇಕೆಂಬ ಇಚ್ಛೆಯಿಂದ ಅವರ ಮುಂದೆ ಯಕ್ಷರೂಪದಲ್ಲಿ ಕಾಣಿಸಿಕೊಂಡಿತು. ಇದನ್ನರಿಯದ ದೇವತೆಗಳು ಚಿಂತಾಕ್ರಾಂತರಾದರು.

ರಂಗರಾಮಾನುಜಭಾಷ್ಯ

'ತದ್ಧೈಷಾಂ ವಿಜಜ್ಞೌ'। ತಾದೃಶಂ ತೇಷಾಮಭಿಮಾನಂ ಪರಮಾತ್ಮಾ ಜ್ಞಾತವಾನಿತ್ಯರ್ಥಃ । 'ತೇಭ್ಯೋ ಹ ಪ್ರಾದುರ್ಬಭೂವ'। ತೇಷಾಂ ದೇವಾನಾಮ್ ಅನುಗ್ರಹಾರ್ಥಂ ತತ್ ಬ್ರಹ್ಮ ಯಕ್ಷರೂಪಂ ಪ್ರಾದುರ್ಭೂತಮ್ । 'ತನ್ನ ವ್ಯಜಾನತ ಕಿಮಿದಂ ಯಕ್ಷಮಿತಿ'। ಏತತ್ ಯಕ್ಷಸ್ವರೂಪಂ ಕಿಮಿತಿ ತೇ ದೇವಾ ನ ವ್ಯಜಾನತ–ನ ಜ್ಞಾತವಂತ ಇತ್ಯರ್ಥಃ ।

ಭಾಷಾಂತರ

'ತದ್ಧೈಷಾಂ ವಿಜಜ್ಞೌ'–ಈ ರೀತಿಯ ಅವರ ಅಹಂಕಾರವನ್ನು ಪರಮಾತ್ಮನು ತಿಳಿದನು ಎಂದು ಅರ್ಥ. 'ತೇಭ್ಯೋ ಹ ಪ್ರಾದುರ್ಬಭೂವ'–ಆ ದೇವತೆಗಳಿಗೆ ಹಿತವನ್ನು ಉಂಟು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾಡಲು ಆ ಬ್ರಹ್ಮವು ಯಕ್ಷರೂಪದಲ್ಲಿ ಆವಿರ್ಭವಿಸಿತು. 'ತನ್ನ ವ್ಯಜಾನತ ಕಿಮಿದಂ ಯಕ್ಷಮಿತಿ'। ಈ ಯಕ್ಷದ ಸ್ವರೂಪವು ಏನು ? ಎಂದು ಆ ದೇವತೆಗಳು ನ ವ್ಯಜಾನತ– ತಿಳಿಯಲಿಲ್ಲ.

ಭಾಷ್ಯಸಾರ

ಸರ್ವಜ್ಞನಾದ ಪರಮಾತ್ಮನು ದೇವತೆಗಳಿಗುಂಟಾದ ಅಹಂಕಾರವನ್ನು ತಿಳಿದನು ಮತ್ತು ದೇವತೆಗಳಿಗೂ ತಾನು ಆತ್ಮನಾಗಿರುವೆ ಎಂಬ ಅಂಶವನ್ನು ತಿಳಿಸಬೇಕು, ಅವರ ಅಹಂಕಾರ ವನ್ನು ಹೋಗಲಾಡಿಸಿ ಅನುಗ್ರಹಮಾಡಬೇಕೆಂದು ಯಕ್ಷರೂಪದಲ್ಲಿ ಕಾಣಿಸಿಕೊಂಡನು. ಈ ಯಕ್ಷರೂಪವು ಯಾವುದೆಂದು ದೇವತೆಗಳು ತಿಳಿಯಲಿಲ್ಲ. ಅಂದರೆ ಸ್ವಾಭಿಮಾನದೋಷ ದಿಂದ ಮಲಿನವಾದಮನಸ್ಸುಳ್ಳದೇವತೆಗಳು, ಯಕ್ಷರೂಪದಲ್ಲಿ ಕಾಣಿಸಿಕೊಂಡರೂ ಪರಮಾತ್ಮ ನೆಂದು ತಿಳಿಯಲು ಸಮರ್ಥರಾಗಲಿಲ್ಲ ಎಂದು ತಾತ್ಪರ್ಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೩

तेऽग्निमब्रुवन्, जातवेदः ! एतद्विजानीहि
किमेतद्यक्षमिति । तथेति ॥

ತೇಽಗ್ನಿಮಬ್ರುವನ್, ಜಾತವೇದಃ ! ಏತದ್ವಿಜಾನೀಹಿ
ಕಿಮೇತದ್ಯಕ್ಷಮಿತಿ । ತಥೇತಿ ॥

ಪ್ರತಿಪದಾರ್ಥ

ತೇ-ಅವರು (ಭಗವಂತನ ಮಹಿಮೆಯನ್ನು ಅರಿಯದ ಆ ದೇವತೆಗಳು), ಅಗ್ನಿಮ್-ಅಗ್ನಿದೇವತೆಯನ್ನು ಕುರಿತು, ಅಬ್ರುವನ್-ಈ ರೀತಿ ಹೇಳಿದರು. ಹೇ ಜಾತವೇದಃ-ಎಲೈ ಅಗ್ನಿಯೇ! ಏತತ್-ನಮಗೆ ಕಾಣಿಸುತ್ತಿರುವ ಈ, ಯಕ್ಷಮ್-ಪೂಜ್ಯವಾದ ಯಕ್ಷರೂಪವು, ಕಿಮಿತಿ-ಯಾವುದೆಂದು, ವಿಜಾನೀಹಿ-ತಿಳಿದುಕೊಂಡು ಬಾ (ಎಂದು ಹೇಳಲು) ತಥೇತಿ-(ಅಗ್ನಿಯು) ಹಾಗೆಯೇ ಆಗಲಿ (ಎಂದನು).

ತಾತ್ಪರ್ಯ

ಭಗವಂತನ ಮಹಿಮೆಯನ್ನರಿಯದ ಆ ದೇವತೆಗಳು ಸಮಸ್ತವಸ್ತುಗಳನ್ನೂ ದಹಿಸುವ ಶಕ್ತಿಯುಳ್ಳ ಅಗ್ನಿಯನ್ನು ಕುರಿತು ಈ ಯಕ್ಷರೂಪವು ಯಾವುದೆಂದು ತಿಳಿದುಕೊಂಡು ಬಾ ಎಂಬುದಾಗಿ ಹೇಳಿದರು. ಅಗ್ನಿಯು ಹಾಗೆಯೇ ಆಗಲಿ ಎಂದನು.

ರಂಗರಾಮಾನುಜಭಾಷ್ಯ[1]

'ತೇಽಗ್ನಿಮಬ್ರುವನ್............ಕಿಮೇತದ್ಯಕ್ಷಮಿತಿ' । ಜಾತವೇದಃ ಏತದ್ವಿಜಾನೀಹಿ ಕಿಮೇತದ್ಯಕ್ಷಮಿತಿ ಇತ್ಯುಕ್ತವಂತಃ । 'ತಥೇತಿ ತದಭ್ಯದ್ರವತ್........ಜಾತವೇದಾ ವಾ ಅಹಮಸ್ಮೀತಿ' । ತಥೇತಿ ಸ ಯಕ್ಷಸಮೀಪಂ ಗತಃ ತೇನ ಕೋಽಸಿ ? ಇತಿ ಪೃಷ್ಟಃ, 'ಅಗ್ನಿಃ, ಜಾತವೇದಾಃ' ಇತಿ ಪ್ರಸಿದ್ಧಂ ನಾಮದ್ವಯಂ ಉಕ್ತವಾನ್ ಇತ್ಯರ್ಥಃ । 'ತಸ್ಮಿಂಸ್ತ್ವಯಿ ಕಿಂ ವೀರ್ಯಮ್ ಇತಿ । ಅಪೀದಂ ಸರ್ವಂ ದಹೇಯಂ ಯದಿದಂ ಪೃಥಿವ್ಯಾಮಿತಿ.' ತವ ಕ್ವ ಸಾಮರ್ಥ್ಯಮಸ್ತೀತಿ ಯಕ್ಷೇಣ ಪೃಷ್ಟೋಽಗ್ನಿಃ ಪೃಥಿವ್ಯಂತರ್ವರ್ತಿಸಕಲದಾಹಸಾಮರ್ಥ್ಯಮಸ್ತೀತಿ ಉಕ್ತವಾನ್.

'ತಸ್ಮೈ........ಸ ತತ ಏವ ನಿವವೃತೇ' । ತರ್ಹೀದಂ ತೃಣಂ ದಹೇತಿ ಯಕ್ಷೇಣೋಕ್ತಃ ಸರ್ವೇಣ ಜವೇನ ತತ್ಸಮೀಪಂ ಗತಃ ದಗ್ಧುಮಸಮರ್ಥೋ ನಿವೃತ್ತ ಇತ್ಯರ್ಥಃ ।

---

1. ಮಂತ್ರ 3 ರಿಂದ 10ರ ಪೂರ್ತಿ ಇಲ್ಲೇ ಅಡಕವಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉಪಪ್ರೇಯಾಯ–ಸಮೀಪಂ ಗತ ಇತ್ಯರ್ಥಃ । 'ನೈತದಶಕಂ ವಿಜ್ಞಾತುಂ ಯದೇತತ್ ಯಕ್ಷಮಿತಿ'। ಏವಂ ದೇವಾನ್ ಪ್ರತಿ ಉಕ್ತವಾನಿತಿ ಶೇಷಃ । ಏವಮುತ್ತರತ್ರಾಪಿ ॥

ತೇ ಅಗ್ನಿಮಬ್ರುವನ್........ಕಿಮೇತದ್ಯಕ್ಷಮಿತಿ । ಎಲೈ ಜಾತವೇದಸನೇ ! ಈ ಯಕ್ಷವು ಯಾವುದು ? ಎಂದು ತಿಳಿಯಬೇಕು (ತಿಳಿದು ಬಾ) ಎಂದು (ದೇವತೆಗಳು) ಹೇಳಿದರು. 'ತಥೇತಿ ತದಭ್ಯದ್ರವತ್........ಜಾತವೇದಾ ವಾ ಅಹಮಸ್ಮೀತಿ'. 'ಹಾಗೆಯೇ ಆಗಲಿ' ಎಂದು ಅಗ್ನಿಯು ಯಕ್ಷದ ಸಮೀಪಕ್ಕೆ ಹೋದನು. ಆ ಯಕ್ಷವು ನೀನಾರು ? ಎಂದು ಪ್ರಶ್ನಿಸಿತು. ಆಗ 'ಜಾತವೇದಸನು, ಅಗ್ನಿಯು' ಎಂದು ಪ್ರಸಿದ್ಧವಾದ ಎರಡು ಹೆಸರುಗಳನ್ನುಳ್ಳವನು ಎಂದು ಹೇಳಿದನು. 'ತಸ್ಮಿಂಸ್ತ್ವಯಿ ಕಿಂ ವೀರ್ಯಮ್ ಇತಿ। ಅಪೀದಂ ಸರ್ವಂ ದಹೇಯಂ ಯದಿದಮ್ ಪೃಥಿವ್ಯಾಮಿತಿ'. 'ನಿನ್ನಲ್ಲಿ ಏನು ಶಕ್ತಿಯಿದೆ ?' ಎಂದು ಯಕ್ಷವು ಕೇಳಲು ಅಗ್ನಿಯು 'ಈ ಭೂಮಿಯಲ್ಲಿ ಇರುವ ಎಲ್ಲವನ್ನು ಸುಡುವ ಸಾಮರ್ಥ್ಯವಿದೆ' ಎಂದು ಉತ್ತರಿಸಿದನು.

ತಸ್ಮೈ........ಸ ತತ ಏವ ನಿವವೃತೇ । 'ಹಾಗಾದರೆ ಈ ಹುಲ್ಲುಕಡ್ಡಿಯನ್ನು ಸುಡು' ಎಂದು ಯಕ್ಷವು ಹೇಳಲಿಕ್ಕಾಗಿ ಅವನು ಅತಿರಭಸದಿಂದ ಅದರ ಸಮೀಪಕ್ಕೆ ಹೋದನು. ಅದನ್ನು ಸುಡಲಾಗದೆ ಹಿಂತಿರುಗಿದನು. ಉಪಪ್ರೇಯಾಯ–ಸಮೀಪಿಸಿದನು ಎಂದರ್ಥ.

ನೈತದಶಕಂ ವಿಜ್ಞಾತುಂ ಯದೇತತ್ ಯಕ್ಷಮಿತಿ । ಹೀಗೆ ದೇವತೆಗಳಿಗೆ ಹೇಳಿದನು ಎಂದು ಶೇಷಪೂರ್ತಿಮಾಡಿಕೊಳ್ಳಬೇಕು. ಮುಂದೆಯೂ ಹೀಗೆಯೇ ಇರುತ್ತದೆ.

ಭಾಷ್ಯಸಾರ

ಯಕ್ಷರೂಪದಲ್ಲಿದ್ದ ಪರಬ್ರಹ್ಮವನ್ನು ಅರಿಯದ ದೇವತೆಗಳು ಮುಂದಾಳಾದ, ತೇಜಸ್ವಿಯಾದ ಅಗ್ನಿಯನ್ನು ಕುರಿತು ಹೇಳಿದರು. ಅಗ್ನಿಯೇ ! ನಮಗೆಲ್ಲರಿಗೂ ಕಾಣಿಸುತ್ತಿರುವ ಈ ಯಕ್ಷರೂಪವಾವುದು ? ಅಂದರೆ, ದೇವತೆಗಳ ಮಧ್ಯೆ ಯಾರು ? ಎಂಬುದನ್ನು ಚೆನ್ನಾಗಿ ತಿಳಿದು ಬಾ ಎಂದು ಹೇಳಿದರು. ದೇವತೆಗಳ ಮಾತನ್ನು ಕೇಳಿದ ಅಗ್ನಿಯು ನೀವು ತಿಳಿಸಿದಂತೆ ಯಕ್ಷರೂಪವಾವುದೆಂದು ತಿಳಿದುಬರುವೆನೆಂದು ಹೇಳಿದನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೪

तदभ्यद्रवत् । तमभ्यवदत् कोऽसीति । अग्निर्वा अहमस्मीत्यब्रवीत् , जातवेदा वा अहमस्मीति ।

ತದಭ್ಯದ್ರವತ್ । ತಮಭ್ಯವದತ್ ಕೋಽಸೀತಿ । ಅಗ್ನಿರ್ವಾ ಅಹಮಸ್ಮೀತ್ಯಬ್ರವೀತ್, ಜಾತವೇದಾ ವಾ ಅಹಮಸ್ಮೀತಿ ॥

ಪ್ರತಿಪದಾರ್ಥ

ತತ್–(ಅಗ್ನಿಯು) ಆ ಯಕ್ಷರೂಪದ ಬಳಿಗೆ. ಅಭ್ಯದ್ರವತ್–ಹೋದನು. ತಮ್–ತನ್ನ ಬಳಿಬಂದ ಆ ಅಗ್ನಿಯನ್ನು, ಕೋಽಸಿ ಇತಿ–ನೀನು ಯಾರೆಂಬುದಾಗಿ, ಅಭ್ಯವದತ್–ಯಕ್ಷರೂಪವು ಕೇಳಿತು, ಅಹಮ್–ನಾನು, ಅಗ್ನಿರಸ್ಮಿ–ಎಲ್ಲ ವಸ್ತುಗಳನ್ನೂ ದಹಿಸುವ ಸಾಮರ್ಥ್ಯವುಳ್ಳವನಾಗಿ ಆಗಿದ್ದೇನೆ. ವಾ–ಅಥವಾ, ಅಹಮ್–ನಾನು, ಜಾತವೇದಾಃ–ಹುಟ್ಟಿದ ಸರ್ವವಸ್ತುಗಳನ್ನೂ ತಿಳಿಯತಕ್ಕವನೂ, ಅಸ್ಮಿ–ಆಗಿದ್ದೇನೆ. ಇತಿ–ಎಂದು, ಅಬ್ರವೀತ್–ಹೇಳಿದನು.

ತಾತ್ಪರ್ಯ

ಅಗ್ನಿಯು ಯಕ್ಷದ ಸಮೀಪಕ್ಕೆ ಹೋದನು. ಅವನನ್ನು ಕುರಿತು ಯಕ್ಷರೂಪವು ನೀನು ಯಾರು ? ಎಂದು ಕೇಳಿತು. ನಾನು ಅಗ್ನಿಯು ನನ್ನನ್ನು ಜಾತವೇದನೆಂದೂ ಕರೆಯುವರು ಎಂದನು.

ಭಾಷ್ಯಸಾರ

ದೇವತೆಗಳ ಮಾತಿಗೆ ಒಪ್ಪಿದ ಅಗ್ನಿಯು ಯಕ್ಷರೂಪದಲ್ಲಿದ್ದ ಪರಬ್ರಹ್ಮದ ಬಳಿಗೆ ಹೋದನು. ತನ್ನೆದುರು ಬಂದು ಏನೇದು ತಿಳಿಯುವತವಕವುಳ್ಳ ಅಗ್ನಿಯನ್ನು ಕುರಿತು ಯಕ್ಷರೂಪದ ಪರಬ್ರಹ್ಮವು ನೀನು ಯಾರು ? ಎಂದು ಕೇಳಿತು. ಆಗ ಅಗ್ನಿಯು ವಿಶ್ವದಲ್ಲಿರುವ ಎಲ್ಲ ವಸ್ತುಗಳನ್ನೂ ನಾನು ಅರಿಯಬಲ್ಲೆನು ಮತ್ತು ಎಲ್ಲ ವಸ್ತುಗಳನ್ನೂ ಸುಡಬಲ್ಲೆನು. ಈ ವಿಷಯ ಎಲ್ಲರಿಗೂ ತಿಳಿದ ಅಂಶವೇ ಆಗಿದೆ. ಹೀಗಿರುವಾಗ ನೀನಾರು ? ಎಂದು ಈ ಯಕ್ಷರೂಪವು ಕೇಳುವುದಲ್ಲಾ ಎಂಬ ದುರಭಿಮಾನದಿಂದ 'ನನ್ನನ್ನು ಜನರು ಅಗ್ನಿಯೆಂದೂ, ಜಾತವೇದನೆಂದೂ ಕರೆಯುತ್ತಾರೆ' ಎಂದು ಹೇಳಿದನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೫

**तस्मिंस्त्वयि किं वीर्यमिति । अपीदं सर्वं
दहेयं यदिदं पृथिव्यामिति ॥**

ತಸ್ಮಿಂಸ್ತ್ವಯಿ ಕಿಂ ವೀರ್ಯಮಿತಿ । ಅಪೀದಂ ಸರ್ವಂ
ದಹೇಯಂ ಯದಿದಂ ಪೃಥಿವ್ಯಾಮಿತಿ ॥

ಪ್ರತಿಪದಾರ್ಥ

ತಸ್ಮಿನ್–ಅಗ್ನಿ-ಜಾತವೇದನೆಂದು ಪ್ರಸಿದ್ಧನಾದ, ತ್ವಯಿ–ನಿನ್ನಲ್ಲಿ, ಕಿಂ ವೀರ್ಯಮ್-ಏನು ಸಾಮರ್ಥ್ಯ ಇದೆ ? ಇತಿ–ಎಂಬುದಾಗಿ (ಆ ಯಕ್ಷರೂಪವು ಕೇಳಿತು). ಪೃಥಿವ್ಯಾಮ್-ಭೂಮ್ಯಂತರಿಕ್ಷಾದಿಗಳಲ್ಲಿ, ಯತ್ ಇದಂ-ಯಾವ ವಸ್ತು ಇದೆಯೋ, ಇದಂ ಸರ್ವಮಪಿ-ಇದೆಲ್ಲವನ್ನೂ, ದಹೇಯಮ್-ಸುಡುವೆನು ಇತಿ-ಎಂದು (ಅಗ್ನಿಯು ಹೇಳಿದನು).

ತಾತ್ಪರ್ಯ

ನಿನ್ನಲ್ಲಿ ಏನು ಸಾಮರ್ಥ್ಯವಿದೆ ? ಎಂಬುದಾಗಿ ಯಕ್ಷನು ಮತ್ತೊಮ್ಮೆ ಪ್ರಶ್ನಿಸಲಿಕ್ಕಾಗಿ ಅಗ್ನಿಯು, ತಾನು ಈ ಭೂಮ್ಯಾಕಾಶಗಳಲ್ಲಿರುವ ಎಲ್ಲಾ ವಸ್ತುಗಳನ್ನೂ ಸುಡುವಸಾಮರ್ಥ್ಯವುಳ್ಳವನು ಎಂದು ತನ್ನ ಸಾಮರ್ಥ್ಯವನ್ನು ತಿಳಿಸಿದನು.

ಭಾಷ್ಯಸಾರ

ಆಗ ಯಕ್ಷರೂಪದ ಪರಬ್ರಹ್ಮವು ಅಗ್ನಿಯನ್ನು ಕುರಿತು, ಅಗ್ನಿ ಮತ್ತು ಜಾತವೇದನೆಂದು ಪ್ರಸಿದ್ಧನಾದ ಅಗ್ನಿಯೇ ! 'ನಿನ್ನಲ್ಲಿರುವ ಸಾಮರ್ಥ್ಯವಾವುದು ? ಎಂದು ಕೇಳಿತು. ಆಗ ಅಗ್ನಿಯು ಸ್ವಾಭಿಮಾನದಿಂದ ಈ ಪೃಥಿವಿಯಲ್ಲಿರುವ ಎಲ್ಲ ವಸ್ತುಗಳನ್ನೂ ಸುಡಬಲ್ಲೆನು ಎಂದು ತನ್ನ ಸಾಮರ್ಥ್ಯವನ್ನು ಹೇಳಿದನು. ಇಲ್ಲಿ 'ಪೃಥಿವೀ' ಎಂಬ ಶಬ್ದವು ಲೋಕಾಂತರಗಳಿಗೂ ಸೂಚಕ. ಆದ್ದರಿಂದ ಈ ಬ್ರಹ್ಮಾಂಡದಲ್ಲಿರುವ ಮೂರ್ತವಾದ[1] ಸ್ಥಾವರ–ಜಂಗಮ[2] ರೂಪವಾದ ಎಲ್ಲ ಪದಾರ್ಥಗಳನ್ನು ಸುಡುವಶಕ್ತಿ ಅಗ್ನಿಗೆ ಇದೆ ಎಂದರ್ಥ. ಈ ರೀತಿ ಅಹಂಕಾರದಿಂದ ಕೂಡಿದ ಮಾತನ್ನು ಆಡಿದನು ಎಂದು ಭಾವ.

---

1. ಆಕಾರದಿಂದ ಕೂಡಿದ
2. ಚಲಿಸುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೬

तस्मै तृणं निदधौ एतद्दहेति । तदुपप्रेयाय
सर्वजवेन । तन्न शशाक दग्धुम् ।
स तत एव निववृते नैतदशकं विज्ञातुम्
यदेतद्यक्षमिति ॥

ತಸ್ಮೈ ತೃಣಂ ನಿದಧೌ ಏತದ್ದಹೇತಿ । ತದುಪಪ್ರೇಯಾಯ
ಸರ್ವಜವೇನ । ತನ್ನ ಶಶಾಕ ದಗ್ಧುಂ ।
ಸ ತತ ಏವ ನಿವವೃತೇ ನೈತದಶಕಂ ವಿಜ್ಞಾತುಂ
ಯದೇತದ್ಯಕ್ಷಮಿತಿ ॥

ಪ್ರತಿಪದಾರ್ಥ

ತಸ್ಮೈ-ಆ ಅಗ್ನಿಯನ್ನು ಉದ್ದೇಶಿಸಿ, ಏತತ್-ಇದನ್ನು, ದಹ-ಸುಡು (ಎಂದು), ತೃಣವ್-ಹುಲ್ಲನ್ನು, ನಿದಧೌ-ಇಟ್ಟಿತು. ತತ್-ಆ ಹುಲ್ಲಿನ ಸಮೀಪಕ್ಕೆ ಸರ್ವಜವೇನ-ತನ್ನ ಎಲ್ಲಾ ಶಕ್ತಿಯೊಡನೆ (ಆ ಅಗ್ನಿಯು), ಉಪಪ್ರೇಯಾಯ–ಹೋಗಿ ಸೇರಿದನು. ತತ್-ಆ ಹುಲ್ಲನ್ನು, ದಗ್ಧುವ್-ಸುಡುವುದಕ್ಕೆ, ನ ಶಶಾಕ–ಸಮರ್ಥನಾಗಲಿಲ್ಲ. ಸಃ–ಆ ಅಗ್ನಿಯು, ತತ ಏವ-ಆ ಹುಲ್ಲನ್ನು ಸುಡಲು ಸಾಮರ್ಥ್ಯವಿಲ್ಲದ ಕಾರಣದಿಂದಲೇ, ನಿವವೃತೇ-(ನಾಚಿಕೆಯಿಂದ) ಹಿಂತಿರುಗಿದನು. ಯತ್ ಏತತ್ ಯಕ್ಷಮಿತಿ-ಈ ಮುಂದೆ ಇರುವ ಯಕ್ಷಸ್ವರೂಪವು ಯಾವುದೆಂದು ವಿಜ್ಞಾತುವ್–ತಿಳಿಯಲು, ನ ಅಶಕವ್–ನಾನು ಸಮರ್ಥನಾಗಲಿಲ್ಲ (ಎಂದು ಅಗ್ನಿಯು ದೇವತೆಗಳಿಗೆ ಹೇಳಿದನು.)

ತಾತ್ಪರ್ಯ

ಅಗ್ನಿಯ ಸಾಮರ್ಥ್ಯವನ್ನು ಪರೀಕ್ಷಿಸಲು ಯಕ್ಷರೂಪವು ಆತನ ಮುಂದೆ ಹುಲ್ಲು ಕಡ್ಡಿಯನ್ನು ಇಟ್ಟು ಇದನ್ನು ಸುಡು ಎಂಬುದಾಗಿ ಹೇಳಿತು. ಆಗ ಅಗ್ನಿಯು ಆತನ ಮಾತಿನಂತೆ ಆ ಹುಲ್ಲನ್ನು ತನ್ನ ಎಲ್ಲಾ ಶಕ್ತಿಯೊಡನೆ ಸಮೀಪಿಸಿ ಅದನ್ನು ಸುಡುವುದಕ್ಕೆ ಪ್ರಯತ್ನಪಟ್ಟು ವಿಫಲನಾದನು. ಆಗ ನಾಚಿಕೆಯಿಂದ ದೇವತೆಗಳ ಬಳಿಬಂದು ಆ ಯಕ್ಷ ಸ್ವರೂಪವು ಏನೆಂದು ತಿಳಿಯಲಿಲ್ಲ ಎಂದನು.

ಭಾಷ್ಯಸಾರ

ಆಗ ಯಕ್ಷರೂಪದ ಬ್ರಹ್ಮವು ಅಗ್ನಿಯ ಮುಂದೆ ಅತ್ಯಲ್ಪವಾದ ಹುಲ್ಲೊಂದನ್ನು ಇಟ್ಟಿತು ಮತ್ತು ಈ ಹುಲ್ಲನ್ನು ಸುಡು ಎಂದು ಹೇಳಿತು. ಆಗ ಅಗ್ನಿಯು ತನ್ನೆಲ್ಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಕ್ತಿಯನ್ನು ಒಟ್ಟುಗೂಡಿಸಿ ವೇಗವಾಗಿ ಹುಲ್ಲಿನ ಬಳಿ ನುಗ್ಗಿದನು. ಆದರೂ ಹುಲ್ಲನ್ನು ಸುಡಲಾಗಲಿಲ್ಲ. ಅತ್ಯಲ್ಪವಾದ ಹುಲ್ಲನ್ನೂ ಸುಡಲು ಅಸಮರ್ಥನಾಗಿ ನಾಚಿದನು ಮತ್ತು ಈ ಯಕ್ಷನು ನಮಗಿಂತ ಪ್ರಬಲನು ಎಂದು ತಿಳಿದನು. ಅಹಂಕಾರವನ್ನು ತೊರೆದು ಯಕ್ಷದ ಸಮೀಪದಿಂದ ಹಿಂತಿರುಗಿದನು. ದೇವತೆಗಳ ಬಳಿಬಂದು ಈ ಯಕ್ಷವು ಯಾವುದು ? ಎಂದು ನಿರ್ದಿಷ್ಟವಾಗಿ ತಿಳಿಯಲು ನಾನು ಸಮರ್ಥನಾಗಲಿಲ್ಲ ಎಂದು ಹೇಳಿದನು.

ಇಲ್ಲಿ ಗೋಪಾಲಾನಂದರು, ಹುಲ್ಲನ್ನು ಸುಡಲಾಗದೆ ಅಪಮಾನಿತನಾದ ಅಗ್ನಿಯು ಈ ಯಕ್ಷವು ಯಾವುದೆಂದು ಸರಿಯಾಗಿ ತಿಳಿಯಲು ಸಮರ್ಥನಾಗಲಿಲ್ಲ ಎಂದು ತಿಳಿದನು. ಇದರಿಂದ ಅಗ್ನಿಯ ಅಹಂಕಾರವೂ ತೊಲಗಿತು, ವೇಗವೂ ತಗ್ಗಿತು. ಅಲ್ಲಿ ಕ್ಷಣಕಾಲವೂ ನಿಲ್ಲದೆ ಹೊರಟುಹೋದನು ಎಂದು ವಿವರಿಸಿರುವರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೭

अथ वायुमब्रुवन् वायो
एतद्विजानीहि किमेतद्यक्षमिति । तथेति ॥

ಅಥ ವಾಯುಮಬ್ರುವನ್ ವಾಯೋ
ಏತದ್ವಿಜಾನೀಹಿ ಕಿಮೇತದ್ಯಕ್ಷಮಿತಿ । ತಥೇತಿ ॥

ಪ್ರತಿಪದಾರ್ಥ

ಅಥ–ಅನಂತರ, ವಾಯುಮ್-ವಾಯುವನ್ನು ಕುರಿತು, ಏತತ್ ಯಕ್ಷಮ್-ಈ ಯಕ್ಷಸ್ವರೂಪವು, ಕಿಮ್-ಯಾವುದೆಂದು, ವಿಜಾನೀಹಿ–ತಿಳಿದುಕೋ, ಇತಿ–ಹೀಗೆಂಬುದಾಗಿ, ಅಬ್ರುವನ್-(ದೇವತೆಗಳು) ಹೇಳಿದರು. ತಥೇತಿ-(ವಾಯುವು) ಹಾಗೆಯೇ ಆಗಲೆಂದು (ಹೇಳಿದನು).

ತಾತ್ಪರ್ಯ

ಅಗ್ನಿಯು ಹಿಂತಿರುಗಿದನಂತರ ದೇವತೆಗಳು ಯಕ್ಷಸ್ವರೂಪವನ್ನು ತಿಳಿದುಕೊಂಡು ಬರುವುದಕ್ಕಾಗಿ ವಾಯುದೇವತೆಯನ್ನು ಕಳುಹಿಸಿದರು.

ಭಾಷ್ಯಸಾರ

ಅಗ್ನಿಯ ಮಾತನ್ನು ಕೇಳಿದ ದೇವತೆಗಳು ವಾಯುದೇವತೆಯನ್ನು ಕುರಿತು ಎಲೈ ವಾಯುವೇ ! ಈ ಯಕ್ಷರೂಪವು ಯಾವುದು ? ಎಂದು ತಿಳಿದು ಬಾ ಎಂದು ಹೇಳಿದರು. ದೇವತೆಗಳ ಮಾತನ್ನು ಕೇಳಿದ ವಾಯುವು 'ನೀವು ಹೇಳಿದಂತೆ ಯಕ್ಷವು ಯಾವುದೆಂದು ತಿಳಿದುಬರುವೆನು' ಎಂದು ಹೇಳಿದನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೮

तदभ्यद्रवत् । तमभ्यवदत् कोऽसीति । वायुर्वा
अहमस्मीत्यब्रवीत् मातरिश्वा वा अहमस्मीति ।।

ತದಭ್ಯದ್ರವತ್ । ತಮಭ್ಯವದತ್ ಕೋಽಸೀತಿ । ವಾಯುರ್ವಾ
ಅಹಮಸ್ಮೀತ್ಯಬ್ರವೀತ್ ಮಾತರಿಶ್ವಾ ವಾ ಅಹಮಸ್ಮೀತಿ ||

ಪ್ರತಿಪದಾರ್ಥ

ತತ್-ಆ ಯಕ್ಷದ ಸಮೀಪಕ್ಕೆ ಅಭ್ಯದ್ರವತ್-ವಾಯುವು ಹೋದನು. ತಮ್-ಆ ವಾಯುವನ್ನು ಕುರಿತು (ಆ ಯಕ್ಷವು), ಕೋಽಸಿ ? ಇತಿ-ನೀನು ಯಾರು ? ಎಂದು, ಅಭ್ಯವದತ್-ಕೇಳಿತು. ಅಹಂ-ನಾನು, ವಾಯುಃ-ಎಲ್ಲವನ್ನೂ ಒಯ್ಯತಕ್ಕವನೂ, ಅಸ್ಮಿ-ಆಗಿದ್ದೇನೆ, ವಾ-ಅಥವಾ, ಮಾತರಿಶ್ವಾ-ಆಕಾಶ ಸಂಚಾರಿಯೂ, ಅಹಮಸ್ಮಿ-ನಾನಾಗಿದ್ದೇನೆ, ಇತಿ-ಎಂಬುದಾಗಿ, ಅಬ್ರವೀತ್-ಉತ್ತರಿಸಿದನು.

ತಾತ್ಪರ್ಯ

ವಾಯುವು ಆ ಯಃಕ್ಷವನ್ನು ಸಮೀಪಿಸಿದಾಗ ಅಗ್ನಿಯನ್ನು ಕೇಳಿದಂತೆಯೇ ನೀನು ಯಾರು ? ಎಂದು ಕೇಳಲು ವಾಯುವು, 'ನನ್ನನ್ನು ವಾಯುವೆಂದೂ, ಮಾತರಿಶ್ವನೆಂದೂ ಕರೆಯುವರು' ಎಂದನು.

ಭಾಷ್ಯಸಾರ

ವಾಯುವು ವೇಗವಾಗಿ ಯಕ್ಷದ ಬಳಿ ಬಂದನು. ತನ್ನ ಸಮೀಪಕ್ಕೆ ಬಂದ ವಾಯುವನ್ನು ಕುರಿತು ನೀನು ಯಾರು ? ಎಂದು ಕೇಳಿತು. ಆಗ ವಾಯುವು 'ನಾನು ವಾಯುವೆಂದೂ, ಅಂದರೆ ಎಲ್ಲವನ್ನೂ ಒಯ್ಯಬಲ್ಲವನೆಂದೂ, ಮಾತರಿಶ್ವಾ ಅಂದರೆ ಆಕಾಶದಲ್ಲಿ ಗಮನವುಳ್ಳವನೆಂದೂ' ಅಹಂಕಾರದಿಂದ ಹೇಳಿದನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೯

तस्मिंस्त्वयि किं वीर्यमिति । अपीदं
सर्वमाददीय(यम्), यदिदं पृथिव्यामिति ॥

ತಸ್ಮಿಂಸ್ತ್ವಯಿ ಕಿಂ ವೀರ್ಯಮಿತಿ । ಅಪೀದಂ
ಸರ್ವಮಾದದೀಯ(ಯಮ್), ಯದಿದಂ ಪೃಥಿವ್ಯಾಮಿತಿ ॥

ಪ್ರತಿಪದಾರ್ಥ

ತಸ್ಮಿನ್-ಅಂತಹ, ತ್ವಯಿ-ನಿನ್ನಲ್ಲಿ, ಕಿಂ ವೀರ್ಯಮ್-ಏನು ಸಾಮರ್ಥ್ಯವಿದೆ ? ಇತಿ-ಹೀಗೆಂದು, (ಯಕ್ಷವು ಕೇಳಲು), ಪೃಥಿವ್ಯಾಂ ಯದಿದಂ-ಈ ಭೂಮಿಯಲ್ಲಿ ಯಾವವಸ್ತುವಿದೆಯೋ, ಇದಂ ಸರ್ವಂ ಅಪಿ-ಇದೆಲ್ಲವನ್ನೂ, ಆದದೀಯಂ-ತೆಗೆದುಕೊಂಡು ಹೋಗುತ್ತೇನೆ, ಇತಿ-ಹೀಗೆಂದು (ಹೇಳಿದನು).

ತಾತ್ಪರ್ಯ

ಯಕ್ಷವು ನಿನ್ನ ಸಾಮರ್ಥ್ಯವೇನು ? ಎಂದು ಮತ್ತೊಮ್ಮೆ ಪ್ರಶ್ನಿಸಲು ನಾನು ಈ ಭೂಮಿಯಲ್ಲಿರುವ ಸಮಸ್ತಪದಾರ್ಥಗಳನ್ನೂ ಒಯ್ಯಬಲ್ಲೆನು ಎಂದು ಹೇಳಿದನು.

ಭಾಷ್ಯಸಾರ

ವಾಯುವಿನ ಮಾತನ್ನು ಕೇಳಿ ಯಕ್ಷರೂಪದ ಪರಬ್ರಹ್ಮವು, 'ವಾಯುಃ, ಮಾತರಿಶ್ವಾ' ಎಂದು ಪ್ರಸಿದ್ಧನಾದ ನಿನ್ನಲ್ಲಿ ಏನು ಸಾಮರ್ಥ್ಯವಿದೆ ? ಎಂದು ಕೇಳಿತು. ಅಂದರೆ ನೀನು ಯಾವ ಕಾರ್ಯಮಾಡಬಲ್ಲೆ ಎಂದು ತಾತ್ಪರ್ಯ. ಆಗ ವಾಯುವು ಈ ಪೃಥಿವಿಯಲ್ಲಿರುವ (ಕಣ್ಣಿಗೆ ಕಾಣುವ) ಸ್ಥಾವರ-ಜಂಗಮವಾದ ಎಲ್ಲ ವಸ್ತುಗಳನ್ನು ಒಯ್ದು ಆಕಾಶದಲ್ಲಿ ಹಾರಿಸಬಲ್ಲೆನೆಂದು ತನ್ನ ಸಾಮರ್ಥ್ಯವನ್ನು ಅಹಂಕಾರದಿಂದ ಹೇಳಿದನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೧೦

तस्मै तृणं निदधौ एतदादत्स्वेति । तदुपप्रेयाय
सर्वजवेन । तन्न शशाकाऽऽदातुम् ।
स तत एव निववृते नैत(नैन) दशकं विज्ञातुम्
यदेतद्यक्षमिति ॥

ತಸ್ಮೈ ತೃಣಂ ನಿದಧೌ, ಏತದಾದತ್ಸ್ವೇತಿ । ತದುಪಪ್ರೇಯಾಯ
ಸರ್ವಜವೇನ । ತನ್ನ ಶಶಾಕಾಽಽದಾತುಂ ।
ಸ ತತ ಏವ ನಿವವೃತೇ ನೈತ(ನೈನ)ದಶಕಂ ವಿಜ್ಞಾತುಂ
ಯದೇತದ್ಯಕ್ಷಮಿತಿ ॥

ಪ್ರತಿಪದಾರ್ಥ

ಏತತ್ ಆದತ್ಸ್ವ-ಇದನ್ನು ತೆಗೆದುಕೊಂಡು ಹೋಗು, ಇತಿ-ಹೀಗೆಂದು, ತಸ್ಮೈ-ಅವನ ಮುಂದೆ, ತೃಣಂ-ಹುಲ್ಲನ್ನು (ಯಕ್ಷವು), ನಿದಧೌ-ಇಟ್ಟಿತು. ಸರ್ವಜವೇನ-(ವಾಯುವು) ತನ್ನ ಎಲ್ಲಾ ಶಕ್ತಿಯೊಡನೆ, ತತ್-ಆ ಹುಲ್ಲನ್ನು, ಉಪಪ್ರೇಯಾಯ-ಸಮೀಪಿಸಿದನು. ತತ್-ಆ ಹುಲ್ಲನ್ನು, ಆದಾತುಂ-ತೆಗೆದುಕೊಂಡು ಹೋಗಲು, ನ ಶಶಾಕ-ಸಮರ್ಥನಾಗಲಿಲ್ಲ. ಸಃ-ಆ ವಾಯುವು, ತತ ಏವ-ಆ ಹುಲ್ಲನ್ನು ತೆಗೆದುಕೊಂಡು ಹೋಗಲು ಸಮರ್ಥನಾಗದ ಕಾರಣದಿಂದಲೇ, ನಿವವೃತೇ-(ನಾಚಿಕೆಯಿಂದ) ಹಿಂತಿರುಗಿದನು. ಏತತ್ ಯಕ್ಷಂ-ಈ ಯಕ್ಷರೂಪವಾವುದೆಂದು, ವಿಜ್ಞಾತುಂ-ತಿಳಿಯಲು, ನ ಅಶಕಂ-ಸಮರ್ಥನಾಗಲಿಲ್ಲ, ಇತಿ-ಎಂದು (ದೇವತೆಗಳಿಗೆ ಹೇಳಿದನು).

ತಾತ್ಪರ್ಯ

ಯಕ್ಷವು ವಾಯುವಿನ ಮುಂದೆ ಹುಲ್ಲನ್ನಿಟ್ಟು ಇದನ್ನು ಹಾರಿಸು ಎಂದು ಹೇಳಿತು. ವಾಯುವು ವೇಗವಾಗಿ ಹೋಗಿ ಆ ಒಣಗಿದ ಹುಲ್ಲನ್ನು ಹಾರಿಸಲು ಪ್ರಯತ್ನಿಸಿದನು. ಹುಲ್ಲನ್ನು ಒಯ್ಯಲು ಅಸಮರ್ಥನಾಗಿ ನಾಚಿಕೆಯಿಂದ ಹಿಂತಿರುಗಿ ದೇವತೆಗಳ ಬಳಿ ಬಂದನು. ಈ ಯಕ್ಷರೂಪವಾವುದೆಂದು ತಿಳಿಯಲಿಲ್ಲ ಎಂದು ಹೇಳಿದನು.

ಭಾಷ್ಯಸಾರ

ಯಕ್ಷವು ಎಲ್ಲ ವಸ್ತುಗಳನ್ನು ಒಯ್ಯಬಲ್ಲೆನೆಂದು ಗರ್ವಿಷ್ಠನಾದ ವಾಯುವನ್ನು ಅನುಗ್ರಹಿಸಲು ಅವನ ಮುಂದೆ ಹುಲ್ಲನ್ನು ಇಟ್ಟಿತು ಮತ್ತು ನಿನ್ನ ಮುಂದಿರುವ ಈ ಹುಲ್ಲನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೆಗೆದುಕೊಂಡು ಹೋಗು ಎಂದು ಹೇಳಿತು. ಆಗ ವಾಯುವು ತನ್ನ ಎಲ್ಲ ವೇಗವನ್ನು ಒಟ್ಟು ಗೂಡಿಸಿ ಹುಲ್ಲಿನ ಬಳಿ ಹೋಗಿ ಅದನ್ನು ಒಯ್ಯಲು ಯತ್ನಿಸಿದನು. ಆದರೆ ವಾಯುವು ಆ ಹುಲ್ಲನ್ನು ಒಯ್ಯಲು ಸಮರ್ಥನಾಗಲಿಲ್ಲ. ಆಗ ತನ್ನ ಅಸಾಮರ್ಥ್ಯವನ್ನು ಮನಗಂಡ ವಾಯುವಿನ ಅಹಂಕಾರವು ಹೋಯಿತು. ಕೂಡಲೇ ಯಕ್ಷದ ಸಮೀಪದಿಂದ ಹಿಂತಿರುಗಿ ದೇವತೆಗಳ ಸಮೀಪಕ್ಕೆ ಬಂದನು ಮತ್ತು ದೇವತೆಗಳನ್ನು ಕುರಿತು ಈ ಯಕ್ಷವು ಯಾವುದು ? ಎಂದು ತಿಳಿಯಲು ಸಮರ್ಥನಾಗಲಿಲ್ಲ ಎಂದು ಹೇಳಿದನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೧೧

**अथेन्द्रमब्रुवन् मघवन्नेतद्विजानीहि किमेतद्यक्षमिति ।
तथेति तदभ्यद्रवत् । तस्मात् तिरोदधे ॥**

ಅಥೇಂದ್ರಮಬ್ರುವನ್ ಮಘವನ್ನೇತದ್ವಿಜಾನೀಹಿ
ಕಿಮೇತದ್ಯಕ್ಷಮಿತಿ । ತಥೇತಿ ತದಭ್ಯದ್ರವತ್ ।
ತಸ್ಮಾತ್ ತಿರೋದಧೇ ॥

ಪ್ರತಿಪದಾರ್ಥ

ಅಥ-ಅನಂತರ (ಎಲ್ಲ ದೇವತೆಗಳೂ), ಇಂದ್ರಮ್-ಇಂದ್ರನನ್ನು ಕುರಿತು, ಮಘವನ್-ಇಂದ್ರನೇ ! ಕಿಮೇತದ್ಯಕ್ಷಂ-ಈ ಯಕ್ಷಸ್ವರೂಪವು ಯಾವುದು ? ಎಂದು, ವಿಜಾನೀಹಿ-ತಿಳಿದುಕೋ, ಇತಿ-ಹೀಗೆಂದು, ಅಬ್ರುವನ್-ಹೇಳಿದರು. ತಥೇತಿ-ಹಾಗೆಯೇ ಆಗಲೆಂದು, ತತ್-ಆ ಯಕ್ಷದ ಸಮೀಪವನ್ನು ಕುರಿತು, ಅಭ್ಯದ್ರವತ್-ಹೋದನು. ತಸ್ಮಾತ್-ಇಂದ್ರನ ಸಮೀಪದಿಂದ, ತಿರೋದಧೇ-ಯಕ್ಷರೂಪವು ಮರೆಯಾಯಿತು. (ಅಗ್ನಿ, ವಾಯುವಿನಂತೆಯೇ ಇಂದ್ರನಿಗೂ ಗರ್ವಭಂಗವಾಗದಿರಲೆಂಬ ಕೃಪೆಯಿಂದ ಅಂತರ್ಧಾನವಾಯಿತು ಎಂದು ಅಭಿಪ್ರಾಯ).

ತಾತ್ಪರ್ಯ

ವಾಯುವು ಹಿಂತಿರುಗಿದ ಅನಂತರ ಇಂದ್ರನನ್ನು ಕುರಿತು ಆ ದೇವತೆಗಳು ಯಕ್ಷಸ್ವರೂಪವನ್ನು ತಿಳಿದುಕೊಂಡು ಬರಲು ಪ್ರಾರ್ಥಿಸಿದರು. ಅದರಂತೆಯೇ ಇಂದ್ರನು ಆ ಯಕ್ಷವನ್ನು ಸಮೀಪಿಸಲು ಪರಬ್ರಹ್ಮರೂಪಿಯಾದ ಯಕ್ಷವು ಮರೆಯಾಗಿ ಹೋಯಿತು.

ರಂಗರಾಮಾನುಜಭಾಷ್ಯ[1]

'ತಸ್ಮಾತ್ತಿರೋದಧೇ । ತಸ್ಮಾತ್–ಮಘೋನಸ್ಸನ್ನಿಧೇಃ, ಏತಸ್ಯ ಗರ್ವಭಂಗೋ ಮಾಭೂದಿತಿ ತಿರೋಹಿತವಂಭವದಿತ್ಯರ್ಥಃ । 'ತಸ್ಮಿನ್ನೇವಾಕಾಶೇ ಸ್ತ್ರಿಯಮಾಜಗಾಮ ಬಹು ಶೋಭಮಾನಾಂ ಉಮಾಂ ಹೈಮವತೀಮ್ । ತಾಂ ಹೋವಾಚ ಕಿಮೇತದ್ಯಕ್ಷಮಿತಿ' । ತಸ್ಮಿನ್ನೇವ ಪ್ರದೇಶೇ ಹಿಮವತ್ಪುತ್ರೀಂ ಬಹುಭಿರಾಭರಣೈಶ್ಶೋಭಮಾನಾಂ ಪಾರ್ವತೀಂ ಸರ್ವಜ್ಞಾಮಿಂದ್ರಾನುಗ್ರಹಾಯ ಪ್ರಾದುರ್ಭೂತಾಂ ದೃಷ್ಟ್ವಾ ತತ್ಸಮೀಪಮಾಗತ್ಯ, ಇಯಂ ಸರ್ವಂ ಜಾನಾತೀತಿ ಮನ್ಯಮಾನಃ ಕಿಮೇತತ್ ಯಕ್ಷಮಿತಿ ಪಪ್ರಚ್ಛ ಇತ್ಯರ್ಥಃ ॥

1. 11–12 ಮಂತ್ರಗಳ ಭಾಷ್ಯ ಇಲ್ಲೇ ಇದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಸ್ಮಾತ್ತಿರೋದಧೇ । ತಸ್ಮಾತ್–ಇಂದ್ರನ ಸಮ್ಮುಖದಿಂದ, ಇವನ ಗರ್ವಭಂಗವಾಗದಿರಲಿ ಎಂದು ಮರೆಯಾಯಿತು. ತಸ್ಮಿನ್ನೇವಾಕಾಶೇ ಸ್ತ್ರಿಯಮಾಜಗಾಮ ಬಹುಶೋಭಮಾನಾಮ್ ಉಮಾಂ ಹೈಮವತೀಮ್ । ತಾಂ ಹೋವಾಚ ಕಿಮೇತದ್ಯಕ್ಷಮಿತಿ । ಅದೇ ಪ್ರದೇಶದಲ್ಲಿ ಹಿಮವಂತನ ಮಗಳೂ, ಬಹಳ ಆಭರಣಗಳಿಂದ ಶೋಭಿಸುವವಳೂ, ಎಲ್ಲವನ್ನೂ ತಿಳಿದವಳೂ, ಇಂದ್ರನ ಅನುಗ್ರಹಕ್ಕಾಗಿ ಪ್ರತ್ಯಕ್ಷಳೂ ಆದ ಪಾರ್ವತಿಯನ್ನು ನೋಡಿ, ಅವಳನ್ನು ಸಮೀಪಿಸಿ, 'ಇವಳು ಎಲ್ಲವನ್ನೂ ತಿಳಿದವಳು' ಎಂಬ ಭಾವನೆಯುಳ್ಳವನಾಗಿ ಈ ಯಕ್ಷವು ಯಾವುದೆಂದು ಪ್ರಶ್ನಿಸಿದನು ಎಂದು ಅಭಿಪ್ರಾಯ.

ಭಾಷ್ಯಸಾರ

ಯಕ್ಷದ ಸಮೀಪದಿಂದ ಹಿಂತಿರುಗಿದ ವಾಯುವಿನ ಮಾತನ್ನು ಕೇಳಿದ ದೇವತೆಗಳು ದೇವರಾಜನಾದ ಇಂದ್ರನನ್ನು ಕುರಿತು ಎಲೈ ಇಂದ್ರನೇ, ಈ 'ಯಕ್ಷವು ಯಾರೆಂದು ತಿಳಿ' ಎಂದು ಪ್ರಾರ್ಥಿಸಿದರು. ದೇವತೆಗಳ ಪ್ರಾರ್ಥನೆಯನ್ನು ಮನ್ನಿಸಿ, ನಿಮ್ಮ ಪ್ರಾರ್ಥನೆಯಂತೆ ಯಕ್ಷವು ಯಾವುದೆಂದು ತಿಳಿದುಬರುವೆನೆಂದು ಹೇಳಿ ಯಕ್ಷದ ಬಳಿಗೆ ಹೋದನು. ಆಗ ಯಕ್ಷರೂಪದ ಪರಬ್ರಹ್ಮವು ಅಗ್ನಿ, ವಾಯುಗಳಿಗೆ ಮಾನಭಂಗವಾದಂತೆ ಇಂದ್ರನಿಗೆ ಮಾನಭಂಗವಾಗಬಾರದೆಂದು ಆ ಪ್ರದೇಶದಿಂದ ಮರೆಯಾಯಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೧೨

स (?) तस्मिन्नेवाकाशे स्त्रियमाजगाम बहुशोभमानाम्
उमां हैमवतीम्। तां होवाच किमेतद्यक्षमिति ॥

ಸ(?) ತಸ್ಮಿನ್ನೇವಾಕಾಶೇ ಸ್ತ್ರಿಯಮಾಜಗಾಮ
ಬಹುಶೋಭಮಾನಾಂ ಉಮಾಂ ಹೈಮವತೀಮ್ ।
ತಾಂ ಹೋವಾಚ ಕಿಮೇತದ್ಯಕ್ಷಮಿತಿ ॥

ಪ್ರತಿಪದಾರ್ಥ

ಸಃ-ಇಂದ್ರನು, ತಸ್ಮಿನ್ನೇವ ಆಕಾಶೇ-ಅದೇ (ಯಕ್ಷವು ಇದ್ದ) ಆಕಾಶದಲ್ಲಿಯೇ (ಪ್ರತ್ಯಕ್ಷಳಾದ), ಹೈಮವತೀಂ-ಸುವರ್ಣಾಲಂಕಾರಗಳಿಂದ ಭೂಷಿತಳಾದ ಬಹುಶೋಭಮಾನಾಂ-(ಆದ್ದರಿಂದಲೇ) ಚೆನ್ನಾಗಿ ಬೆಳಗುತ್ತಿರುವ ಮಾಮ್‌ಉ-ಪುರುಷಕಾರಭೂತೆಯಾದ[1] ಲಕ್ಷ್ಮೀರೂಪದ ಸ್ತ್ರಿಯಂ-ಸ್ತ್ರೀಯನ್ನು, ಆಜಗಾಮ-ಸಮೀಪಿಸಿದನು. ತಾಮ್-ಆ ಲಕ್ಷ್ಮಿಯನ್ನು, ಏತದ್ ಯಕ್ಷಂ-ಈ ಯಕ್ಷಸ್ವರೂಪವು, ಕಿಂ-ಯಾವುದು ? ಇತಿ-ಎಂದು, ಹ ಉವಾಚ-ಕೇಳಿದನಷ್ಟೇ!

ತಾತ್ಪರ್ಯ

ಯಕ್ಷಸ್ವರೂಪವು ಕಣ್ಮರೆಯಾದ ದಿಗ್ಭಾಗದಲ್ಲಿಯೇ ಸುವರ್ಣಾಭರಣಗಳಿಂದ ಭೂಷಿತಳೂ, ಶೋಭಿಸುವವಳೂ, ಆದ ಲಕ್ಷ್ಮೀದೇವಿಯು ಆವಿರ್ಭವಿಸಿದಳು. ಅವಳನ್ನು ಪುರುಷಕಾರವತಿಯೆಂದು ಭಾವಿಸಿದ ಇಂದ್ರನು ಅವಳ ಸಮೀಪಕ್ಕೆ ಹೋಗಿ, 'ಈ ಯಕ್ಷಸ್ವರೂಪವು ಯಾವುದು?' ಎಂದು ಕೇಳಿದನು.

ಭಾಷ್ಯಸಾರ

ಇಂದ್ರನು, ಹಿಂದೆ ಯಕ್ಷವು ಕಾಣಿಸಿಕೊಂಡ ಪ್ರದೇಶದಲ್ಲಿ ಅದನ್ನು ಕಾಣಲಾರದಾದನು. ಕಾರಣ ಯಕ್ಷವು ಆಗಲೇ ಮಾಯವಾಗಿತ್ತು. ಆ ಯಕ್ಷಸ್ವರೂಪವು ಎಲ್ಲಿ ಹೋಗಿರಬಹುದು ?

---

1. ಜೀವನಿಗೂ ಪರಮಾತ್ಮನಿಗೂ ಮಧ್ಯೆ ಇದ್ದು ಅವರೀರ್ವರನ್ನೂ ಸಂಯೋಜಿಸುವಳು. 'ಉಮಾಂ ಹೈಮವತೀಂ' ಎಂಬಲ್ಲಿ ಪ್ರತಿಪದಾರ್ಥಕಾರರು 'ಉ' ಮತ್ತು 'ಮಾಮ್' ಎಂದು ಪದವಿಭಾಗವನ್ನು ಮಾಡಿರುತ್ತಾರೆ. 'ಮಾಮ್' ಎಂದರೆ 'ಲಕ್ಷ್ಮಿಯನ್ನು' ಎಂದರ್ಥ. 'ಉ' ಶಬ್ದವು ಅವಧಾರಣಾರ್ಥಕವಾಗಿದೆ ಎಂದು ವ್ಯಾಖ್ಯಾನವನ್ನು ಮಾಡಿರುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಂದು ಅವನಿಗೆ ವಿಸ್ಮಯವೇ ಉಂಟಾಯಿತು. ಆದರೆ ಅದೇ ಸಂದರ್ಭದಲ್ಲಿ ನಾನಾ ಅಲಂಕಾರಗಳಿಂದ ಶೋಭಿಸುವವಳೂ, ನಗಾಧಿರಾಜನಾದ ಹಿಮವಂತನ ಮಗಳೂ ಆದ ಪಾರ್ವತಿಯು ಇಂದ್ರನ ಅನುಗ್ರಹಕ್ಕಾಗಿ ಕಳುಹಿಸಲ್ಪಟ್ಟಳು. ಅವಳು ಮೂಡಿ ಬಂದ ಮರುಕ್ಷಣವೇ ಇಂದ್ರನು ಅವಳ ಸಮೀಪಕ್ಕೆ ಬಂದು, ಅತ್ಯಂತ ವಿನಯದಿಂದ ಯಕ್ಷಸ್ವರೂಪವಾವುದು ? ಎಂದು ಕೇಳಿದನು.

—ಮೂರನೆಯ ಖಂಡ ಮುಗಿಯಿತು—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾಲ್ಕನೆಯಖಂಡ

ಮಂತ್ರ ೧

[सा] ब्रह्मेति होवाच, ब्रह्मणो वा एतद्विजये
महीयध्वम् (ध्वे) इति । ततो हैव विदाञ्चकार ब्रह्मेति ॥

(ಸಾ) ಬ್ರಹ್ಮೇತಿ ಹೋವಾಚ, ಬ್ರಹ್ಮಣೋ ವಾ ಏತದ್ವಿಜಯೇ
ಮಹೀಯಧ್ವಂ(ಧ್ವೇ) ಇತಿ । ತತೋ ಹೈವ ವಿದಾಂಚಕಾರ ಬ್ರಹ್ಮೇತಿ॥

ಪ್ರತಿಪದಾರ್ಥ

ಸಾ–ಆ ಲಕ್ಷ್ಮಿಯು (ಆ ಯಕ್ಷರೂಪವನ್ನು), ಬ್ರಹ್ಮೇತಿ ಹ–ಪರಬ್ರಹ್ಮವೇ ಎಂದು, ಉವಾಚ–ಹೇಳಿದಳು. ಬ್ರಹ್ಮಣಃ ವಾ–ಪರಬ್ರಹ್ಮಭೂತವಾದ ಪರಮಾತ್ಮನದೇ ಆದ, ಏತದ್ವಿಜಯೇ-ಈ ಅಸುರ ವಿಜಯದಲ್ಲಿ, ಮಹೀಯಧ್ವಂ-ಮಹಿಮೆಯನ್ನು ಪಡೆಯಿರಿ. ತತಃ ಹೈವ–ಪುರುಷಕಾರಭೂತೆಯಾದ ಆ ಲಕ್ಷ್ಮಿಯ ಉಪದೇಶದ ನಂತರವೇ, ಬ್ರಹ್ಮೇತಿ–(ಯಕ್ಷವು) ಪರಬ್ರಹ್ಮವಾದ ಶ್ರಿಯಃಪತಿಯೆಂದು, ವಿದಾಂಚಕಾರ-(ಆ ಇಂದ್ರನು) ತಿಳಿದುಕೊಂಡನು.

ತಾತ್ಪರ್ಯ

ಈ ಯಕ್ಷರೂಪವೇ ಪರಬ್ರಹ್ಮವು, ಈ ಪರಬ್ರಹ್ಮದಿಂದಲೇ ನಿಮಗೆ ವಿಜಯವು ಸಿದ್ಧಿಸಿತು. ನಿಮ್ಮ ಗರ್ವಭಂಗಕ್ಕಾಗಿಯೇ ನಿಮ್ಮ ಮುಂದೆ ಯಕ್ಷರೂಪಿಯಾಗಿ ಪರಬ್ರಹ್ಮವೇ ಬಂದಿತೆಂದು ಹೇಳಿದಳು. ಲಕ್ಷ್ಮಿಯು ಈ ಮಾತನ್ನು ಕೇಳಿ 'ಯಕ್ಷವೇ ಶ್ರಿಯಃಪತಿಯು' ಎಂದು ಇಂದ್ರನು ತಿಳಿದುಕೊಂಡನು.

ರಂಗರಾಮಾನುಜಭಾಷ್ಯ

'ಬ್ರಹ್ಮೇತಿ ಹೋವಾಚ, ಬ್ರಹ್ಮಣೋ ವಾ ಏತದ್ವಿಜಯೇ ಮಹೀಯಧ್ವಮ್ ಇತಿ'। ಬ್ರಹ್ಮೈವ ಯಕ್ಷರೂಪೇಣ ಯುಷ್ಮನ್ಮೋಹಶಮನಾಯ ಪ್ರಾದುರ್ಭೂತಮ್ । ಅತೋ ಬ್ರಹ್ಮಸಂಬಂಧಿನಿ ವಿಜಯೇ ನಿಮಿತ್ತೇ ಪೂಜಾಂ ಪ್ರಾಪ್ನುತ । ಅಸ್ಮಾಭಿರೇವ ವಿಜಯಃ ಕೃತ ಇತಿ ದುರಭಿಮಾನಃ ತ್ಯಕ್ತವ್ಯ ಇತ್ಯರ್ಥಃ । 'ತತೋ ಹೈವ ವಿದಾಂಚಕಾರ ಬ್ರಹ್ಮೇತಿ'। ತದುಪದೇಶಾದೇವ ಬ್ರಹ್ಮೇತಿ ಜಾತವಾನಿತ್ಯರ್ಥಃ ॥

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾಷಾಂತರ

'ಬ್ರಹ್ಮೇತಿ ಹೋವಾಚ, ಬ್ರಹ್ಮಣೋ ವಾ ಏತದ್ವಿಜಯೇ ಮಹೀಯಧ್ವಮಿತಿ'। ಬ್ರಹ್ಮವೇ ಯಕ್ಷದರೂಪದಲ್ಲಿ ನಿಮ್ಮ ಅಹಂಕಾರವನ್ನು ಶಾಂತಗೊಳಿಸಲು ಆವಿರ್ಭವಿಸಿದೆ. ಆದ್ದರಿಂದ ಬ್ರಹ್ಮನಿಗೆ ಸಂಬಂಧಿಸಿದ ವಿಜಯದ ನಿಮಿತ್ತವಾಗಿಯೇ ನೀವು ಗೌರವವನ್ನು ಪಡೆದಿರುತ್ತೀರಿ. ಆದುದರಿಂದ 'ನಾವೇ ವಿಜಯವನ್ನು ಪಡೆದೆವು' ಎಂಬ ದುರಹಂಕಾರವನ್ನು ಬಿಡಬೇಕು. 'ತತೋ ಹೈವ ವಿದಾಂಚಕಾರ ಬ್ರಹ್ಮೇತಿ'। (ಇಂದ್ರನು) ಅವಳ ಉಪದೇಶದಿಂದಲೇ ಬ್ರಹ್ಮವೆಂದು ತಿಳಿದನು.

ಭಾಷ್ಯಸಾರ

ಇಂದ್ರನು ಯಕ್ಷರೂಪವು ಯಾವುದು ? ಎಂದು ಕೇಳಿದನು. ಪಾರ್ವತಿಯು ಯಕ್ಷರೂಪದಲ್ಲಿ ನಿಮಗೆ ಕಾಣಿಸಿದುದು ಪರಬ್ರಹ್ಮವು. ಇದು ಗುಣಗಳಿಂದಲೂ, ಸ್ವರೂಪದಿಂದಲೂ, ಅತಿಶಯವಾದ ಬೃಹತ್ವವುಳ್ಳದು. ಇಂತಹ ನಿರತಿಶಯವಾದ ಬೃಹತ್ವವಿಶಿಷ್ಟವೂ, ಎಲ್ಲದರಲ್ಲೂ ಅಂತರ್ಯಾಮಿಯೂ ಆಗಿರುವ ಪರಮಾತ್ಮನಿಂದಲೇ ನಿಮಗೆ ಜಯವು ದೊರಕಿತು ಮತ್ತು ಈ ವಿಜಯದಿಂದ ನಿಮ್ಮ ಮಹಿಮೆ ಹೆಚ್ಚಿತು ಎಂದು ಹೇಳಿದಳು. "ನಮ್ಮಿಂದಲೇ ಈ ವಿಜಯ ದೊರಕಿತು. ಇದರಿಂದ ನಮ್ಮ ಮಹಿಮೆ ಹೆಚ್ಚಿತು" ಎಂಬ ಅಹಂಕಾರವನ್ನು ಬಿಡಿರಿ ಎಂದು ತಾತ್ಪರ್ಯ. ಈ ಪಾರ್ವತಿಯ ಮಾತಿನಿಂದ ಇಂದ್ರನು ಬ್ರಹ್ಮವೇ ಯಕ್ಷರೂಪದಲ್ಲಿ ಕಾಣಿಸಿತು ಎಂದು ತಿಳಿದನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೨

तस्माद्वा एते देवा अतितरामिवान्यान् देवान् ;
यदग्निर्वायुरिन्द्रः ; ते ह्येनन्नेदिष्ठं पस्पृशुः ।
ते(स) ह्येनत् प्रथमो विदाञ्चकार ब्रह्मेति ॥

ತಸ್ಮಾದ್ವಾ ಏತೇ ದೇವಾ ಅತಿತರಾಮಿವಾನ್ಯಾನ್ ದೇವಾನ್ ;
ಯದಗ್ನಿರ್ವಾಯುರಿಂದ್ರಃ ; ತೇ ಹ್ಯೇನನ್ನೇದಿಷ್ಠಂ ಪಸ್ಪೃಶುಃ ।
ತೇ(ಸ)ಹ್ಯೇನತ್ ಪ್ರಥಮೋ ವಿದಾಂಚಕಾರ ಬ್ರಹ್ಮೇತಿ ॥

ಪ್ರತಿಪದಾರ್ಥ

ಯತ್-ಯಾವ, ಅಗ್ನಿಃ, ವಾಯುಃ, ಇಂದ್ರಃ-ಅಗ್ನಿ, ವಾಯು, ಇಂದ್ರ ಎಂಬ ದೇವತೆಗಳು, ಏನತ್-ಈ ಪರಬ್ರಹ್ಮವನ್ನು, ನೇದಿಷ್ಠಮ್-ಸಮೀಪಿಸಿ, ಪಸ್ಪೃಶುಃ-ನೋಡಿದರೋ, ತೇ ಹಿ-ಅವರೇ, ಏನತ್-ಈ ಯಕ್ಷರೂಪವನ್ನು, ಬ್ರಹ್ಮೇತಿ-ಪರಬ್ರಹ್ಮ ಎಂಬುದಾಗಿ, ಪ್ರಥಮಃ-ಮೊದಲು, ವಿದಾಂಚಕಾರ-ತಿಳಿದರೋ, ತಸ್ಮಾತ್ ವಾ-ಆ ಕಾರಣದಿಂದಲೇ, ಏತೇ ದೇವಾಃ-ಈ ಅಗ್ನಿ, ವಾಯು, ಇಂದ್ರರೆಂಬ ದೇವತೆಗಳು, ಅನ್ಯಾನ್ ದೇವಾನ್-ಇತರ ದೇವತೆಗಳನ್ನು ಅತಿತರಾಮಿವ-ಮೀರಿರುತ್ತಾರೆ.

ತಾತ್ಪರ್ಯ

ಅಗ್ನಿ, ವಾಯು, ಇಂದ್ರರು ಮೊದಲು ಯಕ್ಷಸ್ವರೂಪಿಯಾದ ಪರಬ್ರಹ್ಮವನ್ನು ತಿಳಿದುಕೊಂಡ ಕಾರಣದಿಂದ ಇತರ ದೇವತೆಗಳಿಗಿಂತಲೂ ಶ್ರೇಷ್ಠರು.

ರಂಗರಾಮಾನುಜಭಾಷ್ಯ

'ತಸ್ಮಾದ್ವಾ ಏತೇ ದೇವಾ ಅತಿತರಾಮಿವಾನ್ಯಾನ್ ದೇವಾನ್ ; ಯದಗ್ನಿರ್ವಾಯುರಿಂದ್ರಃ । ತೇ ಹ್ಯೇನನ್ನೇದಿಷ್ಠಂ ಪಸ್ಪೃಶುಃ । ತೇ ಹ್ಯೇನತ್ ಪ್ರಥಮೋ ವಿದಾಂಚಕಾರ ಬ್ರಹ್ಮೇತಿ '–ತಸ್ಮಾದೇವ ಹೇತೋಃ ಏತ ಏವಾಗ್ನಿವಾಯ್ವಿಂದ್ರಾ ಇತರಾನ್ ದೇವಾನ್ ಅತಿಶೇರತ ಇವ । ಇವ ಶಬ್ದ ಏವಾರ್ಥಃ । ಅತಿಶೇರತ ಏವ ಇತ್ಯರ್ಥಃ । ತಸ್ಮಾದ್ಧೇತೋಃ ನೇದಿಷ್ಠಮ್–ಸಮೀಪೇ ವರ್ತಮಾನಂ ತದ್‌ಬ್ರಹ್ಮ ಪಸ್ಪೃಶುಃ–ದೃಷ್ಟವಂತಃ, ಯಂತಶ್ಚ ಹೇತೋಃ ಪ್ರಥಮೋ ವಿದಾಂಚಕಾರ ಪ್ರಥಮಾಃ ಸಂತಃ ಬ್ರಹ್ಮೇತಿ ವಿದಾಂಚಕ್ರುಃ, ಅತ ಏವ ಏತೇ ದೇವಾಂತರಾಪೇಕ್ಷಯಾ ಅಗ್ನಿವಾಯ್ವಿಂದ್ರಾಃ ಅತಿಶಯಿಂತ (ಅತಿಶಯಂ ?)ವಂತ ಇತ್ಯರ್ಥಃ । ವಚನವ್ಯತ್ಯಯಂಶ್ಛಾಂದಸಃ ।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾಷಾಂತರ

'ತಸ್ಮಾದ್ವಾ ಏತೇ ದೇವಾ ಅತಿತರಾಮಿವ ಅನ್ಯಾನ್ ದೇವಾನ್, ಯದಗ್ನಿರ್ವಾಯುರಿಂದ್ರಃ। ತೇ ಹ್ಯೇನನ್ನೇದಿಷ್ಠಂ ಪಸ್ಪೃಶುಃ। ತೇ ಹ್ಯೇನತ್ ಪ್ರಥಮೋ ವಿದಾಂಚಕಾರ ಬ್ರಹ್ಮೇತಿ'। ಆ ಕಾರಣದಿಂದಲೇ ಈ ಅಗ್ನಿ, ವಾಯು ಮತ್ತು ಇಂದ್ರರು ಉಳಿದ ದೇವತೆಗಳನ್ನು ಮೀರಿಸುತ್ತಾರೆ. ಇವ ಶಬ್ದವು ನಿಶ್ಚಯಾರ್ಥದಲ್ಲಿ ಮೀರಿಸೇ ಮೀರಿಸುತ್ತಾರೆ ಎಂದಾಗುತ್ತದೆ. ಯಾವ ಕಾರಣದಿಂದ ನೇದಿಷ್ಠಮ್–ಸಮೀಪದಲ್ಲಿರುವ ಆ ಬ್ರಹ್ಮವನ್ನು ಪಸ್ಪೃಶುಃ-ಸಾಕ್ಷಾತ್ಕರಿಸಿಕೊಂಡರೋ, ಯಾವ ಕಾರಣದಿಂದ ಪ್ರಥಮೋ ವಿದಾಂಚಕಾರ-ಮೊದಲಿಗರಾಗಿ ಬ್ರಹ್ಮವೆಂದು ತಿಳಿದರೋ, ಆದ್ದರಿಂದಲೇ ಈ ಅಗ್ನಿ, ವಾಯು, ಇಂದ್ರರು ಬೇರೆ ದೇವತೆಗಳಿಗಿಂತ ಮೇಲಾಗಿದ್ದಾರೆ ಎಂದು ಆಶಯ. ವಚನದ ವ್ಯತ್ಯಾಸವು ಛಾಂದಸ.

ಭಾಷ್ಯಸಾರ

ಅಗ್ನಿ, ವಾಯು ಮತ್ತು ಇಂದ್ರರು ಯಕ್ಷಸ್ವರೂಪವನ್ನು ಹತ್ತಿರದಿಂದ ತಿಳಿದವರು. ಅಗ್ನಿ, ವಾಯುಗಳು ಯಕ್ಷಸ್ವರೂಪದೊಂದಿಗೆ ನೇರವಾಗಿ ಮಾತು-ಕಥೆಯನ್ನು ನಡೆಸಿದ್ದಾರೆ. ಇಂದ್ರನು ಪಾರ್ವತಿಯ ಉಪದೇಶದಂತೆ ಯಕ್ಷವು ಪರಬ್ರಹ್ಮವೇ ಎಂದು ನಿಶ್ಚಯವನ್ನು ಹೊಂದಿದ್ದಾನೆ. ಇಂದ್ರನು ಪಾರ್ವತಿಯು ಅನುಗ್ರಹಿಸಿದ ವಿಚಾರವನ್ನು ಅಗ್ನಿ ಮತ್ತು ವಾಯುಗಳಿಗೆ ಅರುಹಿದ್ದಾನೆ. ಆದ್ದರಿಂದ ಈ ದೇವತೆಗಳು ಉಳಿದ ವರುಣ ಮೊದಲಾದ ದೇವತೆಗಳಿಗಿಂತ ಉತ್ತಮರು. ಯಾಕೆಂದರೆ ಅವರಿಗೆ ಈ ಯಾವ ಅವಕಾಶವೂ ಸಿಗದೇ ಯಕ್ಷಸ್ವರೂಪವು ತಿಳಿಯಲಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೩

तस्माद्वा इन्द्रोऽतितरामिवान्यान् देवान् । स
ह्येनन्नेदिष्ठं पस्पर्श । स ह्येनत् प्रथमो विदाञ्चकार ब्रह्मेति ॥

ತಸ್ಮಾದ್ವಾ ಇಂದ್ರೋಽತಿತರಾಮಿವಾನ್ಯಾನ್ ದೇವಾನ್ । ಸ
ಹ್ಯೇನನ್ನೇದಿಷ್ಠಂ ಪಸ್ಪರ್ಶ । ಸ ಹ್ಯೇನತ್ ಪ್ರಥಮೋ
ವಿದಾಂಚಕಾರ ಬ್ರಹ್ಮೇತಿ ॥

ಪ್ರತಿಪದಾರ್ಥ

ಸಃ-ಆ ಇಂದ್ರನು, ನೇದಿಷ್ಠಮ್-ಸಮೀಪದಲ್ಲಿರುವ, ಏನತ್-ಈ ಯಕ್ಷವನ್ನು, ಪಸ್ಪರ್ಶ ಹಿ-ನೋಡಿದನಷ್ಟೇ. ಸಃ-ಆ ಇಂದ್ರನು, ಏನತ್-ಈ ಯಕ್ಷಸ್ವರೂಪವನ್ನು, ಪ್ರಥಮಃ-ಮೊದಲನೆಯವನಾಗಿ, ಬ್ರಹ್ಮೇತಿ-ಬ್ರಹ್ಮವೆಂಬುದಾಗಿ, ವಿದಾಂಚಕಾರ ಹಿ-ತಿಳಿದುಕೊಂಡನು. ತಸ್ಮಾತ್ ವಾ-ಆ ಕಾರಣದಿಂದಲೇ-ಇಂದ್ರಃ-ಇಂದ್ರನು, ಅನ್ಯಾನ್ ದೇವಾನ್-ಇತರ ದೇವತೆಗಳನ್ನು (ಅಗ್ನಿ, ವಾಯುಗಳಿಗಿಂತಲೂ), ಅತಿತರಾಮಿವ, ಮೀರಿರುತ್ತಾನೆ.

ತಾತ್ಪರ್ಯ

ಅಗ್ನಿ, ವಾಯು, ಇಂದ್ರರೊಳಗೆ ಇಂದ್ರನು ಮೊದಲು ಯಕ್ಷಸ್ವರೂಪಿಯಾದವನು ಪರಬ್ರಹ್ಮವೆಂದು ತಿಳಿದುಕೊಂಡನು. ಆದರಿಂದ ಅಗ್ನಿ, ವಾಯು ಮೊದಲಾದ ಇತರ ದೇವತೆಗಳಿಗಿಂತಲೂ ಶ್ರೇಷ್ಠನು.

ರಂಗರಾಮಾನುಜಭಾಷ್ಯ

'ತಸ್ಮಾದ್ವಾ........ಬ್ರಹ್ಮೇತಿ'। ಅಗ್ನಿವಾಯ್ವಿಂದ್ರಾಣಾಂ ಮಧ್ಯೇ ಯಸ್ಮಾದಿಂದ್ರಃ ಸನ್ನಿಹಿತಂ ಬ್ರಹ್ಮ ದೃಷ್ಟವಾನ್, ಸರ್ವೇಭ್ಯಃ ಪುರಸ್ತಾತ್ ಪಾರ್ವತೀಮುಖಾತ್ ಇದಂ ಬ್ರಹ್ಮ ಇತಿ ಜ್ಞಾತವಾನ್, ಅತಃ ಸರ್ವಾತಿಶಾಯೀ ಇತ್ಯರ್ಥಃ।

ಭಾಷಾಂತರ

'ತಸ್ಮಾದ್ವಾ........ಬ್ರಹ್ಮೇತಿ'। ಅಗ್ನಿ, ವಾಯು ಹಾಗೂ ಇಂದ್ರರ ನಡುವೆ ಇಂದ್ರನು, ಯಾವ ಕಾರಣದಿಂದ ಸಮೀಪದಲ್ಲಿದ್ದ ಬ್ರಹ್ಮವನ್ನು ಕಂಡನೋ, ಎಲ್ಲರಿಗೂ ಮುಂಚಿತವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಾರ್ವತಿಯ ಮುಖದಿಂದ ' ಇದಂ ಬ್ರಹ್ಮ ' ಎಂದು ತಿಳಿದನೋ, ಆ ಕಾರಣದಿಂದ ಎಲ್ಲರಿಗೂ ಮೇಲಾಗಿದ್ದಾನೆ.

ಭಾಷ್ಯಸಾರ

ಯಕ್ಷರೂಪಪರಬ್ರಹ್ಮದ ಸಮೀಪಕ್ಕೆ ಹೋದ ಅಗ್ನಿ, ವಾಯು, ಇಂದ್ರರಲ್ಲಿ ಇಂದ್ರನು ಉಮೆಯ ಮಾತಿನಿಂದ ಮೊದಲು ಪರಬ್ರಹ್ಮವೆಂದು ತಿಳಿದನು ಆದ್ದರಿಂದ, ಅಗ್ನಿ–ವಾಯುಗಳಿಗಿಂತಲೂ ಮಹತ್ವ–ಐಶ್ವರ್ಯಾದಿಗಳಲ್ಲಿ ಇಂದ್ರನು ಅಧಿಕನು. ಹೇಗೆಂದರೆ ಇಂದ್ರನು ಯಕ್ಷರೂಪದ ಪರಬ್ರಹ್ಮದ ಸಮೀಪಕ್ಕೆ ಹೋದನು. ಯಕ್ಷರೂಪದ ಬಗ್ಗೆ ಉಮೆಯೊಡನೆ ಸಂಭಾಷಣೆ ಮಾಡಿದನು ಮತ್ತು ಅಗ್ನಿ-ವಾಯುಗಳಿಗಿಂತಲೂ ಮೊದಲು ಉಮೆಯ ಮಾತಿನಿಂದ ಪರಬ್ರಹ್ಮವೆಂದು ತಿಳಿದನು. ಹೀಗೆ ಎಲ್ಲರಿಗಿಂತಲೂ ಮೊದಲು ಇಂದ್ರನಿಗೆ ಪರಬ್ರಹ್ಮಜ್ಞಾನವು ಉಂಟಾದುದರಿಂದ ಇತರ ದೇವತೆಗಳಿಗಿಂತಲೂ, ಐಶ್ವರ್ಯ-ಬಲ-ಬುದ್ಧಿ ಮೊದಲಾದುವುಗಳಿಂದ ಅಧಿಕನೆಂದು ತಾತ್ಪರ್ಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೪

तस्यैष आदेशो यदेतद्विद्युतो व्यद्युतदा इति,
इन्न्यमिष (मीमिष)दा इत्यधिदैवतम् ॥

ತಸ್ಯೈಷ ಆದೇಶೋ ಯದೇತದ್ವಿದ್ಯುತೋ ವ್ಯದ್ಯುತದಾ ಇತಿ,
ಇನ್ನ್ಯಮಿಷ(ಮೀಮಿಷ)ದಾ ಇತ್ಯಧಿದೈವತಮ್ ॥

ಪ್ರತಿಪದಾರ್ಥ

ಯತ್-ಯಾವ, ಏತತ್-ಲೋಕಪ್ರಸಿದ್ಧವೂ, ಲೋಕಪ್ರಕಾಶಕರವೂ ಆದ, ವಿದ್ಯುತಃ-ಮಿಂಚಿನ, ವ್ಯದ್ಯುತತ್, ಆ-ಆ ಹೊಳಪು ಏನುಂಟೋ ಅದರಂತೆ (ಬ್ರಹ್ಮದ ಆವಿರ್ಭಾವವು). ನ್ಯಮೀಮಿಷತ್-ಕಣ್ಣು ಹೇಗೆ ಮುಚ್ಚಿಕೊಳ್ಳುವುದೋ (ಹಾಗೆ, ಬ್ರಹ್ಮದ ಅಂತರ್ಧಾನವು) ಇತಿ-ಎಂದು, ತಸ್ಯ-ಮರೆಯಾದ ಆ ಬ್ರಹ್ಮದ, ಏಷ ಆದೇಶಃ-ಉಪಮಾನರೂಪವಾದ ಉಪದೇಶವು. ಯದ್ವಾ-ಅಥವಾ, ಯಥಾ ವಿದ್ಯುತಃ-ಮಿಂಚು ಯಾವ ರೀತಿಯಲ್ಲಿ, ವಿದ್ಯುತತ್-ಹೊಳೆಯುತ್ತದೆಯೋ, ನ್ಯಮೀಮಿಷತ್-ಮರೆಯಾಗುವುದೋ, (ಅದರಂತೆಯೇ ಬ್ರಹ್ಮದ ಆವಿರ್ಭಾವತಿರೋಭಾವಗಳು) ಎಂದು ತಾತ್ಪರ್ಯ. ಇತ್ಯಧಿದೈವತಮ್-ಹೀಗೆ ಆತ್ಮವಲ್ಲದ ಆಕಾಶದಲ್ಲಿರುವ ಮಿಂಚಿನ ವಿಷಯವು. ಇದನ್ನು ಬ್ರಹ್ಮನಿಗೆ ಉಪಮಾನವಾಗಿ ಹೇಳಿದೆ.

ತಾತ್ಪರ್ಯ

ಇಲ್ಲಿ ಮಿಂಚು ಒಂದು ಕ್ಷಣ ಹೊಳೆದು ಹೇಗೆ ಮರೆಯಾಗುವುದೋ, ಕಣ್ಣಿರೆಪ್ಪೆ ಹೇಗೆ ಕ್ಷಣಕಾಲ ತೆರೆದು ಮುಚ್ಚಿಕೊಳ್ಳುವುದೋ ಅಂತೆಯೇ ಪರಬ್ರಹ್ಮವು ಯಕ್ಷರೂಪದಿಂದ ಒಂದು ಕ್ಷಣಕಾಣಿಸಿಕೊಂಡು ಮರೆಯಾಯಿತು. ಈ ವಿಷಯವನ್ನು ಮಿಂಚು ಮತ್ತು ಕಣ್ಣಿರೆಪ್ಪೆಗಳ ವ್ಯಾಪಾರವನ್ನು ಉಪಮಾನವಾಗಿ ಹೇಳಿ ಪ್ರತಿಪಾದಿಸಲಾಗಿದೆ.

ರಂಗರಾಮಾನುಜಭಾಷ್ಯ

'ತಸ್ಯೈಷ ಆದೇಶಃ'। ತಸ್ಯ-ಆವಿರ್ಭೂತಸ್ಯ ಸದ್ಯಸ್ತಿರೋಭೂತಸ್ಯ ಬ್ರಹ್ಮಣ ಏಷ ಆದೇಶಃ-ವಕ್ಷ್ಯಮಾಣ ಉಪಮಾನೋಪದೇಶ ಇತ್ಯರ್ಥಃ। 'ಯದೇತತ್ ವಿದ್ಯುತೋ ವದ್ಯುತದಾ ಇತಿ'। ಯಥಾ ವಿದ್ಯುತೋಃ ವಿದ್ಯೋತನಂ ಕ್ಷಣಿಕಮ್, ತದ್ವದಿತ್ಯರ್ಥಃ। ಆ-ಇತಿ ಪ್ರಸಿದ್ಧೌ।

ಉಪಮಾನಾಂತರಮಾಹ-ಇನ್ನ್ಯಮಿ(ಮೀಮಿ)ಷದಾ ಇತಿ। ಅತ್ರಾಪಿ ಆ ಇತ್ಯೇತತ್ ಪೂರ್ವವತ್। ಇಚ್ಛಬ್ದಃ ಉಪಮಾನಾಂತರಸಮುಚ್ಚಯಾರ್ಥಃ। ಯಥಾ ನ್ಯಮಿಷತ್ (ನ್ಯಮೀಮಿಷತ್) ನಿಮೇಷಃ ಪ್ರಕಾಶತಿರೋಭಾವಃ ಕ್ಷಣೇನ, ಏವಂ ಬ್ರಹ್ಮಾಪಿ ತಿರೋಽಭೂತ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇತ್ಯರ್ಥಃ। ಯಥಾ ವಿದ್ಯುತಸ್ತಿರೋಹಿತಾ ಭವಂತೀತ್ಯರ್ಥಃ(ರ್ಥೇ ?) ನ್ಯಮೀಮಿಷದಿತಿ ವಚನವ್ಯತ್ಯಯಶ್ಛಾಂದಸಃ। ಇತ್ಯಧಿದೈವತಮ್। ಅನಾತ್ಮಭೂತಾಕಾಶಾದಿಗತವಿದ್ಯುದ್ವಿಷಯಂ ಬ್ರಹ್ಮಣ ಉಪಮಾನದರ್ಶನಮುಕ್ತಮ್ ಇತ್ಯರ್ಥಃ।

ಭಾಷಾಂತರ

ತಸ್ಯೈಷ ಆದೇಶಃ। ತಸ್ಯ–ಆವಿರ್ಭವಿಸಿ ಕೊಡಲೇ ತಿರೋಹಿತವಾದ ಬ್ರಹ್ಮದ, ಏಷಃ ಆದೇಶಃ–ಹೇಳಲಿರುವ ಉಪಮಾನರೂಪವಾದ ಉಪದೇಶವು, ಯದೇತತ್ ವಿದ್ಯುತೋ ವ್ಯದ್ಯುತದಾ ಇತಿ–ಹೇಗೆ ಮಿಂಚು ಮಿಂಚುವುದು ಕ್ಷಣಿಕವೋ ಹಾಗೆಯೇ ಎಂದರ್ಥ. 'ಆ' ಎಂಬುದು ಪ್ರಸಿದ್ಧಿಯನ್ನು ಸೂಚಿಸುತ್ತದೆ.

ಇನ್ನೊಂದು ಹೋಲಿಕೆಯನ್ನು ಹೇಳುತ್ತಾನೆ–ಇನ್ನ್ಯಮಿ(ಮೀಮಿ)ಷದಾ ಇತಿ। ಇಲ್ಲಿಯೂ 'ಆ' ಎನ್ನುವುದು ಹಿಂದಿನಂತೆಯೇ, (ಪ್ರಸಿದ್ಧಿಸೂಚಕ) 'ಇತ್' ಶಬ್ದವು ಇನ್ನೊಂದು ಹೋಲಿಕೆಯನ್ನು ಸೇರಿಸುವುದಕ್ಕಾಗಿ, ಹೇಗೆ ನ್ಯಮಿಷತ್(ನ್ಯಮೀಮಿಷತ್) ರೆಪ್ಪೆಹೊಡೆಯುವುದು ಕ್ಷಣದಲ್ಲಿ ಪ್ರಕಾಶತಿರೋಧಾನಕ್ಕೆ ಕಾರಣವೋ ಹಾಗೆಯೇ ಬ್ರಹ್ಮವೂ ಮರೆಯಾಯಿತು. ಹೇಗೆ ಮಿಂಚುಗಳು (ಮಿಂಚಿ) ಮರೆಯಾಗುತ್ತವೆಯೋ ಎಂದರ್ಥ. 'ನ್ಯಮೀಮಿಷತ್' ಎಂಬಲ್ಲಿ ವಚನವ್ಯತ್ಯಾಸವು ಛಾಂದಸ. ಇತ್ಯಧಿದೈವತಮ್। ಆತ್ಮವಲ್ಲದ ಆಕಾಶಾದಿಗಳಲ್ಲಿರುವ ವಿದ್ಯುತ್ ಮುಂತಾದ ವಿಷಯವು ಬ್ರಹ್ಮದ ಉಪಮಾನರೂಪದಲ್ಲಿ ಹೇಳಲ್ಪಟ್ಟಿತು ಎಂದು ಅಭಿಪ್ರಾಯ.

ಭಾಷ್ಯಸಾರ

ಯಕ್ಷರೂಪದ ಆವಿರ್ಭಾವ-ತಿರೋಧಾನಗಳ ಬಗ್ಗೆ ದೇವತಾದೃಷ್ಟಾಂತ[1]ಗಳನ್ನು ತಿಳಿಸುತ್ತಾರೆ. ರಾಮಾನಂದರು ಉಮೆಯು ದೃಷ್ಟಾಂತಗಳಿಂದ ಉಪದೇಶಿಸುವಳು ಎಂದು ತಿಳಿಸುತ್ತಾರೆ.

ಗಾಢಾಂಧಕಾರದಲ್ಲಿ ಮಿಂಚು ಹೊಳೆದು ಹೇಗೆ ಎಲ್ಲ ವಸ್ತುಗಳನ್ನೂ ಪ್ರಕಾಶಪಡಿಸುತ್ತದೆಯೋ ಹಾಗೆಯೇ ಯಕ್ಷರೂಪದಲ್ಲಿ ಬ್ರಹ್ಮವು ಆವಿರ್ಭವಿಸಿತು. ಅಂದರೆ ಮಿಂಚಿನ ಹೊಳಪು ಹೇಗೆ ಕ್ಷಣಕಾಲ ಮಾತ್ರವಿರುವುದೋ ಅಂತೆಯೇ ಯಕ್ಷನ ಆವಿರ್ಭಾವವೂ ಎಂದೂ ತಾತ್ಪರ್ಯ. ಮಿಂಚಿನ ಹೊಳಪು ಕ್ಷಣದಲ್ಲಿಯೇ ಹೇಗೆ ಮರೆಯಾಗುವುದೋ ಅಂತೆಯೇ ಯಕ್ಷನ ತಿರೋಧಾನವೂ ಎಂದು ಭಾವ. ಆತ್ಮವ್ಯತಿರಿಕ್ತವಾದ ಆಕಾಶದಲ್ಲಿನ ಮಿಂಚಿನ ಉಪಮಾನವನ್ನು ಹೇಳಿ ಇಲ್ಲಿ ಆಚಾರ್ಯರು ಬ್ರಹ್ಮಸ್ವರೂಪವನ್ನು ಉಪದೇಶಿಸಿದ್ದಾರೆ.

ಹೇಗೆ ಮಿಂಚು ಕ್ಷಣಕಾಲಮಾತ್ರ ಹೊಳೆದು ಮರೆಯಾಗುವುದೋ ಹಾಗೆಯೇ ಯಕ್ಷರೂಪದ ತಿರೋಧಾನವು.

---

1. ಭೌತಿಕ ದೃಷ್ಟಾಂತಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಲ್ಲಿ 'ವಿದ್ಯುತದಾ–ನ್ಯಮೀಮಿಷದಾ' ಎಂಬಲ್ಲಿರುವ 'ಆ' ಕಾರವು ಪ್ರಸಿದ್ಧಿ ಎಂಬ ಅರ್ಥದಲ್ಲಿದೆ. 'ವಿದ್ಯುತತ್-ನ್ಯಮೀಮಿಷತ್' ಎಂಬ ಏಕವಚನವು ಆರ್ಷಪ್ರಯೋಗವಾದುದರಿಂದ ಸಾಧು.

ಅಥವಾ 'ಚಕ್ಷುಃ ಇನ್ನ್ಯಮೀಮಿಷತ್' ಕಣ್ಣು ಹೇಗೆ ಮುಚ್ಚಿಕೊಳ್ಳುವುದೋ ಅಂತೆಯೇ ಎಂದು ಎರಡನೆಯ ದೃಷ್ಟಾಂತ. 'ಇನ್ನ್ಯಮೀಮಿಷತ್' ಎಂಬಲ್ಲಿ 'ಇತ್' ಶಬ್ದವು ಸಮುಚ್ಚಯವನ್ನು ಸೂಚಿಸುತ್ತದೆ. ಇದರಿಂದ ಮಿಂಚು ಹೇಗೆ ಹೊಳೆದು ಮರೆಯಾಗುವುದೋ, ಹೇಗೆ ಕಣ್ಣು ತೆರೆದು ಮುಚ್ಚಿಕೊಳ್ಳುವುದೋ ಹಾಗೆಯೇ ಯಕ್ಷರೂಪದಲ್ಲಿ ಬ್ರಹ್ಮದ ಆವಿರ್ಭಾವ ಮತ್ತು ತಿರೋಧಾನಗಳೆಂದು ಎರಡು ದೃಷ್ಟಾಂತಗಳನ್ನು ಒಟ್ಟುಗೂಡಿಸಿ ಹೇಳಿದೆ ಎಂದು ತಾತ್ಪರ್ಯ. ಹೀಗೆ ದೇವತಾರೂಪವಾದ, ಬಾಹ್ಯ ವಸ್ತುಗಳನ್ನು ಉಪಮಾನವಾಗಿ ತಿಳಿಸುವ ಉಪದೇಶವಾಗಿದೆ.

ಇಲ್ಲಿ ರಾಮಾನಂದರು "ಉಪಮೆಯು ದೃಷ್ಟಾಂತಗಳಿಂದ ಬ್ರಹ್ಮದ ಆವಿರ್ಭಾವ ಅಂತರ್ಧಾನಗಳನ್ನು ವಿವರಿಸಿ" ಬ್ರಹ್ಮಸ್ವರೂಪವನ್ನು ಉಪದೇಶಿಸಿದರು. ಇಲ್ಲಿ 'ವಿದ್ಯುತಃ' ಎಂಬ ಬಹುವಚನ ಆರ್ಷಪ್ರಯೋಗ. 'ಆ' ಎಂಬುದು 'ಇವ' ಎಂಬರ್ಥದಲ್ಲಿದೆ. ಬ್ರಹ್ಮವು ದೇವತೆಗಳ ಮುಂದೆ ಯಕ್ಷರೂಪದಲ್ಲಿ ಮಿಂಚಿನಂತೆ ಹೇಗೆ ಹೊಳೆಯಿತೋ ಅಂತಹಪ್ರಕಾಶ ರೂಪದ ಬ್ರಹ್ಮವನ್ನು ಉಪಾಸಿಸಬೇಕು ಎಂದು ಅರ್ಥ. ಇದೇ ಆದೇಶ.

'ಇನ್ನ್ಯಮೀಮಿಷತ್' ಎಂಬಲ್ಲಿ 'ಇತ್' ಶಬ್ದವು ಸಮುಚ್ಚಯವನ್ನು ಸೂಚಿಸುತ್ತದೆ. ಇದರಿಂದ ಮತ್ತೊಂದು ಆದೇಶವನ್ನು ತಿಳಿಸುತ್ತಾರೆ. 'ನ್ಯಮೀಮಿಷತ್' 'ಆ' ಮಿಂಚು ಒಂದು ಸಲ ಹೊಳೆದು ಮರುಕ್ಷಣದಲ್ಲಿಯೇ ಮರೆಯಾಗುವುದು. ಆಗ ಕಣ್ಣುಮುಚ್ಚಿಕೊಳ್ಳುವುದು, ಕಣ್ಣುಮುಚ್ಚಿಕೊಳ್ಳುವುದರಿಂದ ಹೇಗೆ ಯಾವ ವಸ್ತುವೂ ಕಾಣಿಸುವುದಿಲ್ಲವೋ (ಮಿಂಚು ಮರೆಯಾದಾಗ ಅದರ ಪ್ರಕಾಶವೂ ಹೇಗೆ ಕಾಣುವುದಿಲ್ಲವೋ) ಹಾಗೆಯೇ ಇಂದ್ರನು ಬಂದಾಗ ಯಕ್ಷರೂಪಪರಬ್ರಹ್ಮವು ಮರೆಯಾಯಿತು ಎಂದು 'ನ್ಯಮೀಮಿಷದಾ' ಎಂಬುದರಿಂದ ತಿಳಿಯುತ್ತದೆ. ಹೀಗೆ ಮಿಂಚಿನ ದೃಷ್ಟಾಂತದಿಂದ ಕ್ಷಣಕಾಲದಲ್ಲಿ ಹೊಳೆದು ಮರೆಯಾಗುವ ಬ್ರಹ್ಮವನ್ನು ಪ್ರಕಾಶ ಅಪ್ರಕಾಶರೂಪಗುಣವಿಶಿಷ್ಟನನ್ನಾಗಿ ಉಪಾಸನೆಮಾಡಬೇಕು ಎಂಬುದು ಎರಡನೆಯ ಉಪದೇಶ.

ಹೀಗೆ ಇಲ್ಲಿ ದೇವತೆ ಅಂದರೆ ಬಾಹ್ಯರೂಪವಾದ ವಿದ್ಯುತ್ತಿನ ಉಪಾಸನಾಕ್ರಮವನ್ನು ಉಪದೇಶಿಸುತ್ತಾರೆ.

ಅಥವಾ 'ವಿದ್ಯುತಃ' ಎಂಬುದು ದ್ವಿತೀಯಾ ಬಹುವಚನ. ಈ ಬಹುವಚನವು ಮೊದಲಾದ ಎಂಬರ್ಥದಲ್ಲಿದೆ. ಇದರಿಂದ ವಿದ್ಯುತ್ತೇ ಮೊದಲಾದ ತೇಜೋಧಾತುಗಳನ್ನು ಎಂದರ್ಥವಾಗುತ್ತದೆ. 'ಆ' ಎಂಬುದಕ್ಕೆ ಸುತ್ತಲೂ ಎಂದರ್ಥ. ಇದರಿಂದ 'ವಿದ್ಯುತ್ತೇ ಮೊದಲಾದ ತೇಜಃಪದಾರ್ಥಗಳನ್ನು ಬ್ರಹ್ಮನು ಪ್ರಕಾಶಪಡಿಸುತ್ತಾನೆ' ಎಂದು ಬ್ರಹ್ಮನನ್ನು ಉಪಾಸಿಸಬೇಕು ಎಂದು ಭಾವ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆ 'ನ್ಯಮೀಮಿಷತ್' ಎಲ್ಲ ಕಡೆಗಳಲ್ಲೂ ಪ್ರಕಾಶಕಗಳಾದ ವಿದ್ಯುತ್ ಮೊದಲಾದ ತೇಜಃಪದಾರ್ಥಗಳನ್ನು ಸರ್ವಶಕ್ತನಾದ ಪರಮಾತ್ಮನು ಮರೆಸುವನು ಎಂದರ್ಥ. ಇದರಿಂದ ಪ್ರಕಾಶಿಸುವ ಮಿಂಚೇ ಮೊದಲಾದ ತೇಜಃಪದಾರ್ಥಗಳನ್ನೂ ಮರೆಗೊಳಿಸಬಲ್ಲವನು ಬ್ರಹ್ಮ ಎಂದು ಉಪಾಸನೆ ಮಾಡಬೇಕು ಎಂದು ಎರಡು ಉಪದೇಶಗಳನ್ನು ಹೇಳಿದಳು ಎಂದು ತಿಳಿಯಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೫

अथाध्यात्मम् , यदेत(न)द्गच्छतीव च मनो न
(मनोऽनेन) चैन(त)दुपस्मरत्यभीक्ष्णं सङ्कल्पः ।।

ಅಥಾಧ್ಯಾತ್ಮಮ್, ಯದೇತ(ನ)ದ್ಗಚ್ಛತೀವ ಚ ಮನೋ ನ
(ಮನೋಽನೇನ) ಚೈ[1]ನ (ತ) ದುಪಸ್ಮರತ್ಯಭೀಕ್ಷ್ಣಂ ಸಂಕಲ್ಪಃ[2] ||

ಪ್ರತಿಪದಾರ್ಥ

ಅಥ-ಅನಂತರ, ಅಧ್ಯಾತ್ಮಮ್-ಶರೀರದೊಳಗಿರುವ ದೃಷ್ಟಾಂತವನ್ನು ಹೇಳಲಾಗುತ್ತದೆ. ಯತ್-ಪ್ರಸಿದ್ಧವಾದ, ಏತತ್-ಪರಬ್ರಹ್ಮವನ್ನು ಕುರಿತು ಮನೋ ಗಚ್ಛತೀವ-ಮನಸ್ಸಿನ ಗಮನದಂತೆ, ಅಂದರೆ ಮನಸ್ಸು ಪರಬ್ರಹ್ಮವನ್ನು ಹೇಗೆ ಕ್ಷಣಕಾಲಮಾತ್ರ ವಿಷಯೀಕರಿಸುವುದೋ ಅದರಂತೆ ಯಕ್ಷರೂಪಪರಬ್ರಹ್ಮದ ಆವಿಷ್ಕಾರವೂ ಕ್ಷಣಿಕ. ಸಂಕಲ್ಪಃ-ಮನಸ್ಸಿನ ಧ್ಯಾನವಿಶೇಷವು, ಅಭೀಕ್ಷ್ಣಮ್-ಸರ್ವಕಾಲದಲ್ಲೂ, ಏತತ್-ಈ ಪರಬ್ರಹ್ಮವನ್ನು, ನೋಪಸ್ಮರತಿ ಚ-ಸ್ಮರಿಸುವುದಿಲ್ಲವಷ್ಟೇ. ಅದರಂತೆ ಯಕ್ಷರೂಪಿಯಾದ ಬ್ರಹ್ಮದ ಆವಿರ್ಭಾವವೂ ಕ್ಷಣಿಕವೇ ಸರಿ ಎಂದು ಅಭಿಪ್ರಾಯ.

ತಾತ್ಪರ್ಯ

ದೇವತಾಸಂಬಂಧಿಯಾದ ವಿದ್ಯುತ್ತಿನ ಉದಾಹರಣೆಯನ್ನು ಹೇಳಿ ಮಾನವಶರೀರ ಸಂಬಂಧಿಯಾದ ಮತ್ತೊಂದು ಉದಾಹರಣೆಯ ಮೂಲಕ ಯಕ್ಷಸ್ವರೂಪವನ್ನು ಇಲ್ಲಿ ವಿವರಿಸಲಾಗಿದೆ. ಮನಸ್ಸು ಪರಬ್ರಹ್ಮವನ್ನು ಹೇಗೆ ಕ್ಷಣಕಾಲ ಮಾತ್ರಧ್ಯಾನಮಾಡಬಲ್ಲದೋ ಅದೇರೀತಿ ಪರಬ್ರಹ್ಮದ ಆವಿರ್ಭಾವವೂ ಕ್ಷಣಿಕವಾಗಿದೆ.

ರಂಗರಾಮಾನುಜಭಾಷ್ಯ

ಅಥಾಧ್ಯಾತ್ಮಮ್ । ಅನಂತರಂ ದೇಹಸ್ಥೋ ದೃಷ್ಟಾಂತಃ ಉಚ್ಯತೇ ಇತ್ಯರ್ಥಃ. ಯದೇತತ್...ಮನಃ । ಏತದ್ ಬ್ರಹ್ಮ ಮನೋ ಗಚ್ಛತೀವ । ಬ್ರಹ್ಮವಿಷಯಕಮನೋಗಮನಮಿವಾ ಇತ್ಯರ್ಥಃ ।

ಯಥಾ ಮನಸೋ ಬ್ರಹ್ಮವಿಷಯೀಕರಣಂ ನ ಚಿರಸ್ಥಾಯಿ, ಏವಮೇವ ಯಕ್ಷಸ್ಯ ಬ್ರಹ್ಮಣಃ ಪ್ರಕಾಶೋಽಪಿ ಇತ್ಯರ್ಥಃ । ಮನಸಾ ಬ್ರಹ್ಮವಿಷಯೀಕರಣಂ ಕ್ಷಣಿಕಮೇವ; ನ ಚಿರಾನುವೃತ್ತಮಿತಿ ದರ್ಶಯಂತಿ ನ ಚೈತತ್....ಸಂಕಲ್ಪಃ-ನ ಹಿ ಮನೋಜನಿತ ಸಂಕಲ್ಪೋ ಧ್ಯಾನವಿಶೇಷಃ ಅಭೀಕ್ಷ್ಣಮ್ ಚಿರಮ್ ಏತದ್ಬ್ರಹ್ಮೋಪಸ್ಮರತಿ; ನ ವಿಷಯೀಕರೋತೀತ್ಯರ್ಥಃ ।

1. 'ಚ' ಎಂಬುದು 'ಹಿ' ಎಂಬರ್ಥದಲ್ಲಿದೆ.
2. 'ಸಂಕಲ್ಪಃ' ಎಂಬಲ್ಲಿ ಪುಲ್ಲಿಂಗ ಛಾಂದಸ. ಅಥವಾ ನಿತ್ಯಪುಲ್ಲಿಂಗ ಶಬ್ದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತತಶ್ಚ ಯಥಾ ಬ್ರಹ್ಮಣೋ ಮನಸಾ ವಿಷಯೀಕರಣಂ ನ ಚಿರಾನುವೃತ್ತಮ್, ಏವಂ ಯಕ್ಷಸ್ಯ ಬ್ರಹ್ಮಣಃ ಪ್ರಾದುರ್ಭಾವೋಽಪಿ ನ ಚಿರಾನುವೃತ್ತಃ । ಅತ್ರ ದೃಷ್ಟಾಂತೋಕ್ತಿ ವ್ಯಾಜೇನ ಬ್ರಹ್ಮಧ್ಯಾನಾನುವೃತ್ತಿರ್ದುರ್ಶಕೇತಿ ದರ್ಶಿತಂ ಭವತಿ ॥

ಭಾಷಾಂತರ

ಅಥಾಧ್ಯಾತ್ಮಮ್ । ಆಮೇಲೆ ದೇಹದಲ್ಲಿರುವ ದೃಷ್ಟಾಂತವನ್ನು ಹೇಳಲಾಗುವುದು. ಯದೇತತ್...ಮನಃ । ಈ ಬ್ರಹ್ಮವನ್ನು ಮನಸ್ಸು ತಲಪುತ್ತದೆಯೋ ಎಂಬಂತಿದೆ. ಬ್ರಹ್ಮ ವನ್ನು ಕುರಿತ ಮನಸ್ಸಿನ ಗತಿಯಂತಿದೆ ಎಂದರ್ಥ.

ಮನಸ್ಸು ಬ್ರಹ್ಮವನ್ನು ತಿಳಿಯುವುದು ಹೇಗೆ ಚಿರಸ್ಥಾಯಿಯಲ್ಲವೋ ಅಂತಯೇ ಯಕ್ಷ ಬ್ರಹ್ಮದ ಪ್ರಕಾಶವೂ ಎಂದರ್ಥ. ಬ್ರಹ್ಮವನ್ನು ಮನಸ್ಸು ಅರಿಯುವುದು ಕ್ಷಣಿಕವಾದುದು, ಬಹಳಕಾಲವಲ್ಲ ಎಂಬುದನ್ನು 'ನ ಚೈತತ್...ಸಂಕಲ್ಪಃ' ಎಂಬುದರಿಂದ ತಿಳಿಸುತ್ತಾಳೆ. ಮನಸ್ಸಿನಲ್ಲುಂಟಾದ ಧ್ಯಾನವಿಶೇಷವು ಬ್ರಹ್ಮವನ್ನು ಬಹಳಕಾಲ ತಿಳಿಯಲಾರದು.

ಆದುದರಿಂದ ಬ್ರಹ್ಮವನ್ನು ಮನಸ್ಸಿನಿಂದ ವಿಷಯೀಕರಿಸುವುದು ಹೇಗೆ ಬಹುಕಾಲ ಅನುವೃತ್ತವಾಗಲಾರದೋ ಹಾಗೆಯೇ ಯಕ್ಷ-ಬ್ರಹ್ಮದ ಆವಿರ್ಭಾವವೂ ಬಹುಕಾಲ ಮುಂದುವರಿಯಲಾರದು. ಇಲ್ಲಿ ದೃಷ್ಟಾಂತವನ್ನು ಹೇಳುವ ನೆಪದಿಂದ ಬ್ರಹ್ಮಧ್ಯಾನವು ಮುಂದುವರಿಯುವುದು ಅಸಾಧ್ಯ ಎಂದು ತೋರಿಸಿದಂತಾಯಿತು.

ಭಾಷ್ಯಸಾರ

ದೇವತಾ ಉಪಮಾನ ಅಂದರೆ ವಿದ್ಯುತ್ತಿನ ಉಪಮಾನದ ಮೂಲಕ ಬ್ರಹ್ಮಸ್ವರೂಪ ವನ್ನು ಉಪದೇಶಿಸಿದ ಮೇಲೆ ನಮ್ಮ ಶರೀರದೊಳಗಿನ ದೃಷ್ಟಾಂತದ ಮೂಲಕ ಬ್ರಹ್ಮದ ಸ್ವರೂಪದ ಬಗ್ಗೆ ಉಪದೇಶಕೊಡುತ್ತಾಳೆ.

ಮನಸ್ಸು ಬಹಳ ಚಂಚಲವಾದುದು. ಆದರೂ ಬ್ರಹ್ಮದಿಂದ ಪ್ರೇರಿತವಾದ ಮನಸ್ಸು ಬ್ರಹ್ಮದಲ್ಲಿ ಕ್ಷಣಕಾಲ ಮಾತ್ರ ನೆಲೆಸುವುದು. ಅನಾದಿ ವಿಷಯವಾಸನಾದೋಷದಿಂದ ಕೂಡಿರುವುದರಿಂದ ಮನಸ್ಸನ್ನು ನಿರ್ಬಂಧವಾಗಿ ಬ್ರಹ್ಮದಲ್ಲಿ ನೆಲೆಗೊಳಿಸಿದರೂ ಅಲ್ಲಿ ಕ್ಷಣ ಮಾತ್ರ ನೆಲೆಸಿದ್ದು ನಂತರ ಬೇರೇಕಡೆ ಚಲಿಸುವುದು, ಬಹಳಕಾಲ ಬ್ರಹ್ಮದಲ್ಲಿ ನೆಲೆಸಲಾರದು. ಅಂತಯೇ ದೇವತೆಗಳ ಮುಂದೆ ಬ್ರಹ್ಮವು ಕಾಣಿಸಿಕೊಂಡುದುದು ಸ್ವಲ್ಪಕಾಲ ಮಾತ್ರ.

ಹೀಗೆ ಬ್ರಹ್ಮದತ್ತ ಮನಸ್ಸು ಹೋಗುವುದು ಎಂಬುದು ಈ ಶರೀರದಲ್ಲೇ ನಡೆಯು ವುದರಿಂದ ಈ ಉಪಮಾನದ ಮೂಲಕ ಕೊಡುವ ಉಪದೇಶವು ಅಧ್ಯಾತ್ಮವೆನಿಸುವುದು. ಬ್ರಹ್ಮದಿಂದ ಪ್ರೇರಿತವಾದ ಮನಸ್ಸು ಹೇಗೆ ಬ್ರಹ್ಮದತ್ತ ಹೋಗುವುದೋ ಅಂತಹಬ್ರಹ್ಮ ವನ್ನು ಉಪಾಸನೆಮಾಡಬೇಕೆಂದು ತಾತ್ಪರ್ಯ.

ಅಥವಾ ಬ್ರಹ್ಮದಿಂದ ಪ್ರೇರಿತವಾದ ಮನಸ್ಸು ಬ್ರಹ್ಮದತ್ತ ಹೋದಂತೆ ಭಾಸವಾಗು ವುದು. 'ಯನ್ಮನಸಾ ನ ಮನುತೇ ಯೇನಾಹುರ್ಮನೋ ಮತಂ' ಎಂಬಂತೆ ನಿಜವಾಗಿ ಮನಸ್ಸು ತಿಳಿಯುವುದಿಲ್ಲ. ಇಂತಹ ಬ್ರಹ್ಮವನ್ನು ಉಪಾಸಿಸಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮನಸ್ಸು ಬ್ರಹ್ಮವನ್ನು ತಿಳಿಯಲಾರದು ಎಂದಲ್ಲಿ ಉಪಾಸಕರು ಬ್ರಹ್ಮವನ್ನು ಧ್ಯಾನ ಮಾಡುವುದು ಹೇಗೆ ? ಎಂಬ ಅಕ್ಷೇಪಸಲ್ಲದು. ಅನಿರುದ್ಧಸ್ವರೂಪಬ್ರಹ್ಮದ ಅನುಗ್ರಹಕ್ಕೆ ಪಾತ್ರವಾದ ಮನಸ್ಸು ಪುನಃಪುನಃ ಬ್ರಹ್ಮವನ್ನು ತಿಳಿಯುತ್ತದೆ. ಈ ಮನಸ್ಸು ಸಂಕಲ್ಪ ರೂಪವಾದುದು. ಮನಸ್ಸಿನ ವ್ಯಾಪಾರವಿಶೇಷವೇ ಸಂಕಲ್ಪ. ಹೀಗೆ ಬ್ರಹ್ಮದ ಅನುಗ್ರಹ ದಿಂದ ಮನಸ್ಸು ಬ್ರಹ್ಮವನ್ನು ತಿಳಿಯಬಲ್ಲುದು. ಬ್ರಹ್ಮದ ಅನುಗ್ರಹವಿಲ್ಲದಿದ್ದರೆ ತಿಳಿಯ ಲಾರದು. 'ಇಂತಹ ಬ್ರಹ್ಮವನ್ನು ಉಪಾಸಿಸಬೇಕು' ಎಂಬ ಉಪದೇಶವನ್ನು ಇಲ್ಲಿ ಕೊಡ ಲಾಗಿದೆ ಎಂದು ತಾತ್ಪರ್ಯ. ಅಂತಯೇ ಬ್ರಹ್ಮಭಿನ್ನವಾದ ವಿಷಯಗಳನ್ನೂ ಮನಸ್ಸು ಬ್ರಹ್ಮದ ಅನುಗ್ರಹದಿಂದಲೇ ತಿಳಿಯಬಲ್ಲುದು. ಬ್ರಹ್ಮದ ಅನುಗ್ರಹವಿಲ್ಲದಿದ್ದರೆ ತಿಳಿಯ ಲಾರದು ಎಂಬ ವಿಷಯವನ್ನು ಉಪಲಕ್ಷಣವಿಧದಿಂದ ಹೇಳಿದಂತಾಗುವುದು.

ಸಂಬೋಧಿನಿಕಾರರು 4-5ನೇ ಮಂತ್ರಗಳನ್ನು ಬೇರೊಂದು ರೀತಿಯಲ್ಲಿ ವಿವರಿಸಿರುವರು. ಮಿಂಚುಹೊಳೆಯುವುದೂ ಬ್ರಹ್ಮದ ಆಜ್ಞೆಯಿಂದಲೇ. ಈ ಮಾತು 'ಮೋಡದ ಆವಿರ್ಭಾವ, ಸಾಗರದ ಎಲ್ಲೆ, ಚಂದ್ರನ ಏರಿಳಿತ, ವಾಯುವಿನ ಮಂದ ಮತ್ತು ತೀವ್ರಚಲನೆ, ಮಿಂಚಿನ ಹೊಳಪು, ಸೂರ್ಯನಅಸ್ತಮಾನ ಇವೆಲ್ಲವೂ ವಿಷ್ಣುವಿನ ಮಾಯೆಯಿಂದಾಗುತ್ತದೆ' ಎಂಬ ಮಾತಿನಂತೆ ಇತರ ವಿಚಿತ್ರಕಾರ್ಯಗಳಿಗೂ ಉಪಲಕ್ಷಣವಾಗಿದೆ. ಅಂದರೆ ವಿಚಿತ್ರವ್ಯಾಪಾರ ವಾಗಲೀ, ಅಲ್ಪವಾದಕಾರ್ಯವಾಗಲೀ ಬ್ರಹ್ಮದ ಆಜ್ಞೆಯಿಲ್ಲದೆ ನಡೆಯಲಾರದು. ಎಲ್ಲವೂ ಬ್ರಹ್ಮದ ಸಂಕಲ್ಪದಿಂದಲೇ ನಡೆಯುತ್ತದೆ ಎಂದು ತಾತ್ಪರ್ಯ.

ಹೀಗೆ ಬಾಹ್ಯದಲ್ಲಾಗುವ ಎಲ್ಲ ಕಾರ್ಯಗಳೂ ಬ್ರಹ್ಮದ ಸಂಕಲ್ಪದಿಂದಲೇ ನಡೆಯುತ್ತವೆ ಎಂದು ಹೇಳಿ ಶರೀರದೊಳಗೆ ನಡೆಯುವ ಕಾರ್ಯವೂ ಅದರ ಸಂಕಲ್ಪದಿಂದಲೇ ನಡೆಯುತ್ತದೆ ಎಂದು ವಿವರಿಸುತ್ತಾಳೆ. ಮನಸ್ಸು ಹೊರಗೆ ಎಲ್ಲೂ ಹೋಗುವುದಿಲ್ಲ. ಆದರೂ ನಾನಾ ಕಡೆ ಚಲಿಸುತ್ತದೆ ಎಂಬಂತಿದೆ. ಇದೂ ಬ್ರಹ್ಮದ ಸಂಕಲ್ಪದಿಂದಲೇ. ಈ ಸಂಕಲ್ಪವೇ ಬ್ರಹ್ಮದ ಆಜ್ಞೆ.

ಮನಸ್ಸು ಹೋಗುವುದಿಲ್ಲ, ಹೋದಂತೆ ಕಾಣುವುದು ಎಂಬುದು ಹೇಗೆ ? ಮನಸ್ಸು ಸಂಕಲ್ಪದಿಂದ ಅಂದರೆ ಮನೋವೃತ್ತಿಯಿಂದ ಭಿನ್ನ ಭಿನ್ನ ವಿಷಯಗಳನ್ನು ಸಂಗ್ರಹಿಸುತ್ತದೆ. ಇದನ್ನೇ ಹೋದಂತೆ ಎಂದು ಹೇಳಿದೆ.

ಆಶ್ಚರ್ಯಕರವಾದ ಮಿಂಚಿನಿಂದ ಅಲ್ಪವಾದ ರೆಪ್ಪೆಆಡಿಸುವವರೆಗಿನ ಎಲ್ಲ ಕಾರ್ಯಗಳೂ ಬ್ರಹ್ಮದ ಆಜ್ಞೆಯಿಂದಲೇ ನಡೆಯುತ್ತದೆ ಎಂದು ತಾತ್ಪರ್ಯ. ಹೀಗಿರುವಾಗ ನಿಮಗೆ 'ನಮ್ಮದೇ ಈ ವಿಜಯ' 'ನಮ್ಮದೇ ಈ ಮಹಿಮೆ' ಎಂಬ ಭ್ರಮೆ ಸಲ್ಲದು ಎಂದು ತಿಳಿಸಿದಂತಾಗುವುದು.

❀ ❀ ❀

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೬

तद्ध तद्वनं नाम तद्वनमित्युपासितव्यम् । स य
एतदेवं वेद, अभि हैनं सर्वाणि भूतानि संवाञ्छन्ति ॥

ತದ್ಧ ತದ್ವನಂ ನಾಮ ತದ್ವನಮಿತ್ಯುಪಾಸಿತವ್ಯಮ್ । ಸ ಯ
ಏತದೇವಂ ವೇದ, ಅಭಿ ಹೈನಂ ಸರ್ವಾಣಿ ಭೂತಾನಿ ಸಂವಾಂಛಂತಿ॥

ಪ್ರತಿಪದಾರ್ಥ

ತತ್, ಹ-ಈ ರೀತಿಯ ಮಹಿಮೆಯಿಂದ ಕೂಡಿದ, ತತ್–ಪರಬ್ರಹ್ಮವು, ವನಮ್ ನಾಮ-ಎಲ್ಲರಿಂದಲೂ, ಸೇವಿಸಲ್ಪಡುವುದರಿಂದ, 'ವನಂ' ಇತಿ-'ವನಮ್' ಎಂದು, ಉಪಾಸಿತವ್ಯಮ್–ಉಪಾಸಿಸಬೇಕು. ಸಃ–ಪ್ರಸಿದ್ಧನಾದ, ಯಾವ ಉಪಾಸಕನು, ಏವಂ-ಈ ಪ್ರಕಾರವಾಗಿ, ಏತತ್–ಈ ಪರಬ್ರಹ್ಮವನ್ನು, ಅಭಿವೇದ ಹ–ಪೂರ್ಣವಾಗಿ ತಿಳಿಯುತ್ತಾನೆಯೋ, ಏನಂ–ಈ ಉಪಾಸಕನನ್ನು, ಸರ್ವಾಣಿ ಭೂತಾನಿ-ಎಲ್ಲಾ ಪ್ರಾಣಿಗಳೂ, ಸಂವಾಂಛಂತಿ-ಇಚ್ಛಿಸುತ್ತವೆ, ಅಂದರೆ ಈತನು ನಮ್ಮ ಉದ್ಧಾರಕನೆಂದು ಪ್ರಾರ್ಥಿಸುತ್ತಾರೆ.

ತಾತ್ಪರ್ಯ

ಮೇಲೆ ವಿವರಿಸಲ್ಪಟ್ಟ ಆ ಪರಬ್ರಹ್ಮವನ್ನು 'ವನಮ್' ಎಂದು ಉಪಾಸಿಸಬೇಕು. ಈ ರೀತಿ ಉಪಾಸಿಸತಕ್ಕವನನ್ನು ಎಲ್ಲರೂ ಈತನೇ ನಮ್ಮ ಉದ್ಧಾರಕನೆಂಬ ಭಾವನೆಯಿಂದ ಪ್ರಾರ್ಥಿಸುತ್ತಾರೆ.

ರಂಗರಾಮಾನುಜಭಾಷ್ಯ

'ತದ್ಧ ತದ್ವನಂ ನಾಮ; ತದ್ವನಮಿತ್ಯುಪಾಸಿತವ್ಯಮ್'। ಏತಾದೃಶಮಹಿಮವಿಶಿಷ್ಟಂ ತತ್ ಬ್ರಹ್ಮ ಸರ್ವೈರಪಿ ಜನೈಃ ವನನೀಯತ್ವೇನ–ಪ್ರಾರ್ಥನೀಯತ್ವೇನ ವನನಾಮಕಂ ಭವತಿ. ತಸ್ಮಾತ್ ತತ್ ಬ್ರಹ್ಮ ವನಮ್ ಇತ್ಯುಪಾಸಿತವ್ಯಮ್ ಇತ್ಯರ್ಥಃ ।

ವನತ್ವೇನ ಉಪಾಸನಸ್ಯ ಫಲಮಾಹ–'ಸ ಯ........ಸಂವಾಂಛಂತಿ'। ಸರ್ವೈರಪಿ ಪ್ರಾರ್ಥನೀಯೋ ಭವತೀತ್ಯರ್ಥಃ ।

ಭಾಷಾಂತರ

'ತದ್ಧ ತದ್ವನಮ್ ನಾಮ; ತದ್ವನಮಿತ್ಯುಪಾಸಿತವ್ಯಮ್'। ಈ ರೀತಿಯ ಮಹಿಮೆಯಿಂದ ಕೂಡಿದ ಆ ಬ್ರಹ್ಮವು ಎಲ್ಲರಿಂದಲೂ ವನನೀಯ–ಪ್ರಾರ್ಥನೀಯವಾದುದರಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ವನ' ಎಂಬ ಹೆಸರನ್ನು ಪಡೆಯುತ್ತದೆ. ಆದುದರಿಂದ ಆ ಬ್ರಹ್ಮವನ್ನು 'ವನವ್' ಎಂದು ಉಪಾಸಿಸಬೇಕು.[1] ವನವೆಂದು ಉಪಾಸನೆಮಾಡುವುದರ ಫಲವನ್ನು ತಿಳಿಸುತ್ತಾನೆ. 'ಸ ಯ........ಸಂವಾಂಛನ್ತಿ'। ಎಲ್ಲರಿಂದಲೂ ಪ್ರಾರ್ಥನೀಯನಾಗುತ್ತಾನೆ ಎಂದರ್ಥ.

ಭಾಷ್ಯಸಾರ

ಹಿಂದೆ ಹೇಳಿದಂತೆ ಮಹಿಮಾಶಾಲಿಯಾದ ಬ್ರಹ್ಮವನ್ನು ಎಲ್ಲರೂ ಪ್ರಾರ್ಥಿಸುವುದರಿಂದ ಬ್ರಹ್ಮಕ್ಕೆ 'ವನವ್' ಎಂದು ಹೆಸರು. ಪ್ರಾರ್ಥಿಸಲ್ಪಡತಕ್ಕದ್ದು ಎಂದರ್ಥ. ಬ್ರಹ್ಮವನ್ನು 'ವನವ್' ಎಂದು ಉಪಾಸನೆ ಮಾಡಬೇಕು. 'ತನು-ವಿಸ್ತಾರೇ', 'ವನ್-ಸಂಭಕ್ತೌ' ಎಂಬ ಎರಡು ಧಾತುಗಳಿಂದ 'ತದ್ವನವ್' ಎಂಬ ಶಬ್ದವು ರೂಪಿತವಾಗಿದೆ. 'ತದ್ವನವ್'[2] ಅಂದರೆ ಎಲ್ಲ ಕಡೆಯಲ್ಲಿಯೂ ವ್ಯಾಪಿಸಿರುವ ಮತ್ತು ಉಪಾಸಿಸಲು ಯೋಗ್ಯವಾದ ಬ್ರಹ್ಮ ಎಂದು ಅರ್ಥ. ಆದುದರಿಂದ ಬ್ರಹ್ಮವನ್ನು 'ತದ್ವನವ್' ಎಂದು ಉಪಾಸನೆ ಮಾಡಬೇಕು. ಸರ್ವಾಂತರ್ಯಾಮಿಯಾದ ಬ್ರಹ್ಮಸ್ವರೂಪವನ್ನು ಉಪಾಸನೆಮಾಡಲು ಸಾಧ್ಯವಿಲ್ಲದುದರಿಂದ 'ತತ್' ಎಂಬ ಹೆಸರಿನಿಂದಲೂ, 'ವನವ್' ಎಂಬ ಹೆಸರಿನಿಂದಲೂ ಬ್ರಹ್ಮವನ್ನು ಉಪಾಸನೆ ಮಾಡುವುದು ಉಚಿತ.

ಹೀಗೆ 'ತದ್ವನವ್' ಎಂದು ಯಾವನು ಬ್ರಹ್ಮವನ್ನು ಉಪಾಸನೆ ಮಾಡುವನೋ, ಅವನನ್ನು ಎಲ್ಲರೂ ಬಯಸುತ್ತಾರೆ.

---

1. ರಂಗರಾಮಾನುಜರು ಮತ್ತು ಸುಬೋಧಿನೀಕಾರರು 'ವನವ್' ಎಂದು ಉಪಾಸನೆಮಾಡಬೇಕು ಎಂದು ಹೇಳಿರುವರು. ರಾಮಾನಂದರು 'ತದ್ವನವ್' ಎಂದು ಉಪಾಸಿಸಬೇಕೆಂದು ಹೇಳಿದ್ದಾರೆ.
2. 'ವನ್-ಸಂಭಕ್ತೌ' ಎಂಬ ಧಾತುವಿಗೆ 'ಅ' ಪ್ರತ್ಯಯಬಂದಿದೆ. ತಚ್ಚ ತದ್ವನಂ ಚ-'ತದ್ವನಂ' ಎಂದು ಕರ್ಮಧಾರಯ ಸಮಾಸವು. ಹೀಗೆ ಬ್ರಹ್ಮವು 'ತದ್ವನಂ' ಎನಿಸುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೭

उपनिषदं भो ब्रूहीति । उक्ता त उपनिषत् ।
ब्राह्मीं वाव त उपनिषदमब्रूमेति ॥

ಉಪನಿಷದಂ ಭೋ ಬ್ರೂಹೀತಿ । ಉಕ್ತಾ ತ ಉಪನಿಷತ್ ।
ಬ್ರಾಹ್ಮೀಂ ವಾವ ತ ಉಪನಿಷದಮಬ್ರೂಮೇತಿ ॥

ಪ್ರತಿಪದಾರ್ಥ

ಭೋ–ಆಚಾರ್ಯನೇ! ಉಪನಿಷದಮ್-ಭಗವದನುಗ್ರಹಸಾಧನವಾದ ಉಪನಿಷತ್ತಿನ ರಹಸ್ಯವನ್ನು, ಬ್ರೂಹಿ–ಹೇಳು, ಇತಿ-ಹೀಗೆಂದು, (ಶಿಷ್ಯನು ಹೇಳಲಿಕ್ಕಾಗಿ ಆಚಾರ್ಯನು), ತೇ-ನಿನಗೆ, ಉಪನಿಷತ್-ಬ್ರಹ್ಮ ಪ್ರತಿಪಾದಕವಾದ ಉಪನಿಷತ್ತು, ಉಕ್ತಾ-ಹೇಳಲ್ಪಟ್ಟಿತು. ತೇ-ನಿನಗೆ, ಉಪನಿಷದಂ-ಉಪನಿಷತ್ತಿನ ರಹಸ್ಯವನ್ನು ಅಬ್ರೂಮ-ಹೇಳುವೆನು, ಇತಿ-ಹೀಗೆಂದು (ಹೇಳಿದನು).

ತಾತ್ಪರ್ಯ

ಭಗವಂತನ ಅನುಗ್ರಹ ಬರುವುದಕ್ಕೆ ಕಾರಣವಾದ ಉಪನಿಷತ್ತಿನ ರಹಸ್ಯವನ್ನು ಕೇಳಲು ಇಚ್ಛಿಸಿದ ಶಿಷ್ಯನನ್ನು ಕುರಿತು ಬ್ರಹ್ಮಪ್ರತಿಪಾದಕ ಉಪನಿಷತ್ತನ್ನು ಹೇಳಲಾಯಿತು. ಇನ್ನು ಮುಂದೆ ಭಗವಂತನ ಅನುಗ್ರಹಬರುವುದಕ್ಕೆ ಕಾರಣವಾದ ಉಪನಿಷತ್ತಿನ ರಹಸ್ಯವನು ಹೇಳುತ್ತೇನೆಂದು ಆಚಾರ್ಯನು ಹೇಳಿದನು.

ರಂಗರಾಮಾನುಜಭಾಷ್ಯ

ಏವಮ್ 'ಆತ್ಮನಾ ವಿಂದತೇ ವೀರ್ಯಮ್' ಇತ್ಯರ್ಥೇ ಸ್ಥಿತೇ ಸತಿ, ವೀರ್ಯಾವಾಪ್ತಿಹೇತು ಭೂತಭಗವದನುಗ್ರಹಸಾಧನಪ್ರತಿಪಾದಿಕಾಮ್ ಉಪನಿಷದಂ ಪೃಚ್ಛತಿ 'ಉಪನಿಷದಂ ಭೋ ಬ್ರೂಹೀತಿ'। ಇತರ ಆಹ ಉಕ್ತಾ........। ಬ್ರಹ್ಮಪ್ರತಿಪಾದಿಕಾಂ ಪ್ರಧಾನೋಪನಿಷದಂ ಅವೋಚಾಮ. ಅತಃ ಪ್ರಧಾನೋಪನಿಷದುಕ್ತ್ಯೈವ। ಸಾಧನಪ್ರತಿಪಾದಿಕಾಂ ಚ ಉಪನಿಷದಂ ವಕ್ಷ್ಯಾಮಿ, ಯದಿ ಶುಶ್ರೂಷಸೇ ಇತಿ ಭಾವಃ।

ಭಾಷಾಂತರ

ಹೀಗೆ 'ಆತ್ಮನಾ ವಿಂದತೇ ವೀರ್ಯಮ್' ಎಂಬ ಅರ್ಥವಿರುತ್ತಿರಲು, ವೀರ್ಯಪ್ರಾಪ್ತಿಗೆ ಕಾರಣವಾದ ಭಗವಂತನ ಅನುಗ್ರಹಕ್ಕೆ ಸಾಧನವನ್ನು ತಿಳಿಸುವ ಉಪನಿಷತ್ತನ್ನು ಕೇಳುತ್ತಾನೆ–

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಉಪನಿಷದಂ ಭೋ ಬ್ರೂಹೀತಿ' । ಗುರುವು ಹೇಳುತ್ತಾನೆ. ಉಕ್ತಾ........। ಬ್ರಹ್ಮವನ್ನು ಉಪದೇಶಿಸುವ ಪ್ರಧಾನವಾದ ಉಪನಿಷತ್ತನ್ನು ಹೇಳಿದ್ದೇವೆ. ಆದ್ದರಿಂದ ಪ್ರಧಾನೋಪನಿಷತ್ತು ಹೇಳಲ್ಪಟ್ಟಿದೆ. ನೀನು ಕೇಳುವ ಬಯಕೆಯಿಂದಿರುವೆಯಾದರೆ ಸಾಧನವನ್ನು ಉಪದೇಶಿಸುವ ಉಪನಿಷತ್ತನ್ನು ಹೇಳುವೆ.

ಭಾಷ್ಯಸಾರ

ಗುರುವು ಉಪದೇಶಿಸಿದ ಎಲ್ಲ ವಿಷಯಗಳನ್ನೂ ಕೇಳಿದ ಶಿಷ್ಯನು ಬ್ರಹ್ಮವಿದ್ಯಾಸ್ಥಾನ ವಾವುದು ಎಂಬ ಜಿಜ್ಞಾಸೆಯಿಂದ ಆಚಾರ್ಯರನ್ನು ಕುರಿತು, ಆಚಾರ್ಯರೇ! ಉಪನಿಷತ್ ರಹಸ್ಯವನ್ನು ಉಪದೇಶಿಸಿ ಎಂದು ಕೇಳಿದನು. ಆಗ ಆಚಾರ್ಯರು 'ಎಲೈ ಶಿಷ್ಯನೇ', ನಿನಗೆ ಉಪನಿಷತ್ತುಗಳಲ್ಲಿ ಹೇಳಿರುವ ರಹಸ್ಯವನ್ನು ಅಂದರೆ ಬ್ರಹ್ಮವಿದ್ಯೆಯನ್ನು ವಿವರಿಸಿರುವೆನು. ಅಂದರೆ ಈ ಖಂಡದ ಪ್ರಥಮಮಂತ್ರದಿಂದ ಉಪನಿಷತ್ತಿನ ರಹಸ್ಯರೂಪವಾದ ಬ್ರಹ್ಮ ಸ್ವರೂಪವನ್ನು ವಿವರಿಸಿರುವೆನು. ಈ ವಿಷಯದಲ್ಲಿ ಹೇಳಬೇಕಾದ ವಿಷಯವಾವುದೂ ಉಳಿದಿಲ್ಲ ಎಂದು ಭಾವ. ಹೀಗೆ ಉಪನಿಷತ್ ರಹಸ್ಯವನ್ನು ತಿಳಿಸಿ, ಸಾಧನಭೂತವಾದ ವಿಷಯವನ್ನು ಹೇಳುವೆನು ಕೇಳು ಎಂದು ಹೇಳಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೮

तस्यै तपो दमः कर्मेति प्रतिष्ठा
वेदाः सर्वाङ्गानि सत्यमायतनम् ॥

ತಸ್ಯೈ ತಪೋ ದಮಃ ಕರ್ಮೇತಿ ಪ್ರತಿಷ್ಠಾ
ವೇದಾಃ ಸರ್ವಾಂಗಾನಿ ಸತ್ಯಮಾಯತನಮ್ ॥

ಪ್ರತಿಪದಾರ್ಥ

ತಸ್ಯೈ-ಆ ಬ್ರಹ್ಮವಿದ್ಯೆಗೆ, ತಪಃ-ಶರೀರವನ್ನು ಶೋಷಿಸುವ ತಪಸ್ಸು, ದಮಃ-ಇಂದ್ರಿಯಗಳ ವ್ಯಾಪಾರವನ್ನು ತಡೆಯುವಿಕೆ, ಕರ್ಮ-ಯಜ್ಞವೇ ಮೊದಲಾದ ಕರ್ಮಗಳು, ಇತಿ-ಹೀಗೆಂದು, ಪ್ರತಿಷ್ಠಾ-ಬ್ರಹ್ಮವಿದ್ಯೆಯನ್ನು ದೃಢಪಡಿಸತಕ್ಕ ಅಂಶಗಳು, ಸರ್ವಾಂಗಾನಿ–ಶಿಕ್ಷಾ ಮೊದಲಾದ ಆರು ಅಂಗಗಳು, ವೇದಾಃ-ನಾಲ್ಕು ವೇದಗಳೂ. ಸತ್ಯಮ್-ನಿಜನುಡಿಯುವಿಕೆಯು, ಆಯತನಮ್–ವಿದ್ಯೆಯನ್ನುಂಟುಮಾಡತಕ್ಕ ಕಾರಣಗಳು (ಎಂದು ಹೇಳಿದನು).

ತಾತ್ಪರ್ಯ

ತಪಸ್ಸು, ದಮ, ಕರ್ಮಗಳು ಬ್ರಹ್ಮವಿದ್ಯೆಯನ್ನು ದೃಢಪಡಿಸತಕ್ಕವುಗಳು. ಶಿಕ್ಷಾ ಮೊದಲಾದ ಆರು ವೇದಾಂಗಗಳು, ನಾಲ್ಕು ವೇದಗಳು, ಸತ್ಯವಚನ ಇವುಗಳು ವಿದ್ಯೆಯನ್ನುಂಟುಮಾಡುವ ಕಾರಣಗಳು.

ರಂಗರಾಮಾನುಜಭಾಷ್ಯ

'ತಸ್ಯೈ........ಪ್ರತಿಷ್ಠಾ'। ತಸ್ಯೈ ಉಕ್ತಾಯೈ ಉಪನಿಷದೇ । ಸಾಧನಭೂತಾನಿ ಕಾಯಶೋಷಣಲಕ್ಷಣಂ ತಪಃ, ಇಂದ್ರಿಯನಿಗ್ರಹರೂಪ ಉಪಶಮಃ, ಅಗ್ನಿಹೋತ್ರಾದಿಲಕ್ಷಣಂ ಕರ್ಮ ಚ ಉಪನಿಷಚ್ಛಬ್ದಿತಾಯಾ ಬ್ರಹ್ಮವಿದ್ಯಾಯಾಃ ಪ್ರತಿಷ್ಠಾ ದಾರ್ಢ್ಯಹೇತುಃ ।

'ವೇದಾಃ.......ಆಯತನಮ್'। ಷಡಂಗಸಹಿತಾಶ್ಚ ವೇದಾಃ ಸತ್ಯವದನಂ ಚ ಬ್ರಹ್ಮವಿದ್ಯೋತ್ಪತ್ತಿಕಾರಣಮ್ ಇತ್ಯರ್ಥಃ ।

ಭಾಷಾಂತರ

ತಸ್ಯೈ........ಪ್ರತಿಷ್ಠಾ । ತಸ್ಯೈ–ಹೇಳಿದ ಉಪನಿಷತ್ತಿಗೆ ಸಾಧನಗಳು-ಕಾಯಶೋಷಣವೆಂಬ ತಪಸ್ಸು, ಇಂದ್ರಿಯನಿಗ್ರಹವೆಂಬ ಉಪಶಮ ಮತ್ತು ಅಗ್ನಿಹೋತ್ರ ಮುಂತಾದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕರ್ಮಗಳು ಉಪನಿಷತ್ ಎಂದು ಕರೆಯಲಾದ ಬ್ರಹ್ಮವಿದ್ಯೆಯ ಪ್ರತಿಷ್ಠಾ-ದೃಢಸ್ಥಿತಿಗೆ ಕಾರಣಗಳು.

'ವೇದಾಃ........ಆಯತನಮ್'। ಆರು ಅಂಗಗಳಿಂದ ಕೂಡಿದ ವೇದಗಳು ಮತ್ತು ಸತ್ಯವನ್ನಾಡುವುದು ಬ್ರಹ್ಮವಿದ್ಯೆಯ ಹುಟ್ಟಿಗೆ ಕಾರಣಗಳು ಎಂದರ್ಥ.

ಭಾಷ್ಯಸಾರ

ಪರಮದಯಾಳುವಾದ ಆಚಾರ್ಯರು ಶಿಷ್ಯನಿಗೆ ಬ್ರಹ್ಮವಿದ್ಯೆಗೆ ಸಾಧನವಾದ ಬ್ರಹ್ಮವಿದ್ಯೆ ಹುಟ್ಟುವ ಬಗೆ ಹೇಗೆ? ಅದು ಉಳಿಯುವ ರೀತಿ ಯಾವುದು? ಎಂಬ ವಿಷಯಗಳನ್ನು 'ತಸ್ಯೈ ತಪೋ' ಎಂಬ ಮಂತ್ರದಿಂದ ಉಪದೇಶಿಸುತ್ತಾರೆ.

ಆ ಬ್ರಹ್ಮವಿದ್ಯೆಯು ದೃಢವಾಗಲು ಕೃಚ್ಛ್ರಚಾಂದ್ರಾಯಣ, ಅಗ್ನಿಹೋತ್ರ ಮೊದಲಾದ ವ್ರತರೂಪವಾದ ತಪಸ್ಸು. ಇಂದ್ರಿಯನಿಗ್ರಹ, ವರ್ಣಾಶ್ರಮೋಚಿತಕರ್ಮಗಳು ಅಂದರೆ ಯಜ್ಞಯಾಗಾದಿಗಳು ಈ ಮೂರೂ ಕಾರಣಗಳಾಗಿವೆ.

ಋಗಾದಿವೇದಗಳೂ, ಶಿಕ್ಷಾ ಮೊದಲಾದ ಆರು ವೇದಾಂಗಗಳೂ, ಇತರರಿಗೆ ದುಃಖ ಉಂಟುಮಾಡದ ಸತ್ಯವಚನಗಳೂ ಬ್ರಹ್ಮವಿದ್ಯೆಯು ಸಿದ್ಧಿಸಲು ಕಾರಣಗಳು.

ವೇದ-ವೇದಾಂಗಗಳ ಅಧ್ಯಯನ ಮತ್ತು ಸತ್ಯಪಾಲನೆಯಿಂದ ಬ್ರಹ್ಮವಿದ್ಯೆ ಹುಟ್ಟುತ್ತದೆ. ತಪಸ್ಸು, ದಮ ಮತ್ತು ಕರ್ಮಾದಿಗಳಿಂದ ಬ್ರಹ್ಮವಿದ್ಯೆ ನೆಲೆಗೊಳ್ಳುತ್ತದೆ. ಬ್ರಹ್ಮವಿದ್ಯೆಯಲ್ಲಿ ಆಸಕ್ತರಾದವರು ಈ ಮೂರು ಉತ್ಪತ್ತಿಕಾರಣಗಳನ್ನೂ. ಮೂರು ಸ್ಥಿತಿಕಾರಣಗಳನ್ನೂ ಬಿಡದೆ ಆಚರಿಸಬೇಕೆಂದು ಉಪದೇಶಿಸಿದರು ಎಂದು ಭಾವ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರ ೯

यो वा एतामेवं वेद, अपहत्य पाप्मानमनन्ते
स्वर्गे लोके ज्येये प्रतितिष्ठति प्रतितिष्ठति ॥

ಯೋ ವಾ ಏತಾಮೇವಂ ವೇದ, ಅಪಹತ್ಯ ಪಾಪ್ಮಾನಮನಂತೇ
ಸ್ವರ್ಗೇ ಲೋಕೇ ಜ್ಯೇಯೇ ಪ್ರತಿತಿಷ್ಠತಿ ಪ್ರತಿತಿಷ್ಠತಿ ॥

ಪ್ರತಿಪದಾರ್ಥ

ಯಃ -ಯಾವ ಒಬ್ಬ ಅಧಿಕಾರಿಯು, ಏತಾಮ್-ಈ ರೀತಿ ಅಂಗಸಹಿತವಾದ ಬ್ರಹ್ಮವಿದ್ಯೆಯನ್ನು, ವೇದ-ತಿಳಿಯುತ್ತಾನೋ, ಸಃ- ಅವನು, ಪಾಪ್ಮಾನಮ್-ಮೋಕ್ಷಕ್ಕೆ ಪ್ರತಿಬಂಧಕವಾದ ಪುಣ್ಯಪಾಪಗಳನ್ನು, ಅಪಹತ್ಯ-ನಾಶಗೊಳಿಸಿ, ಅನಂತೇ-ಕಾಲಾತೀತವಾದ, ಜ್ಯೇಯೇ-ಎಲ್ಲಕ್ಕಿಂತಲೂ ಹಿರಿದಾದ, ಸ್ವರ್ಗೇ-ಲೋಕೇ-ನಿರತಿಶಯ ಸುಖಪ್ರದವಾದ ವೈಕುಂಠಲೋಕದಲ್ಲಿ, ಪ್ರತಿತಿಷ್ಠತಿ-ಶಾಶ್ವತನಾಗಿರುತ್ತಾನೆ. ದ್ವಿರುಕ್ತಿಯು, ಇಲ್ಲಿ ಉಪನಿಷತ್ತಿನ ಮುಕ್ತಾಯ ಸೂಚಕ.

ತಾತ್ಪರ್ಯ

ಅಂಗಸಹಿತವಾದ ಬ್ರಹ್ಮವಿದ್ಯೆಯನ್ನರಿತ ಅಧಿಕಾರಿಯು ಮೋಕ್ಷಪ್ರತಿಬಂಧಕವಾದ ಪುಣ್ಯಪಾಪಗಳಿಂದ ಬಿಡಲ್ಪಟ್ಟವನಾಗಿ ಎಲ್ಲಕ್ಕಿಂತಲೂ ಮಿಗಿಲಾದ, ನಿರತಿಶಯಸುಖಪ್ರದವಾದ, ವೈಕುಂಠಲೋಕದಲ್ಲಿ ಶಾಶ್ವತವಾಗಿರುತ್ತಾನೆ. ಅಂದರೆ ಸಂಸಾರಬಂಧನದಿಂದ ಬಿಡುಗಡೆ ಪಡೆದು ಪರಮಪದದಲ್ಲಿ ಸ್ಥಿರವಾಗಿ ನೆಲೆಸುತ್ತಾನೆ.

ರಂಗರಾಮಾನುಜಭಾಷ್ಯ

ಯೋ ವಾ ಏತಾಮೇವಂ ವೇದ–ಏತಾಂ ಬ್ರಹ್ಮವಿದ್ಯಾಮುಕ್ತವಿಧಪ್ರತಿಷ್ಠಾಯತನೋಪೇತಾಂ ಯೋ ವೇದ, ಅಪಹತ್ಯ ಪ್ರತಿತಿಷ್ಠತಿ–ಸ ಸರ್ವಾಣಿ ಪಾಪಾನಿ ವಿಧೂಯ ಕಾಲಪರಿಚ್ಛೇದಶೂನ್ಯೇ ಜ್ಯೇಯೇ ಜ್ಯಾಯಸಿ ಜ್ಯೇಷ್ಠೇ ಸರ್ವೋತ್ತರೇ ಸ್ವರ್ಗೇ ಲೋಕೇ–ವೈಕುಂಠಲೋಕೇ ಪ್ರತಿಷ್ಠಿತೋ ಭವತಿ ಇತ್ಯರ್ಥಃ. ಅನಂತಜ್ಯೇಯಪದಸಮಭಿವ್ಯಾಹಾರಾತ್ ಸ್ವರ್ಗಲೋಕಶಬ್ದೋ ಭಗವಲ್ಲೋಕಪರಃ ।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ಷೇಮಾಯ ಯಃ ಕರುಣಯಾ ಕ್ಷಿತಿನಿರ್ಜರಾಣಾಂ
ಭೂಮಾವಜೃಂಭಯತ ಭಾಷ್ಯಸುಧಾಮುದಾರಃ ।
ವಾಮಾಗಮಾಧ್ವಗವದಾವದತೂಲವಾತೋ
ರಾಮಾನುಜಸ್ಸಮುನಿರಾದ್ರಿಯತಾಂ ಮದುಕ್ತಿಮ್ ॥

ಇತಿ ಶ್ರೀಮತ್ತಾತಯಾರ್ಯಚರಣಾರವಿಂದಚಂಚರೀಕಸ್ಯ
ವಾತ್ಸ್ಯಾನಂತಾರ್ಯಪಾದಸೇವಾಸಮಧಿಗತಶಾರೀರಕಮೀಮಾಂಸಾಭಾಷ್ಯಹೃದಯಸ್ಯ
ಪರಕಾಲಮುನಿಪಾದಸೇವಾಸಮಧಿಗತಪಾರಮಹಂಸ್ಯಸ್ಯ
ಶ್ರೀ ರಂಗರಾಮಾನುಜಮುನೇಃ ಕೃತಿಷು ಕೇನೋಪನಿಷದ್ಭಾಷ್ಯಮ್ ॥

ಭಾಷಾಂತರ

ಯೋ ವಾ ಏತಾಮೇವಂ ವೇದ–ಹಿಂದೆ ಹೇಳಿದ ದಾರ್ಢ್ಯಕಾರಣಗಳಿಂದ ಕೂಡಿದ ಈ ಬ್ರಹ್ಮವಿದ್ಯೆಯನ್ನು ಯಾರು ತಿಳಿಯುತ್ತಾರೆಯೋ, ಅಪಹತ್ಯ ಪ್ರತಿತಿಷ್ಠತಿ–ಅವನು ಎಲ್ಲ ಪಾಪಗಳನ್ನು ಕಳೆದುಕೊಂಡು ಕಾಲಪರಿಮಿತಿಯಿಲ್ಲದ ಜ್ಯೇಯೇ–ಶ್ರೇಷ್ಠವಾದ, ಎಲ್ಲಕ್ಕೂ ಮೇಲಾದ ಸ್ವರ್ಗೇ ಲೋಕೇ–ವೈಕುಂಠಲೋಕದಲ್ಲಿ ನೆಲೆಗೊಳ್ಳುತ್ತಾನೆ. ಅನಂತ ಮತ್ತು ಜ್ಯೇಯ ಪದಗಳ ಸಂಗಡ ಪ್ರಯೋಗಿಸಲಾದ ಸ್ವರ್ಗಲೋಕಶಬ್ದವು ಪರಮಾತ್ಮನ ಲೋಕವನ್ನೇ ಬೋಧಿಸುತ್ತದೆ.

ರಂಗರಾಮಾನುಜಭಾಷ್ಯದ ಭಾಷಾಂತರ ಮುಗಿದುದು.

ಭಾಷ್ಯಸಾರ

ಈ ಕೇನೋಪನಿಷತ್ತನ್ನು ಅರಿತು ಅದರಂತೆ ಆಚರಿಸುವವನಿಗೆ ಸಿಗುವ ಫಲವನ್ನು ವಿವರಿಸುತ್ತಾರೆ—

ಯಾವ ಉಪಾಸಕನು ಈ ಕೇನೋಪನಿಷತ್ತಿನಲ್ಲಿ ಹೇಳಿರುವ ಬ್ರಹ್ಮವಿದ್ಯೆ ಹುಟ್ಟಲು ಕಾರಣವನ್ನೂ, ಅದು ನೆಲೆಗೊಳ್ಳಲು ಕಾರಣವನ್ನೂ ಅರಿತು ಆಚರಿಸುವನೋ ಅವನು ಮೋಕ್ಷಪ್ರತಿಬಂಧಕಗಳಾದ ಪುಣ್ಯಪಾಪಗಳನ್ನು ಕಳೆದುಕೊಂಡು ಮೋಕ್ಷವನ್ನು ಪಡೆಯುತ್ತಾನೆ. ಈ ಮೋಕ್ಷಸ್ಥಾನವು ಕಾಲನಿಯತಿಗೊಳಪಡುವುದಿಲ್ಲ. ಅತ್ಯಂತ ಶ್ರೇಷ್ಠವಾದ ಸ್ಥಾನ. ದುಃಖದ ಗಂಧವೂ ಇಲ್ಲದ ಸುಖಕ್ಕೆ ನೆಲೆ. ಇಂತಹ ಭಗವಂತನ ಲೋಕವೆನಿಸಿದ ವೈಕುಂಠಲೋಕದಲ್ಲಿ ಶಾಶ್ವತವಾಗಿ ನೆಲೆಸುತ್ತಾನೆ. ಅಂದರೆ ಅವನು ಪರಮಾತ್ಮನ ಸಾನ್ನಿಧ್ಯದಿಂದ ಹಿಂತಿರುಗುವುದಿಲ್ಲ. ಅವನಿಗೆ ಪುನಃ ಸಂಸಾರ ಬಂಧನವಿಲ್ಲ ಎಂದು ತಾತ್ಪರ್ಯ. ಪ್ರತಿತಿಷ್ಠತಿ–ಪ್ರತಿತಿಷ್ಠತಿ ಎಂದು ಎರಡು ಸಲ ಹೇಳಿರುವುದು ಉಪನಿಷತ್ತಿನ ಮುಕ್ತಾಯ ಸೂಚಕ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ನ ಚ ಪುನರಾವರ್ತತೇ' 'ಯದ್ಗತ್ವಾ ನ ನಿವರ್ತಂತೇ ತದ್ಧಾಮ ಪರಮಂ ಮಮ' ಎಂಬ ಶ್ರುತಿ ಸ್ಮೃತಿಗಳಲ್ಲಿ ಹೇಳಿರುವಂತೆ ಪರಮಪದದಲ್ಲಿ ಸ್ಥಿರವಾಗಿ ನೆಲೆಸುತ್ತಾನೆ.

—ನಾಲ್ಕನೆಯ ಖಂಡ ಮುಗಿಯಿತು—

ಕೇನೋಪನಿಷತ್ ಸಮಾಪ್ತ

ಸಂಸ್ಕೃತಮೂಲ–ಕನ್ನಡಮೂಲ–ಪ್ರತಿಪದಾರ್ಥ–ತಾತ್ಪರ್ಯ
ರಂಗರಾಮಾನುಜಭಾಷ್ಯ–ಭಾಷಾಂತರ–ಭಾಷ್ಯಸಾರಗಳು
ಪೂರ್ಣವಾದುವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"Forwarded free of cost, and with the Compliments of the Department of Education, Government of India, New Delhi."

ಕೇನೋಪನಿಷತ್

ಅನುಬಂಧ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೧

ಮಂತ್ರಗಳ ಅಕಾರಾದಿ

ಕ್ರ.ಸಂ.		ಪು. ಸಂ.
1.	ಅಥ ವಾಯುಮಬ್ರುವನ್	53
2.	ಅಥಾಧ್ಯಾತ್ಮಮ್	73
3.	ಅಥೇಂದ್ರಮಬ್ರುವನ್	58
4.	ಅನ್ಯದೇವ	15
5.	ಇಹ ಚೇದವೇದೀತ್	39
6.	ಉಪನಿಷದಂ ಭೋ ಬ್ರೂಹಿ	78
7.	ಕೇನೇಷಿತಮ್	3
8.	ತದಭ್ಯದ್ರವತ್	49
9.	ತದಭ್ಯದ್ರವತ್	54
10.	ತದ್ಧ ತದ್ವನಂ ನಾಮ	76
11.	ತದ್ಧೈಷಾಂ ವಿಜಜ್ಞೌ	45
12.	ತಸ್ಮಾದ್ವಾ ಇಂದ್ರೋಽತಿತರಾಮಿವ	67
13.	ತಸ್ಮಾದ್ವಾ ಏತೇ ದೇವಾಃ	65
14.	ತಸ್ಮಿಂಸ್ತ್ವಯಿ ಕಿಮ್	50
15.	ತಸ್ಮಿಂಸ್ತ್ವಯಿ ಕಿಮ್	55
16.	ತಸ್ಮೈ ತೃಣಂ ನಿದಧೌ	51
17.	ತಸ್ಮೈ ತೃಣಂ ನಿದಧೌ	56
18.	ತಸ್ಯೈ ತಪೋ ದಮಃ	80
19.	ತಸ್ಯೈಷ ಆದೇಶಃ	69
20.	ತೇಽಗ್ನಿಮಬ್ರುವನ್	47
21.	ನ ತತ್ರ ಚಕ್ಷುಃ	13
22.	ನಾಹಂ ಮನ್ಯೇ	30
23.	ಪ್ರತಿಬೋಧವಿದಿತಮ್	36
24.	ಬ್ರಹ್ಮ ಹ ದೇವೇಭ್ಯೋ	43

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

25.	(ಸಾ) ಬ್ರಹ್ಮೇತಿ ಹೋವಾಚ	63
26.	ಯಚ್ಚಕ್ಷುಷಾ	23
27.	ಯಚ್ಛ್ರೋತ್ರೇಣ	24
28.	ಯತ್ಪ್ರಾಣೇನ	25
29.	ಯದಿಮನ್ಯಸೇ	27
30.	ಯದ್ವಾಚಾನಭ್ಯುದಿತಮ್	20
31.	ಯನ್ಮನಸಾ ನ ಮನುತೇ	22
32.	ಯಸ್ಯಾಮತಮ್	33
33.	ಯೋ ವಾ ಏತಾಮೇವಂ ವೇದ	82
34.	ಶ್ರೋತ್ರಸ್ಯ ಶ್ರೋತ್ರಮ್	9
35.	ಸ ತಸ್ಮಿನ್ನೇವಾಕಾಶೇ	60

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೨

ಪ್ರಮಾಣಾಕರ ಅಕಾರಾದಿಸೂಚಿ

1.	ಅಸನ್ನೇವ ಸ ಭವತಿ	ತೈ.ಉ.ಆ.	6
2.	ತಮೇವ ವಿದಿತ್ವಾ	ಶ್ವೇ.ಉ.	3
3.	ಬ್ರಹ್ಮವಿದಾಪ್ನೋತಿ ಪರಂ	ತೈ.ಉ.ಆ.	1
4.	ಯತೋ ವಾಚೋ ನಿವರ್ತಂತೇ	ತೈ.ಉ.ಆ.	9
5.	ಯತೋ ವಾಚಃ....ವಚನಂ ವಿರುಧ್ಯೇತ	ಶ್ರೀಭಾ.ಜಿ.	(ಶ್ರುತಿಘಟ್ಟ)
6.	ಸ ನೋ ದೇವಃ	ತೈ.ನಾ.	10-19

೩

ಅಪೂರ್ವ ಪದಗಳು

ಅತಿವಾಂಚ್ಯ	1–2
ಅಧಿ	1–4
ಪ್ರತಿಬೋಧಃ	2–4
ಯಕ್ಷಮ್	3–2
ವನಮ್	4–6

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ೞ

ಭಗವನ್ನಾಮಗಳು

ದೇವಃ	ಬ್ರಹ್ಮ
ಶ್ರೋತ್ರಮ್	ಅಮಂತಂ
ಮನಃ	ಮತಂ
ವಾಕ್	ಅವಿಜ್ಞಾತಂ
ಪ್ರಾಣಃ	ಪ್ರತಿಬೋಧವಿದಿತಮ್
ಚಕ್ಷುಃ	ಯಕ್ಷಮ್
ವಾಗಾದ್ಯವಶಮ್	ವನಮ್
ವಾಗಾದ್ಯಾವಿರ್ಭಾವಕಮ್	ಶ್ರೇಯಸ್ಸ್ವರ್ಗಪ್ರತಿಷ್ಠಿತಮ್

ೠ

ವ್ಯಕ್ತಿಸೂಚಿ

ಅಗ್ನಿ

ಇಂದ್ರ

ಉಮೆ

ದೇವತೆಗಳು

ಯಕ್ಷ

ವಾಯು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

॥ ಕೇನೋಪನಿಷದರ್ಥಸಂಗ್ರಹಃ[1] ॥

(1) ಪೂರ್ಣೋಪಾಸ್ಯಾತ್ ಪರೋಽನಂತೋ ವಾಗಾದೀನಾಮಗೋಚರಃ ।
ದೇವಸ್ತೇಷಾಂ ನಿಯಂತೇತಿ ಬ್ರಹ್ಮ ವಿಜ್ಞಾಯ ಮುಚ್ಯತೇ ॥

(2) ಕಾರ್ತ್ಸ್ನ್ಯೇನಾವೇದ್ಯಮಪ್ಯೇತದ್ವಿದಿತ್ವೇಹ ಯಥಾಯಥಮ್ ।
ತತ್ಪ್ರಸಾದಾಪ್ತಶಕ್ತಿಸ್ಸನ್ ವಿದ್ಯಯಾ ವಿಂದತೇಽಮೃತಮ್ ॥

(3) ಅಗ್ನಿವಾಯ್ವಿಂದ್ರಮುಖ್ಯೈಸ್ತದಪಿ ತ್ರೈಲೋಕ್ಯದೈವತೈಃ ।
ಅವೇದ್ಯಮಖಿಲೇಶಾನಮನುಗ್ರಹಪರಂ ಸತಾಮ್ ॥

(4) ವಿದ್ಯುದ್ವತ್ ಕ್ಷಣಭಾನಂ ತದ್ವನಂ ಸ್ಥೈರ್ಯೇಣ ವೇದಿತುಮ್ ।
ಶಿಷ್ಯನ್ತೇ ಸತ್ಯಮಂಗಾನಿ ವೇದಾಃ ಕರ್ಮ ದಮಸ್ತಪಃ ॥

(5) ಇತ್ಥಂ ತಲವಕಾರೋಪನಿಷತ್ ಖಂಡಚತುಷ್ಟಯೇ ।
ವಾಶೀಚಿಕೀರ್ಷುರ್ವಾಗಾದಿ ಮುಮುಕ್ಷುಃ ಪ್ರತಿಬೋಧಿತಃ ॥

(1) ಪ್ರತೀಕೋಪಾಸನೆಯಲ್ಲಿ ಯಾವುದನ್ನು ಪೂರ್ಣೋಪಾಸ್ಯವೆಂದು ಉಪಾಸನೆ ಮಾಡುತ್ತಾರೋ ಅದಕ್ಕಿಂತ ವಿಲಕ್ಷಣವೂ, ಅನಂತವೂ, ವಾಗಾದಿಇಂದ್ರಿಯಗಳಿಗೆ ಅಗೋಚರವೂ, ಇಂದ್ರಿಯಗಳಿಗೆನಿಯಾಮಕವೂ ಪೂಜ್ಯವೂ ಆದುದು 'ಬ್ರಹ್ಮ' ಎಂದರಿತು ಬಂಧನದಿಂದ ಬಿಡುಗಡೆ ಹೊಂದುವನು.

(2) ಬ್ರಹ್ಮವನ್ನು ಪೂರ್ಣ ತಿಳಿಯಲಾಗದು. ಆದರೂ ಗುರುಮುಖದಿಂದ ಯಥಾಮತಿ ತಿಳಿದು, ಆ ಬ್ರಹ್ಮನಿತ್ತಶಕ್ತಿಯಿಂದ ಉಪಾಸನೆಮಾಡಿ ಮೋಕ್ಷವನ್ನು ಹೊಂದುವನು.

(3) ಅಗ್ನಿ–ಇಂದ್ರ–ವಾಯು ಮುಂತಾದ ಮೂರುಲೋಕದ ದೇವತೆಗಳಿಂದಲೂ ಅರಿಯಲಾಗದವನೂ, ಚರಾಚರಗಳಿಗೆ ಒಡೆಯನೂ, ಸತ್ಪುರುಷರಲ್ಲಿ ಅನುಗ್ರಹ ಬುದ್ಧಿಯುಳ್ಳವನೂ ಆದವನು ಪರಮಾತ್ಮನು.

---

1. ಈ ಭಾಗವನ್ನು ಉತ್ತಮೂರು ವೀರರಾಘವಾಚಾರ್ಯರ 'ಕೇನಾದ್ಯುಪನಿಷತ್' ಗ್ರಂಥದಿಂದ ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(4) ಮಿಂಚಿನಂತೆ ಕ್ಷಣಕಾಲ ಪ್ರಕಾಶಿಸುವ, ‘ ತದ್ವನ ’ ಎಂಬ ಹೆಸರುಳ್ಳ ಬ್ರಹ್ಮವನ್ನು ಸ್ಥಿರವಾಗಿ ಅರಿಯಲು, ವೇದ-ವೇದಾಂಗಗಳು, ಕರ್ಮ–ದಮ–ತಪಸ್ಸುಗಳು, ಸತ್ಯಪ್ರತಿಜ್ಞೆಗಳು ಕಾರಣವೆಂದು ಉಪದೇಶಿಸಲ್ಪಟ್ಟಿದೆ.

(5) ಹೀಗೆ ತಲವಕಾರೋಪನಿಷತ್ ಎಂಬ ಈ ಕೇನೋಪನಿಷತ್ತಿನ ನಾಲ್ಕುಖಂಡಗಳಲ್ಲಿ ವಾಗಾದೀಂದ್ರಿಯಗಳನ್ನು ವಶಪಡಿಸಿಕೊಳ್ಳಲು ಅಭಿಲಾಷೆಯುಳ್ಳ ಮುಮುಕ್ಷುಗಳಿಗೆ ‘ ಬ್ರಹ್ಮವೇ ಪ್ರೇರಕ ’ ಎಂದು ಉಪದೇಶಿಸಲಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೭

ಭಾಷ್ಯಕಾರರ ಚರಿತ್ರೆ

೧. ರಾಮಾನಂದ[1]

ಬಿರುದು : ' ವಾದೀಭಪಂಚಾನನ ' ' ವೈರಾಗ್ಯವಾರಿಧಿ '.

ಕುಲಗೋತ್ರ : ಬೋಧಾಯನಶ್ರೀವೈಷ್ಣವಸಂಪ್ರದಾಯ, ವಿದ್ಯಾಗುರು ಮತ್ತು ಸನ್ಯಾಸ ದೀಕ್ಷಾಗುರು-ರಾಘವಾನಂದ, ಗುರುಪರಂಪರೆಯಲ್ಲಿ ರಾಮ, ಸೀತೆ, ಚತುರ್ಮುಖ, ವಸಿಷ್ಠ, ಶಕ್ತಿ, ಪರಾಶರ, ವ್ಯಾಸ, ಶುಕ, ಬೋಧಾಯನ, ಬೌಧಾಯನಪುರುಷೋತ್ತಮಾಚಾರ್ಯರಾದ ಮೇಲೆ ಇಲ್ಲಿಂದ ಹದಿಮೂರನೆಯ ಪಟ್ಟ ಇವರದು. ಶಿಷ್ಯಪ್ರಶಿಷ್ಯರು-ಶ್ರೀಕೃಷ್ಣದಾಸ, ಶ್ರೀನಾಭಸ್ವಾಮಿ, ಗೋಸ್ವಾಮಿತುಳಸೀದಾಸ, ರೈದಾಸ, ಮೀರಾಬಾಯಿ ಇತ್ಯಾದಿ. ಇಷ್ಟದೈವ ಶ್ರೀರಾಮಚಂದ್ರ ಮತ್ತು ಸೀತಾದೇವಿ.

ಕಾಲ : ಕ್ರಿ.ಶ. 1300 ಅಥವಾ ಕ್ರಿ.ಶ. 15ನೆಯ ಶತಮಾನ.

ದೇಶ : ಹುಟ್ಟೂರು-ಪ್ರಯಾಗ. ವಾಸ-ಕಾಶಿಯ ಪಂಚಗಂಗಾಘಾಟ್.

ಸಾಧನೆಗಳು : ಪ್ರಸ್ಥಾನತ್ರಯಭಾಷ್ಯರಚನೆ, ಭಾರತಾದ್ಯಂತಸಂಚಾರ. ಶ್ರೀಸಂಪ್ರದಾಯದ ರಕ್ಷಣೆ, ಪ್ರಚಾರ.

ಮಹಿಮೆ : ಇವರು ಸಾಕ್ಷಾತ್ ಶ್ರೀರಾಮನ ಅಪರಾವತಾರ.

ಕೃತಿಗಳು : ದಶೋಪನಿಷದ್‌ಭಾಷ್ಯ, ಬ್ರಹ್ಮಸೂತ್ರಭಾಷ್ಯ, ಗೀತಾಭಾಷ್ಯ, ಶ್ರೀವೈಷ್ಣವ ಮತಾಬ್ಜಭಾಸ್ಕರ ಇತ್ಯಾದಿ.

1. ಆಧಾರಗ್ರಂಥ : ಶ್ರೀರಾಮಾನಂದ ಗ್ರಂಥಮಾಲಾ ಕುಸುಮ ಮೂರು. ರಾಮಾನಂದ ವೇದಾಂತ ಪ್ರಚಾರಸಮಿತಿ, ಅಹಮದಾಬಾದ್ 22 : ಕ್ರಿ.ಶ. 1969.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೨. ರಂಗರಾಮಾನುಜಮುನಿ[1]

ಹೆಸರು : ರಾಮಾನುಜ, ಶ್ರೀರಂಗರಾಮಾನುಜಮುನಿ.

ಬಿರುದು : " ಚತುಷ್ಷಷ್ಟಿಪ್ರಬಂಧನಿರ್ಮಾತಾ ", " ದಶೋಪನಿಷದ್ಭಾಷ್ಯಕಾರ ",

ಕುಲಗೋತ್ರ : ಶ್ರೀವತ್ಸಗೋತ್ರ ? ಲಕ್ಷ್ಮೀಪುರಶಾಖೆಯ ನಲ್ಲಾನ್ ವಂಶ ? ಛಂದಸ್ಸಾಮಶಾಖಾಧ್ಯಾಯಿ.

ಬಂಧುಮಿತ್ರರು : ವಿದ್ಯಾಗುರು-ವಾತ್ಸ್ಯ ಅನಂತಾಚಾರ್ಯ. ಪರಮಗುರು-ತಾತಾಚಾರ್ಯ. ಸನ್ಯಾಸದೀಕ್ಷಾಗುರು-ಪರಕಾಲಮುನಿ, ಮಿತ್ರರು-ಸುರಪುರಸಂಸ್ಥಾನದ ವೇಂಕಟಾಚಾರ್ಯ.

ಕಾಲ : ಕ್ರಿ.ಶ. 1670 ರಿಂದ 1750 (ಸುಮಾರು)

ದೇಶ : ಹುಟ್ಟೂರು ತಿರುಪತಿ ಇರಬಹುದು. ವಾಸ-ಪ್ರಾಯಶಃ ಕಾಂಚೀಪುರದ ದೀಪಪ್ರಕಾಶಸನ್ನಿಧಿ.

ಸಾಧನೆಗಳು : 64 ಮಹಾಗ್ರಂಥಗಳ ನಿರ್ಮಾಣ, ಸಿದ್ಧಾಂತಪ್ರವಚನ ಇತ್ಯಾದಿ.

ವಿಚಾರ : ಕಾಲ-ದೇಶ-ಕೃತಿಗಳು.

ದಶೋಪನಿಷದ್ಭಾಷ್ಯಕಾರರೆಂದೂ, ಚತುಷಷ್ಠಿಪ್ರಬಂಧನಿರ್ಮಾತಾ ಎಂದೂ ಪ್ರಸಿದ್ಧರಾದ ಇವರ ಕಾಲದ ಬಗ್ಗೆ ವಿವಿಧ ಅಭಿಪ್ರಾಯಗಳಿವೆ.

1. ಇವರ ಉಪನಿಷದ್ಭಾಷ್ಯಾದಿ ರಚನೆಗಳನ್ನು ಕಂಡು ಚಂಡಮಾರುತಂ ದೊಡ್ಡಯಾಚಾರ್ಯರು ಶ್ಲಾಘಿಸಿದ್ದರು. ದೊಡ್ಡಯ್ಯಾಚಾರ್ಯರ ಕಾಲ ಕ್ರಿ. ಶ. 1-2-1543 ರಿಂದ 3-10-1607 ಎಂದು ಅವರ ವಂಶದವರಾದ ಕೆ. ಸಿ. ತಾತಾಚಾರ್ಯರು ತಿಳಿಸಿರುತ್ತಾರೆ.

2. ಇವರು ಜ್ಞಾನಾಬ್ಧಿಬ್ರಹ್ಮತಂತ್ರಸ್ವಾಮಿಗಳ ಶಿಷ್ಯರು[2] (ಜ್ಞಾನಾಬ್ಧಿಸ್ವಾಮಿಯ ಪಟ್ಟದ ಕಾಲ ಕ್ರಿ.ಶ. 1607 ರಿಂದ 1618)

---

1. ಆಧಾರ ಗ್ರಂಥಗಳು :
   ಉಭಯವೇದಾಂತಗ್ರಂಥಮಾಲಾ. ಸಂಸ್ಕೃತಸರ 1. ಉಪೋದ್ಘಾತ. ಪುಟ 7, 8.
   ಸಂ.-ಉ. ತಿ. ವೀರರಾಘವಾಚಾರ್ಯ, ತಿರುಮಲೈ-ತಿರುಪತಿ, ಕ್ರಿ.ಶ. 1948.
2. ಒಂದನೇ ಟಿಪ್ಪಣಿಯಂತೆ ಮತ್ತು 'ಪರಕಾಲಮಠದ ವೈಭವ' ಪರಕಾಲಮಠ, ಮೈಸೂರು, ಕ್ರಿ.ಶ. 1973 ಪುಟ 26, 31.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

3. ಇವರನ್ನು ಶ್ಲಾಘಿಸಿದವರು ದೊಡ್ಡಯಾಚಾರ್ಯರಲ್ಲ. ಅವರಂತೆಯೇ ಪ್ರತಿವಾದಿಗಳನ್ನು ಜಯಿಸಿ ವಿವಿಧ ಗ್ರಂಥರಚನೆಯಿಂದ ಪ್ರಸಿದ್ಧರಾದ ಸುರಪುರಸಂಸ್ಥಾನದ ವೆಂಕಟಾಚಾರ್ಯರು. ಇವರ ಕಾಲ ಇಂದಿಗೆ (ಕ್ರಿ. ಶ. 1915) ಸುಮಾರು ಇನ್ನೂರಐವತ್ತು ವರ್ಷ ಹಿಂದಿನದಿರಬಹುದು.[1] (ಕ್ರಿ.ಶ. 1665)

4. ಇವರು ಪರಕಾಲಸ್ವಾಮಿಗಳಿಂದ ಸನ್ಯಾಸದೀಕ್ಷೆ ಪಡೆದರು. ಇವರ ಆಚಾರ್ಯರು ವಾತ್ಸ್ಯಅನಂತಾಚಾರ್ಯರು. ಈ ಅನಂತಾಚಾರ್ಯರು ಶ್ರೀಶೈಲಪೂರ್ಣವಂಶದ ಜಗದ್ಗುರು ತಾತಾಚಾರ್ಯರ ಶಿಷ್ಯರು.[2] ಪ್ರಸಿದ್ಧರಾದ ಪೆರಿಯಪರಕಾಲಸ್ವಾಮಿಗಳು ತಿರುಮಂಗೈಆಳ್ವಾರವರ ಸ್ವಪ್ನಸೂಚನೆಯಂತೆ 'ಪರಕಾಲ' ಎಂಬ ಹೆಸರನ್ನು ಸ್ವಾಮಿಪಟ್ಟದಲ್ಲಿ ಪಡೆದರು. ಇವರ ಕಾಲ ಕ್ರಿ.ಶ. 1626 ರಿಂದ 1737.

7882

5. ತಾತಾಚಾರ್ಯ (ಪಂಚಮತಭಂಜನಮ್)ರ ಕಾಲ ಕ್ರಿ.ಶ. 1509 ರಿಂದ 1591. ವಾತ್ಸ್ಯಅನಂತಾಚಾರ್ಯರು 'ಅಮ್ಮಾಳ್' ವಂಶ. ರಂಗರಾಮಾನುಜರು ಲಕ್ಷ್ಮೀಪುರದ ತಿರುಮಲೈನಲ್ಲಾನ್‌ರ ವಂಶ[3].

ಮೇಲ್ಕಂಡ ನಾಲ್ಕು ಅಭಿಪ್ರಾಯಗಳನ್ನು ವಿಮರ್ಶಿಸುವಾಗ ಸ್ವಯಂಗ್ರಂಥಕರ್ತರ ಹೇಳಿಕೆಗೆ ಇರುವಷ್ಟು ಬೆಲೆಗಿಂತ ಆ ಬಗ್ಗೆ ಇತರರ ಅಭಿಪ್ರಾಯಗಳಿಗೆ ಬೆಲೆ ಕಡಿಮೆ ಎಂಬುದು ಎಲ್ಲರೂ ಒಪ್ಪಬೇಕಾದ ವಿಷಯ. ಜ್ಞಾನಾಬ್ಧಿಸ್ವಾಮಿಗಳಿಗೆ 'ಪರಕಾಲಸ್ವಾಮಿ' ಎಂಬ ಪ್ರಸಿದ್ಧಿ ಇದ್ದ ಬಗ್ಗೆ ಪ್ರಾಚೀನವಾದ ಉಲ್ಲೇಖಗಳಿಲ್ಲ. 1 ಮತ್ತು 3ನೆಯ ಅಭಿಪ್ರಾಯಗಳು ಪರಸ್ಪರ ವಿರುದ್ಧವಾಗಿವೆ. 1 ಮತ್ತು 2ನೆಯ ಅಭಿಪ್ರಾಯಗಳಲ್ಲಿರುವ ಕಾಲಗಳು ಬೆರೆಬೇರೆಯಾಗಿವೆ. 3 ಮತ್ತು 4ನೆಯ ಅಭಿಪ್ರಾಯಗಳಿಗೆ ಯಾವ ವಿರೋಧವೂ ಇಲ್ಲ ಮತ್ತು ಕಾಲವೂ ಪ್ರಾಯಶಃ ಒಂದೇ ಘಟ್ಟಕ್ಕೆ ಸೇರುವುದು. ಇದರಂತೆ ರಂಗರಾಮಾನುಜಮುನಿಗಳ ಕಾಲ ಕ್ರಿ.ಶ. 17ನೆಯ ಶತಮಾನದ ಅಂತಿಮ ಮತ್ತು 18ನೆಯ ಶತಮಾನದ ಆದಿಭಾಗವೆಂದು ಒಪ್ಪಬಹುದಾಗಿ ತೋರುವುದು.

पुस्तकालय

---

1. ಶಾರೀರಕಶಾಸ್ತ್ರಾರ್ಥದೀಪಿಕಾ, ಉಪೋದ್ಘಾತ, ಸಂ. ವೆ. ಹ. ಕೃಷ್ಣಮಾಚಾರ್ಯ, ಕುಂಭಘೋಣ, ಗೋಪಾಲವಿಲಾಸ ಮುದ್ರಣಾಲಯ, ಕ್ರಿ.ಶ. 1915.

2. ಛಾಂದೋಗ್ಯಭಾಷ್ಯದ ಆರಂಭದಲ್ಲಿ ಎಲ್ಲ ಮುದ್ರಣಗಳಲ್ಲೂ ಏಕರೀತಿ ಇರುವ ಸ್ವಯಂಗ್ರಂಥಕರ್ತರ ಮೂರು ಪದ್ಯಗಳು.

   ಶ್ರೀಶೈಲಪೂರ್ಣವಂಶಾಬ್ಧಿಕೌಸ್ತುಭಸ್ಯ ಜಗದ್ಗುರೋಃ. ಶ್ರೀಮತಸ್ತಾತಯಾರ್ಯಸ್ಯ ಚರಣೌ
   ಶರಣಂ ವೃಣೇ

   ಶ್ರೀತಾತಗುರುಸೇವಾಪ್ತವೇದಾನ್ತಯುಗಳಾಶಯಃ. ವಾತ್ಸ್ಯಾನಂತಗುರುಃ ಶ್ರೀಮಾನ್ ಶ್ರೇಯಸೇ
   ಮೇಽಸ್ತು ಭೂಯಸೇ

   ಯತ್ಸೇವಾವೈಭವಾಲ್ಲಬ್ಧಾ ಮಯಾ ಪರಮಹಂಸತಾ. ತಮಹಂ ಶಿರಸಾ ವಂದೇ ಪರಕಾಲ
   ಮುನೀಶ್ವರಮ್.

3. 'ರಾಮಾನುಜಸಿದ್ಧಾಂತ ದರ್ಪಣ' ಹೆಚ್. ಜಿ. ರಾಮಯ್ಯಂಗಾರ್, ಬೆಂಗಳೂರು ಕ್ರಿ.ಶ. 1982.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇವರ ಗೋತ್ರ ಶ್ರೀವತ್ಸ. ಇವರು ಛಂದೋಗ ಸಾಮವೇದಿಗಳು. ಆದುದರಿಂದಲೇ ಪ್ರಪ್ರಥಮವಾಗಿ ಛಾಂದೋಗ್ಯಭಾಷ್ಯ ಬರೆದಿರುವರು. (ನಲ್ಲಾನ್ ಶ್ರೀವತ್ಸರು ಕೃಷ್ಣ ಯಜುರ್ವೇದಿಗಳು)

ತಿರುಪತಿ ಇವರ ಹುಟ್ಟೂರು ಇರಬಹುದು ಮತ್ತು ಇವರು ತಿರುಪತಿ ಶ್ರೀನಿವಾಸನ ಭಕ್ತರೆಂಬುದು ಇವರ ಎಲ್ಲ ಗ್ರಂಥಗಳ ಮಂಗಳಪದ್ಯದಿಂದಲೂ ತಿಳಿಯುವುದು. ಪ್ರಾಯಶಃ ಇವರ ವಾಸಸ್ಥಾನ ಕಾಂಚೀಪುರ. ಅಲ್ಲಿ 'ದೀಪಪ್ರಕಾಶ' ಎಂಬ ದೇವರ ಸನ್ನಿಧಿಯಲ್ಲಿ ಗ್ರಂಥರಚನಾಮಗ್ನರಾದ ಇವರನ್ನು ಕಂಡು ಸುರಪುರಂ ವೇಂಕಟಾಚಾರ್ಯರು 'ಏನಿದು! ಸಿಹಿ ಜೇನನ್ನು ಆನಂದವಾಗಿ ಕುಡಿಯುತ್ತಿರುವಿರಲ್ಲ' ಎನ್ನಲು, ಇವರು ತಮ್ಮಂತಹ ಸಾಹಸಿ ವಿದ್ವಾಂಸರು ನೊಣಗಳ ಕಾಟವಿಲ್ಲದಂತೆ ಮಾಡಿರುವುದರಿಂದಲೇ ನಮಗೆ ಈ ಭಾಗ್ಯ' ಎಂದರಂತೆ. (ಅಂದರೆ ರಾಮಾನುಜದರ್ಶನಕ್ಕೆ ಪ್ರತಿವಾದಿಗಳಿಲ್ಲದಂತೆ ಅವರೆಲ್ಲರ ಬಾಯಿಮುಚ್ಚಿಸಿದ ಮಹನೀಯರು ನೀವು. ಹೀಗೆ ಪ್ರತಿಬಂಧಕವಿಲ್ಲದುದರಿಂದ ನಮ್ಮಂತಹ ಯತಿಗಳು ಹೀಗೆ ಏಕಾಂತವಾಗಿ ದರ್ಶನಾರ್ಥಸ್ವಾರಸ್ಯಗಳನ್ನು ಅನುಭವಿಸುತ್ತಿರಲು ಸಾಧ್ಯವಾಯಿತು ಎಂದು ಅಭಿಪ್ರಾಯ).

ಇವರು ತಮ್ಮ ಗ್ರಂಥಗಳಲ್ಲಿ ಪ್ರಾಚೀನವಿದ್ವಾಂಸರ ಪಂಕ್ತಿಯಲ್ಲಿ ದೊಡ್ಡಯಾಚಾರ್ಯರನ್ನೂ ಅಪ್ಪಯ್ಯದೀಕ್ಷಿತರನ್ನೂ ಉಲ್ಲೇಖಿಸಿರುವರು.

ಇವರ ಗ್ರಂಥಗಳ ಉಲ್ಲೇಖ ಕ್ರಿ. ಶ. 18ಕ್ಕಿಂತ 19ನೆಯ ಶತಮಾನದ ವೇದಾಂತ ಗ್ರಂಥಗಳಲ್ಲಿ ಹೇರಳವಾಗಿ ಸಿಗುತ್ತವೆ.

ಇವರು ಅನುಗ್ರಹಿಸಿರುವ ಗ್ರಂಥಗಳಲ್ಲಿ ಕೆಲವು ಉಪಲಬ್ಧ, ಕೆಲವು ಮುದ್ರಿತ, ಕೆಲವು ಅನುಪಲಬ್ಧವಾಗಿವೆ. ಇವರ ದಶೋಪನಿಷದ್ಭಾಷ್ಯಗಳಲ್ಲಿ ಐತರೇಯಭಾಷ್ಯವು ಮೇಲುಕೋಟೆಯ ಸಂಸ್ಕೃತಮಹಾಪಾಠಶಾಲೆಯಲ್ಲಿ ಏಕೈಕ ಹಸ್ತಪ್ರತಿಯಾಗಿ ಉಳಿದಿದ್ದು, ಈಶಾವಾಸ್ಯಭಾವ ದೀಪಿಕೆಯೂ ಸಹ ಮೇಲುಕೋಟೆ ಸಂಸ್ಕೃತ ಸಂಶೋಧನ ಸಂಸತ್ತಿನಿಂದ ಸಂಪಾದಿತವಾಗಿದೆ. ಮತ್ತು ಮೈಸೂರಿನ ಓರಿಯಂಟಲ್ ಲೈಬ್ರರಿಯಲ್ಲಿ ಇದರ ಕನ್ನಡ ಅನುವಾದವೂ ಇದೆ ಎಂಬುದು ಒಂದು ವಿಶೇಷ.

ಈಶಾವಾಸ್ಯೋಪನಿಷತ್ತಿಗೆ ವೇದಾಂತಾಚಾರ್ಯರ ಪ್ರಾಚೀನವಾದಭಾಷ್ಯವೂ, ಸುಬಾಲೋಪ ನಿಷತ್ತಿಗೆ ಶ್ರುತಪ್ರಕಾಶಿಕಾಚಾರ್ಯರ ಭಾಷ್ಯವೂ ಇರುವುದರಿಂದ ರಂಗರಾಮಾನುಜರು ಮತ್ತೆ ಇವುಗಳ ಭಾಷ್ಯ ಬರೆಯಲಿಲ್ಲವೆಂಬುದು ಕೆಲವರ ಅನಿಸಿಕೆ. ಹೀಗಾಗುವ ಪಕ್ಷಕ್ಕೆ ಇವರಿಗಿಂತ ಹಿಂದಿನ ಕೂರನಾರಾಯಣರ ತೈತ್ತಿರೀಯಭಾಷ್ಯ, ವಾಧೂಲ ಶ್ರೀನಿವಾಸರ ಛಾಂದೋಗ್ಯಭಾಷ್ಯ, ಮಹಾಚಾರ್ಯರ ಉಪನಿಷನ್ಮಂಗಳದೀಪಿಕೆ, ವಾತ್ಸ್ಯನಾರಾಯಣರ ಶ್ವೇತಾಶ್ವತರ, ಮಾಂಡೂಕ್ಯ ಭಾಷ್ಯ ಮುಂತಾದವುಗಳಿರುವುದರಿಂದ ಇವರು ಅವುಗಳಿಗೂ ಭಾಷ್ಯ ಮಾಡದಿರಬೇಕಿತ್ತಲ್ಲವೆ ?

ಇವರ ಕೇನಾದ್ಯುಪನಿಷದ್ಭಾಷ್ಯಗಳ ಶೈಲಿಗೆ ಹೊಂದುವ ಶೈಲಿ ಐತರೇಯಭಾಷ್ಯ ಮತ್ತು ಈಶಾವಾಸ್ಯ ಭಾವದೀಪಿಕೆಗಳಿಗೆ ಇಲ್ಲವಾದರೂ 'ದಶೋಪನಿಷದ್ಭಾಷ್ಯಕಾರ' ಎಂಬ ಬಿರುದಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಕ್ಕ ಕೃತಿಯೂ ಅವಶ್ಯ ಇರಬೇಕಲ್ಲವೇ ? ಐತರೇಯದಲ್ಲಿರುವ ವಿಷಯದ ಶೈಲಿಯೇ ಬೇರೆಯಾದುದರಿಂದ ಭಾಷ್ಯಶೈಲಿಯೂ ಬೇರೆಯಾಗುವ ಸಂಭವವಿದೆ. ಈಶಾವಾಸ್ಯಕ್ಕೆ ಅವರ ಭಾವದೀಪಿಕೆಯು ಪೂರ್ವಾಚಾರ್ಯಭಾಷ್ಯಗಳ ಸಾರಸಂಗ್ರಹವಾಗಿರುವುದರಿಂದ ಭಾಷ್ಯದಂತಹ ವಿಸ್ತೃತಗಹನಶಾಸ್ತ್ರಾರ್ಥಚರ್ಚೆಗಳ ಶೈಲಿ ಇದಕ್ಕಿಲ್ಲದಿರಬಹುದು. ಐತರೇಯಭಾಷ್ಯವನ್ನು ಇವರದೆಂದು ಒಪ್ಪಿಕೊಳ್ಳಲು ಅಡ್ಡಿಯಿಲ್ಲವಾದರೆ ಅದೇ ನ್ಯಾಯದಿಂದ ಈಶಾವಾಸ್ಯಭಾವ ದೀಪಿಕೆಯನ್ನೂ ಇವರ ಕೃತಿಯೆಂದೇ ಒಪ್ಪಬಹುದಾಗಿ ತೋರುವುದು.

ನೂರೈವತ್ತು ವರ್ಷಗಳಿಗಿಂತ ಹಿಂದಿನ ಉಪನಿಷತ್ ವ್ಯಾಖ್ಯಾನಕಾರರಾದ ಮಂಗಳಾದ್ರಿಯ ಶ್ರೀಭಾಷ್ಯಂ ರಾಮಾನುಜಾಚಾರ್ಯರು "ರಂಗರಾಮಾನುಜಮುನಿಗಳು ಪುರುಷಸೂಕ್ತಭಾಷ್ಯವನ್ನು ಬರೆಯದಿರುವುದರಿಂದ ಅವರಿಗಿಂತ ಪ್ರಾಚೀನರ ಪುರುಷಸೂಕ್ತಭಾಷ್ಯವನ್ನನುಸರಿಸಿ ನಾನು ವಿವರಿಸುವೆನು" ಎಂದು ತಿಳಿಸಿರುವುದನ್ನು ವಿಮರ್ಶಿಸಿದರೆ ಈಗ ಉಪಲಬ್ಧವಾಗಿ ಮುದ್ರಿತ ವಾಗಿರುವ ರಂಗರಾಮಾನುಜರ ಪುರುಷಸೂಕ್ತವಿವರಣವು ಅವರಿಗೆ ಉಪಲಬ್ಧವಾಗಿರಲಿಲ್ಲ ವೆಂಬಷ್ಟರಿಂದ ಗ್ರಂಥವೇ ಇಲ್ಲವೆಂದು ವಾದಿಸಲಾಗದಲ್ಲವೆ ?

ಇವರ ಕೃತಿಗಳೆಂದು ಈವರೆಗೆ ಉಪಲಬ್ಧವಾಗಿರುವ ಮುದ್ರಿತಗ್ರಂಥಗಳು—ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಐತರೇಯ, ಛಾಂದೋಗ್ಯ, ಬೃಹದಾರಣ್ಯಕ, ಮಂತ್ರಿಕ, ಅಥರ್ವಶಿಖಾ, ಕೌಷೀತಕೀ, ಶ್ವೇತಾಶ್ವತರ, ಅಗ್ನಿರಹಸ್ಯ, ಪುರುಷಸೂಕ್ತಭಾಷ್ಯಗಳು, ಶ್ರೀಭಾಷ್ಯಮೂಲಭಾವಪ್ರಕಾಶಿಕೆ, ಶ್ರುತಪ್ರಕಾಶಿಕಾಭಾವಪ್ರಕಾಶಿಕೆ, ಶಾರೀರಕಶಾಸ್ತ್ರಾರ್ಥ ದೀಪಿಕೆ, ವಿಷಯವಾಕ್ಯದೀಪಿಕೆ, ನ್ಯಾಯಸಿದ್ಧಾಂಜನ ಟೀಕೆಗಳು, ತಿರುಪ್ಪಲ್ಲಾಂಡ್, ತಿರುಪ್ಪಾವೈ ತಿರುವಾಯ್ಮೊಳಿ ಎಂಬ ತಮಿಳ್‌ದಿವ್ಯಪ್ರಬಂಧಗಳ ಸಂಸ್ಕೃತ ಭಾಷಾಂತರಗಳು.

ಅಮುದ್ರಿತ ಗ್ರಂಥಗಳು : ಕಣ್ಣಿನುಣ್‌ಶಿರುತ್ತಾಂಬುವ್ಯಾಖ್ಯಾನ, (ಮಹೋಪನಿ ಷದ್ಭಾಷ್ಯಮ್) ರಾಮಾನುಜಸಿದ್ಧಾಂತಸಾರಸಂಗ್ರಹ, ತತ್ವನಿಷ್ಕರ್ಷ, ರಹಸ್ಯತ್ರಯಸಾರತಾತ್ಪರ್ಯ ಕೌಮುದೀ, ಪ್ರತಿತಂತ್ರಪರಿಷ್ಕ್ರಿಯಾ, ಈಶಾವಾಸ್ಯಭಾವದೀಪಿಕಾ ಇತ್ಯಾದಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೩. ಶ್ರೀಗೋಪಾಲಾನಂದಸ್ವಾಮಿ

ಹೆಸರು: ಗೋಪಾಲನಂದಜೀಯೋಗಿರಾಜ. ಪೂರ್ವಾಶ್ರಮದ ಹೆಸರು ಕುಶಾಲಭಟ್ಟ.

ಕುಲ, ಗೋತ್ರ: ಬ್ರಾಹ್ಮಣ, ಶುಕ್ಲಯಜುರ್ವೇದದ ಮಾಧ್ಯಂದಿನಶಾಖಾಧ್ಯಾಯಿ. ಉದ್ಧವಸಂಪ್ರದಾಯ.

ಬಂಧು-ಮಿತ್ರರು: ತಂದೆ-ಮುಕ್ತಾರಾಮ. ತಾಯಿ-ಕುಶಲಾಂಬಾ. ವಿದ್ಯಾಗುರು-ಸಂಬಂಧಿಕರಾದ ಪಂಡಿತರು. ಸನ್ಯಾಸದೀಕ್ಷಾಗುರು-ಸ್ವಾಮಿಸಹಜಾನಂದರು. ಇಷ್ಟದೈವ-ಸ್ವಾಮಿ ನಾರಾಯಣ, ಶಿಷ್ಯರು-ಸದಾಶಿವಭಟ್ಟ ಮುಂತಾದವರು.

ಕಾಲ: ಅವತಾರ-ಕ್ರಿ.ಶ. 1781, ಮಾಘಶುಕ್ಲಅಷ್ಟಮಿ ಪ್ರಾತಃಕಾಲ. ಸಮಾಧಿ ಕ್ರಿ. ಶ. 1852, ವೈಶಾಖಶುಕ್ಲ ಪಂಚಮಿ. ಜೀವಿತ ಕಾಲ—71 ವರ್ಷ, 2 ತಿಂಗಳು, 27 ದಿವಸ.

ದೇಶ: ಹುಟ್ಟೂರು ಗುಜರಾತಿನ 'ಇಡಾರ್' ಪ್ರದೇಶದ 'ಟೋರಡಾ' ಗ್ರಾಮ. ಸಮಾಧಿಸ್ಥಳ—'ವಡತಾಲ್' ನಗರದ ಪುರುಷೋತ್ತಮ ಮಂದಿರ. ಇವರ ಪೂರ್ವಜರು ಉತ್ತರಪ್ರದೇಶದವರು.

ಸಾಧನೆಗಳು: ಇವರಿಗೆ ಹುಟ್ಟುವಾಗಲೇ ಅನೇಕ ಯೋಗಶಕ್ತಿಗಳಿದ್ದುವು. ಚಿಕ್ಕಂದಿನಲ್ಲೇ ವ್ಯಾಕರಣ, ನ್ಯಾಯ ಮಿಮಾಂಸೆ, ಜ್ಯೋತಿಷ, ವೇದಾಂತ ಇತ್ಯಾದಿ ಸಕಲಶಾಸ್ತ್ರಾಧ್ಯಯನ, ಶಿಷ್ಯರಿಗೆ ಅಧ್ಯಾಪನ, ಯೋಗಾಭ್ಯಾಸ, ಭಕ್ತಿಯಿಂದ ಭಗವತ್ಪೂಜೆ ಇವರ ದಿನಚರಿಯಾಗಿತ್ತು. ದೇವರು ಒಬ್ಬ ಬ್ರಾಹ್ಮಣನ ರೂಪದಲ್ಲಿ ಬಂದು ಇವರನ್ನು 'ಜೇತಲ್'ಪುರದ ಬಳಿ ಕರೆದೊಯ್ದು ತನ್ನ ರೂಪತೋರಿಸಿ ಮಾಯವಾದನಂತೆ. ಜೇತಲ್‌ಪುರದಲ್ಲೇ ಬ್ರಹ್ಮವಿದ್ಯೆಯ ಆಚರಣೆ ಮಾಡುತ್ತಿದ್ದು ಕಾಲಾಂತರದಲ್ಲಿ ಬರೋಡಾನಗರಕ್ಕೆ ಪ್ರಯಾಣ ಬೆಳೆಸಿದರು. ಅಲ್ಲಿ ಸದಾಶಿವ ಮುಂತಾದ ಸಜ್ಜನರು ಇವರ ಶಿಷ್ಯರಾದರು. ಇವರು ಹೊರಗಡೆ ಊಟಮಾಡುತ್ತಿದ್ದರೆ ಒಳಗೆ ಇಟ್ಟಿದ ದೇವರ ನೈವೇದ್ಯವು ಮಾಯವಾಗುತ್ತಿತ್ತಂತೆ. ಕೆಲವು ಕಾಲಾನಂತರ ಆಚಾರ್ಯ ಸಹಜಾನಂದರ ಸಹವಾಸ ಸಿಕ್ಕಿ ಇವರು ಸನ್ಯಾಸಿಗಳಾದರು. ಹೀಗೆಯೇ ಒಂದುಸಲ ಬರೋಡಾ ಪ್ರಾಂತ್ಯದಲ್ಲಿ ಬರಗಾಲ ಬಂದಾಗ ಇವರು ದೇವರ ಪ್ರಾರ್ಥನೆ ಮಾಡುತ್ತಾ ಬಯಲಲ್ಲೇ ನಿಂತಿದ್ದು ಮೂರುದಿನ ಪೂರ್ತಾ ಒಳ್ಳೆಯ ಮಳೆ ಬರಿಸಿದರಂತೆ.

ಭಾವನಗರಕ್ಕೆ ಒಂದು ಸಲ ಒಬ್ಬ ಸಜ್ಜನನ ಬಳಿ ಮಹಾಭಾರತಪುಸ್ತಕ ತರಲು ಹೋದಾಗ ಅದನ್ನು ಅವನು ಕೊಡಲು ಒಪ್ಪಲಿಲ್ಲ. ಇವರು ವಿವಿಧ ಐಶ್ವರ್ಯಗಳ ಆಸೆ ತೋರಿಸಿದರಂತೆ. ಆದರೂ ಅವನು ಒಪ್ಪದಿದ್ದಾಗ ಇವರು ದೂರದಿಂದಲೇ ಅವನ ಪೂಜೆಯ ವಿಗ್ರಹ ಹಿಮ್ಮುಖವಾಗುವಂತೆ ತಮ್ಮ ಯೋಗಶಕ್ತಿಯಿಂದ ಮಾಡಿದರಂತೆ. ಅವನು ಇವರನ್ನು ಸಾಮಾನ್ಯರಲ್ಲವೆಂದರಿತು ಭಕ್ತಿಯಿಂದ ಪೂಜಿಸಿ ಮಹಾಭಾರತವನ್ನು ಕೊಟ್ಟನಲ್ಲದೆ, ತಾನೂ ಶಿಷ್ಯನಾದ. ಸ್ವಾಮಿಗಳು ಶಾರ್ಙ್ಗಪುರದಲ್ಲಿ ಆಂಜನೇಯನ ಗುಡಿ ಕಟ್ಟಿಸಿ ವಿಗ್ರಹ ಪ್ರತಿಷ್ಠೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾಡಿಸಿ ತಮ್ಮ ಯೋಗಬಲದಿಂದ ಈ ಮೂರ್ತಿಯು ಸ್ವತಃ ಅಟ್ಟಹಾಸ ಮಾಡುವಂತೆ ಮಾಡಿಸಿ ಎಲ್ಲರನ್ನೂ ಚಕಿತಗೊಳಿಸಿದರಂತೆ. ಈಗಲೂ ಈ ಮೂರ್ತಿಯು ಮಹಿಮಾಶಾಲಿಯಾಗಿ ವರಪ್ರದವಾಗಿದೆ ಎನ್ನುತ್ತಾರೆ. ಸೂರತ್‌ನಗರದಲ್ಲಿ ಪಾರಸಿಯವರೊಬ್ಬರ ಮೂಗ ಹುಡುಗನಿಗೆ ಸ್ವಾಮಿ ನಾರಾಯಣನ ಪ್ರಸಾದರೂಪವಾದ ಬಾಳೇಹಣ್ಣನ್ನು ತಿನ್ನಿಸಿ ಮಾತು ಬರಿಸಿದರು. ಇವರು ವೃದ್ಧಾಪ್ಯದಲ್ಲಿ 'ಉಮರೇತ್' ಗ್ರಾಮದಲ್ಲಿ ಜ್ವರಬಂದಂತಾಗಿ ಶಿಷ್ಯ ಮಂಡಲಿಯೊಡನೆ ಅಲ್ಲಿಂದ ಹೊರಟು 'ವಡತಾಲ್' ನಗರಕ್ಕೆ ಬಂದು ಅಲ್ಲಿ ಎಲ್ಲರೂ ನೋಡುತ್ತಿರುವಂತೆಯೇ ಯೋಗಮಹಿಮೆಯಿಂದ ಅಂತರ್ಧಾನವಾದರು. ಇವರು ತಮ್ಮ ಜೀವಿತದಲ್ಲಿ ಅನೇಕ ವಿದ್ವಾಂಸರನ್ನೂ ಸಾಧು ಸನ್ಯಾಸಿಗಳನ್ನೂ ತಯಾರಿಸಿ ದೇಶಕ್ಕೆ ಉಪಕರಿಸಿದ್ದಾರೆ. ಇವರು ಸಂಸ್ಕೃತ ಮಾತ್ರವಲ್ಲದೆ ವಿವಿಧ ಭಾಷೆಗಳಲ್ಲೂ ಜನಸಾಮಾನ್ಯರಿಗಾಗುವಂತೆ ವೇದಾಂತ, ಭಕ್ತಿ, ಪೂಜೆ, ಧರ್ಮ ಮುಂತಾದವಿಷಯಗಳಲ್ಲಿ ಗ್ರಂಥಗಳನ್ನು ಬರೆದಿರುವರು.

ಇವರು "ಜಗತ್ ಪರಮಾತ್ಮಗಳ ಸಂಬಂಧ ; ಶರೀರ-ಶರೀರಿಭಾವ" ಎಂಬ ಪರಮ ವೈದಿಕಸಿದ್ಧಾಂತವನ್ನೇ ತಮ್ಮ ಗ್ರಂಥಗಳಲ್ಲಿ ಪೋಷಿಸಿರುವರು. ರಂಗರಾಮಾನುಜಮುನಿಗಳ ಉಪನಿಷದ್ಭಾಷ್ಯವು ಶಾಸ್ತ್ರಗಹನವಾಗಿದ್ದು ಗೋಪಾಲಾನಂದರಭಾಷ್ಯ ಬಹಳ ಸರಳವಾಗಿಯೂ ಸಹಜವಾಗಿಯೂ ಇರುವುದು. ಹಿಂದುಮುಂದಿನ ವಿಚಾರಗಳಿಗೆ ಪರಸ್ಪರ ಹೊಂದಾಣಿಕೆ ಇರುವುದನ್ನು ಒಪ್ಪುವಂತೆ ತೋರಿಸಿ ಭಾವಾರ್ಥಗಳನ್ನು ರಸಪತ್ತಾಗಿ ವ್ಯಾಖ್ಯಾನಿಸಿರುವುದರಿಂದ ಇವರ ಪಾಂಡಿತ್ಯಕುಶಲತೆ ಹಾಗೂ ಯೋಗಸಿದ್ಧಿಗಳ ಪ್ರಭಾವ ಇವರ ಗ್ರಂಥಗಳಲ್ಲಿ ಎದ್ದು ಕಾಣುವುದು. ಇವರ ಚರಿತ್ರಾದಿಗಳ ಬಗ್ಗೆ ಸಂಸ್ಕೃತದ 'ಸತ್ಸಂಗಿಜೀವನ' ಎಂಬ ಸಜ್ಜನ ಚರಿತ್ರಸಂಗ್ರಹರೂಪವಾದ ಗ್ರಂಥದ ಐವತ್ತೈದನೆಯ ಅಧ್ಯಾಯ ನೋಡಿ ತಿಳಿಯಬಹುದು.[1]

ಇವರ ಗ್ರಂಥಗಳು :

ಈಶಾದಿದಶೋಪನಿಷದ್ಭಾಷ್ಯಮ್ (ಸುಬೋಧಿನೀ) ; ಭಗವದ್ಗೀತಾಭಾಷ್ಯಮ್ ; ಬ್ರಹ್ಮಸೂತ್ರದೀಪಿಕಾ ; ಶಂಕಾಭಿಪ್ರಾಯಬೋಧಿಕಾ (ಭಾಗವತ ದ್ವಿತೀಯಸ್ಕಂಧವ್ಯಾಖ್ಯಾ) ನಿಗೂಢಾರ್ಥಪ್ರಕಾಶಿಕಾ ; (ಭಾಗವತ ದಶಮಸ್ಕಂಧವ್ಯಾಖ್ಯಾ) ; ಶ್ರೀಕೃಷ್ಣಾಭಿಪ್ರಾಯ ಪ್ರಬೋಧಿನೀ (ಶ್ರೀಭಾಗವತೈಕಾದಶಸ್ಕಂಧವ್ಯಾಖ್ಯಾ) ; ಅನ್ವಯಾರ್ಥ ಪ್ರಕಾಶಿಕಾ (ವೇದಸ್ತುತಿ ವ್ಯಾಖ್ಯಾ) ; ಶ್ರುತ್ಯರ್ಥದೀಪಿಕಾ (ವೇದಸ್ತುತಿವ್ಯಾಖ್ಯಾ) ; ವಿವೇಕದೀಪಃ ; ಭಕ್ತಿಸಿದ್ಧಿಃ ; ಹರಿಭಕ್ತನಾಮರತ್ನಾವಲೀ ; ವಿಷ್ಣುಯಾಗಪದ್ಧತಿಃ ; ಧರ್ಮದೇವಪೂಜಾವಿಧಿಃ ; ಭಕ್ತಿದೇವೀ ಪೂಜಾವಿಧಿಃ ; ಪುರಾಣೋಕ್ತ ಶ್ರೀಕೃಷ್ಣಪೂಜಾ ; ಹನುಮತ್ಪೂಜಾವಿಧಿಃ ಇನ್ನೂ ಅನೇಕ ಹಿಂದೀ ಗುಜರಾತೀ ಭಾಷೆಯ ಗ್ರಂಥಗಳು.

---

1. ಆಧಾರಗ್ರಂಥ : ಈಶಾದಿದಶೋಪನಿಷದ್ಭಾಷ್ಯ. ಸಂ.—ಎಂಬಾರ್ ಕೃಷ್ಣಮಾಚಾರ್ಯ, ನಿರ್ಣಯಸಾಗರ ಪ್ರೆಸ್, ಮುಂಬಯಿ, ಕ್ರಿ.ಶ. 1932. ಪ್ರಸ್ತಾವನೆ, ಪುಟ, 39–46 ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೪. ಭಾರದ್ವಾಜರಾಮಾನುಜಾಚಾರ್ಯ

ಹೆಸರು : ಶ್ರೀಭಾಷ್ಯಂರಾಮಾನುಜಾಚಾರ್ಯ. ದೀಕ್ಷೆಕೊಟ್ಟಗುರು ಇಟ್ಟ ಹೆಸರು ತಿರುವಾಯ್‌ಮೊಳಿಪ್ಪಿಳ್ಳೈ. ಬಾಲ್ಯದ ಹೆಸರು 'ರಾಮಾನುಜಯ್ಯ' ವಿದ್ಯಾಗುರುವಿನಿಂದ ಬಂದಂದು 'ಶ್ರೀಭಾಷ್ಯಂ' ಎಂಬ ಬಿರುದು.

ಕುಲ, ಗೋತ್ರ : ನಿಯೋಗಿಬ್ರಾಹ್ಮಣಕುಲ, ಭಾರದ್ವಾಜಗೋತ್ರ, ನುರ್ಲಪಾಟಿವಂಶ.

ಬಂಧು-ಮಿತ್ರರು : ತಂದೆ-ಜಗನ್ನಾಥಾಚಾರ್ಯ. ವಿದ್ಯಾಗುರು-ಶ್ರೀಭಾಷ್ಯಂನರಸಿಂಹಾಚಾರ್ಯ. ದೀಕ್ಷಾಗುರು-ಶ್ರೀವತ್ಸಶ್ರೀನಿವಾಸಾಚಾರ್ಯ.

ಕಾಲ : ಕ್ರಿ.ಶ. 1790 ರಿಂದ 1880 (ಸುಮಾರು)

ದೇಶ : ಹುಟ್ಟೂರು ಮತ್ತು ವಾಸ ಆಂಧ್ರದ ಮಂಗಳಾದ್ರಿ ಕ್ಷೇತ್ರದ ಬಳಿ ಹಳೆಯ ಮಂಗಳಗಿರಿ ಗ್ರಾಮ.

ವಿಶೇಷ : 'ಪುರುಷಸೂಕ್ತ'ಕ್ಕೆ ರಂಗರಾಮಾನುಜಮುನಿಗಳು ಭಾಷ್ಯ ಬರೆದಿಲ್ಲವಾಗಿ ಪೂರ್ವಾಚಾರ್ಯರ ಭಾಷ್ಯವನ್ನೇ ಅನುಸರಿಸಿ ವಿವರಿಸುತ್ತಿರುವುದಾಗಿ ಇವರು ತಮ್ಮ ತೈತ್ತಿರೀಯ ಭಾಷ್ಯದಲ್ಲಿ ತಿಳಿಸಿರುವರು.[1] ಇವರ ಕಾಲದವರು 'ವೈಷ್ಣವೇಷ್ಟಿ' ಎಂಬ ಮಹಾಯಾಗವನ್ನು ನಡೆಸಿ ವೈಷ್ಣವದೀಕ್ಷೆ ಪಡೆದರಂತೆ.

ಕೃತಿಗಳು :

- ಪರಮವೈದಿಕಸಿದ್ಧಾಂತ
- ಸರ್ವವೇದಾಂತಸಾರಾರ್ಥ
- ಶಿಷ್ಟಾದ್ವೈತಿಜನಾಚಾರ
- ಶಿಷ್ಟಶ್ರೀವೈಷ್ಣವಾಚಾರ
- ಸೀತಾಕಲ್ಯಾಣಸರ್ಗವ್ಯಾಖ್ಯಾನ
- ಶ್ರೀರಾಮಜನನಶ್ಲೋಕವ್ಯಾಖ್ಯಾನ
- ಶ್ರೀಕೃಷ್ಣಜನನಶ್ಲೋಕವ್ಯಾಖ್ಯಾನ
- ವಿಷ್ಣುಪುರಾಣಪ್ರಥಮಪದ್ಯವ್ಯಾಖ್ಯಾನ
- ಜ್ಯೋತಿಷ ಭಾವಾರ್ಥನಿಧಿ
- ಆಂಧ್ರದೇಶೀಯವಿಪ್ರಚರಿತಂ
- ಉಪಮಾವಾದ
- ದಶೋಪನಿಷತ್ ಪದಾರ್ಥದೀಪಿಕಾ
- ಶ್ರೀವತ್ಸವಂಶತಿಲಕಶ್ಲೋಕವ್ಯಾಖ್ಯಾನ

---

1. ಈ ವಿಷಯಗಳನ್ನು ಓರಂಗಲ್ಲಿನ ವಿದ್ವಾನ್ ತಿ. ನ. ಚ. ರಘುನಾಥಾಚಾರ್ಯರೂ, ಬಾಪಟ್ಲಾದ ಕೆ. ಇ. ಟಿ. ರಾಮಾನುಜಾಚಾರ್ಯರೂ ತಿಳಿಸಿ ಉಪಕರಿಸಿರುವರು.
ದಶೋಪನಿಷದ್ವ್ಯಾಖ್ಯಾನಮ್, ವಿವೇಕಕಳಾನಿಧಿ ಪ್ರೆಸ್. ಪ್ರಕಾಶಕರು-ಯನಮದಲ ವೆಂಕಟಾಚಾರ್ಯ, 1875.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೮

ಉಲ್ಲೇಖಕಾರರ ಚರಿತ್ರೆ

೧. ಭಗವದ್ರಾಮಾನುಜ[1]

ಹೆಸರು : ರಾಮಾನುಜ, ರಾಮಾನುಜಾಚಾರ್ಯ, ಶ್ರೀಭಾಷ್ಯಕಾರ, ಲಕ್ಷ್ಮಣಾರ್ಯ, ಲಕ್ಷ್ಮಣ ಮುನಿ, ಯತಿರಾಜ, ಇಳೈಯಾಳ್ವಾರ್, ಇರಾಮಾನುಶನ್, ಎಂಬೆರುಮಾನಾರ್, ಉಡೈಯವರ್, ತಿರುಪ್ಪಾವೈಜೀಯರ್, ಕೋಯಿಲಣ್ಣನ್, ಶಠಕೋಪನ್‌ಪೊನ್ನಡಿ, ಭೂತಪುರೀಂದ್ರ, ದೇಶಿಕೇಂದ್ರ, ರಾಮಾನುಜಭಟ್ಟರ್, ಭವಿಷ್ಯದಾಚಾರ್ಯ, ಕೃಪಾಮಾತ್ರಪ್ರಸನ್ನಾಚಾರ್ಯ ಇತ್ಯಾದಿ.

ಬಿರುದು : ಶ್ರೀಮದ್ವೇದಮಾರ್ಗಪ್ರತಿಷ್ಠಾಪನಾಚಾರ್ಯ, ಉಭಯವೇದಾಂತಾಚಾರ್ಯ, ಮಾಯಾವಾದಿಕೋಲಾಹಲ, ಮಂತ್ರವಾದಿ ಭಯಂಕರ, ಅಭಂಗಗರುಡಾಂಕ, ನಾರಾಯಣ ಪಾದಪದ್ಮಾರಾಧಕ, ಶ್ರೀರಂಗೇಶಜಯಧ್ವಜ ಇತ್ಯಾದಿ.

ಕುಲ, ಗೋತ್ರ : ಹಾರೀತಗೋತ್ರ. ಆಪಸ್ತಂಬಸೂತ್ರ, ಯಜುಶ್ಶಾಖೆ, ವಡಮಕುಲ, ಆಸೂರಿವಂಶ.

ಬಂಧು-ಮಿತ್ರರು : ತಂದೆ–ಕೇಶವಸೋಮಯಾಜಿ, ತಾಯಿ–ಕಾಂತಿಮತಿ, ಸೋದರಮಾವ-ಶ್ರೀಶೈಲಪೂರ್ಣ. ಅಕ್ಕ–ನಾಚ್ಚಿಯಾರಮ್ಮ, ಅವಳ ಮಗ–ಮುದಲಿಯಾಂಡಾನ್ ತಂಗಿ–ಪೆರುಂದೇವಿ. ಅವಳ ಮಗ–ನಡಾದೂರಾಳ್ವಾನ್. ಚಿಕ್ಕಮ್ಮ–ಶ್ರೀದೇವಿ ಮತ್ತು ನೀಳಾದೇವಿ, ಅವರ ಮಕ್ಕಳು-ಎಂಬಾರ್, ಇಳೈಯವಿಲ್ಲಿ. ಪತ್ನಿ–ಆಂಡಾಳ್, ತಂಜೈ ಅಥವಾ ಲಕ್ಷ್ಮಿ. ಅವಳ ಮಕ್ಕಳು-ಎಮ್ಮಾನ್, ಪೆಮ್ಮಾನ್, ಜ್ಞಾನಪುತ್ರ–ಶ್ರೀಶೈಲಪೂರ್ಣರ ಮಗನಾದ ತಿರುಕ್ಕುರುಹೈಪ್ಪಿರಾನ್‌ಪಿಳ್ಳಾನ್.

ಆಚಾರ್ಯರು : ಸಾಮಾನ್ಯಶಾಸ್ತ್ರಗುರು–ಯಾದವಪ್ರಕಾಶ, ದರ್ಶನಾಚಾರ್ಯರು–ಮಹಾಪೂರ್ಣ. ಗೋಷ್ಠೀಪೂರ್ಣ, ಶ್ರೀಶೈಲಪೂರ್ಣ, ಮಾಲಾಧರಾರ್ಯ, ಶ್ರೀವರರಂಗ ಎಂಬ ಐವರು. ವಿಶೇಷರಹಸ್ಯಾಚಾರ್ಯರು–ಕಾಂಚೀಪೂರ್ಣ. ಪರಮಾಚಾರ್ಯರು–ಯಾಮುನಮುನಿ. ಸನ್ಯಾಸ ದೀಕ್ಷಾಗುರು–ಸಾಕ್ಷಾತ್ ಕಂಚಿ ವರದರಾಜಸ್ವಾಮಿ.

ಶಿಷ್ಯರು : ಕೂರತ್ತಾಳ್ವಾನ್, ಮುದಲಿಯಾಂಡಾನ್ ಇಬ್ಬರೂ ತ್ರಿದಂಡ ಪವಿತ್ರಗಳಂತೆ ಪ್ರಧಾನ ಶಿಷ್ಯರು. ವ್ಯಾಕರಣ, ವೇದಾಂತ ವಿಚಾರಗಳಿಗೂ ಬರವಣಿಗೆಗೂ ಮಠದ ಹಣಕಾಸು

1. ಆಧಾರಗ್ರಂಥಗಳು : ಗುರುಪರಂಪರಾಪ್ರಭಾವ, ಪೆರಿಯ ತಿರುಮುಡಿ ಅಡೈವು ಮತ್ತು ಶಿಷ್ಯ ಪ್ರಶಿಷ್ಯರ ಗ್ರಂಥಗಳು, ಪ್ರಪನ್ನಾಮೃತ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದವಸ ಧಾನ್ಯಗಳ ಜವಾಬ್ದಾರಿಗೂ ಕೂರತ್ತಾಳ್ವಾನ್. ತರ್ಕಸಂಪ್ರದಾಯ ಲೌಕಿಕ ವ್ಯವಹಾರಗಳಿಗೂ ಗೋಷ್ಠಿಯಲ್ಲಿ ಮಣೇಗಾರಿಕೆಗೂ ದೇವರಪೂಜೆಯಸಹಾಯಕ್ಕೂ ಪಾದುಕೆಗಳ ರಕ್ಷಣೆಗೂ ಮುದಲಿಯಾಂಡಾನ್. ದೇಶಾಂತರಗಳಲ್ಲಿಸಂಚಾರ, ಪ್ರಚಾರ, ಪೂರ್ವಸಿದ್ಧತೆ, ಮುನ್ನಡೆಗಳಿಗೆ ಶ್ರೀಪಾದದಂತಹ ಅನಂದಾಳ್ವಾನ್. ದೇವರ ಪೂಜೆಗೆ ಅರುಳಾಳಪ್ಪೆರುಮಾಳ್ ಎಂಬೆರುಮಾನಾರ್. ರಾಮಾನುಜರ ದೈಹಿಕವಾದ ಸ್ನಾನ, ವಸ್ತ್ರ, ಹಾಸಿಗೆಗಳ ಜವಾಬ್ದಾರಿ, ಅಂಗರಕ್ಷಣೆ ಮತ್ತು ಹಸ್ತಾವಲಂಬನ ಕೆಲಸಗಳಿಗೂ, ಅನುಭಾವಿಕ ವಿಚಾರಗಳಿಗೂ, ಎಂಬಾರ್. ಅಡಿಗೆ, ಭಿಕ್ಷೆ ಪ್ರಸಾದಿಸುವುದು, ವಾದ-ವಿವಾದ, ಇತ್ಯಾದಿಗಳಿಗೆ ಕಿಡಾಂಬಿ ಆಚ್ಚಾನ್. ಓಂಕಾರ, ಉಪನಿಷತ್, ಧ್ಯಾನ, ಉಪಾಸನೆ, ದಿನಚರಿಲೇಖನಗಳಿಗೆ ಕುಮಾಂಡೂರ್ ಇಳೈಯವಿಲ್ಲಿ. ಆಧ್ಯಾತ್ಮಿಕ ಮತ್ತು ಲೌಕಿಕ ವ್ಯವಹಾರಗಳಿಗೆ ನಡಾದೂರಾಳ್ವಾನ್. ಸಂದೇಶಗಳನ್ನು ತಲುಪಿಸುವುದು ತರುವುದು ಇತ್ಯಾದಿಗಳಿಗೆ ಕಿರಿಯಮಾರುತಿಯಾಂಡಾನ್. ದೇವರ ಪ್ರಸಾದಗಳನ್ನು ವಿನಿಯೋಗಿಸಲೂ ಭಕ್ಷ್ಯಭೋಜ್ಯಾದಿಗಳು ಪೋಲಾಗದಂತೆ ನೋಡಿಕೊಳ್ಳಲೂ ಮಂಗಿಪುರತ್ತ್‌ನಂಬಿ. ಹಾಲು-ಮೊಸರುಗಳ ಜವಾಬ್ದಾರಿಗೂ ಅಂಗರಕ್ಷಣೆಗೂ ವಡುಹನಂಬಿ. ಉಭಯವೇದಾಂತಗಳಲ್ಲೂ ವಿವಿಧ ಶಿಷ್ಯರನ್ನು ತಯಾರಿಸಲು ರಾಮಾನುಜರ ಜ್ಞಾನಪುತ್ರರೆನಿಸಿದ ತಿರುಕ್ಕುರುಹೈಪ್ಪಿರಾನ್‌ಪಿಳ್ಳಾನ್. ಹೀಗೆ 74 ಆಚಾರ್ಯಪುರುಷ ಸಿಂಹಾಸನಾಧಿಪತಿಗಳು ಪ್ರಧಾನ ಶಿಷ್ಯರು. ಇದೂ ಅಲ್ಲದೆ ಜನಿವಾರ ಧರಿಸಿದ 12 ಸಾವಿರ ಏಕಾಂತಿ ಶ್ರೀವೈಷ್ಣವರೂ, ಏಳನೂರು ಸನ್ಯಾಸಿಗಳೂ, ಜನಿವಾರ ಧರಿಸದ ಲಕ್ಷಗಟ್ಟಳೆ ಶ್ರೀವೈಷ್ಣವರೂ ಸಾಧ್ವಿಯರೂ ನಾಮಧಾರಿಗಳಾದ ಕ್ಷತ್ರಿಯ-ಶೂದ್ರಾದಿಗಳೂ, ಮ್ಲೇಚ್ಛರೂ, ಹರಿಜನರೂ ಭಾರತಾದ್ಯಂತ ರಾಮಾನುಜರ ಶಿಷ್ಯರು.

ಕರ್ನಾಟಕದ ಕೊಂಗುನಾಡಿನಲ್ಲಿ ತಿರುಮಲೈನಲ್ಲಾನ್, ಮಿಳಹಾಳ್ವಾನ್, ಬಯಲುನಾಡಿನಲ್ಲಿ ಮಾರುತಿಯಾಂಡಾನ್, ಎಚ್ಚಾನ್, ಗಂಗನಾಡಿನಲ್ಲಿ ಅನಂದಾಳ್ವಾನ್, ತೊರೆನಾಡಿನಲ್ಲಿ ಸಾಲಗ್ರಾಮಅಯ್ಯಾನ್, ವಡುಹನಂಬಿ, ಹೊಯ್ಸಳನಾಡಿನಲ್ಲಿ ಸೋಮಾಸಿಯಾಂಡಾನ್, ಅರುಣಪ್ಪುರತ್ತಾಳ್ವಾನ್, ಶಿರಿಯಾಚ್ಚಾನ್, ಕುರುಮಂಕನಾಡಿನಲ್ಲಿ ತೊಂಡನೂರ್‌ನಂಬಿ, ನಂಬಿಯೂರಿಲ್ ಶ್ರೀರಂಗರಾಜಭಟ್ಟರ್, ಪಿಳ್ಳೈತಿರುನಾರಾಯಣಪುರತ್ತ್ ಅರೆಯರ್, ಕಲ್ಕುಣಿನಾಡಿನಲ್ಲಿ ಮರುದೂರ್‌ನಂಬಿ, ಮುಳುವೂರ್‌ನಂಬಿ, ಮಿಳಹಾಳ್ವಾನ್, ವೆಂಗಿನಾಡಿನಲ್ಲಿ ಮಂಗಿಪುರತ್ತ್ ನಂಬಿ, ಘಟ್ಟಸೀಮೆಯಲ್ಲಿ ನಡುವಿಲಾಳ್ವಾನ್, ಮುಂತಾದವರು ಆಚಾರ್ಯಪೀಠಗಳನ್ನು ರಕ್ಷಿಸಿ ಸಿದ್ಧಾಂತವನ್ನು ಮುನ್ನಡೆಸಿದವರು. ಹೊಯ್ಸಳನಾಡಿಗೆ ಅಮ್ಮಂಗಿಯಾಳ್ವಾನ್ ಮುಂತಾದವರು ಶಿಷ್ಯಪ್ರತಿನಿಧಿಗಳು. ಪರ್ತಿಕ್ಕೊಲ್ಲೈ (ಹರ್ತಿಕೋಟೆ) ಅಮ್ಮಾಳ್, ಕೊಂಗಿಲ್‌ಪಿರಾಟ್ಟಿ, ಅಮ್ಮಂಗಿಅಮ್ಮಾಳ್. ಮುಂತಾದವರು ಕರ್ನಾಟಕದ ಸಾಧ್ವೀ ಸ್ತ್ರೀಸಮಾಜದ ಶಿಷ್ಯಪ್ರತಿನಿಧಿಗಳು, ಮಹಾರಾಜ ವಿಷ್ಣುವರ್ಧನ, ವಿಠ್ಠಲದೇವ, ಮಾಧವದಂಡನಾಯಕ, ಅಲ್ಲಾಳನಾಥ ಮುಂತಾದವರು ಕರ್ನಾಟಕದ ಕ್ಷತ್ರಿಯ ಶಿಷ್ಯಪ್ರತಿನಿಧಿಗಳು. ಪುಂಡರೀಕದಾಸ ಮುಂತಾದವರು ಜನಿವಾರ ಧರಿಸದ ಕರ್ನಾಟಕ ಶ್ರೀವೈಷ್ಣವಪ್ರತಿನಿಧಿಗಳು.

ಕಾಲ : ಅವತಾರ ಕ್ರಿ.ಶ. 1017 ಪಿಂಗಳ ಸಂವತ್ಸರ ಚೈತ್ರ ಶುಕ್ಲ ಪಂಚಮಿ, ಗುರುವಾರ ಆರ್ದ್ರಾನಕ್ಷತ್ರ, ಮೇಷಮಾಸ ತೇದಿ 13, ಆಯುಷ್ಮದ್‌ಯೋಗ, ಭದ್ರಕರಣ, ಕರ್ಕಾಟಕ ಲಗ್ನ ; ಪರಮಪದ-ದುರ್ಮತಿಸಂವತ್ಸರ, ಮಾಘಶುಕ್ಲ ದಶಮಿ, ಶನಿವಾರ ಆರ್ದ್ರಾನಕ್ಷತ್ರ ಅಥವಾ ಆಶ್ಲೇಷಾನಕ್ಷತ್ರ, ಮಧ್ಯಾಹ್ನ. ಜೀವಿತಕಾಲ-124 ವರ್ಷ 10 ತಿಂಗಳು 5 ದಿವಸ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೇಶ : ಹುಟ್ಟೂರು–ತೊಂಡೈನಾಡಿನ ಶ್ರೀಪೆರುಂಪೂದೂರು. ವಾಸ–ಕಂಚಿ, ತಿರುಪತಿ, ಮೇಲುಕೋಟೆ, ಶ್ರೀರಂಗ ಇತ್ಯಾದಿ. ಸಮಾಧಿ–ಶ್ರೀರಂಗದಲ್ಲಿ ರಂಗನಾಥಮಂದಿರ ಪ್ರಾಕಾರ.

ವಿಶೇಷ : ಇವರು ಆದಿಶೇಷನ ಅವತಾರ, ಪಂಚಾಯುಧಾಂಶ, ವಿಷ್ವಕ್ಸೇನಾಂಶ. ಇವರು ತಮ್ಮ 83ನೆಯ ವಯಸ್ಸಿನಲ್ಲಿ ತಾವೇ ಮಾಡಿಸಿದ ಪಂಚಲೋಹದ 'ತಾನುಂಹಂದತಿರುಮೇನಿ' ಸ್ವಂತ ವಿಗ್ರಹವು ಮೇಲುಕೋಟೆಯಲ್ಲೂ, ಇವರ ಸಮಾಧಿಗೆ ಕೆಲವು ದಿವಸ ಮೊದಲು ಕಂದಾಡೈಆಂಡಾನ್ ಮಾಡಿಸಿದ 'ತಮರುಂಹಂದತಿರುಮೇನಿ' ಎಂಬ ಸ್ವಂತ ವಿಗ್ರಹವು ಶ್ರೀಪೆರುಂಪೂದೂರಿನಲ್ಲೂ ಇದೆ. ಶ್ರೀರಂಗದ ಇವರ ಸಮಾಧಿಯಲ್ಲಿ 'ತಾನಾನತಿರುಮೇನಿ' ಶ್ರೀಗಂಧಸುಧಾಲೇಪಿತವಾದ ದಿವ್ಯಶರೀರವು ಇದೆ.

ಸಾಧನೆಗಳು : ಕಂಚಿವರದರಾಜಸ್ವಾಮಿಗೆ ತೀರ್ಥಸೇವೆ, ದಿವ್ಯವಿಚಾರಗಳ ಸಂಗ್ರಹಣೆ, ಭಗವದ್ ಭಾಗವತಾಚಾರ್ಯ ಸೇವೆಗಳಿಗೆ ವಿರೋಧವಾದ ಕಾರಣ ಪತ್ನೀಪುತ್ರರ ತ್ಯಾಗ, ಸನ್ಯಾಸ, ಶ್ರೀವೈಷ್ಣವ ಸಾಮ್ರಾಜ್ಯ ಪೀಠಾಧಿಪತಿಗಳಾಗಿದ್ದ ಆಳವಂದಾರವರ ಮೂರು ಇಷ್ಟಾರ್ಥಗಳನ್ನು ನೆರವೇರಿಸಿದುದು.

1. ಬ್ರಹ್ಮಸೂತ್ರಗಳಿಗೆ ಪ್ರಾಚೀನರ ಅಭಿಪ್ರಾಯ ಅನುಸರಿಸಿ ಸರಿಯಾದ ಭಾಷ್ಯ ರಚನೆ. (2) ದಿವ್ಯಪ್ರಬಂಧಗಳಿಗೆ ವ್ಯಾಖ್ಯಾನ. (3) ವ್ಯಾಸ, ಪರಾಶರಮಹರ್ಷಿಗಳ ತತ್ವ ಪ್ರಚಾರ. ಗುರುಗಳಾದ ಯಾದವಪ್ರಕಾಶರು ಇವರ ವಿದ್ಯೆ ಗುಣ ಮಹಿಮೆಗಳಿಂದ ಶಿಷ್ಯ ರಾದುದು. ಭಾರತಾದ್ಯಂತ ಮೂರು ಸಲ ಯಾತ್ರೆ ಮಾಡಿ 'ವಿಶಿಷ್ಟಾದ್ವೈತ' ದರ್ಶನವನ್ನು ಸ್ಥಿರಪಡಿಸಿದುದು. ಆಂಧ್ರದ ಶ್ರೀಕೂರ್ಮಕ್ಷೇತ್ರದ ಉದ್ಧಾರ, ಬದರಿ, ನೇಪಾಳ, ಸಾಲಿಗ್ರಾಮ ಗಳ ಉದ್ಧಾರ, ತಿರುಕ್ಕುರುಂಕುಡಿ ದೇವರನ್ನೂ ಶಿಷ್ಯರನ್ನಾಗಿಸಿದುದು. 108ಕ್ಕಿಂತ ಅಧಿಕ ದಿವ್ಯಕ್ಷೇತ್ರಗಳನ್ನು ಉದ್ಧಾರ ಮಾಡಿದುದು. ಕಾಶಿಯ ಘನವಿದ್ವಾಂಸರಾದ ಯಜ್ಞಮೂರ್ತಿ ಗಳು ಇವರಿಗೆ ಸೋತು ಶಿಷ್ಯರಾದುದು. ಕಾಶ್ಮೀರದ ಶಾರದಾಪೀಠದಲ್ಲಿ ಸರಸ್ವತಿಯಿಂದ ಶ್ರೀಭಾಷ್ಯಕಾರರೆಂದು ಸನ್ಮಾನಿತರಾಗಿ ಪ್ರಾಚೀನ ಬೋಧಾಯನರ ವೃತ್ತಿಗ್ರಂಥವನ್ನು ಗ್ರಹಿಸಿ ಶ್ರೀಭಾಷ್ಯಗ್ರಂಥವನ್ನು ಬರೆದು ವೇದಾಂತ ಪ್ರಪಂಚದಲ್ಲಿ ಒಂದು ಹೊಸ ಶಕಪ್ರವರ್ತಕರಾದುದು. ಚೋಳಬಾಧೆಯ ನೆಪದಿಂದ ಕರ್ಣಾಟಕಕ್ಕೆ ಬಂದು ಮಿರ್ಲೆ ಸಾಲಿಗ್ರಾಮದಲ್ಲಿ ತಮ್ಮ ಪಾದುಕೆ ತೀರ್ಥಗಳನ್ನು ಸ್ಥಾಪಿಸಿದುದು. ದಿಲ್ಲಿ–(ದೂರದೇಶ)ಯಿಂದ 'ಚಲುವನಾರಾಯಣ' ಮೂರ್ತಿ ಯನ್ನು ತಂದು ಸ್ಥಾಪಿಸಿ ಮೇಲುಕೋಟೆಯ ಜೀರ್ಣೋದ್ಧಾರ ಮಾಡಿದುದು. ತೊಣ್ಣೂರಿನಲ್ಲಿ 12 ಸಾವಿರ ಜೈನರನ್ನು ಜಯಿಸಿ ತಮ್ಮ ಆದಿಶೇಷಾವತಾರ ತೋರಿಸಿದುದು. ತಿರುಪತಿಯ ಶ್ರೀನಿವಾಸರಿಗೆ ಶಂಖ–ಚಕ್ರ ಸಮರ್ಪಣೆ ಮಾಡಿ ಬಹಳ ವರ್ಷಗಳಿಂದ ನಡೆದಿದ್ದ ವಿವಾದ ಪರಿಹರಿಸಿದುದು. ಗೋವಿಂದರಾಜಪಟ್ಟಣ ಮತ್ತು ಪಕ್ಕದ ಮಂಡಿಯಂ ಅಗ್ರಹಾರಗಳ ಸ್ಥಾಪನೆ. ಶೋಲೈಮಲೆಯ ಅಳಹರ್ ದೇವರಿಗೆ ಮಹಾನೈವೇದ್ಯ ಸಮರ್ಪಣೆ. ಗೋದಾ ದೇವಿಯ ತಿರುಪ್ಪಾವೈಯ ಪ್ರಚಾರ. ಶ್ರೀರಂಗದಲ್ಲಿ ದೇವಾಲಯ ವ್ಯವಸ್ಥೆಗಾಗಿ 10 ಬ್ರಾಹ್ಮಣ 10 ಬ್ರಾಹ್ಮಣೇತರ ವ್ಯಕ್ತಿಗಳನ್ನು ನಿಯಮಿಸಿ, ಧನ್ವಂತರಿ ಪ್ರತಿಷ್ಠೆ ಮಾಡಿ ಸಾರ್ವಜನಿಕ ವೈದ್ಯಶಾಲೆ ನಡೆಸಿದುದು. ಸಿದ್ಧಾಂತ ರಕ್ಷಣೆಗಾಗಿ ಆಚಾರ್ಯಪುರುಷರ 74 ರಹಸ್ಯತ್ರಯಪೀಠ ಸ್ಥಾಪನೆ, ವಿಶೇಷತಃ ಇದರಲ್ಲಿ ನಾಲ್ಕು ಶ್ರೀಭಾಷ್ಯಪೀಠ, ಇವುಗಳ ಅಧಿಪತಿ ಕಿಡಾಂಬಿ ಆಚ್ಚಾನ್,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಡಾದೂರಾಳ್ವಾನ್, ಮುದಲಿಯಾಂಡಾನ , ತಿರುಕ್ಕುರುಹೈಪ್ಪಿರಾನ್ ಪಿಳ್ಳಾನ್. ಇದರಲ್ಲೂ ಉಭಯವೇದಾಂತಪೀಠ ಒಂದಕ್ಕೆ ತಮ್ಮ ಜ್ಞಾನಪುತ್ರರಾದ ತಿರುಕ್ಕುರುಹೈಪ್ಪಿರಾನ್‌ಪಿಳ್ಳಾನ್ ಒಬ್ಬರನ್ನೇ ನಿಯಮಿಸಿದುದು. ಇತ್ಯಾದಿ.

ಕೃತಿಗಳು :

ವೇದಾರ್ಥಸಂಗ್ರಹ (ತಿರುಪತಿಯಲ್ಲಿ)	ಗದ್ಯತ್ರಯ (ಶ್ರೀರಂಗದಲ್ಲಿ)
ಗೀತಾಭಾಷ್ಯ (ಪ್ರಾಯಶಃ ಕಾಂಚೀಪುರದಲ್ಲಿ)	ನಿತ್ಯಗ್ರಂಥ (ಶ್ರೀರಂಗದಲ್ಲಿ)
ವೇದಾಂತಸಾರ (ಪ್ರಾಯಶಃ ಕಾಂಚೀಪುರದಲ್ಲಿ)	ದಿವ್ಯಪ್ರಬಂಧಾರ್ಥ
ಶ್ರೀಭಾಷ್ಯ (ಶ್ರೀರಂಗದಲ್ಲಿ)	ನಿರ್ವಾಹಗಳು (ವಿವಿಧಗ್ರಂಥಗಳಲ್ಲಿ ಉದ್ಧೃತ)
ವೇದಾಂತದೀಪ (ಪ್ರಾಯಶಃ ಮೇಲುಕೋಟೆಯಲ್ಲಿ)	ಮುಕ್ತಕಪದ್ಯಗಳು, ಇತ್ಯಾದಿ (ವಿವಿಧ ಗ್ರಂಥಗಳಲ್ಲಿ ಮತ್ತು ಬಳಕೆಯಲ್ಲಿ)
ವಾರ್ತಾಮಾಲೆಗಳು (ಶಿಷ್ಯರಿಂದ ಸಂಗ್ರಹೀತ)	

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೨. (ಕೂರ) ನಾರಾಯಣಮುನಿ[1]

ಹೆಸರು : ಕೂರನಾರಾಯಣಜೀಯರ್, ನಾರಾಯಣಮುನಿ, ಶ್ರೀರಂಗನಾರಾಯಣ ಜೀಯರ್, ನಲಂತಿಹಳ್ ನಾರಾಯಣಜೀಯರ್, ನಾರಾಯಣಮುನೀಂದ್ರ.

ಬಿರುದು : ಸರ್ವಜ್ಞಚೂಡಾಮಣಿ.

ಕುಲ-ಗೋತ್ರ : ಕುಲ-ವಡಮ. ಗೋತ್ರ-ಭಾರದ್ವಾಜ, ಆಪಸ್ತಂಬಸೂತ್ರ. ತೈತ್ತಿರೀಯ ಶಾಖೆ, ಮನೆತನ-ವಟ್ಟಮಣಿ.

ಬಂಧು-ಮಿತ್ರರು : ರಾಮಾನುಜರ ಚಿಕ್ಕಮ್ಮನ ಮಗ ಚಿಕ್ಕ ಎಂಬಾರ್‌ಗೆ ಇವರು ಮರಿಮಗನಮಗ. ಮಿತ್ರರು-ಪಿಳ್ಳೈಪಿಳ್ಳೈಆಳ್ವಾನ್, ಪಿಳ್ಳೈ ಪೆರುಮಾಳ್ ಅಯ್ಯಂಗಾರ್. ನಂಜೀಯರ್, ಅಮ್ಮಣಿಯಾಳ್ವಾನ್, ವಿಳಪ್ಪರೆಯರ್ ಇತ್ಯಾದಿ. ಆಚಾರ್ಯರು-ಪರಾಶರಭಟ್ಟರು. ಶಿಷ್ಯ ಪ್ರಶಿಷ್ಯರು–ಶೇಮಂಜೀಯರ್, ಸುಂದರಪಾಂಡ್ಯದೇವ, ತಿರುಕ್ಕುರುಹೈಜೀಯರ್, ಮುನಿಜೀಯರ್ ಇತ್ಯಾದಿ.

ಕಾಲ : ಕ್ರಿ.ಶ. 12ನೆಯ ಶತಮಾನ. ಅವತಾರ–ಮಾರ್ಗಶಿರಮಾಸ, ಜ್ಯೇಷ್ಠಾ ನಕ್ಷತ್ರ.

ದೇಶ : ಹುಟ್ಟಿದ ಊರು 'ಕೂರ' ಅಗ್ರಹಾರ. ವಾಸಸ್ಥಳ-ಶ್ರೀರಂಗ. ಸಮಾಧಿ-ಶ್ರೀರಂಗ.

ಸಾಧನೆಗಳು : ರಾಮಾನುಜರು ಕಟ್ಟಿದ ಶ್ರೀರಂಗಕ್ಷೇತ್ರ ಸಾಮ್ರಾಜ್ಯವನ್ನು ಕಾಪಾಡಿದರು. ಆಳವಂದಾರ್ ಪರಂಪರೆಯಿಂದ ಶ್ರೀರಂಗದ ಮಠಕ್ಕೆ ರಾಮಾನುಜರ ನಂತರ ಇವರೇ ಪಟ್ಟವಹಿಸಿದರು. ಒಳ್ಳೆಯ ಮಂತ್ರವಾದಿ. ಹಯಗ್ರೀವ ಮಂತ್ರ, ಸುದರ್ಶನರ ಉಪಾಸಕ. ಶ್ರೀರಂಗದಲ್ಲಿ ಹಯಗ್ರೀವ, ಸುದರ್ಶನ, ಪಾರ್ಥಸಾರಥಿ, ಗರುಡ, ಶಿಖರಿ, ಮಂದಿರಗಳನ್ನು ಕಟ್ಟಿಸಿದರು. ಶ್ರೀರಂಗದ ರಂಗನಾಥನ ಕಳಾಕರ್ಷಣೆಮಾಡಿದ ಕೆಟ್ಟ ಮಾಂತ್ರಿಕರನ್ನು ಅಡಗಿಸಿ ಈ ಕಾರ್ಯದಲ್ಲಿ ಸಹಾಯ ಮಾಡಿದ ಶ್ರೀರಂಗದ ವಿಳಪ್ಪರೆಯರ್‌ರವರ ರಕ್ಷಣೆಗಾಗಿ ಸುದರ್ಶನಶತಕ ಮಾಡಿದರು.

ಕೃತಿಗಳು :

ಉಪನಿಷತ್ಕೂರನಾರಾಯಣಮ್ (ಉಪನಿಷದ್ಭಾಷ್ಯ)	ನಾರಾಯಣೀಯಮಂತ್ರಶಾಸ್ತ್ರ
	ಮಂತ್ರ ವ್ಯಾಖ್ಯಾನ
ಸ್ತೋತ್ರರತ್ನವ್ಯಾಖ್ಯಾನ	ಪುರುಷಕಾರಮೀಮಾಂಸೆ
ಸುದರ್ಶನಶತಕ ಮತ್ತು ವ್ಯಾಖ್ಯಾನ	ಸುದರ್ಶನಮೀಮಾಂಸೆ
ಪಂಚಾಯುಧಸ್ತೋತ್ರ	ಇತ್ಯಾದಿ[2]

---

1. ಆಧಾರ ಗ್ರಂಥಗಳು : 'ಪೆರಿಯತಿರುಮುಡಿ ಅಡೈವು'. 75ನೆಯ ಪುಟ. ಗ್ರಂಥಕರ್ತೃ-ಕೋಯಿಲ್ ಕಂದಾಡೈನಾಯನ್, ಕ್ರಿ.ಶ. 15ನೆಯ ಶತಮಾನ. ಮದ್ರಾಸ್ ಶ್ರೀನಿಕೇತನ ಪ್ರೆಸ್ ಮುದ್ರಿತ, ಕ್ರಿ.ಶ. 1898.
2. ದುರ್ವಾಸ ಪಂಡಿತನ 'ಕಲ್ಪಸಾರಸಮುಚ್ಚಯ'
(ಈ ಹಸ್ತಪ್ರತಿ ಇರುವ ಸ್ಥಳ : ವಸಿಷ್ಠಪುರಮ್ ರಾಮಾನುಜಾಚಾರ್ಯ, ತಿಟ್ಟಕುಡಿ, ತಮಿಳ್‌ನಾಡು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೩. ವ್ಯಾಸಾರ್ಯರು[1]

ಹೆಸರು : ಸುದರ್ಶನಭಟ್ಟರ್, ಸುದರ್ಶನಸೂರಿ, ವೇದವ್ಯಾಸಭಟ್ಟರ್, ವ್ಯಾಸಭಟ್ಟರ್, ಶ್ರುತಪ್ರಕಾಶಿಕಾಭಟ್ಟರ್, ಶ್ರುತಪ್ರಕಾಶಿಕಾಚಾರ್ಯ, ಟೀಕಾಚಾರ್ಯ.

ಕುಲ-ಗೋತ್ರ : ಹಾರೀತಗೋತ್ರ, ಯಜುಶ್ಶಾಖೆ, ಆಪಸ್ತಂಬಸೂತ್ರ, ಕುಲ-ವಡವಂ, ವಂಶ-ಕೂರ. ತಂದೆ-ವಾಗ್ವಿಜಯಿಭಟ್ಟರ್. ಅಜ್ಜ–ವೇದವ್ಯಾಸಭಟ್ಟರೆಂಬ ಶ್ರೀರಾಮಪ್ಪಿಳ್ಳೈ. ಮಕ್ಕಳು-ವೇದಾಚಾರ್ಯಭಟ್ಟರ್ ಮತ್ತು ವೇದಾಂತಾಚಾರ್ಯಭಟ್ಟರ್. ಶಿಷ್ಯರು–ಪಿಳ್ಳೈ ಲೋಕಾಚಾರ್ಯ, ವೇದಾಂತದೇಶಿಕ, ಈಯುಣ್ಣಿ ಪದ್ಮನಾಭ ಇತ್ಯಾದಿ.

ಕಾಲ : ಕ್ರಿ. ಶ. 13ನೆಯ ಶತಮಾನ.

ದೇಶ : ಶ್ರೀರಂಗ.

ಸಾಧನೆಗಳು : ಕಂಚಿಯಲ್ಲಿ ಪ್ರಸಿದ್ಧರಾದ ಅಮ್ಮಾಳ್‌ವರದಾಚಾರ್ಯರ ಬಳಿ ಹಲವಾರು ಸಲ ರಾಮಾನುಜರ ಶ್ರೀಭಾಷ್ಯಾದಿ ಗ್ರಂಥಗಳನ್ನು ಚೆನ್ನಾಗಿ ಅಧ್ಯಯನಮಾಡಿ, ಅಮ್ಮಾಳ್‌ರವರ ಪ್ರವಚನವೆಲ್ಲವನ್ನೂ ಚಾಚೂತಪ್ಪದೆ ಬರೆದಿಟ್ಟು, ಗ್ರಂಥರೂಪವಾಗಿ ಮಾಡಿ, ಪ್ರಾಚೀನ ಪರಂಪರೆಯನ್ನು ರಕ್ಷಿಸಿ, ವೇದಾಂತದೇಶಿಕರ ಮೂಲಕ ಪ್ರಚುರಗೊಳಿಸಿದುದು. ಪ್ರಪ್ರಥಮ ಮೇಲುಕೋಟೆಯಲ್ಲಿ ರಾಮಾನುಜರ ಗುಡಿಯಲ್ಲಿ ತಮ್ಮ 'ಶ್ರುತಪ್ರಕಾಶಿಕೆ'ಯನ್ನು ಉಪನ್ಯಾಸ ಮಾಡಿ ಸಮರ್ಪಿಸಿದುದು. 'ಈಡ್' ಎಂಬ ತಮಿಳಿನ ಮಹಾಗ್ರಂಥದ ರಚನೆಗೆ ಪ್ರೇರಣೆ ಕೊಟ್ಟದ್ದು. ಇದರಿಂದ ಮುಂದೆ ನಾಲೂರಾಚ್ಚಾನ್ ಎಂಬುವರು 'ಈಡ್' ಗ್ರಂಥವನ್ನು ಇದೇ ರೀತಿ ಮೇಲುಕೋಟೆಯಲ್ಲಿ ಪ್ರಪ್ರಥಮವಾಗಿ ರಾಮಾನುಜರ ಗುಡಿಯಲ್ಲಿ ಸಮರ್ಪಿಸಲು ಪ್ರೇರಣೆ ದೊರಕಿಬಹುದು.

ಕೃತಿಗಳು :

ಶ್ರುತಪ್ರಕಾಶಿಕೆ	ಸುಬಾಲೋಪನಿಷದ್ಭಾಷ್ಯ
ಶ್ರುತಪ್ರದೀಪಿಕೆ	ನಿತ್ಯಗ್ರಂಥವ್ಯಾಖ್ಯಾನ
ತಾತ್ಪರ್ಯದೀಪಿಕೆ	ಪ್ರಾರ್ಥನಾಪಂಚಕ
ಗದ್ಯತ್ರಯವ್ಯಾಖ್ಯಾನ	ಮುಕ್ತಕಶ್ಲೋಕಗಳು
ಭಾಗವತವ್ಯಾಖ್ಯಾನ	ಸಂಧ್ಯಾಭಾಷ್ಯ
	ಪಂಚಸ್ತವಾದಿ ವ್ಯಾಖ್ಯಾನ(ಲುಪ್ತ) ಇತ್ಯಾದಿ.

1. ಆಧಾರಗ್ರಂಥ : ಪೆರಿಯತಿರುಮುಡಿ ಅಡೈವು. ಗುರುಪರಂಪರಾಪ್ರಭಾವ, ತನಿಯನ್ ಪದ್ಯಗಳು, ಸ್ವಯಂ ವ್ಯಾಸಾರ್ಯರ ಗ್ರಂಥಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೪. ಮಹಾಚಾರ್ಯ[1]

ಹೆಸರು : ರಾಮಾನುಜ, ಶ್ರೀನಿವಾಸದಾಸ, ದೊಡ್ಡಯ್ಯಾಚಾರ್ಯ, ಮಹಾಗುರು, ಮಹಾದೇಶಿಕ, ಮಹಾರ್ಯ, ಚಂಡಮಾರುತಾಚಾರ್ಯ, ಘನಗುರು, ಘನದೇಶಿಕ, ತಿರುಪತಿಶ್ರೀನಿವಾಸನ ಸ್ವಪ್ನಸೂಚನೆಯಂತೆ 'ಶ್ರೀನಿವಾಸದಾಸ' ಎಂಬುದು ಇವರ ಮನೆತನದ ಎಲ್ಲರಿಗೂ ಬರುವ ಹೆಸರು.

ಕುಲ-ಗೋತ್ರ : ವಡಮಕುಲ, ವಾಧೂಲಗೋತ್ರ. ಕಂದಾಡೈವಂಶ. ಆಪಸ್ತಂಬ ಸೂತ್ರ. ಕೃಷ್ಣಯಜುಶ್ಶಾಖೆ.

ಬಂಧು-ಮಿತ್ರರು : ದತ್ತು ಪಡೆದ ತಂದೆ-ಪೆರಿಯಅಪ್ಪಂಗಾರ್ (ಮಹಾಚಾರ್ಯ) ಪರಮಾಚಾರ್ಯ-ದೊಡ್ಡಯ್ಯಂಗಾರಪ್ಪೈ (ವಾಧೂಲಶ್ರೀನಿವಾಸಾಚಾರ್ಯ) ಇವರು 'ತೂಲಿಕಾ' ಗ್ರಂಥಕರ್ತೃ. ಆಪ್ತಮಿತ್ರರು-ಪಂಚಮತಭಂಜನತಾತಾಚಾರ್ಯ.

ಕಾಲ : ಅವತಾರ-ಶುಭಕೃತ್‌ಸಂವತ್ಸರ, ಕುಂಭಕೃಷ್ಣತ್ರಯೋದಶಿ, ಗುರುವಾರ, ಉತ್ತರಾಷಾಢಾನಕ್ಷತ್ರ (ಕ್ರಿ.ಶ. 1-2-1543) ಕೆಲವರಮತದಂತೆ (1541). ಪರಮಪದ-ಪ್ಲವಂಗಸಂವತ್ಸರ ತುಲಾಕೃಷ್ಣಾಷ್ಟಮಿ ಶನಿವಾರ. ಕ್ರಿ. ಶ. 3-10-1607. ಕೆಲವರಮತ ದಂತೆ (1606).

ದೇಶ : ಇವರ ಹಿಂದಿನವರಾದ ದೊಡ್ಡಯ್ಯಂಗಾರ್‌ಅಪ್ಪೈ ಎಂಬುವರು ಕರ್ನಾಟಕದಲ್ಲಿ ಪ್ರಸಿದ್ಧರಾಗಿದ್ದರು. ಇವರು ಕರ್ನಾಟಕದ ಕಂದಾಡೈ ಶಾಖೆಯವರಿರಬೇಕು. ದೊಡ್ಡ ಎಂಬ ಕನ್ನಡ ಹೆಸರೂ ಇದಕ್ಕೆ ಪೋಷಕವಾಗಿದೆ. ಹುಟ್ಟಿದ ಊರು ಕಾಂಚಿ ಅಥವಾ ಚೋಳಸಿಂಹಪುರ. (ಶೋಲಿಂಗರ್) ಪರಮಪದಿಸಿದ್ದು ಚಿದಂಬರದ ಸಮೀಪದ ಶ್ರೀಮುಷ್ಣಕ್ಷೇತ್ರ.

ಸಾಧನೆಗಳು : ವೇದಾಂತದೇಶಿಕರು ಜೀರ್ಣೋದ್ಧಾರ ಮಾಡಿದ ಚಿದಂಬರದ ಗೋವಿಂದ ರಾಜ ದೇವರನ್ನು ಅಲ್ಲಿನ ಕೆಲವರು ಕಲ್ಲುಚಪ್ಪಡಿ ಹಾಕಿ ಮುಚ್ಚಿಬಿಟ್ಟಿದ್ದರು. ವಾದದಲ್ಲಿ ವಿರೋಧಿಗಳನ್ನೆಲ್ಲ ಜಯಿಸಿ ವಿಜಯನಗರದ ರಾಮರಾಯನ ಸಹಾಯದಿಂದ ಕಲ್ಲು ತೆಗೆಸಿ ಗೋವಿಂದರಾಜದೇವರ ಪೂಜೆಗಾಗಿ ಐದುಗ್ರಾಮಗಳನ್ನು ಬಿಡಿಸಿ ರಾಮಾನುಜರ ಕಾಲದಿಂದ ಬಂದಿದ್ದ ಶೈವವೈಷ್ಣವ ಕಲಹವನ್ನು ಶಮನಗೊಳಿಸಿದರು. ಅಪ್ಪಯ್ಯದೀಕ್ಷಿತರು ಇವರ ಮಿತ್ರರಾದರೂ ವಾದದಲ್ಲಿ ಪ್ರತಿಕಕ್ಷಿಯಾಗಿದ್ದರು.

ವೇದಾಂತದೇಶಿಕರ ಗ್ರಂಥಗಳಿಗೆಲ್ಲ ವ್ಯಾಖ್ಯಾನ ಬರೆದು ಶಿಷ್ಯರಿಂದ ಬರೆಸಿಯೂ ದರ್ಶನ ಸಂರಕ್ಷಣೆಮಾಡಿದರು.

---

1. ಈ ಲೇಖನದ ವಿಷಯದಲ್ಲಿ ಶೋಳಂಗಿಪುರದ ಮಹಾಚಾರ್ಯರವಂಶದ ಕೆ. ಕೆ. ಸಿ. ತಾತಾಚಾರ್ಯರು ಕೆಲವು ವಿಷಯಗಳನ್ನು ತಿಳಿಸಿ ಉಪಕರಿಸಿರುವರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶೋಳಂಗಿಪುರ (ಘಟಿಕಾಚಲ) ನೃಸಿಂಹದೇವಾಲಯಂವನ್ನು ಜೀರ್ಣೋದ್ಧಾರವಮಾಡಿ ಅದರ ಧರ್ಮಕರ್ತರೂ ಪ್ರಥಮ ಸ್ಥಳಾಚಾರ್ಯಪುರುಷರೂ ಆದರು.

ಕಂಚಿಯ ವರದರಾಜಸ್ವಾಮಿಯು ಇವರಿಗೆ ವೃದ್ಧಾಪ್ಯದಲ್ಲಿ ಪ್ರತ್ಯಕ್ಷವಾದಾಗ ಆ ಸ್ಥಳದಲ್ಲೇ ತಮ್ಮೂರಲ್ಲಿ ಒಂದು ವರದರಾಜರ ಗುಡಿ ಕಟ್ಟಿಸಿದರು.

ಕುಲದೈವ : ತಿರುಪತಿ ಶ್ರೀನಿವಾಸ.

ಮನೆದೇವರು : ಹಯಗ್ರೀವ.

ಇಷ್ಟದೈವ : ಶ್ರೀಕೃಷ್ಣ.

ಶಿಷ್ಯಪ್ರಶಿಷ್ಯರು : ಜ್ಞಾನಭೂಷಣಂ ಸುದರ್ಶನಾಚಾರ್ಯ, ನೃಸಿಂಹರಾಜ, ಸ್ವಾಮಿಪುಷ್ಕರಿಣೀ ಶ್ರೀನಿವಾಸದಾಸ, ವಾತ್ಸ್ಯನಾರಾಯಣಾಚಾರ್ಯ, ಚಂಪಕೇಶಾಚಾರ್ಯ ಇತ್ಯಾದಿ.

ಇವರ ಗ್ರಂಥಗಳು :

	ಚಂಡಮಾರುತ (ಶತದೂಷಣೀವ್ಯಾಖ್ಯಾನ)	ಸರ್ವಾರ್ಥಸಿದ್ಧಿ ವ್ಯಾಖ್ಯಾನ
	ವೇದಾನ್ತವಿಜಯ (ಐದುಭಾಗ)	ತಾತ್ಪರ್ಯಪ್ರಕಾಶಿಕೆ
(1)	ಗುರೂಪಸತ್ತಿವಿಜಯ	ಬ್ರಹ್ಮಸೂತ್ರಾರ್ಥಸಂಗ್ರಹ
(2)	ಬ್ರಹ್ಮವಿದ್ಯಾವಿಜಯ	ರಾಮಾನುಜಚರಿತಚುಳಕಮ್
(3)	ಸದ್ವಿದ್ಯಾವಿಜಯ	ವೈಭವಪ್ರಕಾಶಿಕೆ
(4)	ಅದ್ವೈತವಿದ್ಯಾವಿಜಯ	ಮುಕ್ತಕಪದ್ಯಗಳು
(5)	ಪರಿಕರವಿದ್ಯಾವಿಜಯ	ಶಾಸನಪದ್ಯಗಳು
	ಪಾರಾಶರ್ಯವಿಜಯ	ತನಿಯನ್‌ಪದ್ಯಗಳು
	ಉಪನಿಷನ್ಮಂಗಳದೀಪಿಕೆ (ಉಪನಿಷತ್ ಭಾಷ್ಯ)	ದೇವರಾಜಪಂಚಕ ಇತ್ಯಾದಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೬

ಉಲ್ಲೇಖಗ್ರಂಥ ವಿವರಣೆಗಳು

ಶ್ರೀಭಾಷ್ಯ—ಜಿಜ್ಞಾಸಾಧಿಕರಣ

ಕೇನೋಪನಿಷತ್ತಿನ ಎರಡನೇ ಖಂಡದ 'ಯಸ್ಯಾಮತಂ ತಸ್ಯಮತಂ ಮತಂ ಯಸ್ಯ ನ ವೇದ ಸಃ। ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಮ್' ಎಂಬ ಮೂರನೇ ಮಂತ್ರವನ್ನು ಹೀಗೆ ವಿವರಿಸಿರುವರು.

'ಯಸ್ಯಾಮತಂ ತಸ್ಯಮತಮ್' 'ಅವಿಜ್ಞಾತಂ ವಿಜಾನತಾಂ' ಎಂಬುದರಿಂದ 'ಬ್ರಹ್ಮವು ಜ್ಞಾನಕ್ಕೆ ವಿಷಯಮೇ ಆಗುವುದಿಲ್ಲ' ಎಂದು ಹೇಳಿದರೆ (ಬ್ರಹ್ಮವಿದಾಪ್ನೋತಿ ಪರಮ್) 'ಬ್ರಹ್ಮವನ್ನು ತಿಳಿದವನು ಮೋಕ್ಷವನ್ನು ಪಡೆಯುತ್ತಾನೆ.' (ಬ್ರಹ್ಮವೇದ ಬ್ರಹ್ಮೈವ ಭವತಿ) 'ಬ್ರಹ್ಮವನು ತಿಳಿದವನ್ನು ಬ್ರಹ್ಮಸದೃಶನಾಗುತ್ತಾನೆ' ಅಥವಾ ಜ್ಞಾನಸಂಕೋಚರಹಿತನಾಗುತ್ತಾನೆ ಎಂಬ ವಚನಗಳಲ್ಲಿ ಕಾಣುವ 'ಜ್ಞಾನದಿಂದ ಮೋಕ್ಷ' ಎಂಬ ಉಪದೇಶವು ಅಯುಕ್ತವಾದೀತು.

'ಅಸನ್ನೇವ ಸ ಭವತಿ' 'ಅಸದ್ಬ್ರಹ್ಮೇತಿ ವೇದ ಚೇತ್' 'ಅಸ್ತಿ ಬ್ರಹ್ಮೇತಿ ಚೇದ್ವೇದ, ಸಂತಮೇನಂ ತತೋ ವಿದುಃ' ಎಂದು ಬ್ರಹ್ಮವಿಷಯಕವಾದ ಜ್ಞಾನವು ಇಲ್ಲದಿದ್ದರೆ, ಆತ್ಮನಾಶವನ್ನೂ, ಇದ್ದರೆ ಆತ್ಮದ ಅಸ್ತಿತ್ವವನ್ನೂ ಹೇಳುತ್ತದೆ. ಆದ್ದರಿಂದ ಬ್ರಹ್ಮದ ಜ್ಞಾನವೇ ಮೋಕ್ಷಕ್ಕೆ ಸಾಧನವೆಂದು ಎಲ್ಲಾ ಶ್ರುತಿಗಳೂ ಉಪದೇಶಿಸುತ್ತಿವೆ. ಇಲ್ಲಿ ಜ್ಞಾನವು ಉಪಾಸನಾ ರೂಪವಾದುದು. ಉಪಾಸ್ಯವಾದ ಬ್ರಹ್ಮವು ಗುಣವಿಶಿಷ್ಟವಾದುದು' ಎಂದು ಹೇಳಿದೆ.

'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ' ಎಂಬುದರಿಂದ ಅನಂತವೂ, ಅಪರಿಚ್ಛಿನ್ನಗುಣವುಳ್ಳದ್ದೂ ಆದ ಬ್ರಹ್ಮವನ್ನು ಮಾತು ಮನಸ್ಸುಗಳಿಂದ 'ಇಷ್ಟು' ಎಂದು ಅಳತೆಗೊಳಪಡಿಸಿ ತಿಳಿಯುಲಾಗುವುದಿಲ್ಲ ಎಂದು ಹೇಳಿದೆ. ಬ್ರಹ್ಮವು ಅಪರಿಚ್ಛಿನ್ನವಾದುದರಿಂದ 'ಬ್ರಹ್ಮ' ಇಷ್ಟೆಂದು ಪರಿಚ್ಛೇದಿಸಿ ತಿಳಿದವರಿಗೆ ಬ್ರಹ್ಮ ತಿಳಿದಿಲ್ಲ ಎಂದು ಅವಿಜ್ಞಾತಂ—ಅಮತಂ ಎಂಬುದರಿಂದ ಹೇಳುತ್ತದೆ. ಹಾಗಿಲ್ಲದಿದ್ದಲ್ಲಿ 'ಯಸ್ಯಾಮತಂ ತಸ್ಯಮತಂ' 'ವಿಜ್ಞಾತಮವಿಜಾನತಾಂ' ಎಂದು ಮತ-ವಿಜ್ಞಾತ ಎಂಬುದಾಗಿ ಅಲ್ಲೇ ಹೇಳಿರುವ ಮಾತು ವಿರುದ್ಧವಾಗುವುದು.

ಶ್ರೀಭಾಷ್ಯ—ಸಮನ್ವಯಾಧಿಕರಣ

'ನೇದಂ ಯದಿದಮುಪಾಸತೇ' ಎಂಬುದರಿಂದ 'ಬ್ರಹ್ಮವು ಉಪಾಸ್ಯವೆಂಬುದನ್ನು ನಿಷೇಧಿಸಿದೆ' ಎಂದು ಹೇಳಲಾಗದು. ಈ ಮಾತಿನಲ್ಲಿ ಬ್ರಹ್ಮ ಉಪಾಸ್ಯವೆಂಬುದನ್ನು ನಿಷೇಧಿಸುವುದಿಲ್ಲ. 'ಬ್ರಹ್ಮವು ಜಗತ್ತಿಗಿಂತ ವಿಲಕ್ಷಣ' ಎಂದಷ್ಟೇ ಹೇಳುತ್ತದೆ. ಜೀವಿಸಾಮಾನ್ಯವು 'ಇದು' ಎಂಬುದಾಗಿ ಇಂದ್ರಿಯಗಮ್ಯವಾದ ಯಾವ ಜಗತ್ತನ್ನು ತತ್ಪರತೆಯಿಂದ ಸೇವಿಸುತ್ತದೆಯೋ, ಅದು ಬ್ರಹ್ಮವಲ್ಲ. ಯಾವುದು ಮಾತಿನಿಂದ ವ್ಯಕ್ತವಾದುದಲ್ಲವೋ ಮತ್ತು

15

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಾವುದು ಮಾತಿನ ಉಗಮಕ್ಕೆ ಕಾರಣವೋ 'ಅದು' (ಇಂದ್ರಿಯಾಗಮ್ಯ) ಅದನ್ನೇ ಬ್ರಹ್ಮವೆಂದು ನೀನು ತಿಳಿ ಎಂದು ವಾಕ್ಯದ ಅರ್ಥ. ಹಾಗಲ್ಲದಿದ್ದಲ್ಲಿ 'ಅದನ್ನೇ ಬ್ರಹ್ಮವೆಂದು ತಿಳಿ' ಎಂಬಮಾತು ವಿರುದ್ಧವಾಗುತ್ತದೆ. ಬ್ರಹ್ಮವನ್ನು ಧ್ಯಾನಿಸಬೇಕೆಂಬ ಉಪದೇಶವೂ ವ್ಯರ್ಥವಾದೀತು.

ಶ್ರೀಭಾಷ್ಯ—ಸರ್ವತ್ರಪ್ರಸಿದ್ಧ್ಯಧಿಕರಣ

ಪ್ರಥಮಖಂಡದ ಎರಡನೇ ಮಂತ್ರದ 'ಪ್ರಾಣಸ್ಯ ಪ್ರಾಣಃ' ಎಂಬ ಭಾಗವನ್ನು ತೆಗೆದುಕೊಂಡು 'ಪ್ರಾಣಕ್ಕೂ ಆಧಾರಭೂತನು ಪರಮಾತ್ಮಾ' ಎಂದು ಹೇಳಿದೆ.

ಈ ವಿಷಯಗಳನ್ನು ಶ್ರುತಪ್ರಕಾಶಿಕೆ ಮತ್ತು ಶ್ರುತಪ್ರದೀಪಿಕೆಗಳಲ್ಲಿ ವಿಸ್ತಾರವಾಗಿ ತಿಳಿಸಿರುತ್ತಾರೆ.

ವಿಷಯವಾಕ್ಯದೀಪಿಕಾ—ಸಮನ್ವಯಾಧಿಕರಣ

ನಮ್ಮ ಪೂರ್ವಾಚಾರ್ಯರು 'ಬ್ರಹ್ಮವು ಪೂರ್ಣವಾಗಿ ತಿಳಿದುದಕ್ಕಿಂತಲೂ, ತಿಳಿಯದಿರುವುದಕ್ಕಿಂತಲೂ ವಿಲಕ್ಷಣವಾದುದು' ಎಂದು ಉಪದೇಶಿಸಿರುವರು. ಅವರ ಮಾತನ್ನು ಕೇಳಿದ್ದೇವೆ.

ಇದನ್ನೇ 'ಯದ್ವಾಚಾನಭ್ಯುದಿತಂ ಯೇನ ವಾಗಭ್ಯುದ್ಯತೇ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ' ॥

ಎಂಬುದರಿಂದ ವಿವರಿಸುತ್ತಾರೆ. ವಾಗಿಂದ್ರಿಯಮೊದಲಾದವುಗಳಿಂದ ಅಪ್ರಕಾಶ್ಯವೂ, ವಾಗಾದಿ ಇಂದ್ರಿಯಗಳಿಗೆ ಪ್ರಕಾಶಕವೂ ಆದುದೇ ಬ್ರಹ್ಮ ಎಂದು ತಿಳಿ. ಯಾವ ವಸ್ತುವನ್ನು 'ಇದು' ಎಂದು ಹೇಳಿ, 'ಅಂಗೈ ನೆಲ್ಲೀಕಾಯಿಯಂತೆ' ಸ್ಪಷ್ಟವಾಗಿ ತಿಳಿದು ಜನರು ಉಪಾಸಿಸುತ್ತಾರೋ ಭೋಗ್ಯವೆಂದು ನಿರಂತರ ಸೇವಿಸುತ್ತಿರುವರೋ ಅದು ಬ್ರಹ್ಮವಲ್ಲ. ಸಾಮಾನ್ಯ ಜನರು ಬಯಸುವ ಈ ಜಗತ್ತಿಗಿಂತ 'ಬ್ರಹ್ಮ' ವಿಲಕ್ಷಣ ಎಂದು ವಿವರಿಸಿರುವರು.

ಶಾರೀರಕಶಾಸ್ತ್ರಾರ್ಥದೀಪಿಕೆಯಲ್ಲೂ ಹೀಗೇ ವಿವರಿಸಿರುವರು.

ವೇದಾಂತವಿಜಯಮಂಗಳದೀಪಿಕಾ

ಅವೇದ್ಯತ್ವಭಂಗ

ಬ್ರಹ್ಮವು ಅವೇದ್ಯವಲ್ಲ ಎಂದಲ್ಲಿ 'ಯತ್ತದದ್ರೇಶ್ಯಂ ಅಗ್ರಾಹ್ಯಂ' 'ಯಸ್ಯಾಮತಂ ತಸ್ಯಮತಂ ಮತಂ ಯಸ್ಯ ನ ವೇದಸಃ । ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಮ್' । ಮುಂತಾದಶ್ರುತ್ಯರ್ಥವನ್ನು ನಿರ್ವಹಿಸುವ ಬಗೆ ಹೇಗೆ? ಎಂಬ ಆಕ್ಷೇಪ ಒದಗಿದಾಗ ವೇದ್ಯತ್ವಶ್ರುತಿಯನ್ನು ಅನುಸರಿಸುವುದೇ (ಅಂದರೆ ವೇದ್ಯತ್ವಕ್ಕೆ ಎಡೆಕೊಟ್ಟು ಅವೇದ್ಯತ್ವವನ್ನು ಹೇಳುವುದೇ) ಉಪಾಯ ಎಂದು ಸಮಾಧಾನ, ಮತ್ತು 'ಭೂಯಸಾಂಸ್ಯಾತ್ಸ-

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧರ್ಮ(ಕ)ತ್ವಮ್ ' ಎಂಬ ನ್ಯಾಯದಂತೆ ವೇದ್ಯತ್ವಶ್ರುತಿಗಳು ಹೆಚ್ಚಾಗಿರುವುದರಿಂದ ಅದಕ್ಕೆ ಅನುಗುಣವಾಗಿಯೇ ನಿಷೇಧಶ್ರುತಿಗಳಿಗೂ ಅರ್ಥವನ್ನು ಹೇಳಬೇಕೆಂದು ತಿಳಿಸಿದೆ,

'ಯಸ್ಯಾಮತಂ' 'ಮತಂ ಯಸ್ಯ ನ ವೇದ ಸಃ' ಎಂಬ ಎರಡೂ ಕಡೆಗಳಲ್ಲಿ ಪರಸ್ಪರ ವ್ಯಾಘಾತ (ವಿರೋಧ) ಇದೆ ಎಂದು ಆಶಂಕಿಸಿ 'ಅವಿಜ್ಞಾತಂ ವಿಜಾನತಾಂ' ಎಂಬುದರಿಂದ (ಶ್ರುತಿಯು) ಪರಿಹರಿಸುತ್ತದೆ. 'ವಿ' ಎಂಬ ಶಬ್ದವು ಎಲ್ಲ ಅಂಶದಿಂದಲೂ ಸಮೀಚೀನ ಎಂಬ ವಿಶೇಷಾರ್ಥವನ್ನು ಹೇಳುತ್ತದೆ. ಬ್ರಹ್ಮವನ್ನು ಚೆನ್ನಾಗಿ ತಿಳಿದಿದ್ದೇನೆ ಎಂದು ತಿಳಿದವರಿಗೆ ಬ್ರಹ್ಮವು ಯಥಾವತ್ತಾಗಿ ತಿಳಿದಿಲ್ಲ. 'ಬ್ರಹ್ಮವನ್ನು ಚೆನ್ನಾಗಿ ತಿಳಿದಿಲ್ಲ' ಎಂದು ತಿಳಿದವರಿಗೆ ಬ್ರಹ್ಮವು ಯಥಾವತ್ತಾಗಿ ತಿಳಿದಿದೆ ಎಂದರ್ಥ. ಹಾಗೆಯೇ 'ಸೈಷಾಽಽನಂದಸ್ಯ ಮೀಮಾಂಸಾ ಭವತಿ' ಎಂದು (ಬ್ರಹ್ಮಾನಂದಮೀಮಾಂಸೆಯನ್ನು) ಆರಂಭಿಸಿ ಕ್ರಮವಾಗಿ ಒಂದೊಂದಾಗಿ ಆನಂದಕ್ಕೂ ನೂರ್ಮಡಿಯಾದ ಉತ್ಕರ್ಷವನ್ನು ತಿಳಿಸಿ 'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ' ಎಂಬುದರಿಂದ ಬ್ರಹ್ಮಾನಂದಕ್ಕೆ ವಾಙ್ಮನಸಾಗೋಚರತ್ವವನ್ನು ಹೇಳಿ ಈ ಶ್ರುತಿಗನುಗುಣವಾಗಿ ವೇದ್ಯತ್ವ ಮತ್ತು ಅವೇದ್ಯತ್ವಗಳನ್ನು ಒಂದೇ ವಸ್ತುವಿನಲ್ಲಿ ಹೇಳಿರುವುದೂ ಪರಿಚ್ಛಿನ್ನಜ್ಞಾನವನ್ನೇ ನಿಷೇಧಿಸುವುದಾಗಿದೆ.

ಅಲ್ಲದೆ ಹಿಂದು-ಮುಂದಣ ವಾಕ್ಯಗಳಲ್ಲಿ ಬ್ರಹ್ಮಸ್ವರೂಪವು ವೇದ್ಯವೆಂದೇ ಅನೇಕ ಬಾರಿ ಪ್ರತಿಪಾದಿಸಿರುವ ಕಾರಣ, ಇಲ್ಲಿ ಬ್ರಹ್ಮಸ್ವರೂಪವು ವೇದ್ಯವಲ್ಲವೆಂದು ನಿಷೇಧಿಸುವ ಸಂಭವವೇ ಇಲ್ಲ. ಹೇಗೆಂದರೆ—

'ನ ತತ್ರ ಚಕ್ಷುರ್ಗಚ್ಛತಿ' ಮೊದಲಾದ ವಾಕ್ಯಗಳಿಂದ, 'ಬ್ರಹ್ಮವು ಲೌಕಿಕಪ್ರಮಾಣಗಳಿಗೆ ಗೋಚರವಾಗುವಂಥದಲ್ಲ' ಎಂದು ಸಮರ್ಥಿಸಿ, ಹಾಗಾದರೆ ಪ್ರಮಾಣಕ್ಕೆ ವಿಷಯವಲ್ಲದ ಕಾರಣ ಪ್ರಾಮಾಣಿಕವೂ ಆಗಲಾರದಷ್ಟೇ! ಎಂಬ ಸಂಶಯವನ್ನು ನಿರೀಕ್ಷಿಸಿ ಅದನ್ನು ಪರಿಹಾರಮಾಡಲು,

'ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ' ಎಂದು ಶ್ರುತಿಯು ಹೇಳಿದೆ. ಇದರ ಅಭಿಪ್ರಾಯ—ವಿದಿತವೆಂದು ಹೇಳಲಾಗುವ ಲೌಕಿಕಪ್ರಮಾಣಗೋಚರವಾದ ವಿಷಯಕ್ಕಿಂತಲೂ ಆ ಬ್ರಹ್ಮವು ಬೇರೆ ಬಗೆಯದು, ಅಂದರೆ—ಅಲೌಕಿಕ ಪ್ರಮಾಣದಿಂದ ಮಾತ್ರ ಅರಿಯಲ್ಪಡತಕ್ಕದ್ದು.

ಅನಂತರ ಬ್ರಹ್ಮವು-ಮನಸ್ಸು, ಪ್ರಾಣ ಮತ್ತು ಚಕ್ಷುರಾದಿಗಳಿಗೆ ಪ್ರೇರಕವಾಗುವುದೆಂದು ಉಪದೇಶಿಸಲು 'ಯದ್ವಾಚಾನಭ್ಯುದಿತಮ್'........ಎಂದು ಹೇಳಿದೆ. ಅಷ್ಟು ಮಾತ್ರದಿಂದಲೇ ಬ್ರಹ್ಮದ ಪೂರ್ಣವಾದ ಅರಿವು ಆಯಿತೆಂದು ಭ್ರಮೆ ಹುಟ್ಟೀತೆಂದು ಯೋಚಿಸಿ, ಅದನ್ನು ಹೋಗಲಾಡಿಸಲು, ಗುರುವು-'ಬ್ರಹ್ಮಸ್ವರೂಪವನ್ನು ನೀನು ಸರಿಯಾಗಿ ವಿಮರ್ಶಿಸಿ ತಿಳಿಯಬೇಕು ಎಂದು ಹೇಳಿದನು. ವಿಚಾರವನ್ನು ಮಾಡಿದ ಶಿಷ್ಯನು 'ಮನ್ಯೇ ವಿದಿತಮ್'— ತಿಳಿದಿರುವೆನೆಂದು ಭಾವಿಸುತ್ತೇನೆ ಎಂದು ಹೇಳುವನು. ಹಾಗೆ ಭಾವಿಸಲು ಕಾರಣವೇನೆಂದರೆ —'ನಾಹಂ ಮನ್ಯೇ ಸುವೇದ' ಇತಿ, 'ನೋ ನ ವೇದ' ಇತಿ ಅಂದರೆ 'ಬ್ರಹ್ಮವು ಚೆನ್ನಾಗಿ ಪೂರ್ತಿ ಅರಿಯಲರ್ಹ' ಎಂದಾಗಲೀ, 'ಬ್ರಹ್ಮವು ಅರಿಯತಕ್ಕದ್ದೇ ಅಲ್ಲ' ಎಂದಾಗಲೀ ಎರಡೂ ಬಗೆಯ ಭ್ರಮೆಯು ತನಗಿಲ್ಲವೆಂದು ಹೇಳುವನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ಎರಡೂ ಬಗೆಯ ಅರಿವಿಲ್ಲದೇ ಇದ್ದರೆ ನಿನಗೆ ಸಂದೇಹವಷ್ಟೇ ಇರಬೇಕು, ಬ್ರಹ್ಮದ ನಿರ್ಣಯವಲ್ಲ; ಎಂದರೆ ಅದಕ್ಕೆ ಉತ್ತರ–'ವೇದ ಚ' ಎಂದು. ಅಂದರೆ 'ಗುರುವು ಉಪದೇಶಿಸಿದಂತೆ ನಿರ್ಣಯವಾಗಿಯೇ ಬ್ರಹ್ಮವನ್ನು ಅರಿತಿದ್ದೇನೆ' ಎಂದು ಇದರ ಅರ್ಥ.

(ಅಥವಾ) 'ನೋ ನ ವೇದೇತಿ ವೇದ ಚ' ಎಂದು, ಒಂದು ವಾಕ್ಯವಾಗುವುದು. ಅಂದರೆ–'ತಿಳಿದೇ ಇಲ್ಲವೆಂದು ತಿಳಿದುಕೊಂಡಿಲ್ಲ' ಎಂದರ್ಥ. ಅಂದಮೇಲೆ 'ಮನ್ಯೇ' ಎಂಬುದನ್ನು ಹಿಂದಿನವಾಕ್ಯದಿಂದ ಅನುಷಂಗಮಾಡಿಕೊಳ್ಳಬೇಕಿಲ್ಲ. ಹಿಂದೆ ಹೇಳಿದಂತೆ ಜ್ಞಾನವುಳ್ಳವನೇ ಬ್ರಹ್ಮವಿತ್ತಾಗುವನು ಎಂದು 'ಯೋನಸ್ತದ್ವೇದ ತದ್ವೇದ ನೋ ನ ವೇದೇತಿ ವೇದ ಚ' ಎಂಬ ಶ್ರುತಿಯು ಹೇಳುತ್ತದೆ. 'ನಮ್ಮಗಳ ನಡುವೆ ಯಾವನು ಆ ಬ್ರಹ್ಮದ ಬಗ್ಗೆ ಬ್ರಹ್ಮವು ಚೆನ್ನಾಗಿ (ಪೂರ್ಣವಾಗಿ) ತಿಳಿಯತಕ್ಕದ್ದಲ್ಲ' ಎಂಬ ಅರಿವುಳ್ಳವನೋ ಅವನೇ ಆ ಬ್ರಹ್ಮವಿತ್ತಾದವನು' ಎಂದರ್ಥ.

'ಯಶ್ಚ ನ ವೇದೇತಿ ನೋ ವೇದ ಚ ಸ ಏವ ಚ ತತ್ ವೇದ' ಎಂದು ಅನುಷಂಗಿಸಿ ಅರ್ಥ ಹೇಳಬೇಕು.

(ಅಥವಾ) 'ಯಾವನು ಸರ್ವಥಾ ತಿಳಿದಿಲ್ಲವೆಂದಲ್ಲ' ಎಂದು ತಿಳಿದಿದ್ದಾನೋ ಅವನೇ ಆ ಬ್ರಹ್ಮವನ್ನರಿತವನು' ಎಂದರ್ಥ. 'ತದ್ವೇದ' ಎಂಬಲ್ಲೇ ಚೆನ್ನಾಗಿ (ಪೂರ್ಣವಾಗಿ) ಅರಿಯಲಾಗದಿರುವಿಕೆಯೂ, ಅರಿಯಲು ಅರ್ಹನಾಗಿರುವಿಕೆಯೂ ಎರಡೂ ಅಡಕವಾಗುವುದಾದರೂ, ವೇದ್ಯತ್ವಾಂಶವನ್ನು ಪ್ರಧಾನವಾಗಿ ಹೇಳಿ ಪ್ರತ್ಯೇಕಿಸಿ ಹೇಳಿದೆ ಎಂದು ತಿಳಿಯಬೇಕು.

ಹೀಗೆ ಹಿಂದೆ ಬ್ರಹ್ಮಕ್ಕೆ ವೇದ್ಯತ್ವವೆಂಬುದು ಅನೇಕಸಲ ಆವೃತ್ತಿಮಾಡಿ ಹೇಳಲ್ಪಟ್ಟಿದೆ. ಮುಂದೂ ಸಹ—

'ಇಹ ಚೇದವೇದೀದಥ ಸತ್ಯಮಸ್ತಿ ನ ಚೇದಿಹಾವೇದೀನ್ಮಹತೀ ವಿನಷ್ಟಿಃ' ಎಂದು ಬ್ರಹ್ಮಜ್ಞಾನದಿಂದ ಪರಮಪುರುಷಾರ್ಥಪ್ರಾಪ್ತಿಯನ್ನೂ, ಬ್ರಹ್ಮವನ್ನು ಅರಿಯದೇ ಇರುವುದರಿಂದ ಮಹಾನರ್ಥಪ್ರಾಪ್ತಿಯನ್ನೂ ಹೇಳುತ್ತದೆ.

ಈ ರೀತಿ ಬ್ರಹ್ಮವಸ್ತುವಿಗೆ ದುರ್ವಿಜ್ಞೇಯತ್ವಾದಿಗಳನ್ನು ಅದರ ಉತ್ತರಖಂಡದಲ್ಲಿ 'ಬ್ರಹ್ಮ ಹ ದೇವೇಭ್ಯೋ ವಿಜಿಗ್ಯೇ' ಎಂಬುದರಿಂದ ಪ್ರತಿಪಾದಿಸಿ, ನಾಲ್ಕನೆಯ ಖಂಡದಲ್ಲಿ– 'ತತೋ ಹೈವ ವಿದಾಂಚಕಾರ ಬ್ರಹ್ಮೇತಿ' ಎಂದು ಇಂದ್ರನಿಗೆ ಬ್ರಹ್ಮಜ್ಞಾನವುಂಟಾದುದನ್ನು ಹೇಳಿ, ಇಂದ್ರನಿಗಾದಂತೆಯೇ ಇನ್ನಿಬ್ಬರಿಗೂ ಬ್ರಹ್ಮಜ್ಞಾನವಾಯಿತೆಂದು ಅಭಿಪ್ರಾಯ. ಇಂದ್ರ, ವಾಯು ಮತ್ತು ಅಗ್ನಿಗಳಿಗೆ ಉಳಿದೆಲ್ಲ ದೇವತೆಗಳಿಗಿಂತ ಮೊದಲು ಬ್ರಹ್ಮಜ್ಞಾನವಾದುದರಿಂದ ಉತ್ಕರ್ಷವನ್ನು ಹೇಳಿ, ಅವರಲ್ಲಿಯೂ ಇಂದ್ರನಿಗೇ ಮೊದಲು ಬ್ರಹ್ಮಜ್ಞಾನವೊದಗಿದ್ದರಿಂದ ಅಗ್ನಿವಾಯುಗಳಿಗಿಂತಲೂ ಉತ್ಕರ್ಷವು ಹೇಳಲ್ಪಟ್ಟಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೇನೋಪನಿಷತ್ ಗ್ರಂಥಸೂಚಿ

ಸಂಕೇತಾಕ್ಷರಸೂಚಿ

ಅನುವಾದ	ಅನು.
ಕರ್ತೃ	ಕ.
ಗ್ರಂಥದ ಹೆಸರು	ಗ್ರಂ.
ಗ್ರಂಥ ಲಿಪಿ	ಗ್ರಂ.
ತಮಿಳು	ತ.
ತೆಲುಗು	ತೆ.
ದೇವನಾಗರಿ	ದೇ.
ಪ್ರಕಾಶನ	ಪ್ರ.
ಭಾಷೆ	ಭಾ.
ಲಿಪಿ	ಲಿ.
ವಿಶೇಷ	ವಿ.
ಸಂಪಾದಕರು	ಸಂ.
ಸಂಸ್ಕೃತ	ಸಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೂಲ ಮತ್ತು ಭಾಷ್ಯಗ್ರಂಥಗಳು

1 ಗ್ರಂ. ಅಷ್ಟಾವಿಂಶತ್ಯುಪನಿಷದಃ
ಸಂ. ವಾಸುದೇವ ಲಕ್ಷ್ಮಣಶಾಸ್ತ್ರಿ ಪನ್ಸೀಕರ್
ವಿ. ಈಶದಿಂದ ಮುಕ್ತಿಕದವರೆಗೆ 28 ಉಪನಿಷತ್ತುಗಳಿವೆ.
ಪ್ರ. ತುಕಾರಾಮ್ ಜಾವಜೀ ಭಾ. ಸಂ.
ನಿರ್ಣಯಸಾಗರ ಪ್ರೆಸ್ ಲಿ. ದೇ.
ಬೊಂಬಾಯಿ–1918

2 ಗ್ರಂ. ಅಷ್ಟೋತ್ತರಶತೋಪನಿಷದಃ
ಸಂ. ಅನೇಕ ಪಂಡಿತರು
ವಿ. ಸಿದ್ಧಾಂತಿ ಸುಬ್ರಹ್ಮಣ್ಯಶಾಸ್ತ್ರಿಗಳ ಈಶಾವಾಸ್ಯತಾತ್ಪರ್ಯಸಂಗ್ರಹ ಮತ್ತು ಮಹಾವಾಕ್ಯರತ್ನಾವಳಿಯಿದೆ.
ಪ್ರ. ವಾವಿಳ್ಳ ರಾಮಸ್ವಾಮಿ ಅಂಡ್ ಸನ್ಸ್ ಭಾ. ಸಂ.
ಶ್ರೀರಾಮ ಪ್ರೆಸ್, ಮದ್ರಾಸ್-1928 ಲಿ. ತೆ.

3 ಗ್ರಂ. ಅಷ್ಟೋತ್ತರಶತೋಪನಿಷದಃ
ಸಂ. ಸಿದ್ಧಾಂತಿಸುಬ್ರಹ್ಮಣ್ಯಮನೀಷೀ
ಪ್ರ. ಸಿದ್ಧಾಂತಿ ಶಿವಶಂಕರಶಾಸ್ತ್ರಿ ಭಾ. ಸಂ.
ಬೆಂಗಳೂರು-1900 ಲಿ. ತೆ.

4 ಗ್ರಂ. ಅಷ್ಟೋತ್ತರಶತೋಪನಿಷತ್
ಪ್ರ. ಆದಿಕಲಾನಿಧಿ ಪ್ರೆಸ್ ಭಾ. ಸಂ.
ಮದ್ರಾಸ್-1883 ಲಿ. ತೆ.

5 ಗ್ರಂ. ಅಷ್ಟೋತ್ತರಶತೋಪನಿಷದಃ
ಸಂ. ವೆಂಕಟಕೃಷ್ಣಶಾಸ್ತ್ರಿ
ಪ್ರ. ಶ್ರೀರಾಮಚಂದ್ರಶಾಸ್ತ್ರಿ ಭಾ. ಸಂ.
ಮದ್ರಾಸ್–1896 ಲಿ. ಗ್ರಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

6	ಗ್ರಂ.	ದಶೋಪನಿಷದಃ		
	ಸಂ.	ಶಾತ್ತನೂರು ಕಲ್ಯಾಣಸುಂದರಶಾಸ್ತ್ರಿ		
	ಪ್ರ.	ವಾಜಪೇಯ ಕೃಷ್ಣಶಾಸ್ತ್ರಿ	ಭಾ.	ಸಂ.
		ಮಂದ್ರಾಸಂ-1903	ಲಿ.	ತೆ.
7	ಗ್ರಂ.	ದಶೋಪನಿಷದಃ		
	ಸಂ.	ಯನಮದಲ ವೆಂಕಟಾಚಾರ್ಯ		
	ವಿ.	1880ರಲ್ಲಿ ಇದರ ದ್ವಿತೀಯ ಮುದ್ರಣವಾಗಿದೆ.		
	ಪ್ರ.	ವಿವೇಕಕಳಾನಿಧಿ ಪ್ರೆಸ್	ಭಾ.	ಸಂ.
		ಯನಮಂದಲ-1876	ಲಿ.	ತೆ.
8	ಗ್ರಂ.	ದ್ವಾದಶೋಪನಿಷದಃ		
	ಸಂ. ಪ್ರ.	ಧರ್ಮಾಧಿಕಾರಿ ಚಕ್ರವರ್ತಿ ಅಯ್ಯಂಗಾರ್		
		ವಿದ್ಯಾತರಂಗಿಣಿ ಪ್ರೆಸ್	ಭಾ,	ಸಂ.
		ಮೈಸೂರು-1891	ಲಿ,	ತೆ.
9	ಗ್ರಂ.	ಈಶಾದಿವಿಂಶದುತ್ತರಶತೋಪನಿಷದಃ		
	ಸಂ.	ಕಾವ್ಯತೀರ್ಥ ನಾರಾಯಣರಾಮ ಆಚಾರ್ಯ		
	ವಿ.	ಈಶದಿಂದ ಮುಕ್ತಿಕದವರೆಗೆ 120 ಉಪನಿಷತ್ತುಗಳ ಮೂಲವಿದೆ,		
	ಪ್ರ.	ನಿರ್ಣಯಸಾಗರ ಪ್ರೆಸ್	ಭಾ.	ಸಂ,
		ಮುಂಬಯಿ–1948	ಲಿ.	ದೇ.
10	ಗ್ರಂ.	ಈಶಕೇನಕಠಪ್ರಶ್ನಮುಂಡಕ ಮಾಂಡೂಕ್ಯ ತೈತ್ತಿರೀಯ ಐತರೇಯೋಪನಿಷದಃ		
	ಸಂ.	ಸ್ವಾಮಿ ಶ್ರೀವೈಷ್ಣವಾಚಾರ್ಯ		
	ವಿ.	ಮೂಲ ಮತ್ತು ಶ್ರೀರಾಮಾನಂದವಿರಚಿತ ' ಆನಂದ ' ಭಾಷ್ಯವಿದೆ.		
	ಪ್ರ.	ರಾಮಾನಂದವೇದಾಂತಪ್ರಚಾರಸಮಿತಿ	ಭಾ.	ಸಂ.
		ಅಹಮದಾಬಾದ್-1967	ಲಿ.	ದೇ.
11	ಗ್ರಂ.	ಈಶಾದಿದಶೋಪನಿಷದ್ಭಾಷ್ಯಮ್		
	ಕ.	ಗೋಪಾಲಾನಂದಸ್ವಾಮಿ		
	ಸಂ.	ಎಂಬಾರ್. ಕೃಷ್ಣಮಾಚಾರ್		
	ವಿ.	ಮೂಲ ಮತ್ತು ಗೋಪಾಲಾನಂದಸ್ವಾಮಿ ವಿರಚಿತ ' ಸುಬೋಧಿನೀ ' ವ್ಯಾಖ್ಯಾನ ಮತ್ತು ವಿಸ್ತೃತವಾದ ಮುನ್ನುಡಿಯೂ ಇದೆ.		
	ಪ್ರ.	ಭಟ್ಟಜಯಕೃಷ್ಣಬಾಪೂಜಿ	ಭಾ.	ಸಂ.
		ನಿರ್ಣಯಸಾಗರ ಪ್ರೆಸ್, ಬಾಂಬೆ-1932	ಲಿ.	ದೇ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

12 ಗ್ರಂ. ಈಶಾವಾಸ್ಯೋಪನಿಷತ್, ಕೇನೋಪನಿಷತ್, ಕಠೋಪನಿಷತ್ ಚ

ಸಂ. ಉತ್ತಮೂರು ವೀರರಾಘವಾಚಾರ್ಯ

ವಿ. ಈಶೋಪನಿಷತ್ತಿಗೆ ವೇದಾಂತದೇಶಿಕರ ಮತ್ತು ನಾರಾಯಣಮುನಿಗಳ ಭಾಷ್ಯಗಳಿವೆ. ಕೇನ-ಕಠಗಳಿಗೆ ರಂಗರಾಮಾನುಜಭಾಷ್ಯಗಳಿವೆ.

ಪ್ರ. ಉಭಯವೇದಾಂತಗ್ರಂಥಮಾಲಾ ಭಾ. ಸಂ.

ಮದರಾಸು-1948 ಲಿ. ದೇ.

13 ಗ್ರಂ. ಉಪನಿಷತ್ ಷಟ್ಕಮ್

ಸಂ. ಧರ್ಮಾಧಿಕಾರಿ ಚಕ್ರವರ್ತಿ ಅಯ್ಯಂಗಾರ್

ವಿ. ಈಶ-ಕೇನಾದಿಉಪನಿಷತ್ತುಗಳ ಮೂಲ, ಶಂಕರಭಾಷ್ಯ, ಆನಂದಗಿರಿಟೀಕೆ ರಂಗರಾಮಾನುಜರ ಭಾಷ್ಯವೂ, ಈಶಾವಾಸ್ಯೋಪನಿಷತ್ತಿಗೆ ಶಂಕರಭಾಷ್ಯ, ವೇದಾಂತದೇಶಿಕರ ಭಾಷ್ಯ, ನಾರಾಯಣಮುನಿಗಳ ಪ್ರಕಾಶಿಕೆ, ಆನಂದಗಿರಿ ಟೀಕೆಗಳೂ ಇವೆ.

ಪ್ರ. ವಿದ್ಯಾತರಂಗಿಣಿ ಪ್ರೆಸ್ ಭಾ. ಸಂ.

ಮೈಸೂರು-1893 ಲಿ. ತೆ.

14 ಗ್ರಂ. ಈಶಾದ್ಯಷ್ಟೋಪನಿಷದ್ಭಾಷ್ಯಮ್

ಸಂ. ವ. ನ. ಕೃಷ್ಣಮಾಚಾರ್ಯ

ವಿ. ಈಶಾದಿದಶೋಪನಿಷತ್ತುಗಳ ಮೂಲ, ಈಶಾವಾಸ್ಯಕ್ಕೆ ವೇದಾಂತದೇಶಿಕ, ಮತ್ತು ನಾರಾಯಣಮುನಿವಿರಚಿತಭಾಷ್ಯ ಮತ್ತು ಕೇನಾದಿಉಪನಿಷತ್ತುಗಳಿಗೆ ರಂಗರಾಮಾನುಜಮುನಿಗಳ ಭಾಷ್ಯಗಳೂ ಇವೆ.

ಪ್ರ. ವೈದಿಕವರ್ಧಿನೀ ಸಭಾ ಭಾ. ಸ.

ಉಪ್ಪಿಲಿಅಪ್ಪನ್ ಸನ್ನಿಧಿ-1913 ಲಿ. ಗ್ರಂ.

15 ಗ್ರ. ದಶೋಪನಿಷದ್ವ್ಯಾಖ್ಯಾನಮ್

ಕ. ಭಾರದ್ವಾಜ ರಾಮಾನುಜಾಚಾರ್ಯ

ವಿ. ಈಶಾದಿದಶೋಪನಿಷತ್ತುಗಳಿಗೆ ಭಾರದ್ವಾಜ ರಾಮಾನುಜಾಚಾರ್ಯ ವಿರಚಿತ ವ್ಯಾಖ್ಯಾನ ಪ್ರತಿಪದಾರ್ಥದೀಪಿಕಾ ಇದೆ. ಮೂಲವೂ ಇದೆ.

ಪ್ರ. ಚಿನ್ನ ವೆಂಕಟರತ್ನಮ್ ಭಾ. ಸಂ.

ವಿವೇಕ ಕಳಾನಿಧಿ ಪ್ರೆಸ್ ಲಿ. ತೆ.
ಮದ್ರಾಸ್-1875.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

16 ಗ್ರಂ. ಷಡುಪನಿಷದ್ಭಾಷ್ಯಮ್
ಸಂ. ವಾವಿಳ್ಳ ರಾಮಸ್ವಾಮಿಶಾಸ್ತ್ರಿ
ವಿ. ಈಶಾದಿ ಆರು ಉಪನಿಷತ್ತುಗಳ ಮೂಲ, ಶಂಕರಭಾಷ್ಯ, ಆನಂದಗಿರಿ ಟೀಕಾ, ವೇದಾಂತದೇಶಿಕಭಾಷ್ಯ ಮತ್ತು ನಾರಾಯಣಮುನಿಗಳ ವ್ಯಾಖ್ಯಾನಗಳೂ ಇವೆ.
ಪ್ರ. ವಾವಿಳ್ಳರಾಮಸ್ವಾಮಿಶಾಸ್ತ್ರಿ ಅಂಡ್‌ಸನ್ಸ್ ಭಾ. ಸಂ.
ಮದ್ರಾಸ್–1939. ಲಿ. ತೆ.

17 ಗ್ರಂ. ಈಶಾವಾಸ್ಯೇತ್ಯಾದಿ ಉಪನಿಷದ್ಭಾಷ್ಯಟಿಪ್ಪಣಿ
ಕ. ಜಯತೀರ್ಥಭಿಕ್ಷು
ವಿ. ಮೂಲ ಮತ್ತು ಮಧ್ವಭಾಷ್ಯ, ವಾದಿರಾಜ ಮತ್ತು ಜಯತೀರ್ಥರ ಟೀಕೆಗಳಿವೆ. ಮುಂದೆ ಕೇನೋಪನಿಷತ್ ಮತ್ತು ತೈತ್ತಿರೀಯೋಪನಿಷತ್ತುಗಳಿವೆ.
ಪ್ರ. ಶ್ರೀಮದ್ವಾದಿರಾಜೀಯ ಭಾ. ಸಂ.
ಗ್ರಂಥಪ್ರಕಾಶನ ಸಮಿತಿ ಲಿ. ದೇ.
ಉಡುಪಿ–1954.

18 ಗ್ರಂ. ದಶೋಪನಿಷದಃ (ಭಾಗ 1)
ಸಂ. ಅಡ್ಯೆಯಾರ್ ಲೈಬ್ರರಿಯ ಪಂಡಿತರು
ವಿ. ಉಪನಿಷದ್ಬ್ರಹ್ಮಯೋಗಿಗಳ ವ್ಯಾಖ್ಯಾನವಿದೆ.
ಪ್ರ. ಅಡ್ಯೆಯಾರ್ ಲೈಬ್ರರಿ, ಥಿಯಸಾಫಿಕಲ್ ಭಾ. ಸಂ.
ಸೊಸೈಟಿ, ಮದ್ರಾಸ್-1935 ಲಿ. ದೇ.

19 ಗ್ರ. ಉಪನಿಷದರ್ಥಸಂಗ್ರಹಮ್
ಕ. } ಸಂ. } ಉತ್ತಮೂರು ವೀರರಾಘವಾಚಾರ್ಯ
ವಿ. ಕೇನೋಪನಿಷತ್ತಿನ ಅರ್ಥವನ್ನೊಳಗೊಂಡ 5 ಸಂಸ್ಕೃತ ಶ್ಲೋಕಗಳಿವೆ.
ಪ್ರ. ಆರ್. ವೆಂಕಟಾಚಾರಿ
ರಾಮಕೃಷ್ಣ ಪ್ರಿಂಟಿಂಗ್ ಪ್ರೆಸ್
ಮದ್ರಾಸ್–1977.

20 ಗ್ರಂ. ಕೇನೋಪನಿಷದ್ಭಾಷ್ಯಮ್
ಕ. ರಂಗರಾಮಾನುಜಮುನಿ
ಸಂ. ಆನಂದಾಶ್ರಮಪಂಡಿತರು
ಪ್ರ. ಆನಂದಾಶ್ರಮಸಂಸ್ಕೃತಮಾಲಾ ಭಾ. ಸಂ.
ಪುಣೆ–1910 ಲಿ. ದೇ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾಷಾಂತರಗಳು

ಕನ್ನಡ

1 ಗ್ರಂ. ಕೇನೋಪನಿಷತ್ (ಪ್ರತಿಪದಾರ್ಥ ಮತ್ತು ತಾತ್ಪರ್ಯಸಹಿತ)

ಸಂ. ಅನು. } ಯತಿರಾಜಸಂಪತ್ಕುಮಾರರಾಮಾನುಜಜೀಯರ್

ವಿ. ಮೂಲ, ಪ್ರತಿಪದಾರ್ಥ ಮತ್ತು ತಾತ್ಪರ್ಯವಿದೆ.

ಪ್ರ. ಯದುಗಿರಿಯತಿರಾಜಮಠ
ಸಂಸ್ಕೃತಿ ಪ್ರಚಾರಸಭಾ
ಮೇಲುಕೋಟೆ–1958.

2 ಗ್ರಂ. ಉಪನಿಷತ್ತು

ಸಂ. ಅನು. } ದೇವುಡು ನರಸಿಂಹಶಾಸ್ತ್ರಿ

ವಿ. ಈಶಾದಿಉಪನಿಷತ್ತುಗಳ ತಾತ್ಪರ್ಯ ಮತ್ತು ವಿಸ್ತಾರವಾದ ಪೀಠಿಕೆ ಇದೆ.

ಪ್ರ. ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು-1958.

3 ಗ್ರಂ. ಉಪನಿಷತ್ಪರಿಚಯ

ಸಂ. ಅನು. } ಸ್ವಾಮಿ ಸೋಮನಾಥಾನಂದ

ವಿ. ಕೇನೋಪನಿಷತ್ತಿನ ಪರಿಚಯವನ್ನು ಕೊಡಲಾಗಿದೆ.

ಪ್ರ. ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾಲಯ
ಮೈಸೂರು-1968.

ತಮಿಳು

1 ಗ್ರಂ. ಉಪನಿಷತ್ಸಾರಮ್

ಕ. ಸಂ. } ಉತ್ತಮೂರು ವೀರರಾಘವಾಚಾರ್

ವಿ. ಈಶಾವಾಸ್ಯ ಮುಂತಾದ ಉಪನಿಷತ್ತುಗಳ ಸಾರವು ತಮಿಳು ಭಾಷೆಯಲ್ಲಿದೆ.

ಪ್ರ. ವಿಶಿಷ್ಟಾದ್ವೈತ ಪ್ರಚಾರಿಣೀ ಸಭಾ
ಮದ್ರಾಸ್-1970.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

2 ಗ್ರಂ. ದಶೋಪನಿಷತ್ತುಕ್ಕಳಿನ್‌ದ್ರಾವಿಡಪ್ರತಿಪದಭಾಷ್ಯಮ್

ವಿ. ಮೂಲವು ಗ್ರಂಥ ಮತ್ತು ತೆಲುಗು ಲಿಪಿಯಲ್ಲಿದೆ. ಪ್ರತಿಪದಾರ್ಥವು ತಮಿಳಿನಲ್ಲಿದ್ದು ಶಂಕರ, ರಾಮಾನುಜಮತಾನುಸಾರಿಯಾದ ಅನುವಾದವೂ ಇದೆ.

ಹಿಂದಿ

1 ಗ್ರಂ. ಈಶಾದಿಪಂಚೋಪನಿಷದಃ

ಕ. } ಸಂ. ತ್ರಿದಂಡಿ ಶ್ರೀಮದ್ವಿಷ್ವಕ್ಸೇನಾಚಾರ್ಯಸ್ವಾಮಿ

ವಿ. ಈಶಾದಿಉಪನಿಷತ್ತುಗಳಿಗೆ ವಿಶಿಷ್ಟಾದ್ವೈತಪರವಾದ ಹಿಂದಿ ಪ್ರತಿಪದಾರ್ಥವಿದೆ. ಈಶಾವಾಸ್ಯದ 12ನೇ ಮಂತ್ರಕ್ಕೆ ಶ್ರೀವಚನಭೂಷಣದ ಚಿಂತಾಮಣಿ ವ್ಯಾಖ್ಯಾನವನ್ನೂ ಉದಾಹರಿಸಿದ್ದಾರೆ. ಈ ಹಿಂದೀ ವ್ಯಾಖ್ಯಾನಕ್ಕೆ 'ಗೂಢಾರ್ಥದೀಪಿಕಾ' ಎಂದು ಹೆಸರು.

ಪ್ರ. ಶ್ರೀರಾಮದೇವಾಚಾರ್ಯ
ಅಚ್ಯುತ ಮುದ್ರಣಾಲಯ
ಕಾಶಿ–1952.

ಇಂಗ್ಲೀಷ್

1 ಗ್ರಂ. ದಿ ಉಪನಿಷತ್ಸ್ (ಭಾಗ 1)

ಕ. } ಸಂ. ಮ್ಯಾಕ್ಸ್‌ಮುಲ್ಲರ್

ವಿ. ಈಶಾದಿಉಪನಿಷತ್ತುಗಳಿಗೆ ಆಂಗ್ಲಭಾಷಾಂತರ ಮತ್ತು ಟಿಪ್ಪಣಿಗಳಿವೆ.

ಪ್ರ. ಡೋವರ್ ಪಬ್ಲಿಕೇಷನ್ಸ್
ನ್ಯೂಯಾರ್ಕ್-1884.

2 ಗ್ರಂ. ಉಪನಿಷತ್ಸ್

ಸಂ. } ಅನು. ಕೆ. ಪಿ. ಬಹಾದೂರ್

ವಿ. ಈಶಾದಿಉಪನಿಷತ್ತುಗಳ ಮೂಲವು ಸಂಸ್ಕೃತ ಮತ್ತು ಇಂಗ್ಲೀಷ್ ಲಿಪಿಗಳಲ್ಲಿದೆ.

ಪ್ರ. ಹೆರಿಟೇಜ್ ಪಬ್ಲಿಕೇಷನ್ಸ್,
ಪ್ರಿಂಟ್‌ವೆಲ್ಸ್ ಪ್ರೆಸ್
ದೆಹಲಿ–1979.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

3 ಗ್ರಂ. ದಿ ಟೆನ್ ಪ್ರಿನ್ಸಿಪಲ್ ಉಪನಿಷತ್ಸ್

ಕ. ಸಂ. } ಪುರೋಹಿತಸ್ವಾಮಿ ಮತ್ತು ಡಬ್ಲ್ಯು-ಬಿ-ಈಟ್ಸ್

ವಿ. ಈಶಾದಿಉಪನಿಷತ್ತುಗಳ ಆಂಗ್ಲಭಾಷಾನುವಾದವಿದೆ.

ಪ್ರ. ಫೇಬರ್ ಆಂಡ್ ಫೇಬರ್ ಲಿಮಿಟೆಡ್
ಲಂಡನ್-1975.

4 ಗ್ರಂ. ಉಪನಿಷತ್ಸ್-ರಿ-ಟೋಲ್ಡ್

ಕ. ಸಂ. } ವಿ. ಹೆಚ್. ದಾತೆ

ವಿ. ಈಶಾವಾಸ್ಯ ಮೊದಲಾದ ಉಪನಿಷತ್ತುಗಳ ಆಂಗ್ಲ ವಿವರಣವಿದೆ.

ಪ್ರ. ಅಲೈಡ್ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಬೊಂಬಾಯಿ-1979.

5 ಗ್ರಂ. ಗೈಡ್ ಟು ದಿ ಉಪನಿಷತ್ಸ್

ಕ. ಸಂ. } ಎಮ್. ಪಿ. ಪಂಡಿತ್

ವಿ. ಈಶ ಹಾಗೂ ಕೇನೋಪನಿಷತ್ತುಗಳ ಕೆಲವು ಕ್ಲಿಷ್ಟ ಪದಗಳಿಗೆ ಆಂಗ್ಲ ಭಾಷಾ ವಿವರಣೆಯಿದೆ.

ಪ್ರ. ದೀಪ್ತಿ ಪಬ್ಲಿಕೇಷನ್ಸ್
ಜುಪಿಟರ್ ಪ್ರೆಸ್
ಮದ್ರಾಸ್-1972.

6 ಗ್ರಂ. ದಿ ಮೆಸೇಜ್ ಆಫ್ ದಿ ಉಪನಿಷತ್ಸ್

ಕ. ಸ್ವಾಮಿ ರಂಗನಾಥಾನಂದ

ವಿ. ಈಶಾದಿಉಪನಿಷತ್ತುಗಳ ಮೂಲ ದೇವನಾಗರಿಲಿಪಿಯಲ್ಲಿದ್ದು ಆದರ ತಾತ್ಪರ್ಯವು ಆಂಗ್ಲಭಾಷೆಯಲ್ಲಿದೆ,

ಪ್ರ. ಭಾರತೀಯ ವಿದ್ಯಾಭವನ
ರಾಣಿಭಾರತೀ ಪ್ರೆಸ್
ಬೊಂಬಾಯಿ-1971

7 ಗ್ರಂ. ಯೈಟ್ ಉಪನಿಷತ್ಸ್

ಸಂ. ಸ್ವಾಮಿ ಗಭೀರಾನಂದ

ವಿ. ದೇವನಾಗರಿಯಲ್ಲಿ ಮೂಲವೂ, ಆಂಗ್ಲಭಾಷೆಯ ಪ್ರತಿಪದಾರ್ಥ ಮತ್ತು ವಿಸ್ತಾರವಾದ ವ್ಯಾಖ್ಯಾನವೂ ಇದೆ.

ಪ್ರ. ಅದ್ವೈತಾಶ್ರಮ, ಮಾಯಾವರ.
ಯೂನಿಯನ್ ಪ್ರೆಸ್, ಕಲ್ಕತ್ತಾ-1977

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

7 ಗ್ರಂ. ರಾಮಾನುಜ ಆನ್ ದಿ ಉಪನಿಷತ್ಸ್

ಕ. ಎಸ್. ಎಸ್. ರಾಘವಾಚಾರ್ಯ

ಡಿ. ಭಗವದ್ರಾಮಾನುಜರ ಶ್ರೀಭಾಷ್ಯಾದಿಗ್ರಂಥಗಳಲ್ಲಿ ಉದಾಹರಿಸಿರುವ ' ಈಶ ' ಮುಂತಾದ ಉಪನಿಷತ್ತುಗಳ ಸಾರಾಂಶವು ಆಂಗ್ಲಭಾಷೆಯಲ್ಲಿದೆ.

ಪ್ರ. ಎಮ್. ರಂಗಾಚಾರ್ಯ ಮೆಮೋರಿಯಲ್ ಟ್ರಸ್ಟ್
ವಿದ್ಯಾ ಪ್ರೆಸ್, ಮದ್ರಾಸ್-1972

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಸ್ತಲಿಖಿತ, ತಾಳಪತ್ರಗಳು

ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿ, ಮೈಸೂರು.

ಕೇನೋಪನಿಷದ್ಭಾಷ್ಯಮ್ (ರಂಗರಾಮಾನಂಜ)—ಗ್ರಂಥ—ನಂ. 3464

ಅಡ್ಯೈಯಾರ್ ಲೈಬ್ರರಿ, ಮದ್ರಾಸ್.

ಕೇನೋಪನಿಷದ್ಭಾಷ್ಯಮ್ (ರಂಗರಾಮಾನಂಜ)—ಗ್ರಂಥ—Part I—ನಂ. 29 J 16

ಸೆಂಟ್ರಲ್ ಲೈಬ್ರರಿ, ಬರೋಡ.

ಕೇನೋಪನಿಷದ್ಭಾಷ್ಯಮ್ (ರಂಗರಾಮಾನುಜ)-ದೇವನಾಗರಿ—Vol. I, ನಂ. 3921

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಪ್ಪೋಲೆ

ತಪ್ಪು	ಒಪ್ಪು	ಪುಟ	ಸಾಲು
ವತ್ಸೋ	ವತ್ಸಃ	4	32
ಹೇಳಿದನಂ	ಹೇಳಿತು	12	21
ಬ್ರಹ	ಬ್ರಹ್ಮ	೨೫	10

पुस्तकालय
पुस्तकालय
गुरुकुल कांगड़ी विश्वविद्यालय

7882

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

GURUKUL KANGRI LIBRARY
Accession
C...
Cat...
Tag etc.
Checked
Any ...
30.6.93

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar